॥ ಶ್ರೀಃ ಹರಿಃ ಓಂ ॥

॥ ಗುರುಡವಾಹನ ಶ್ರೀಲಕ್ಷ್ಮೀನಾರಸಿಂಹಾಯ ನಮಃ ॥

॥ ಶ್ರೀಜಗನ್ನಾಥವಿಠ್ಠಲಾಯ ನಮಃ ॥

# ಸಂಧಿ - ೧೪

# ಪಿತೃಗಣ ಸಂಧಿ

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥ಪ॥

## ಪದ್ಯ - ೧

**ಮೂಲ :**

ಕೃತಿರಮಣ ಪ್ರದ್ಯುಮ್ನ ವಸುದೇ ।
ವತೆಗಳಾಹಂಕಾರತ್ರಯುದೊಳು ।
ಚತುರವಿಂಶತಿ ರೂಪದಿಂದಲಿ ಭೋಜ್ಯನೆನಿಸುವನು ॥
ಹುತವಹಾಕ್ಷಾಂತರ್ಗತ ಜಯಾ ।
ಪತಿಯು ತಾನೇ ಮೂರಧಿಕ ತ್ರಿಂ ।
ಶತಿ ಸುರೂಪದಿ ಭೋಕ್ತೃ ಎನಿಸುವ ಭೋಕ್ತೃಗಳೊಳಿದ್ದು ॥೧॥

**ಅವತರಣಿಕೆ :**

ಪಿತೃಯಜ್ಞರೂಪವಾದ ಪ್ರತಿ ಸಾಂವತ್ಸರಿಕ ಶ್ರಾದ್ಧ ಕರ್ಮಗಳಲ್ಲಿ ಕೃತಿಪತಿ ಪ್ರದ್ಯುಮ್ನನಾಮಕ ಶ್ರೀಪರಮಾತ್ಮನು ಭೋಜ್ಯ ವಸ್ತುಗಳಲ್ಲಿದ್ದು

ಭೋಜ್ಯ ನಾಮಕನಾಗಿದ್ದಾನೆ. ಜಯಾಧವ ಸಂಕರ್ಷಣನು ಭೋಕ್ತೃಗಳಲ್ಲಿ ಅಂತರ್ಯಾಮಿ ರೂಪದಿಂದಿದ್ದು, ಭೋಕ್ತೃ ಎನಿಸುವನೆಂದು ತಿಳಿಸುತ್ತಾರೆ

**ಪ್ರತಿಪದಾರ್ಥ :**

**ಕೃತಿರಮಣ**–ಕೃತಿನಾಮಕಳಾದ ಶ್ರೀಲಕ್ಷ್ಮಿಯ ಪತಿಯಾದ, **ಪ್ರದ್ಯುಮ್ನ**–ಪ್ರದ್ಯುಮ್ನ ನಾಮಕನಾದ ಶ್ರೀಹರಿಯು, **ವಸುದೇವತೆಗಳ**–ಅಷ್ಟವಸು ಸಾಂಕೇತರಾದ ಎಂಟುಮಂದಿ ವಸುದೇವತೆಗಳಲ್ಲಿ, **ಅಹಂಕಾರ ತ್ರಯದೊಳು** – ವೈಕಾರಿಕ, ತೈಜಸ ಮತ್ತು ತಾಮಸಗಳೆಂದು ಮೂರು ಪ್ರಕಾರವಾದ ಅಹಂಕಾರ ತತ್ತ್ವದಲ್ಲಿ, **ಚತುರವಿಂಶತಿರೂಪದಿಂದಲಿ**–೨೪ ರೂಪಗಳಿಂದ ೮ ವಸುದೇವತಗಳು×ಅಹಂಕಾರತ್ರಯಗಳು=೨೪. **ಭೋಜ್ಯನೆನಿಸುವನು** – ಭೋಜನ ಮಾಡತಕ್ಕ ಭೋಜ್ಯಪದಾರ್ಥಾಂತರ್ಗತನಾಗಿದ್ದು 'ಭೋಜ್ಯ' ಎಂಬ ಹೆಸರಿನಿಂದ ಕರೆಯಿಸುವನು. **ಹುತವಹಾಕ್ಷಾಂತರ್ಗತ**–ಅಗ್ನಿಯನ್ನೇ ತನ್ನ ಹಣೆಯಲ್ಲಿ ಮೂರನೆಯ ಕಣ್ಣನ್ನಾಗಿ ಉಳ್ಳ ಶ್ರೀರುದ್ರದೇವರ ಅಂತರ್ಯಾಮಿಯಾದ (ಹುತವಹ—ಯಜ್ಞ ಯಾಗಾದಿಗಳಲ್ಲಿ ಹವಿಸ್ಸನ್ನು ದೇವತೆಗಳಿಗೆ ಒಯ್ದು ಮುಟ್ಟಿಸುವುದರಿಂದ, ಅಗ್ನಿ ದೇವರಿಗೆ 'ಹುತವಹ'ಎಂದು ಹೆಸರು) **ಜಯಾಪತಿಯು** – ಜಯಾನಾಮಕಳಾದ ಶ್ರೀಲಕ್ಷ್ಮೀದೇವಿಯ ರಮಣನಾದ ಶ್ರೀಸಂಕರ್ಷಣನು, **ತಾನೇ** – ಸ್ವಯಂ, **ಮೂರಧಿಕತ್ರಿಂಶತಿಸುರೂಪದಿ** – ೩೩ ರೂಪಗಳಿಂದ (ಏಕಾದಶ ರುದ್ರರು × ಅಹಂಕಾರತ್ರಯಗಳು=೩೩. ತ್ರಿಂಶತಿ – ಮೂವತ್ತು, ಮೂರಧಿಕ ತ್ರಿಂಶತಿ – ೩೦ + ೩–೩೩) **ಭೋಕ್ತೃಗಳೊಳಿದ್ದು**–ಪಿತೃಕಾರ್ಯದಲ್ಲಿ ಅಮಂತ್ರಿತರಾದ ಮೂರುಮಂದಿ ಬ್ರಾಹ್ಮಣರಲ್ಲಿ ಅಂತರ್ಯಾಮಿ ರೂಪದಿಂದಿದ್ದು (ಪಿತೃಸ್ಥಾನಕ್ಕೆ ಒಬ್ಬರು ಮತ್ತು ಪ್ರಪಿತಾಮಹಸ್ಥಾನಕ್ಕೆ ಒಬ್ಬರು – ಹಾಗೆ ಮೂರುಮಂದಿ ಅಮಂತ್ರಿತ ಭೋಕ್ತೃಗಳು) **ಭೋಕ್ತೃ ಎನಿಸುವ** – ಭೋಕ್ತೃ ನಾಮಕನಾಗಿದ್ದಾನೆ.

## ವ್ಯಾಖ್ಯಾನಗಳು

### ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಹಿಂದೆ ನಾಲ್ಕನೇ ಸಂಧಿಯಾದ ಭೋಜನರಸವಿಭಾಗ ಸಂಧಿಯಲ್ಲಿ ಷಣ್ಣವತಿಶ್ರಾದ್ಧ ಸ್ವಲ್ಪ ವಿವರ ಮಾಡಿ, ಪ್ರತಿ ಸಾಂವತ್ಸರಿಕಶ್ರಾದ್ಧ ವಿಚಾರ

ಸಂಧ್ಯಂತರದಲ್ಲಿ ಹೇಳಲ್ಪಡುತ್ತದೆ ಎಂತ ಸೂಚಿಸಿರುವ ಪ್ರಕಾರ, ಅಧಿಕಾರಿಗಳು ತಮ್ಮ ಪಿತ್ರಂತರ್ಗತ ಭಗವದುಪಾಸನಾವಿಚಾರವಾದ ಪಿತೃಯಜ್ಞಕ್ರಮವನ್ನು ಈ ಸಂಧಿಯಲ್ಲಿ ನಿರೂಪಣಾ ಮಾಡತಾ ಸಪ್ತಾನ್ನಪ್ರಕರಣ, ಅಂಶಾಂಶಿ ವಿಚಾರ, ಜೀವರ ಸೃಜ್ಯಾಸೃಜ್ಯ ವಿಚಾರ, ಪಂಚಭೇದಲಕ್ಷಣ ಮೊದಲಾದ ವಿಚಾರ ಹೇಳತಾರೆ.

ಪಿತೃಕಾರ್ಯಗಳಲ್ಲಿ ಭೋಕ್ತೃಗಳಾದ ನಿಮಂತ್ರಿತ ಬ್ರಾಹ್ಮಣರು ಮೂರೇ ಮಂದಿ. ಪಿತೃಸ್ಥಾನಕ್ಕೆ ಒಬ್ಬ, ಪಿತಾಮಹಸ್ಥಾನಕ್ಕೆ ಒಬ್ಬ, ಪ್ರಪಿತಾಮಹ ಸ್ಥಾನಕ್ಕೆ ಒಬ್ಬ, ಅಂತು ಮೂರು ಮಂದಿ. ಈ ಮೂರು ಮಂದಿ ಭೋಕ್ತೃಗಳೊಳಗೆ, ಪಿತನ ಉದ್ದಿಶ್ಯ ಮಾಡಿದ ಭೋಕ್ತೃ ಬ್ರಾಹ್ಮಣನಲ್ಲಿ, ಅಷ್ಟವಸು ಸಾಂಕೇತರಾದ ದೇವತೆಗಳಲ್ಲಿ ಎಂಟು ಮಂದಿಯಲ್ಲಿ, ಕೃತೀ ಎಂತ ನಾಮಪಡೆದ ಲಕ್ಷ್ಮಿದೇವಿಯರಿಗೆ ಪತಿಯಾದ ಪ್ರದ್ಯುಮ್ನರೂಪಿ ಶ್ರೀಪರಮಾತ್ಮ ಪಿತಾಮಹನ ಉದ್ದಿಶ್ಯ ಮಾಡಿದ ಭೋಕ್ತೃ ಬ್ರಾಹ್ಮಣನಲ್ಲಿ ಅಗ್ನಿಸದೃಶವಾದ, ದಹಿಸತಕ್ಕ ಮೂರನೇ ನೇತ್ರವುಳ್ಳ ರುದ್ರದೇವರೇ ಆದಿಯಾಗಿ ಏಕಾದಶರುದ್ರರು ಏಕಾದಶ ರುದ್ರಾಂತರ್ಗತನಾಗಿ ಜಯಾನಾಮಕ ಲಕ್ಷ್ಮೀದೇವಿಯರ ಪತಿಯಾದ ಸಂಕರ್ಷಣ ಅಷ್ಟವಸುಗಳು, ಏಕಾದಶರುದ್ರರು ಇವರೊಳಗೆ ವಿದ್ಯಮಾನಗಳಾದ ವೈಕಾರಿಕ ತೈಜಸ, ತಾಮಸ ಸಾಂಕೇತಗಳಾದ ಅಹಂಕಾರತ್ರಯದೊಳು, ಅಷ್ಟವಸುಗಳಲ್ಲಿ ಪ್ರತಿ ವಸುಗತ ಅಹಂಕಾರತ್ರಯಗಳಲ್ಲಿ, ಮೂರು ಮೂರು ರೂಪದ ಮ್ಯಾರಿಗೆ (ಎಂಟು ಮೂರುಗಳು) ಇಪ್ಪತ್ತನಾಲ್ಕು ರೂಪಗಳಿಂದ ಪ್ರದ್ಯುಮ್ನರೂಪಿ ಪರಮಾತ್ಮನನ್ನೂ, ಏಕಾದಶರುದ್ರರಲ್ಲಿ ಪ್ರತಿ ಒಬ್ಬ ರುದ್ರನಲ್ಲಿ ಅಹಂಕಾರತ್ರಗಳಲ್ಲಿ ಮೂರು ಮೂರು ರೂಪದ ಮ್ಯಾರಿಗೆ (ಹನ್ನೊಂದು ಮೂರುಗಳು) ಮೂವತ್ತುಮೂರು ರೂಪದಿಂದ ಸಂಕರ್ಷಣರೂಪೀ ಪರಮಾತ್ಮನನ್ನೂ, ಈ ಪ್ರಕಾರ ಭೋಕ್ತೃಗಳಾದ ಪಿತನ ಉದ್ದೇಶಿತನಾದ ಬ್ರಾಹ್ಮಣನಲ್ಲೂ, ಪಿತಾಮಹನ ಉದ್ದಿಶ್ಯ ಬ್ರಾಹ್ಮಣನಲ್ಲೂ, ಈ ಉಭಯವಿಧ ಬ್ರಾಹ್ಮಣರೊಳಗೆ ಮಂತ್ರದಿಂದ ಆವಾಹಿತನಾಗಿದ್ದು ಶ್ರಾದ್ಧದಲ್ಲಿ ಭೋಜನ ಮಾಡತಕ್ಕವ ಎಂದು ಕರಸತಾನೆ. ಪಿತ್ರಂತರ್ಗತ ವಸುದೇವತೆಗಳಲ್ಲಿ ಇಪ್ಪತ್ನಾಲ್ಕು ರೂಪದಿಂದ ಪ್ರದ್ಯುಮ್ನ, ಪಿತಮಹಾಂತರ್ಗತ ಏಕಾದಶರುದ್ರ ದೇವತೆಗಳಲ್ಲಿ ಮೂವತ್ತಮೂರು ರೂಪದಿಂದ ಸಂಕರ್ಷಣ ಇದ್ದು ಭೋಜನ ಮಾಡತಕ್ಕವನೆಂದು ಕರಸತಾನ.

ಒಬ್ಬನಾದ ಪ್ರದ್ಯುಮ್ನನಾದ ತಾನೇ ಇಪ್ಪತ್ನಾಲ್ಕು ರೂಪಗಳ ಧರಿಸಿನ್ನೂ, ಒಬ್ಬ ಸಂಕರ್ಷಣನಾದ ತಾನೇ ಮೂವತ್ಮೂರು ರೂಪಗಳ ಧರಿಸಿನ್ನೂ ಈ ಪ್ರಕಾರ ಪರಮಾತ್ಮ ಇದ್ದಾನೆ. ಹಾಗೆ ಪಿತೃಗಳಿಗೋಸ್ಕರ ಉದ್ದೇಶಮಾಡಿ ಭೋಜ್ಯಪದಾರ್ಥಗಳಲ್ಲೂ ಇದ್ದಾನೆ. ಏವಂ ಸಮ್ಮೇಳನವೇ ಪ್ರಥಮದಲ್ಲಿ ಬ್ರಾಹ್ಮಣರು, ಅವರ ಅಂತರ್ಗತ ಆವಾಹಿತರಾದ ತನ್ನ ಪಿತೃಗಳು, ಅವರಂತರ್ಗತ ವಸುರುದ್ರಾದಿ ದೇವತೆಗಳು, ಅವರಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಪ್ರದ್ಯುಮ್ನ, ಸಂಕರ್ಷಣ ಭಗವನ್ಮೂರ್ತಿಗಳು, ಈ ರೀತ್ಯಾ ಅನುಸಂಧಾನ ಮಾಡಬೇಕೆಂತ ತಾತ್ಪರ್ಯ. ಅವಶಿಷ್ಟ ಪ್ರಪಿತಾಮಹನ ವಿಚಾರ ಮುಂದೆ ಹೇಳತಾರೆ ॥೧॥

## ಭಾವಪ್ರಕಾಶಿಕೆ

ಪಿತೃ, ಪಿತಾಮಹ, ಪ್ರಪಿತಾಮಹರೆಂಬ ಮೂರು ವಿಧ ಪಿತೃಗಳಿಗೆ ಅಧಿಪತಿಗಳು ವಸುಗಣ, ರುದ್ರಗಣ, ಆದಿತ್ಯಗಣ ಎಂಬ ಮೂರುಗಣಗಳು. ಅದರಲ್ಲಿ ವಸುಗಣಕ್ಕೆ ಸೇರಿದವರು ೮ ಮಂದಿ ಒಬ್ಬೊಬ್ಬರಲ್ಲೂ, ವೈಕಾರಿಕ, ತೈಜಸ, ತಾಮಸವೆಂದು ಮೂರುವಿಧ ಅಹಂಕಾರ ತತ್ವಗಳು ಇರುವವು. ಒಂದೊಂದು ಅಹಂಕಾರದಲ್ಲಿ ಒಂದೊಂದು ರೂಪದಂತೆ ೮ × ೩ = ೨೪ ರೂಪಗಳಿಂದ ಶ್ರಾದ್ಧದಲ್ಲಿ ಭೋಜನ ಯೋಗ್ಯ ಪದಾರ್ಥಗಳಲ್ಲಿದ್ದು ಭೋಜ್ಯನೆನಿಸುವನು. ೧೧ ರುದ್ರರಲ್ಲಿಯೂ, ಒಬ್ಬೊಬ್ಬರಲ್ಲಿ ಮೂರು ಮೂರು ಅಹಂಕಾರಗಳಂತೆ ೧೧ × ೩ = ೩೩ ಅಹಂಕಾರಗಳಲ್ಲೂ ೩೩ ರೂಪಗಳಿಂದ ಜಯಾಪತಿ ಸಂಕರ್ಷಣನು ಪಿತೃಗಳನ್ನು ಆವಾಹನೆ ಮಾಡಿರುವ ಬ್ರಾಹ್ಮಣರಲ್ಲಿದ್ದು ಶ್ರಾದ್ಧಾನ್ನವನ್ನ ಭುಂಜಿಸಿ, ಭೋಕ್ತೃ ಎನಿಸುವನು ॥೧॥

## ಭಾವದರ್ಪಣ

ಬ್ರಾಹ್ಮಣ ಭೋಜನಾದಿ ಕ್ರಿಯೆಗಳನ್ನು ನಡೆಸಿದಾಗ್ಯೂ ಸ್ವಪಿತೃಗಳಿಗೆ ಸದ್ಗತಿಯೂ, ಪರಲೋಕಾರೋಹಣಕ್ಕೆ ತನಗೆ ಪುಣ್ಯವೂ, ಇಲ್ಲದಲೆ ನಿರರ್ಥಕ ಕೆಟ್ಟುಹೋಗುತ್ತಾರೆಂದು ಮಹಾಕರುಣಾಶಾಲಿಗಳಾದ ದಾಸಾರ್ಯರು ಜನರಿಗೆ ತಿಳಿಸೋದಕ್ಕೋಸ್ಕರ ಪಿತೃಗಣಸಂಧಿ ಉಪಕ್ರಮಿಸುತ್ತಾರೆ, ಹರೀತಿ. ಯಾವ

ಯಾವ ವಿಶ್ವೇದೇವತೆಗಳನ್ನು ಯಾವಯಾವ ವಿಷಯಕ್ಕೆ ಕರೆಯಬೇಕೋ ಅದರ ವಿವರವು ಪ್ರಸಂಗಸಂಗತ್ಯಾ ಬರೆಯಲ್ಪಡುತ್ತದೆ. ಸಪಿಂಡೀಕರಣದಲ್ಲಿ ಕಾಮಕಾಲ, ನಾಂದಿಯಲ್ಲಿ ಸತ್ಯವಸು, ಇಷ್ಟಶ್ರಾದ್ಧದಲ್ಲಿ ಕ್ರತುದಕ್ಷ, ನೈಮಿತ್ತಿಕದಲ್ಲಿ ಧೂರಿಲೋಚನ, ಕಾಲಶ್ರಾದ್ಧಕ್ಕೆ ಪುರೂರವಾದ್ರವ. ಏವಂ ರೀತ್ಯಾ ಇಂತಿಂಥವರು ಬರೋಹಾಗೆ ಪ್ರಾರ್ಥನೆ ಮಾಡಬೇಕು ಎಂಬುದಕ್ಕೆ ಪ್ರಮಾಣ. 'ಸಪಿಂಡ್ಯಾಂ ಕಾಮಕಾಲೌತು ಸತ್ಯೋನಾಂದೀಮುಖೇ ವಸೂ। ಇಷ್ಟಶ್ರಾದ್ಧೇ ಕ್ರತುರ್ದಕ್ಷೌ ಕಾಮ್ಯೇ ಧೂರಿಲೋಚನೌ। ಪುರೂರವಾದ್ರವೌ ಶ್ರಾದ್ಧಕಾಲೇತಿ, ಮನುಸ್ಮೃತ್ಯುಕ್ತೇಃ। ಕೃತಿರಮಣಪದ್ಯ ಪ್ರಾರಂಭಿಸಿ ಮೂರು ಪದ್ಯ ವ್ಯಾಖ್ಯಾನವು ಒಂದೇನಯನವಾಗಿರುತ್ತದೆ. ಸುಜ್ಞರು ಮನನಕ್ಕೆ ತರಬೇಕು. ಕೃತೀತಿ ಒಬ್ಬೊಬ್ಬ ವಸುವಿನಲ್ಲಿ ವೈಕಾರಿಕಾಹಂಕಾರ, ತೈಜಸಾಹಂಕಾರ, ತಾಮಸಾಹಂಕಾರಗಳ ಭೇದೇನ ಎಂಟುಮಂದಿ ವಸುಗಳಲ್ಲಿ ೨೪ ಭಗವದ್ರೂಪಗಳು. ಹನ್ನೊಂದು ಮಂದಿ ರುದ್ರರಲ್ಲಿ ವೈಕಾರಿಕ, ತೈಜಸ, ತಾಮಸ ಭೇದದಿಂದ ೩೩ ಭಗವದ್ರೂಪಗಳು. ದ್ವಾದಶಾದಿತ್ಯರಲ್ಲಿ ಅಹಂಕಾರ ತ್ರಯಭೇದದಿಂದ ೩೬ ಭಗವದ್ರೂಪಗಳು, ಮೂಡತಕ್ಕಂಥ ಕರ್ತೃ ೧. ಶ್ರಾದ್ಧ ಕರ್ಮದಲ್ಲಿ ೧, ಕರ್ಮದಿಂದ ಹುಟ್ಟಿದಂಥ ಕ್ರಿಯೆಯಲ್ಲಿ ೧. ಅಂತೂ ೩, ಭಗವದ್ರೂಪಗಳು ಎಲ್ಲ ಸೇರಿ ೯೬ ಭಗವದ್ರೂಪಗಳು ಷಣ್ಣವತೀನಾಮದಿಂದ ಕರೆಸುತ್ತ, ಕರ್ತಾಮಾಡುವ ಕರ್ಮ ಪಿತೃದೇವತೆಗಳ ಮುಖಾಂತರ ಪಿತೃಗಳಿಗೆ ಮುಟ್ಟಿಸಿ ಅವರನ್ನ ವಿಚಿತ್ರವಾಗಿ ಸುಖಬಡಿಸಿ ಕರ್ತೃಗಳಿಗೆ ಸದ್ಗತಿಪ್ರಾಪ್ತಿ ಮಾಡಿಕೊಡುತ್ತಾನೆಂಬ ತಾತ್ಪರ್ಯ ॥೧॥

## ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

"ಕೃತಿ" ಇತಿ ॥ ಅಹಂಕಾರತ್ರಯ ಶಬ್ದೇನ ಇಂದ್ರಾದ್ಯಾಃ ॥ ತೃತೀಯ ತಾತ್ಪರ್ಯೇ ಚ "ಅವಿಕಾರೌ ಬ್ರಹ್ಮರುದ್ರೌ ದೇಹಭೇದಾದಿ ಸಂಭವೇ ॥ ವಿಕಾರವಂತ ಇಂದ್ರಾದ್ಯಾಃ ತಸ್ಮಾತ್ ವೈಕಾರಿಕಾ ಮತಾಃ ॥ ತ ಏವ ಇಂದ್ರಿಯ ರೂಪೇಣ ಯತಃ ತತ್ವ ವಿಕಾರಿಣಃ ॥ ಜ್ಞಾನಮಾತ್ರ ಗುಣೋದ್ರಿಕಾಃ ತಸ್ಮಾತ್ ತೈಜಸ ನಾಮಕಾಃ ॥ "ತಾಮಸಾನಿ ಹಿ ಭೂತಾನಿ ಕಿಂಚಿತ್ ವ್ಯವಹಿತತ್ವತಃ ॥"

"ಭೋಜ್ಯಗೇಶಃ ಚತುರ್ವಿಂಶಃ ವಸ್ವಿಂದ್ರಾಂತರ್ನಿಯಾಮಕಃ॥ ತ್ರಯಸ್ತ್ರಿಂಶದ್ ಭೋಕ್ತೃನಾಮಾ ಜಯಾಗ್ರ್ಯೋಹರಗೋ ಹರಿಃ ॥೧॥

## ಕನ್ನಡಾರ್ಥ

ಜೀವಾಂತರ್ಗತ ಎಂಬುದಾಗಿ 'ದಾಸೋಹಂ ತವ' ಎಂಬ ತಮ್ಮ ಪದವನ್ನು ವಿವರಿಸಲು "ಆ ಪರಮಾತ್ಮನಿಗೆ ಜೀವ ಎಂದು ನಾಮವಿದೆ," 'ಭಗವಾನ್ ಅನಿರುದ್ಧನಿಗೆ ಜೀವವೆಂಬ ನಾಮವಿರುತ್ತದೆ' ಎಂದು ಮುಂತಾಗಿ ಶ್ರುತಿಗಳಿರುವದರಿಂದ 'ಜೀವ ಜೀವನವು ಜೀವನಿಂದ ಹೇಗೆ ?' ಎಂಬುದಾಗಿ ಹುಟ್ಟುವ ಸಂದೇಹವನ್ನು ನಿಃಶೇಷವಾಗಿ ಕಳೆಯಲು ಈ ಸಂಧಿಯನ್ನು ಶ್ರೀದಾಸರಾಯರು ಪ್ರಾರಂಭಿಸುತ್ತಾರೆ.

"ಅಹಂಕಾರ ತ್ರಯ" ಎಂದು ಮೂಲ ಪದ್ಯದಲ್ಲಿ ಇದೆ. "ಮೂರು ಅಹಂಕಾರಗಳು" ಎಂದು ಹೇಳುವ ಈ ಶಬ್ದವು ಇಂದ್ರ ಮುಂತಾದವರನ್ನು ಹೇಳುವದು. ಆದುದರಿಂದ ಇಂದ್ರಾದಿಗಳನ್ನೂ ಇಲ್ಲಿ ಪರಿಗಣಿಸಬೇಕು. ತೃತೀಯಸ್ಕಂಧ ೧೧ನೆಯ ಅಧ್ಯಾಯದ ಭಾಗವತತಾತ್ಪರ್ಯದಲ್ಲಿ– "ದೇಹ ಬರುವದು, ಹೋಗುವದು" ಇವುಗಳಿಂದ ಬ್ರಹ್ಮರುದ್ರರಿಗೆ ವಿಕಾರವಾಗುವುದಿಲ್ಲ. ಆದುದರಿಂದ ಅವರಿಗೆ "ಮಹಾನ್" "ಅಹಂ" ಎಂಬುವದು ಕ್ರಮವಾಗಿ ಸಲ್ಲುತ್ತದೆ. ದೇಹಭೇದ ನಿಮಿತ್ತವಾದ ವಿಕಾರವು ಅವರಿಗೆ ಇರುವುದಿಲ್ಲ. ಇಂದ್ರಿಯಾಭಿಮಾನಿ ದೇವತೆಗಳ ದೇಹವು ಬರಲು ಇಂದ್ರ ಮುಂತಾದ ದೇವತೆಗಳಿಗೆ ವಿಕಾರವಾಗುತ್ತದೆ. ಮೊದಲು ವಿಕಾರರಹಿತರಾಗಿರುವ ಇಂದ್ರಾದಿಗಳಿಗೆ ದೇಹ ಭೇದವಾಗಲು (ಬೇರೆ ದೇಹ ಬರಲು) ಅವರು ವೈಕಾರಿಕರೆನಿಸಿದರು. ಆ ವೈಕಾರಿಕರೇ ಮತ್ತೆ ಇಂದ್ರಿಯ ಸಮೂಹದಲ್ಲಿ ಹುಟ್ಟಿದರು. ಆಗ ಅವರು "ತೈಜಸ"ರಾದರು. ಅತಿ ವಿಕಾರವು ಅವರಲ್ಲಿ ಆಗಿರುವದರಿಂದ ತೈಜಸರು ಅತಿವಿಕಾರಿಗಳೇ ಹೊರತು ವೈಕಾರಿಕರಾಗುವುದಿಲ್ಲ. ಮೊದಲು ವಿಕಾರವಿಲ್ಲದವರಿಗೆ ವಿಕಾರವು ಬಂದರೆ ಅವರು ವೈಕಾರಿಕರು. ತೈಜಸರಿಗೆ ಈ ತರಹದ ವಿಕಾರವಿರದ್ದರಿಂದ ಅವರು ವೈಕಾರಿಕರೆನಿಸಿ ಕೊಳ್ಳುವುದಿಲ್ಲ. ವೈಕಾರಿಕರೇ ಇಂದ್ರಿಯವ್ಯೂಹದಲ್ಲಿ ಹುಟ್ಟುವಾಗ ಜ್ಞಾನವೆಂಬ ಗುಣವೇ ಹೆಚ್ಚಾಗಿ ಉದ್ರೇಕ ಹೊಂದಿರುವುದರಿಂದ "ತೈಜಸರು" ಎಂದು

ಹೆಸರನ್ನು ಹೊಂದಿರುತ್ತಾರೆ. ಭೂತಾಭಿಮಾನಿಗಳಾದ ದೇವತೆಗಳಿಗೆ ವ್ಯವಧಾನವಿರುವುದರಿಂದ ಜ್ಞಾನದ ಉದ್ರೇಕವಿರುವುದಿಲ್ಲ. ಆದುದರಿಂದ ಅವರಿಗೆ "ತೈಜಸ"ವೆಂಬ ಹೆಸರು ಬರದೆ "ತಾಮಸ" ಎಂದು ಹೆಸರು ಬಂದಿರುತ್ತದೆ. ಇಂದ್ರಿಯಾಭಿಮಾನಿ ದೇವತೆಗಳಿಗೆ ಜ್ಞಾನೋದ್ರೇಕವಿದ್ದುದರಿಂದ "ತೈಜಸ"ವೆಂಬ ಹೆಸರು ಬಂದಿತು. ಅದೇ ಭೂತಾಭಿಮಾನಿ ದೇವತೆಗಳಿಗೆ ಜ್ಞಾನಕ್ಕೆ ಸ್ವಲ್ಪ ವ್ಯವಧಾನವಿರುವುದರಿಂದ "ತಾಮಸ"ವೆಂಬ ಹೆಸರು ಬಂದಿತು. ವೈಕಾರಿಕರಿಗೆ ಪೂರ್ವದಲ್ಲಿ ವಿಕಾರವಿದೆ ದೇಹಭೇದವಾದ ನಂತರ (ಬೇರೆ ದೇಹ ಬರುವುದರಿಂದ) ವಿಕಾರವಾಗಿರುವುದರಿಂದ "ವೈಕಾರಿಕ" ಎಂಬ ಹೆಸರು ಬಂದಿತು ಎಂದು ಶ್ರೀಮದಾಚಾರ್ಯರು ನಿರೂಪಿಸಿರುತ್ತಾರೆ.

"ವಸು ಇಂದ್ರಾಂತರ್ಗತನಾಗಿ ನಿಯಾಮಕನಾದ ಕೃತಿಪತಿ ಪ್ರದ್ಯುಮ್ನನು ಭೋಜ್ಯವಸ್ತುಗಳಲ್ಲಿ ೨೪ ರೂಪಗಳಿಂದ ಇರುತ್ತಾನೆ. ರುದ್ರಾಂತರ್ಗತನಾದ ಜಯಾಪತಿ ಸಂಕರ್ಷಣನು ಭೋಕ್ತೃವ್ಯಕ್ತಿಗಳಲ್ಲಿ (ಊಟ ಮಾಡುವವರಲ್ಲಿ) ೩೩ ರೂಪಗಳಿಂದ ಇರುತ್ತಾನೆ" ಎಂದು ಮೂಲದಲ್ಲಿ ಹೇಳಿದುದಕ್ಕೆ ಪ್ರಮಾಣವಿರುತ್ತದೆ.

## ಶ್ರೀ ಗುರುಹೃದಯಪ್ರಕಾಶಿಕೆ

ಭೋಜ್ಯವಸ್ತುಗತ ವಸುವಂತರ್ಯಾಮಿ ಪ್ರದ್ಯುಮ್ನನ ಇಪ್ಪತ್ನಾಲ್ಕುರೂಪ, ರುದ್ರಾಂತರ್ಗತ ಸಂಕರ್ಷಣನ ಭೋಕ್ತೃರೂಪ ಮೂವತ್ಮೂರು ಸಹ, ಸ್ಮರಣೋಪಾಸನೆ ತಿಳಿಸುತ್ತಾರೆ, ಕೃತಿ ಎಂದು. ಕೃತಿಪತಿಪ್ರದ್ಯುಮ್ನ ಎಂಟು ಜನ ವಸುದೇವತೆಗಳೊಳಗೂ, ವೈಕಾರಿಕ, ತೈಜಸ, ತಾಮಸವೆಂಬ ಅಹಂಕಾರ ತತ್ವತ್ರಯದಲ್ಲೂ ಸಹ ಇದ್ದು, ಮಧುರಾದಿ ಷಡ್ರಸಗಳಲ್ಲೂ, ಸುರುಚಿ, ರುಚಿರ, ಸುಗಂಧ, ಶುಚಿ ಎಂಬ ನಾಲ್ಕೂ ರೂಪದ ಮೇಲೆ ಆರನಾಲ್ಕೂ ಇಪ್ಪತ್ನಾಲ್ಕು ರೂಪದಿಂದ ಭೋಜನ ಮಾಡುವ ಪದಾರ್ಥಗಳಲ್ಲಿರುವನು, ಹುತವಹಾಕ್ಷನೆಂಬ ಅಗ್ನಿನೇತ್ರನಾದ ರುದ್ರಾಂತರ್ಗತ ಜಯಾಪತಿ ಸಂಕರ್ಷಣರೂಪನು ಮೂವತ್ಮೂರು ರೂಪದಿಂದ ಭೋಕ್ತೃಗಳೊಳಗಿದ್ದು, ಭೋಕ್ತೃಶಬ್ದ ವಾಚ್ಯನು, ಏಕಾದಶ ರುದ್ರಾಂತರ್ಗತ ಹನ್ನೊಂದು

ರೂಪವನ್ನು ಅಂಶಿ ಎಂಬ ಮೂಲರೂಪ ೧, ಅಂಶ ಎಂಬ ಅವತಾರ ರೂಪ ೧, ಜೀವಾಂತರ್ಯಾಮಿ ರೂಪ ೧ ಸಹ ಮೂರರಿಂದ ಹೆಚ್ಚು ಗುಣಿಸಿದರೆ ೩೩ ಆಗುವುದೆಂದು ತಿಳಿಯಬೇಕು ॥೧॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪಿತೃಗಳ ಪ್ರೀತ್ಯರ್ಥವಾಗಿ ಆಚರಿಸುವ ಪಿತೃಯಜ್ಞರೂಪವಾದ ಶ್ರಾದ್ಧ ಕರ್ಮಗಳನ್ನು ಅಧಿಕಾರಿಯು ಅನುಸಂಧಾನಪೂರ್ವಕ ಶ್ರದ್ಧಾಭಕ್ತ್ಯಾದಿಗಳಿಂದ ಮಾಡಿದರೆ. ಅವನಿಗೆ ಪಿತೃದೇವತೆಗಳು ಅನುಗ್ರಹಮಾಡಿ ಉತ್ತಮ ಫಲವನ್ನು ಕೊಡುವರು,

ಶ್ರಾದ್ಧಕರ್ಮಗಳಲ್ಲಿ ಸಿದ್ಧಪಡಿಸುವ ಭೋಜನ ಮಾಡುವ ಪದಾರ್ಗಳಲ್ಲಿ ಕೃತಿಪತಿಯಾದ ಪ್ರದ್ಯುಮ್ನನು ಅಧಿಷ್ಠಿತನಾಗಿದ್ದು, **ಭೋಜ್ಯ** ಎಂಬ ಹೆಸರಿನಿಂದಲೆ ಕರೆಯಿಸುತ್ತಾನೆ. ತಂದೆಯ ಶ್ರಾದ್ಧಕರ್ಮದಲ್ಲಿ ಪಿತೃಸ್ಥಾನಕ್ಕೆ ಅಷ್ಟವಸುಗಳು ಅಭಿಮಾನಿಗಳಾಗಿದ್ದಾರೆ. ಇವರ ಹೆಸರುಗಳು ಕ್ರಮವಾಗಿ ದ್ರೋಣ, ಧ್ರುವ, ದ್ಯುನಾಮಕ, ಪ್ರಾಣ, ಅರ್ಕ, ವಸು ಮತ್ತು ಉತ್ತಮ ಕಕ್ಷದಲ್ಲಿ ಅಗ್ನಿ.

ಮಹತತ್ವದಿಂದ ಜನ್ಯವಾದ ಅಹಂಕಾರ ತತ್ತ್ವವು ಮೂರುಪ್ರಕಾರವಾಗಿದೆ. ಇದಕ್ಕೆ **ಅಹಂಕಾರತ್ರಯ**ಗಳೆಂದು ಹೆಸರು. ವೈಕಾರಿಕ ಅಹಂಕಾರ ತೈಜಸಾಂಹಕಾರ ಮತ್ತು ತಾಮಸಾಂಹಕಾರ ಎಂದು ಮೂರು ವಿಧ.

ಪ್ರತಿವಸುವಿನಲ್ಲಿಯೂ ಅಹಂಕಾರ ತ್ರಯಗಳಂತೆ ಪರಿಗಣಿಸಿದರೆ. ಅಲ್ಲಿಗೆ ಅಷ್ಟವಸುಗಳು × ಅಹಂಕಾರತ್ರಯ = ೮ × ೩ = ೨೪ ಆಗುವುದು. ಕೃತಿಪತಿ ಪ್ರದ್ಯುಮ್ನನು ಇಪ್ಪತ್ನಾಲಕು (ಚತುರವಿಂಶತಿ) ರೂಪಗಳಿಂದ ಭೋಜ್ಯನಾಮಕನಾಗಿ ಭೋಜ್ಯವಸ್ತುಗಳಲ್ಲಿ ಅಧಿಷ್ಠಿತನಾಗಿದ್ದಾನೆ.

ಯಜ್ಞ ಯಾಗಾದಿಗಳಲ್ಲಿ ಹವಿಸ್ಸನ್ನು ದೇವತೆಗಳಿಗೆ ಒಯ್ದು ಮುಟ್ಟಿಸು ವುದರಿಂದ ಅಗ್ನಿದೇವರಿಗೆ **ಹುತವಹ** ಎಂತ ನಾಮ. ತ್ರಿನೇತ್ರರಾದ ಶ್ರೀಮಹ ರುದ್ರ ದೇವರ ಫಾಲನೇತ್ರದಲ್ಲಿ ಅಗ್ನಿ ಇದ್ದಾನೆ. ಇದರಿಂದ ರುದ್ರದೇವರನ್ನು **ಹುತವಹಾಕ್ಷ**–ಎಂದಿದ್ದಾರೆ ಪ್ರಸಕ್ತಪದ್ಯದಲ್ಲಿ.

ರುದ್ರನೆಂದರೆ, ಏಕಾದಶರುದ್ರರು ಎಂದು ಗ್ರಾಹ್ಯ. ಪಿತಾಮಹನ ಸ್ಥಾನಕ್ಕೆ ಈ ಏಕಾದಶರುದ್ರರು ಅಭಿಮಾನಿಗಳು. ಅವರ ಹೆಸರುಗಳು ಕ್ರಮವಾಗಿ ರೈವತ, ಓಜ, ಭವ, ಭೀಮ, ವಾಮ, ಉಗ್ರ, ವೃಷಾಕಪಿ, ಅಜೈಕಪಾತ್, ಅಹಿರ್ಬುಧ್ನ, ಬಹುರೂಪ ಮತ್ತು ಉತ್ತಮ ಕಕ್ಷದಲ್ಲಿ ಪಾರ್ವತೀಪತಿ ರುದ್ರ ಹೀಗಿವೆ.

ಈ ಏಕಾದಶ ರುದ್ರರಲ್ಲಿ ಜಯಾಪತಿ ಸಂಕರ್ಷಣನನ್ನು ಅಂತರ್ಯಾಮಿ ರೂಪತ್ವೇನ ಚಿಂತಿಸಬೇಕು. ಸಂಕರ್ಷಣನು, ಏಕಾದಶ ರುದ್ರರು × ಅಹಂಕಾರ ತ್ರಯಗಳು = ೧೧ × ೩ = ೩೩ ರೂಪಗಳಿಂದ ವಿದ್ಯಮಾನನಾಗಿದ್ದಾನೆ. ಸಂಕರ್ಷಣನ ಈ ೩೩ ರೂಪಗಳನ್ನೂ **ಮೂರಧಿಕ ತ್ರಿಶಂತಿ ಸುರೂಪದಿ** ಎಂದಿದ್ದಾರೆ. ಅಂದರೆ ತ್ರಿಂಶತಿ = ೩೦, ಮೂರಧಿಕ ಎಂದರೆ ೩೦ + ೩ = ೩೩ ಎಂದಾಗುವುದು.

ಶ್ರಾದ್ಧ ಕರ್ಮಕ್ಕೆ ಆಮಂತ್ರಿತರಾಗಿ ಬಂದಿರುವ ಬ್ರಾಹ್ಮಣರಲ್ಲಿ ೨೪ ರೂಪಗಳಿಂದ ಕೃತಿಪತಿ ಪ್ರದ್ಯುಮ್ನನು ಭೋಜ್ಯ ಹಾಗೂ ಭೋಕ್ತೃನಾಮಕ ನಾಗಿದ್ದಾನೆ.

ಜಯಾಪತಿ ಸಂಕರ್ಷಣನಾಮಕ ಶ್ರೀ ಪರಮಾತ್ಮನು ೩೩ ರೂಪಗಳಿಂದ ಭೋಜ್ಯ ಹಾಗೂ ಭೋಕ್ತೃ ಎಂದು ಕರೆಯಿಸುತ್ತಾನೆ. ಈ ತಾತ್ಪರ್ಯಾರ್ಥ ವನ್ನು ದಾಸರಾಯರು ತಾನೇ ಎಂಬ ಶಬ್ದದಿಂದ ಸೂಚಿಸಿದ್ದಾರೆ. ಅಂದರೆ ಭೋಜ್ಯನಾಮಕನಾದ ಪ್ರದ್ಯುಮ್ನನೇ ಭೋಕ್ತೃನಾಮಕನಾದ ಸಂಕರ್ಷಣ ನಾಗಿದ್ದಾನೆ. ಉಭಯ ರೂಪಗಳೂ ಭೋಜ್ಯ ಮತ್ತು ಭೋಕ್ತೃರೂಪಗಳೇ ಆಗಿವೆ.

| ಸಂಖ್ಯೆ | ಭಗವದ್ರೂಪ | ಅಧಿಷ್ಠಾನ | ಅಭಿಮಾನಿ ದೇವತೆಗಳು | ಚಿಂತಿಸಬೇಕಾದ ಭಗವದ್ರೂಪಗಳ ಸಂಖ್ಯೆ | ಉಭಯರೂಪ |
|---|---|---|---|---|---|
| ೧ | ಕೃತಿಪತಿ ಪ್ರದ್ಯುಮ್ನ | ಭೋಜ್ಯವಸ್ತುಗಳು | ಅಷ್ಟವಸುಗಳು | ೮ × ೩ = ೨೪ | ಭೋಜ್ಯ ಭೋಕ್ತೃನಾಮಕ |
| ೨ | ಜಯಾಪತಿ ಸಂಕರ್ಷಣ | ಭೋಕ್ತೃಗಳು | ಏಕಾದಶ ರುದ್ರರು | ೧೧ × ೩ = ೩೩ | ಭೋಜ್ಯ ಭೋಕ್ತೃನಾಮಕ |

**ವಿಶೇಷ ವಿಚಾರ**

೨೪ ರೂಪಗಳಿಂದ ವಸ್ವಂತರ್ಗತನಾದ ಪ್ರದ್ಯುಮ್ನನೇ ಭೋಜ್ಯನಾಮಕನಾಗಿದ್ದು ೩೩ ರೂಪಗಳಿಂದ ಸಂಕರ್ಷಣ ನಾಮಕನಾಗಿ ರುದ್ರಾಂತರ್ಗತನಾಗಿ ಭೋಕ್ತೃನಾಮಕನೂ ಆಗಿದ್ದಾನೆ ॥ ೧ ॥

## ಪದ್ಯ—೨

ಅರಧಿಕಮೂವತ್ತು ರೂಪದಿ ।
ವಾರಿಜಾಪ್ತನೊಳಿರುತಿಹನು ಮಾ ।
ಯಾರಮಣ ಶ್ರೀವಾಸುದೇವನು ಕಾಲನಾಮದಲಿ ॥
ಮೂರು ವಿಧ ಪಿತೃಗಳೊಳು ವಸು ತ್ರಿಪು ।
ರಾರಿಯಾದಿತ್ಯಗನಿರುದ್ಧನು ।
ತೋರಿಕೊಳ್ಳದೆ ಕರ್ತೃ ಕರ್ಮ ಕ್ರಿಯನೆನಿಸಿಕೊಂಬ ॥೨॥

**ಅವತರಣಿಕೆ :**

ಪ್ರಪಿತಾಮಹಸ್ಥಾನಕ್ಕೆ ಅಭಿಮಾನಿಗಳಾದ ದ್ವಾದಶಾದಿತ್ಯರಲ್ಲಿ ಅಧಿಷ್ಠಿತನಾಗಿ ಭೋಕ್ತೃ ಬ್ರಾಹ್ಮಣರಲ್ಲಿ ಆವಾಹನಮಾಡಿದ ಮಾಯಾರಮಣನಾದ ಶ್ರೀವಾಸುದೇವನಾಮಕನಾದ ಶ್ರೀ ಪರಮಾತ್ಮನ ವಿಚಾರವನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ :**

**ಮಾಯಾರಮಣ**—ಮಾಯಾನಾಮಕಳಾದ ಶ್ರೀ ಲಕ್ಷ್ಮೀದೇವಿಯರ ಪತಿಯಾದ, **ಶ್ರೀವಾಸುದೇವನು**—ವಾಸುದೇವ ನಾಮಕನಾದ ಶ್ರೀಪರಮಾತ್ಮನು, **ಕಾಲನಾಮದಲಿ**—ವರ್ಷಕ್ಕೆ ಒಂದು ದಿನದಲ್ಲಿ ಮಾಡತಕ್ಕ ಶ್ರಾದ್ಧಕಾಲನಾಮಕನಾಗಿ, **ಅರಧಿಕ ಮೂವತ್ತು ರೂಪದಿ**—ಮೂವತ್ತಾರು ರೂಪಗಳಿಂದ (ದ್ವಾದಶಾದಿತ್ಯರು × ಅಹಂಕಾರ ತ್ರಯಗಳು = ೧೨ × ೩ = ೩೬ ರೂಪಗಳು) **ವಾರಿಜಾಪ್ತನೊಳು**—ಕಮಲಮಿತ್ರನಾದ ಸೂರ್ಯ ಅಂದರೆ, ದ್ವಾದಶಾದಿತ್ಯರು ಗ್ರಾಹ್ಯ, **ಇರುತಿಹನು**—ತಿಥ್ಯಂತರ್ಗತನಾಗಿ, ಕಾಲಾಂತರ್ಗತನಾಗಿ ಇದ್ದಾನೆ. **ಮೂರುವಿಧಪಿತೃಗಳೊಳು**—ಪಿತೃ, ಪಿತಾಮಹ ಮತ್ತು ಪ್ರಪಿತಾಮಹ ಎಂಬ ಮೂರು ವಿಧ ಪಿತೃಗಳಲ್ಲಿ (ಆ ಸ್ಥಾನಕ್ಕೆ

ಆಮಂತ್ರಿತರಾದ ಬ್ರಾಹ್ಮಣತ್ರಯರಲ್ಲಿ)**ವಸು**= ಅಷ್ಟವಸುಗಳು, **ತ್ರಿಪುರಾರಿ**= ತ್ರಿಪುರಾಸುರನನ್ನು ಸಂಹರಿಸಿದ ರುದ್ರದೇವರೇ ಆದಿಯಾಗಿ ಏಕಾದಶ ರುದ್ರ ವರ್ಗದಲ್ಲಿ, **ಆದಿತ್ಯಗನು**= ದ್ವಾದಶಾದಿತ್ಯಾಂತರ್ಗತನಾಗಿ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂಬ ರೂಪತ್ರಯಗಳಿಂದ ವಿದ್ಯಮಾನನಾಗಿದ್ದಾನೆ. **ಅನಿರುದ್ಧನು**= ಪ್ರದ್ಯುಮ್ನ , ಸಂಕರ್ಷಣ ಮತ್ತು ವಾಸುದೇವನಾಮಕ ಶ್ರೀ ಪರಮಾತ್ಮನೇ ಅನಿರುದ್ಧ ನಾಮಕನಾಗಿ, **ತೋರಿಕೊಳ್ಳದೆ**= ಶ್ರಾದ್ಧ ಮಾಡುವ ಅಧಿಕಾರಿಯಲ್ಲಿ ಅಂತರ್ಗತನಾಗಿದ್ದು, ಅವರಿಗೆ ಅಗೋಚರನಾಗಿ, **ಕರ್ತೃ**= ಪಿತೃಕಾರ್ಯ ಮಾಡತಕ್ಕ ಕರ್ತೃವಿನಲ್ಲಿ ಒಂದು ರೂಪದಿಂದ ಕರ್ತೃ ಎಂತಲೂ, **ಕರ್ಮ**= ಶ್ರಾದ್ಧ ಕರ್ಮಾಂತರ್ಗತನಾಗಿದ್ದು, ಕರ್ಮ ಎಂತಲೂ, **ಕ್ರಿಯ**= ಬ್ರಾಹ್ಮಣರ ಪಾದ ಪ್ರಕ್ಷಾಳನಾದಿ ಕ್ರಿಯೆಗಳಲ್ಲಿ ಇದ್ದು, ಕ್ರಿಯನೆಂತಲೂ, **ಎನಿಸಿಕೊಂಬ**= ನಾಮತ್ರಯಗಳಿಂದ ತದ್ರೂಪನಾಗಿ ಕರೆಯಿಸುತ್ತಾನೆ ॥೨॥

## ವ್ಯಾಖ್ಯಾನಗಳು

### ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಅವಶಿಷ್ಟ ಪಿತೃಕರ್ಮಾನು ಸಂಧಾನ ಹೇಳುತಾರೆ.

ಪ್ರಪಿತಾಮಹನ ಉದ್ದಿಶ್ಯ ಮಾಡಿದ ಭೋಕ್ತೃಬ್ರಾಹ್ಮಣನಲ್ಲಿ ಆವಾಹನ ಮಾಡಿದ ಪ್ರಪಿತಾಮಹನೊಳು ವಿದ್ಯಮಾನನಾದ, ಕಮಲಕ್ಕೆ ಆಪ್ತನಾದ ಸೂರ್ಯ, ಈ ದ್ವಾದಶಾದಿತ್ಯರು. ಒಂದು ಸೂರ್ಯನ ಅಹಂಕಾರತ್ರಯದಲ್ಲಿ ಮೂರು ರೂಪದ ವ್ಯಾರಿಗೆ (ಹನ್ನೆರಡು ಮೂರುಗಳು) ಮೂವತ್ತಾರು ರೂಪದಿಂದ ಮಾಯಾನಾಮಕ ಲಕ್ಷ್ಮೀಗೆ ಪತಿಯಾದ ಕಾಂತಿ ಸಂಪನ್ನನಾದ ಶ್ರೀ ವಾಸುದೇವನು ಇರೋವನಾಗಿದ್ದಾನೆ. ಹ್ಯಾಂಗೆ ಇದ್ದಾನೆ ಎಂದರೆ ಇದೇ ವಾಸುದೇದ ಶ್ರಾದ್ಧಕಾಲವೆಂಬ ವರುಷಕ್ಕೆ ಒಂದು ದಿನದಲ್ಲಿ ಮಾಡತಕ್ಕ ಶ್ರಾದ್ಧ ದಾವಕಾಲದಲ್ಲಿ ಘಟಿಸತದೋ ಆ ತಿಥ್ಯಂತರ್ಗತನಾಗಿ ಮತ್ತು ದಾವಾಗಾದರೆ ಪಿತೃಕರ್ಮ ಉಪಕ್ರಮಿಸತಾನೋ ಆಕಾಲಾಂತರ್ಗತನಾಗಿ ಇದ್ದು ಕಾಲನಾಮದಿಂದಲೂ ದ್ವಾದಶಾದಿತ್ಯಾಂತರ್ಗತನಾಗಿ ಕರಸತಾನೆ. ಇಲ್ಲಿಗೆ ಪ್ರದ್ಯುಮ್ನ,

ಸಂಕರ್ಷಣ, ವಾಸುದೇವರೂಪಗಳ ವಿಚಾರವಾಯಿತು. ಮೂರು ವಿಧ ಪಿತೃಗಳ ಉದ್ದಿಶ್ಯ ನಿಮಂತ್ರಣದಿಂದ ಏರ್ಪಡಿಸಿದ ಬ್ರಾಹ್ಮಣರು ಮೂವರಲ್ಲಿ ಆವಾಹನ ಮಾಡಿದ ಪಿತೃ, ಪಿತಾಮಹ, ಪ್ರಪಿತಾಮಹಾದಿ ಮೂರು ವಿಧ ಪಿತೃಗಳೊಳಗೆ ಅಷ್ಟವಸುಗಳು, ರುದ್ರದೇವರೇ ಮೊದಲಾದ ಏಕಾದಶರುದ್ರರು, ಉರುಕ್ರಮನಾದ ಪರಮಾತ್ಮನೆಂಬೋ ಆದಿತ್ಯನ ಸಹಿತ ದ್ವಾದಶಾದಿತ್ಯರು, 'ಗ' ಎಂಬೋಣದರಿಂದ ಪ್ರದ್ಯುಮ್ನ, ಸಂಕರ್ಷಣ, ವಾಸುದೇವರೂಪದಿಂದ ಅಂತರ್ಗತನಾಗಿ ಇರತಕ್ಕವನೆಂದು ತಾತ್ಪರ್ಯ. ಇದರಲ್ಲಿ ಉರುಕ್ರಮನಾಮಕ ಸೂರ್ಯ ಸಾಕ್ಷಾತ್ ಪರಮಾತ್ಮನಾದ್ದರಿಂದ ಅಂತರ್ಗತ ಅವನೇ ಆಗಿದ್ದಾನೆ ಎಂತಲೂ ತಾತ್ಪರ್ಯ, ಅನಿರುದ್ಧನಾಮಕ ಪರಮಾತ್ಮ ಪಿತೃಕಾರ್ಯ ಮಾಡತಕ್ಕ ಕರ್ತೃವಿನಲ್ಲಿ ಒಂದು ರೂಪದಿಂದ ಇದ್ದು ಕರ್ತೃ ಎಂತಲೂ, ಪಿತೃ ಉದ್ದಿಶ್ಯ ಮಾಡತಕ್ಕ ಕರ್ಮದಲ್ಲಿ ಒಂದು ರೂಪದಿಂದ ಇದ್ದು ಕರ್ಮ ಎಂತಲೂ, ಬ್ರಾಹ್ಮಣರ ಪಾದಪ್ರಕ್ಷಾಲನ ಮೊದಲಾದ ಕ್ರಿಯೆಗಳಲ್ಲಿ ಒಂದು ರೂಪದಿಂದ ಇದ್ದು ಕ್ರಿಯೆ ಎಂತಲೂ, ಈ ಪ್ರಕಾರ ಕರ್ತೃ, ಕರ್ಮ, ಕ್ರಿಯೆಗಳಲ್ಲಿ ಅನಿರುದ್ಧನು ಮೂರು ರೂಪದಿಂದ ಇದ್ದು ತನ್ನಾಮರೂಪವುಳ್ಳವನೆಂದು ಅನಿಸೋವನಾಗತಾನೆ. ಪೂರ್ವೋಕ್ತ ಪ್ರಕಾರ ಅಧಿಕಾರಿಗಳಿಗೆ ತೋರಿಕೊಳ್ಳದೆ ಪ್ರದ್ಯುಮ್ನಾದಿ ನಾಲ್ಕು ರೂಪದಿಂದ ಇರುತ್ತಾನೆ ಎಂತ ತಾತ್ಪರ್ಯ ॥ ೨ ॥

## ಭಾವಪ್ರಕಾಶಿಕೆ

ಆದಿತ್ಯಗಣದವರು ೧೨ ಮಂದಿ; ಇವರು ಪ್ರಪಿತಾಮಹರಲ್ಲಿರುವರು ಇವರ ಒಬ್ಬೊಬ್ಬರಲ್ಲೂ ವೈಕಾರಿಕಾದಿ ಮೂರು ಅಹಂಕಾರಗಳಂತೆ ೧೨ × ೩ = ೩೬ ಆದವು, ಈ ೩೬ ರೂಪಗಳಿಂದ ಮಾಯಾಪತಿ ಶ್ರೀವಾಸುದೇವನು ಕಾಲನೆಂದೆನಿಸಿ ಶ್ರಾದ್ಧಮಾಡುವ ಕಾಲದಲ್ಲಿ ವ್ಯಾಪ್ತನಾಗಿರುವನು. ಹೀಗೆ ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಈ ಮೂವರನ್ನು ಹೇಳಿದರು. ಮುಂದೆ ಅನಿರುದ್ಧನೆಲ್ಲಿರುವನೆಂದು ಹೇಳುತ್ತಾರೆ. ಪಿತೃ, ಪಿತಾಮಹ, ಪ್ರಪಿತಾಮಹರೆಂಬ ಮೂರು ವಿಧ ಪಿತೃಗಳಿಗೆ ಅಧಿಪತಿಗಳಾದ ವಸುಗಣ, ರುದ್ರಗಣ, ಆದಿತ್ಯಗಣಗಳಲ್ಲಿಯೂ ಅನಿರುದ್ಧನಿರುವನಲ್ಲದೆ, ತನ್ನ ಕರ್ತೃತ್ವವನ್ನು ತೋರ್ಪಡಿಸದೆ, ಶ್ರಾದ್ಧಮಾಡುವವನಲ್ಲಿದ್ದು ಕರ್ತನೆಂತಲೂ, ಶ್ರಾದ

ಕರ್ಮದೊಳಗಿದ್ದು ಕರ್ಮವೆಂತಲೂ, ಬ್ರಾಹ್ಮಣ ಪಾದಪ್ರಕ್ಷಾಳನ ಭೋಜನ ಮುಂತಾದ ಕ್ರಿಯೆಗಳಲ್ಲಿದ್ದು ಕ್ರಿಯೆ ಎಂತಲೂ ಅನಿಸಿಕೊಳ್ಳುವನು. ಯದ್ಯಪಿ ಶ್ರಾದ್ಧಕಲ್ಪದಲ್ಲಿ ವಿಶ್ವೇದೇವತೆಗಳಲ್ಲಿ ಅನಿರುದ್ಧ, ನಾರಾಯಣ ರೂಪಗಳೆಂತಲೂ, ಪಿತ್ರಾದಿಗಳಲ್ಲಿ ಪ್ರದ್ಯುಮ್ನಾದಿ ರೂಪಗಳೆಂತಲೂ ಹೇಳಿರುವರು. ಇಲ್ಲಿ ಪಿತೃಗಳಲ್ಲೆ ಅನಿರುದ್ಧನನ್ನೇಕೆ ಹೇಳಿದರೆಂದರೆ, ಕಲ್ಪದಲ್ಲಿ ವಿಶ್ವೇದೇವತೆಗಳಲ್ಲಿದ್ದು ಆವಾಹಿತರಾಗಿ ಅನಿರುದ್ಧ, ನಾರಾಯಣರು, ಭೋಜ್ಯಭೋಕ್ತೃವಾಚ್ಯರಾಗಿರುವರು ಎಂದು ಹೇಳಿರುವರು. ಇಲ್ಲಿ ಅಷ್ಟು ಮಾತ್ರವೇ ಅಲ್ಲ; ಪಿತೃಗಳಲ್ಲೂ ಸಹ ಇದ್ದು, ಕರ್ತೃ, ಕರ್ಮ, ಕ್ರಿಯೆ ವಾಚಕನೂ ಆಗುವನೆಂದು ವಿಶೇಷಾರ್ಥವನ್ನು ಹೇಳುತ್ತಾರೆ.

## ಭಾವದರ್ಪಣ

ಈ ಪದ್ಯದ ತಾತ್ಪರ್ಯವನ್ನು ಮೊದಲನೇ ಪದ್ಯದ ತಾತ್ಪರ್ಯದಲ್ಲೇ ಕೊಟ್ಟಿದೆ.

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

"ಆರಧಿಕ" ಇತಿ॥ "ಷಟ್‌ತ್ರಿಂಶದ್ ರೂಪವಾನ್ ವಿಷ್ಣುಃ ಕಂಜಮಿತ್ರೇ ಜಗತ್ಪತಿಃ ॥ "ಮೂರೇತಿ" ತದ್ವಿರಣಂ "ವಸು" ಇತಿ ॥ ಇದಂ ಉಕ್ತಂ ಭವತಿ ॥ ಏತೇ ವಸುರುದ್ರಾದಿತ್ಯಾಖ್ಯಾಃ ದೇವ ವಿಶೇಷಾಃ ಏವ ॥ ನ ತು ವಸುರುದ್ರಾದಿತ್ಯಾಖ್ಯ ಗಣದೇವತಾಃ ॥ ಪಿತೃ, ಪಿತಾಮಹ, ಪ್ರಪಿತಾಮಹ ತದನುವರ್ತಿಷು ಅಂಶಬಾಹುಲ್ಯಾತ್ ಸ್ಮರ್ತವ್ಯತ್ವೇನ ಉಕ್ತಾಃ ॥ "ವಸವಃ ಪಿತರಃ ಜ್ಞೇಯಾಃ ರುದ್ರಾಃ ತತ್ರ ಪಿತಾಮಹಾಃ ॥ ಪಿತುಃ ಪಿತಾಮಹಾಃ ಪ್ರೋಕ್ತಾಃ ಆದಿತ್ಯಾಃ ಬರ್ಹಿಷಿಸ್ಥಿತಾಃ ॥ ವಸುರುದ್ರಾದಿತ್ಯ ಸಂಜ್ಞಾಃ ಪಿತರಃ ಶ್ರಾದ್ಧದೇವತಾಃ ॥ ಪ್ರೀಣಯಂತಿ ಮನುಷ್ಯಾಣಾಂ ಪಿತೄನ್ ಶ್ರಾದ್ಧೇನ ತರ್ಪಿತಾಃ ॥ ಇತಿ ಸ್ಮೃತೇಃ ॥ ಅಧಿಕ ವಿಚಾರಸ್ತು ತಾರತಮ್ಯವಿವೃತೌ ಜ್ಞೇಯಃ ॥ ಪಿತೃಪದೇನ ತದನುವರ್ತಿಗ್ರಹೇ ಯದ್ಯಪ್ಯೇತಸ್ಯ ಬಹ್ವ್ಯೋಪಿ ಸುತಾಃ ಸ್ಯುಃ ತದಪೀಹ ತು ॥ ಸಂಬಂಧ ಸಾಮ್ಯಾತ್ ಏಕೈವ ಗಣಿತೇತ್ಯವ

ಧಾರ್ಯತಾಮ್ ॥ ಇತಿ ಕರ್ಮಕೌಸ್ತುಭ ವಚನಂ ಮಾನಮ್ ॥ "ಲೀ" ತೃತೀಯಾ ॥ ೨ ॥

## ಕನ್ನಡಾರ್ಥ

ಕಾಲಾಂತರ್ಗತ ವಾಸುದೇವನ ರೂಪಸಂಖ್ಯೆಯನ್ನು ತಿಳಿಸುತ್ತಾರೆ. "ಆರಧಿಕ" ಎಂಬ ಪದ್ಯದಿಂದ. ಕಮಲಸಖನಾದ ಸೂರ್ಯನಲ್ಲಿ ೩೬ ರೂಪಗಳಿಂದ ಜಗತ್ಪತಿಯಾದ ಶ್ರೀವಿಷ್ಣುವು ಇರುತ್ತಾನೆ. ಮೂರು ವಿಧರಾದಾ ಎಂಬುದನ್ನು ವಿವರಿಸಲು "ವಸುರುದ್ರಾದಿತ್ಯ" ಎಂಬ ವಚನವು ಹೊರಟಿದೆ. ಪಿತೃ, ಪಿತಾಮಹ, ಪ್ರಪಿತಾಮಹರೆಂದು ಮೂರು ವಿಧ ಪಿತೃಗಳಿಗೆ ದೇವತೆಗಳಾದ ಈ ವಸು, ರುದ್ರ, ಆದಿತ್ಯರೇಂಬುವವರು ಬೇರೆ ಪ್ರತ್ಯೇಕದೇವತೆಗಳೇ ಹೊರತು ವಸು–ರುದ್ರ–ಆದಿತ್ಯಗಣ ದೇವತೆಗಳಲ್ಲ ; ಪಿತೃ, ಪಿತಾಮಹ [ತಂದೆ–ತಂದೆಯ ತಂದೆ (ಅಜ್ಜ)–ತಂದೆಯ ತಂದೆಯ ತಂದೆ (ಮುತ್ತಜ್ಜ)ರುಗಳು, ಹಾಗೂ ಅವರ ಅನುವರ್ತಿಗಳಲ್ಲಿ ಸ್ಮರಿಸಲ್ಪಡಬೇಕಾದವರು. ವಸುಗಳನ್ನು ಪಿತೃಗಳಲ್ಲಿಯೂ, ರುದ್ರರನ್ನು ಪಿತಾಮಹರಲ್ಲಿಯೂ, ಆದಿತ್ಯರನ್ನು ಪ್ರಪಿತಾಮಹರಲ್ಲಿಯೂ ಸ್ಮರಿಸಬೇಕು. ವಸುರುದಾದಿತ್ಯರುಗಳು, ಪಿತೃಗಳು, ಶ್ರಾದ್ಧದೇವತೆಗಳು, ಶ್ರಾದ್ಧದಿಂದ ತೃಪ್ತಿಪಡೆದು ಮನುಷ್ಯರ ಪಿತೃಗಳನ್ನು ತೃಪ್ತಿಬಡಿಸುತ್ತಾರೆ" ಎಂದು ಸ್ಮೃತಿ ಇರುತ್ತದೆ. ಹೆಚ್ಚಿನ ವಿಚಾರವನ್ನು ತಾರತಮ್ಯ ವಿವೃತಿಯಲ್ಲಿ ತಿಳಿದುಕೊಳ್ಳಬೇಕು. ಪಿತೃಶಬ್ದದಿಂದ ಅವರ ಅನುವರ್ತಿಗಳನ್ನೂ ಅರ್ಥದಿಂದ ಸಂಗ್ರಹಿಸಿ "ಪಿತೃ ತದನುವರ್ತಿಗಳು" ಎಂದು ಅರ್ಥ ತಿಳಿಯಲು "ಯದ್ಯಪ್ಯೇತಸ್ಯ" ಎಂದು ಪ್ರಾಕೃತ ಟೀಕಾಕಾರರು ಉದಾಹರಿಸಿರುವ ಕರ್ಮಕೌಸ್ತುಭವಚನವು ಪ್ರಮಾಣವಾಗಿದೆ.

"ಕಾಲನಾಮದಲೀ = ಕಾಲನಾಮದಿಂದ" ॥ ೨ ॥

## ಶ್ರೀಗುರುಹೃದಯಪ್ರಕಾಶಿಕೆ

ಕಾಲಾಂತರ್ಗತ ವಾಸುದೇವನ ಮೂವತ್ತಾರು ರೂಪ, ಕರ್ತೃಕರ್ಮಕ್ರಿಯಾರೂಪ, ಸ್ಮರಣೋಪಾಸನೆ ಸಹ ತಿಳಿಸುತ್ತಾರೆ, ಆರಧಿಕ ಎಂದು.

ಮಾಯಾದೇವೀಪತಿ ಶ್ರೀವಾಸುದೇವನು, ವಾರಿಜಾಪ್ತನೆಂಬ ಕಮಲಕ್ಕೆ ಆಪ್ತನಾದ ದ್ವಾದಶಾದಿತ್ಯರೊಳಗಿದ್ದು ಕಾಲನಾಮಕನೆನಿಸಿ, ದ್ವಾದಶಾದಿತ್ಯಗತ ರೂಪಗಳನ್ನು ಅಂಶಿ ೧, ಅಂಶ ೧, ಅಂತರ್ಗತ ೧, ಈ ಮೂರರಿಂದ ಹೆಚ್ಚಿಸಿದರೆ ೩೬ ರೂಪನಾಗಿರುವನು. ಪಿತೃ, ಪಿತಾಮಹ, ಪ್ರಪಿತಾಮಹ ಎಂಬ ಮೂರು ವಿಧ ಪಿತೃಗಳಲ್ಲಿ ಅಥವಾ ಅಗ್ನಿಷ್ವಾತ್ತರು, ಬರ್ಹಿಷದರು, ಸೋಮಪರೆಂದು ೩ ವಿಧ ಪಿತೃಗಳಲ್ಲಿ ಅಷ್ಟವಸು, ತ್ರಿಪುರಾರಿ ಎಂಬ ರುದ್ರ, ಆದಿತ್ಯರೆಂಬ ೩ ವಿಧ ದೇವತಾಂತರ್ಗತನಾಗಿದ್ದು ದೇವರು, ಕರ್ಮ ಎಂದರೆ ಉದ್ದೇಶರೂಪನೆನಿಸುವನು, ಮಾಡುವಲ್ಲಿ ಅನಿರುದ್ಧರೂಪದಿಂದ ಕರ್ತೃ ಎನಿಸಿಕೊಳ್ಳುವನು ; ಶ್ರಾದ್ಧವ್ಯಾಪಾರದಲ್ಲಿ ಕ್ರಿಯಾ ಎನ್ನಿಸಿ ಕರೆಸುವನು.

“ಮಂತ್ರತಂತ್ರೋಪಕರಣ ಕರ್ತೃವನ್ವಿಷು ಕೇಶವಂ ।
ದೇಶಕಾಲೇಚ ಮನ್ವಾನಾಶ್ಚಕ್ರಸ್ತೇ ಕರ್ಮನಿರ್ಮಲಂ ॥
ಎಂಬ ಹರಿವಂಶದ ಅರ್ಥವು ವಿವರಿಸಲ್ಪಟ್ಟಿತು ॥ ॥ ೨ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರಾದ್ಧ ಕರ್ಮದಲ್ಲಿ ಪ್ರಪಿತಾಮಹನ ಸ್ಥಾನಕ್ಕೆ ಅಭಿಮಾನಿಗಳಾದ ದ್ವಾದಶಾದಿತ್ಯರವಿಚಾರ ಮತ್ತು ಆ ಸ್ಥಾನಕ್ಕೆ ಆಮಂತ್ರಿತರಾಗಿ ಬಂದಿರುವ ಬ್ರಾಹ್ಮಣರಲ್ಲಿ ಆವಾಹಿಸಬೇಕಾದ ಭಗವದ್ರೂಪ ವಿಚಾರ ತಿಳಿಸುತ್ತಾರೆ. **ವಾರಿಜಾಪ್ತ**ನೆಂದರೆ ಕಮಲಮಿತ್ರನಾದ ಸೂರ್ಯನೆಂದರ್ಥ. ಇದರಿಂದ ೧೨ ಮಂದಿ ಸೂರ್ಯರು, ಅಂದರೆ ದ್ವಾದಶಾದಿತ್ಯರು ಗ್ರಾಹ್ಯ.

ಮಾಯಾಪತಿಯಾದ ವಾಸುದೇವನಾಮಕ ಶ್ರೀ ಹರಿಯು ದ್ವಾದಶಾದಿತ್ಯರಲ್ಲಿ ಅಂತರ್ಯಾಮಿಯಾಗಿದ್ದಾನೆ. ಪ್ರತಿ ಸಾಂವತ್ಸರಿಕ ಶ್ರಾದ್ಧದಲ್ಲಿ **ಕಾಲ** ಎಂಬ ಹೆಸರಿನಿಂದ ವಿದ್ಯಮಾನನಾಗಿದ್ದಾನೆ. ಈ ಕಾಲನಾಮಕ ಶ್ರೀ ವಾಸುದೇವನು ಮೂವತ್ತಾರು ರೂಪಗಳಿಂದ **(ಅರಧಿಕ ಮೂವತ್ತು ರೂಪದಿ)** ಶ್ರಾದ್ಧ ಕಾರ್ಯಗಳಿಗೆ ಪ್ರೇರಕನಾಗಿದ್ದಾನೆ.

ಶ್ರಾದ್ಧ ಕಾಲದಲ್ಲಿ ಮೂರು ವಿಧವಾದ ಪಿತೃಗಳನ್ನು ಆವಾಹಿಸುತ್ತೇವೆ. ಪಿತೃಸ್ಥಾನ ಪಿತಾಮಹಸ್ಥಾನ ಮತ್ತು ಪ್ರಪಿತಾಮಹಸ್ಥಾನ. ಈ ಸ್ಥಾನಗಳಿಗೆ ಕ್ರಮವಾಗಿ ಅಷ್ಟವಸುಗಳು, ಏಕಾದಶರುದ್ರರು ಮತ್ತು ದ್ವಾದಶಾದಿತ್ಯರು ಅಭಿಮಾನಿದೇವತೆಗಳು. ಇವರ ಅಂತರ್ಯಾಮಿಯಾಗಿ ಪ್ರದ್ಯುಮ್ನ ಸಂಕರ್ಷಣ ಮತ್ತು ವಾಸುದೇವ ಎಂಬ ರೂಪತ್ರಯಗಳಿಂದ ಶ್ರೀಪರಮಾತ್ಮನು ವಿದ್ಯಮಾನನಾಗಿದ್ದು ಕಾರ್ಯ ನಿರ್ವಾಹಕನಾಗಿದ್ದಾನೆ. ಇದನ್ನೇ ದಾಸರಾಯರು ವಸು ಶಬ್ದದಿಂದ ಅಷ್ಟವಸುಗಳನ್ನೂ ತ್ರಿಪುರಾರಿ ಶಬ್ದದಿಂದ ಏಕಾದಶರುದ್ರಗಣವನ್ನೂ (ತ್ರಿಪುರಾಸುರ ಸಂಹಾರಿಯಾದ ರುದ್ರದೇವರಿಂದ ಏಕಾದಶ ರುದ್ರರು ಗ್ರಾಹ್ಯ) ಮತ್ತು ಆದಿತ್ಯ ಶಬ್ದದಿಂದ ದ್ವಾದಶಾದಿತ್ಯರನ್ನೂ ಹೇಳಿದ್ದಾರೆ. ಇದೇ ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ನಾಮಕನಾದ ಶ್ರೀ ಹರಿಯು ಶ್ರಾದ್ಧಕಾರ್ಯಮಾಡುವ ಅಧಿಕಾರಿಯಲ್ಲಿದ್ದು ಅನಿರುದ್ಧನೆನಿಸಿವನು. ಈ ಅನಿರುದ್ಧನು ಕರ್ತೃ, ಕರ್ಮ ಮತ್ತು ಕ್ರಿಯ ಎಂಬ ನಾಮತ್ರಯಗಳಿಂದ ವಿರಾಜಮಾನನಾಗಿದ್ದಾನೆ.

(೧) ಕರ್ತೃ–ಪಿತೃ ಕಾರ್ಯ ಮಾಡತಕ್ಕ ಅಧಿಕಾರಿಯಲ್ಲಿ ಅಂತಸ್ಥ ರೂಪ.

(೨) ಕರ್ಮ–ಪಿತೃ ಉದ್ದಿಶ್ಯ ಮಾಡತಕ್ಕ ಕಲಾಪಗಳಲ್ಲಿ ಒಂದು ರೂಪ.

(೩) ಕ್ರಿಯ–ಬ್ರಾಹ್ಮಣರ ಪಾದಪ್ರಕ್ಷಾಳನಾದಿ ಕಾರ್ಯಗಳಲ್ಲಿ ಒಂದು ರೂಪ.

ಈ ಅನಿರುದ್ಧನಾಮಕನು ಅಧಿಕಾರಿಗಳಿಗೆ ಅಗೋಚರನಾಗಿದ್ದುಕೊಂಡು ಪ್ರದ್ಯುಮ್ನಾದಿ ರೂಪಗಳಿಂದ ಅಧಿಕಾರಿಯು ದ್ವಾರ ಪಿತೃಕಾರ್ಯ ಮಾಡಿ ಮಾಡಿಸುತ್ತಾನೆ ॥ ೨ ॥

# ಪದ್ಯ—೩

**ಮೂಲ :—**

ಸ್ವವಶ ನಾರಾಯಣನು ತಾ ಷ |
ಣ್ಣವತಿ ನಾಮದಿ ಕರೆಸುತಲಿ ವಸು |
ಶಿವ ದಿವಾಕರ ಕರ್ತೃ ಕರ್ಮ ಕ್ರಿಯಗಳೊಳಗಿದ್ದು ||
ನೆವನವಿಲ್ಲದೆ ನಿತ್ಯದಲಿ ತ |
ನ್ನವರು ಮಾಡುವ ಸೇವೆ ಕೈಕೊಂ |
ಡವರ ಪಿತೃಗಳಿಗೀವನಂತಾನಂತ ಸುಖಗಳನು ||

**ಅವತರಣಿಕೆ :—**

ಶ್ರೀಮನ್ನಾರಾಯಣನು ತಾನು ೯೬ ರೂಪಗಳಿಂದ ಶ್ರಾದ್ಧನಾಮಕನಾಗಿ ಕರ್ತೃಗಳು ಶ್ರಾದ್ಧಕರ್ಮದ್ವಾರಾ ಮಾಡುವ ಸೇವೆಗಳಿಗೆ ಪ್ರೀತನಾಗಿ, ಪಿತೃಗಳಿಗೆ ಅನಂತ ಜನ್ಮಗಳಲ್ಲಿ ಅವರು ಯಾವ ಯೋನಿಯಲ್ಲಿ ಜನಿಸಲಿ, ಅವರಿಗೆ ಸುಖಪ್ರದನಾಗಿರುವನು ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಸ್ವವಶ**= ಪರಾಧೀನರಹಿತನಾದ, ಸರ್ವತಂತ್ರಸ್ವತಂತ್ರನಾದ, **ನಾರಾಯಣನು** ಸಮಸ್ತ ದೋಷವಿದೂರನೂ ಅನಂತ ಕಲ್ಯಾಣಗುಣ ಪರಿಪೂರ್ಣನೂ ಆದ ಮೂಲರೂಪೀ ಶ್ರೀಮನ್ನಾರಾಯಣನು, **ತಾ**—ಸ್ವಯಂ, (ಅಭಿನ್ನವಾದ), **ಷಣ್ಣವತಿನಾಮದಿ**—೯೬ ರೂಪಗಳಿಂದ ಶ್ರಾದ್ಧನಾಮಕನಾಗಿ (ವಸುಗಳಲ್ಲಿ ೨೪ ಪ್ರದ್ಯುಮ್ನನ ರೂಪಗಳು+ಏಕಾದಶರುದ್ರರಲ್ಲಿ ೩೩ ಸಂಕರ್ಷಣನರೂಪಗಳು+ದ್ವಾದಶಾದಿತ್ಯರಲ್ಲಿ ೩೬ ವಾಸುದೇವರೂಪಗಳು+

ಕರ್ತೃ, ಕರ್ಮ, ಕ್ರಿಯೆಗಳಲ್ಲಿ ಅನಿರುದ್ಧನ ೩ ರೂಪಗಳು — ೯೬ ರೂಪಗಳಾಯಿತು.) **ಕರಸುತಲಿ**— ಆಯಾಯಾ ಹೆಸರಿನಿಂದಲೇ ಕರೆಯಿಸಿಕೊಳ್ಳುತ್ತಾ, **ವಸು** — ಅಷ್ಟವಸುಗಳಲ್ಲಿ ೨೪ ಪ್ರದ್ಯುಮ್ನನರೂಪಗಳು, **ಶಿವ** —ಏಕಾದಶ ರುದ್ರರಲ್ಲಿ ೩೩ ಸಂಕರ್ಷಣನರೂಪಗಳು, **ದಿವಾಕರ** — ದ್ವಾದಶಾದಿತ್ಯರಲ್ಲಿ ೩೬ ವಾಸುದೇವನರೂಪಗಳು, **ಕರ್ತೃ**—ಶ್ರಾದ್ಧ ಕರ್ತೃವಾದ ಯಜಮಾನನಲ್ಲಿ, **ಕರ್ಮ**— ಶ್ರಾದ್ಧ ಕ್ರಿಯಾರೂಪವಾದ ಮಂತ್ರಾದಿಕಲಾಪಗಳಲ್ಲಿ, **ಕ್ರಿಯೆ**— ಬ್ರಾಹ್ಮಣರಪಾದಪ್ರಕ್ಷಾಳನ, ಪಿಂಡಪ್ರದಾನ ಇತ್ಯಾದಿ ಕ್ರಿಯೆಗಳಲ್ಲಿ (ಅನಿರುದ್ಧನಾಗಿ ೩ ರೂಪಗಳಿಂದ) **ಇದ್ದು**—ಪೂರ್ವೋಕ್ತ ರೂಪಚತುಷ್ಟಯಗಳಿಂದ ಇದ್ದವನಾಗಿ, **ನೆವನವಿಲ್ಲದೆ**— ಯಾವನಿಮಿತ್ತವೂ ಇಲ್ಲದೇ (ಶ್ರಾದ್ಧಾದಿ ಕರ್ಮಗಳಿಂದ ಕರ್ತೃವಿಗೆ ಪುಣ್ಯಪ್ರಾಪ್ತಿ, ಶ್ರೀಪರಮಾತ್ಮನಿಗೆ ಏನೇನೂ ಇಲ್ಲ) **ನಿತ್ಯದಲಿ** —ಪ್ರತಿವರ್ಷಕ್ಕೊಮ್ಮೆ (ದೇವಮಾನದಿಂದ ಮಾನವರ ಒಂದುವರ್ಷ ದೇವತೆಗಳಿಗೆ ಒಂದು ದಿನ, ಇದರಿಂದ ಪ್ರತಿದಿನಕ್ಕೆ ಎಂತ ಲೆಕ್ಕ) **ತನ್ನವರು ಮಾಡುವ**—ತನ್ನ ಭಕ್ತರು ಎಸಗುವ, **ಸೇವೆ**—ಪಿತ್ರಂತರ್ಗತ ಪ್ರೀತ್ಯರ್ಥವಾಗಿ ಮಾಡುವ ಸೇವೆಯನ್ನು, **ಕೈಕೊಂಡು**— ಸಂತೋಷದಿಂದ ಸ್ವೀಕರಿಸಿ (ಶ್ರೀಪರಮಾತ್ಮನು ನಿತ್ಯಾನಂದಪೂರ್ಣನು) **ಪಿತೃಗಳಿಗೆ**–ಪಿತೃಕಾರ್ಯಮಾಡುವ ಕರ್ತೃವಿನ ಪಿತೃಗಳಿಗೆ, **ಅನಂತಾನಂತ**—ಅವರು ಜನಿಸುವ ಅನಂತಜನ್ಮಗಳಲ್ಲಿ, **ಸುಖಗಳನ್ನು**—ತೃಪ್ತಿರೂಪವಾದ ಆನಂದವನ್ನು, **ಈವನು**—ಪ್ರದ್ಯುಮ್ನಾದಿ ರೂಪಗಳಿಂದ ಕೊಡುವನು. ॥ ೩ ॥

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತರೂಪಗಳು ದಾರ ಅಂಶವೆಂದರೆ ಅದರನ್ನ ಹೇಳತಾರೆ.

ವಸುಗಳು ಎಂಟರಲ್ಲಿ ಇಪ್ಪತ್ನಾಕು ಪದ್ಯುಮ್ನರೂಪಗಳು, ಏಕಾದಶ ರುದ್ರರಲ್ಲಿ ಮೂವತ್ತಮೂರು ಸಂಕರ್ಷಣರೂಪಗಳು, ದ್ವಾದಶ ಆದಿತ್ಯರಲ್ಲಿ ಮೂವತ್ತಾರು ವಾಸದೇವರೂಪಗಳು, ಕರ್ತೃ, ಕರ್ಮ ಕ್ರಿಯೆಗಳೊಳು ಮೂರು ಅನಿರುದ್ಧರೂಪಗಳು ಅಂತು ತೊಂಭತ್ತಾರು ರೂಪಗಳು

(೨೪ + ೩೩ + ೩೬ + ೩ = ೯೬). ಪರಾಧೀನನಲ್ಲದೆ ತನ್ನ ವಶನಾಗಿ ತಾನೇ ಎಂದರೆ ಸ್ವತಂತ್ರನಾದ ನಾರಾಯಣನು ತಾನು, ಪೂರ್ವೋಕ್ತ ಪ್ರಕಾರ ಅಂಶ ರೂಪಗಳಿಂದ ಹೊರಟು ಮತ್ತು ಆಯಾರೂಪಗಳಿಂದ ಒಂದೊಂದುರೂಪದಿಂದ ತತ್ತನ್ನಾಮಗಳಿಂದ ಪೂರ್ವೋಕ್ತ ಪ್ರಕಾರ ಅಂಶರೂಪಗಳಿಂದ ಹೊರಟು ತೊಂಭತ್ತಾರು ಎಂತ ಸಂಖ್ಯಾನಾಮದಿಂದ, ವಸುರುದ್ರಾದಿಗಳೊಳಗಿದ್ದು ತತ್ತನ್ನಾಮಗಳಿಂದ ಕರೆಸುತ್ತ, ಕರ್ತೃವಾದವ ಪಿತೃಕಾರ್ಯ ಮಾಡೋದೆಲ್ಲ ವಂಶಾಭಿವೃದ್ಧಿಗಾಗಿಯೋ, ಐಶ್ವರ್ಯ ಬರಬೇಕೆಂಬ ನಿಮಿತ್ತದಿಂದಲೋ ಇತ್ಯಾದಿ ಕಾಮನಾನಿಮಿತ್ತವಿಲ್ಲದೆ, ಪಿತೃಗಳಿಗೆ ಪ್ರಾನುಪವರ್ಷ ಒಂದು ದಿನವೆಂದು ಕರಸಿ ಪ್ರತಿವರ್ಷದಲ್ಲಿ ಮಾಡತಕ್ಕಶ್ರಾದ್ಧ, ಪಿತೃಗಳಿಗೆ ಪ್ರತಿದಿನದಲ್ಲೂ ಶ್ರಾದ್ಧರೂಪ ದಿಂದ ಅನ್ನಾದಿಗಳು ಕೊಟ್ಟವನೆಂದು ಕರಸತಾನೆ. ಈ ರೀತ್ಯಾ ಪ್ರತಿದಿನದಲ್ಲಿ ತನ್ನ ಭಕ್ತರು ಪೂರ್ವೋಕ್ತ ಪ್ರಕಾರ ಅಂತರ್ಗತನ ತಿಳಿದು ಭಕ್ತಿಪೂರ್ವಕವಾಗಿ ಪಿತ್ರಂತರ್ಗತ ಪರಮಾತ್ಮನ ಪ್ರಿತಿಗೋಸುಗ ಎಂತ ಮಾಡತಕ್ಕ ಶ್ರಾದ್ಧಸಾಂಕೇತ ವಾದ ಸೇವಾ ಸ್ವೀಕಾರ ಮಾಡಿ,ಅನಂತ ಅನಂತ ರೂಪಾನಂತವುಳ್ಳ ಪರಮಾತ್ಮ ಪಿತೃಕಾರ್ಯ ಮಾಡುವವರ ಪಿತೃಗಳಿಗೆ ಶ್ರಾದ್ಧಕ್ರಿಯಾದಿಂದ ದಾವಸುಖವೋ ಆ ಸುಖವನ್ನು ಪಿತೃದೇವತೆಗಳಿಗೆ ಪ್ರದ್ಯುಮ್ನಾದಿ ರೂಪಗಳಿಂದ ಕೋಡೋವನಾಗ ತಾನೆಂದು ತಾತ್ಪರ್ಯ ॥ ೩ ॥

## ಭಾವಪ್ರಕಾಶಿಕೆ

ಮೇಲೆ ಹೇಳಿದಂತೆ ಪ್ರದ್ಯುಮ್ನನು ೮ ವಸುಗಳಲ್ಲಿಯೂ, ಒಬ್ಬೊಬ್ಬರಲ್ಲಿ ರುವ ವೈಕಾರಿಕ, ತಾಮಸ, ತೈಜಸಗಳೆಂಬ ಮೂರುವಿಧ ಅಹಂಕಾರಗಳಲ್ಲಿ ಮೂರು ರೂಪಗಳಂತೆ ೮ × ೩ = ೨೪ ರೂಪಗಳಿಂದ ಇರುವನು. ಇದರಂತೆ ೧೧ ರುದ್ರರಲ್ಲಿ ಸಂಕರ್ಷಣರೂಪಗಳು ೩೩, ೧೨ ಆದಿತ್ಯರಲ್ಲಿ ವಾಸುದೇವನ ರೂಪಗಳು ೩೬. ಕರ್ತೃ, ಕರ್ಮ, ಕ್ರಿಯೆಗಳಲ್ಲಿ ಅನಿರುದ್ಧನರೂಪಗಳು ೩ ಅಂತು ೯೬ ರೂಪಗಳಾದವು. ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವರೆಂಬ ೯೬ ಖಂಡರೂಪಗಳು ಇವುಗಳಲ್ಲಿ ಅಖಂಡನಾಗಿ ಶ್ರೀನಾರಾಯಣನು ಅನಿರು ದ್ಧಾದಿ ೪ ರೂಪಗಳಿಂದ ವ್ಯಾಪಿಸಿಕೊಂಡು ಷಣ್ಣವತಿ ಎಂಬ ಹೆಸರಿನಿಂದ ಕರೆಸಿ ಕೊಳ್ಳುವನು, ಅಂದರೆ ಅನಿರುದ್ಧನ ರೂಪಗಳು ಕರ್ತೃಕರ್ಮಕ್ರಿಯಾ ಎಂಬ ೩,

ವಸುಗಳಲ್ಲಿ ಪ್ರದ್ಯುಮ್ನನ ರೂಪಗಳು ೨೪, ರುದ್ರರಲ್ಲಿ ಸಂಕರ್ಷಣನ ರೂಪಗಳು ೩೩, ಆದಿತ್ಯರಲ್ಲಿ ವಾಸುದೇವನ ರೂಪಗಳು ೩೬, ಹೀಗೆ ೯೬ ರೂಪಗಳು ಅನಿರುದ್ಧಾದಿ ೪ ರೂಪಗಳಿಗೆ ಹಂಚಲ್ಪಟ್ಟವು. ಶ್ರೀನಾರಾಯಣನು ವಸುಗಣ, ರುದ್ರಗಣ, ಆದಿತ್ಯಗಣ, ಕರ್ತೃ, ಕರ್ಮ, ಕ್ರಿಯೆ ಇವುಗಳಲ್ಲಿ ವ್ಯಾಪ್ತನಾಗಿ ಒಟ್ಟು ೯೬ ರೂಪಗಳಿಂದ ಷಣ್ಣವತಿ ನಾಮಧೇಯದಿಂದ ಇದ್ದು ತನ್ನ ಭಕ್ತರು ಮಾಡುವ ಶ್ರಾದ್ಧಕರ್ಮವನ್ನು ತನ್ನ ಸೇವೆಯೆಂದು ಸ್ವೀಕರಿಸಿ ಅವರ ಪಿತೃಗಳಿಗೆ ಅನಂತಾನಂತ ಸುಖವನ್ನು ಕೊಟ್ಟು ಉದ್ಧರಿಸುವನು. ॥೩॥

### ಭಾವದರ್ಪಣ

ಈ ಪದ್ಯದ ವಾಖ್ಯಾನವನ್ನು ಮೊದಲನೆ ಪದ್ಯದ ವ್ಯಾಖ್ಯಾನಲ್ಲೇ ಸೇರಿಸಲಾಗಿದೆ.

### ಶ್ರೀ ವ್ಯಾಸದಾಸ ಸಿದ್ಧಾಂಕೌಮುದಿ

" ಸ್ವವಶ " ಇತಿ ॥ "ಷಡಿತಿ" ವಿವೃತ ಮೇತತ್ ॥ "ಕರ್ತಾ" ಶ್ರಾದ್ಧಸ್ಯ "ಕರ್ಮ" ತಸ್ಯಕ್ರಿಯಾ॥ ತದುತ್ಥಂ ಪುಣ್ಯಮ್॥ "ನೆವನ" ಹರಿಪ್ರೀತಿ ಮಾನುದ್ದಿಶ್ಯ ಪಿತೃಮಾತೃಪ್ರೀತಿಃ ॥೩॥

### ಕನ್ನಡಾರ್ಥ

ನಾರಾಯಣರೂಪದ ವ್ಯಾಪಾರನ್ನು ತಿಳಿಸುತ್ತಾರೆ, ಈ ಪದ್ಯದಿಂದ. ಷಣ್ಣವತಿ ಶ್ರಾದ್ಧಗಳ ವಿವರವನ್ನು ಹಿಂದೆ ವಿವರಿಸಲಾಗಿರುತ್ತದೆ.

ಶ್ರಾದ್ಧಕರ್ತಾ ಶ್ರಾದ್ಧಕರ್ಮ ಇದನ್ನು ನಿರ್ವಹಿಸುವ ಕ್ರಿಯಾ ಅದರಿಂದಾಗುವಪುಣ್ಯ "ಇವುಗಳಲ್ಲಿ ಇದ್ದು" ಎಂದು ಅರ್ಥ ತಿಳಿಯಬೇಕು.

"ನೆವನ"ವಿಲ್ಲದೆ ಎಂದರೆ ಕೇವಲ ನಿಮಿತ್ತವಿಲ್ಲದೆ ನೆಪವಿಲ್ಲದೆ ಎಂದು ಅರ್ಥ. ಶ್ರಾದ್ಧಕರ್ಮಕ್ಕೆ ಕೆಲವರು ತಮ್ಮತಮ್ಮ ಪಿತೃಗಳ ಪ್ರೀತಿಯನ್ನೇ ಮುಖ್ಯ ನಿಮಿತ್ತ ಮಾಡಿಕೊಳ್ಳುತ್ತಾರೆ. ಶ್ರೀಹರಿಯ ಪ್ರಿತಿಯಲ್ಲಿ ಅವರಿಗೆ ಉದ್ದೇಶವಿರುವುದಿಲ್ಲ ಇದಕ್ಕೆ ನೆವನವೆನ್ನುತ್ತಾರೆ.

## ಶ್ರೀಗುರುಹೃದಯಪ್ರಕಾಶಿಕೆ

ಷಣ್ಣವತಿ ಶ್ರಾದ್ಧಸ್ಥ (೯೬) ತೊಂಭತ್ತಾರು ರೂಪಸ್ಮರಣೆ ತಿಳಿಸುತಾರ್ತೆ, ಸ್ವವಶ ಎಂದು. ಸ್ವವಶ ಎಂದರೆ ಸ್ವತಂತ್ರರೂಪ. ಎಂದರೆ ಅಧಿಷ್ಠಾನಾಂತರದಲ್ಲಿ ಪ್ರವೇಶವಿಲ್ಲದ ನಾರಾಯಣರೂಪನು ತಾನೇ ಷಣ್ಣವತಿ ನಾಮದಿ ಕರೆಸುತಲಿ ಎಂದರೆ, ವಸು ಎಂಟುರೂಪವನ್ನು ಅಂಶ ಅಂಶಿ ಅಂತರ್ಗತ ಎಂಬ ಮೂರರಿಂದ ಹೆಚ್ಚು ಗುಣಿಸಿದ ರೂಪ ಇಪ್ಪತ್ನಾಲ್ಕು,ರುದ್ರ ಹನ್ನೊಂದು ರೂಪವನ್ನು ಹೀಗೇ ಹೆಚ್ಚಿಸಿದರೆ ಆಗುವ ರೂಪಗಳು ಮೂವತ್ಮೂರು, ಹೀಗೆ ಆದಿತ್ಯ ರೂಪ ಹನ್ನೆರಡನ್ನು ಹೆಚ್ಚಿಸಿದರೆ ಆಗುವ ರೂಪ ಮೂವತ್ತಾರು, ಕರ್ತೃ ಕರ್ಮ ಕ್ರಿಯಾ ಮೂರು ಸಹ ಕೂಡಿಸಿದರೆ ತೊಂಭತ್ತಾರು ರೂಪ ಶ್ರಾದ್ಧಗತನಾಗಿ ಕರೆಸುತ್ತಾ,ವಸು ಶಿವ ದಿವಾಕರ ಎಂಬ ಮೂರು ಪಿತೃಗಳಲ್ಲಿದ್ದು,ಕರ್ಮ ಎಂದರೆ ಶ್ರಾದ್ಧಕ್ಕೆಉದ್ದೇಶ್ಯನೆನಿಸಿ ಮಾಡುವನಲ್ಲಿ ಕರ್ತೃರೂಪದಿಂದಿದ್ದು, ಶ್ರಾದ್ಧಕರ್ಮದಲ್ಲಿ ಕ್ರಿಯಾರೂಪನಾಗಿದ್ದು, ನ್ಯವನವಿಲ್ಲದೆ ಎಂದರೆ, ನಿಷ್ಕಾಮ್ಯನಾಗಿ ತನ್ನ ಭಕ್ತರು ಮಾಡುವ ಶ್ರಾದ್ಧಕ್ರಿಯೆ ಎಂಬ ಆರಾಧನೆಯಿಂದ ಹುಟ್ಟುವ ಪುಣ್ಯಫಲ ತೆಗೆದುಕೊಂಡು, ಅವರ ಪಿತೃಗಳಿಗೆ ಅಪರಿಮಿತಸುಖವನ್ನು ಪರಲೋಕದಲ್ಲಿ ಕೊಡುವನು ॥೩॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವತಂತ್ರ ಸ್ವತಂತ್ರನಾದ ಶ್ರೀಪರಮಾತ್ಮನಿಗೆ ಸ್ವವಶ ಎಂದು ಹೆಸರು. ಎಲ್ಲವೂ ಅವನ ಅಧೀನದಲ್ಲಿವೆ. ಅವನು ಮಾತ್ರ ಯಾರ ಅಧೀನದಲ್ಲಿಯೂ ಇಲ್ಲ.

ಶ್ರೀಮನ್ನಾರಾಯಣನು ತೊಂಭತ್ತಾರು ನಾಮರೂಪಗಳಿಂದ ಶ್ರಾದ್ಧ ಕರ್ಮದಲ್ಲಿ ನಿಯಾಮಕನಾಗಿದ್ದಾನೆ.

### ಷಣ್ಣವತಿರೂಪಗಳ ವಿವರ

೧ ಅಷ್ಟವಸುಗಳಲ್ಲಿ ಪ್ರದ್ಯುಮ್ನನ ರೂಪಗಳು ೨೪

೨ ಏಕಾದಶರುದ್ರರಲ್ಲಿ ಸಂಕರ್ಷಣನ ರೂಪಗಳು ೩೩

೩ ದ್ವಾದಶಾದಿತ್ಯರಲ್ಲಿ ವಾಸುದೇವನ ರೂಪಗಳು ೩೬
೨ ಕರ್ತೃ–ಕರ್ಮ–ಕ್ರಿಯಾಗಳಲ್ಲಿ ಅನಿರುದ್ಧನರೂಪಗಳು ೩
**ಷಣ್ಣವತಿರೂಪಗಳು** ೯೬

ಕರ್ತೃಗಳು ಮಾತಾಪಿತೃಗಳ ಶ್ರಾದ್ಧ ಕ್ರಿಯೆಯನ್ನು ಶ್ರದ್ಧಾ ಭಕ್ತಿ ಪೂರ್ವಕ ನೆವನವಿಲ್ಲದೆ ಎಂದರೆ ನಿಷ್ಕಾಮರಾಗಿಮಾಡಬೇಕು.

ಶ್ರೀಪರಮಾತ್ಮನು ತನ್ನ ಭಕ್ತರು ನಿತ್ಯದಲ್ಲಿ ಮಾಡುವ ಸೇವಾರೂಪವಾದ ಕ್ರಿಯೆಗಳನ್ನು ಸ್ವೀಕರಿಸುವನು. ಪಿತೃಗಳಿಗೆ ಮಾನವರ ಒಂದುವರ್ಷ, ಒಂದು ದಿನವೆಂದು ಕಾಲಪರಿಗಣನೆ ಇದರಿಂದ ಪ್ರತಿಸಾಂವತ್ಸರಿಕ ಶ್ರಾದ್ಧಮಾಡಿದರೂ ಪಿತೃಗಳಿಗೆ ನಿತ್ಯಸೇವೆ ಎನಿಸುವುದು.

ಷಣ್ಣವತಿನಾಮಕನು ನಿಷ್ಕಾಮನಾಭಾವದಿಂದ ತನ್ನವರು ಮಾಡುವ ಮಾತಾಪಿತೃಗಳ ಶ್ರಾದ್ಧಕರ್ಮವನ್ನು ಆದರದಿಂದ ಸ್ವೀಕರಿಸಿ, ತಾನು ನಿರ್ಲಿಪ್ತನಾಗಿದ್ದು ಪಿತೃಗಳು ಎಲ್ಲಿಯೋ ಇರಲಿ ಯಾವ ಜನ್ಮದಲ್ಲಿದ್ದರೂ ಅವರಿಗೆ ತೃಪ್ತಿಪ್ರದನಾಗಿ **ಅನಂತಾನಂತಸುಖಗಳನ್ನು ಈವನು** ॥೩॥

## ಪದ್ಯ ೪

**ಮೂಲ :–**

**ತಂತುಪಟದಂದದಲಿ ಲಕುಮೀ ।**
**ಕಾಂತ ಪಂಚಾತ್ಮಕನೆನಿಸಿ ವಸು ।**
**ಕಂತುಹರ ರವಿ ಕರ್ತೃಗಳೊಳಗಿದ್ದನವರತ ತನ್ನ ॥**
**ಚಿಂತಿಸುವ ಸಂತರನು ಗುರು ಮ ।**
**ಧ್ವಾಂತರಾತ್ಮಕ ಸಂತಯಿಸುವನು ।**
**ಸಂತತಖಿಳಾರ್ಥಗಳ ಪಾಲಿಸಿ ಇಹಪರಂಗಳಲಿ ॥ ೪ ॥**

**ಅವತರಣಿಕೆ :**

ಅನಿರುದ್ಧಾದಿ ಪಂಚರೂಪಗಳಿಂದ ಶ್ರೀಹರಿಯು ವಸು, ರುದ್ರ ಮತ್ತು ಆದಿತ್ಯಾದಿಗಳಲ್ಲಿ ಅಂತಸ್ಥಿತನಾಗಿದ್ದು, ಶ್ರಾದ್ಧಕರ್ಮಗಳನ್ನು ಶ್ರೀಹರಿಸ್ಮರಣೆ ಪೂರ್ವಕ ಮಾಡುವ ಕರ್ತೃಗಳಿಗೆ ಸಕಲಾಭೀಷ್ಟದಾಯಕನಾಗಿದ್ದಾನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ತಂತುಪಟದಂದದಲಿ**—ಅಡ್ಡ ಮತ್ತು ಉದ್ದವಾಗಿ ನೇಯ್ದ ವಸ್ತ್ರದ ದಾರಗಳೋಪಾದಿಯಲ್ಲಿ, **ಲಕುಮೀಕಾಂತ**—ಲಕ್ಷ್ಮೀರಮಣನಾದ ಶ್ರೀಮನ್ನಾರಾಯಣನು, **ಪಂಚಾತ್ಮಕನೆನಿಸಿ**—ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂಬ ರೂಪಗಳಿಂದ ಕೂಡಿಕೊಂಡು, **ವಸು**—ಅಷ್ಟವಸುಗಳಲ್ಲಿ ಪ್ರದ್ಯುಮ್ನನೆಂತಲೂ, **ಕುಂತುಹರ**—ಮನ್ಮಥನನ್ನು ತನ್ನ ಫಾಲನೇತ್ರಾಗ್ನಿಯಿಂದ ಭಸ್ಮಮಾಡಿದ ರುದ್ರದೇವರಲ್ಲಿ(ಏಕಾದಶರುದ್ರರಲ್ಲಿ) ಸಂಕರ್ಷಣನೆಂತಲೂ, **ರವಿ**—ದ್ವಾದಶಾದಿತ್ಯರಲ್ಲಿ ವಾಸುದೇವ ನಾಮಕನಾಗಿಯೂ, **ಇದ್ದು**—ಅಧಿಷ್ಠಿತನಾಗಿದ್ದು, **ಅನವರತ**—ಯಾವಾಗಲೂ, ತತ್ರಾಪಿ ಪಿತೃಸಾಂಕೇತವಾದ ಶ್ರಾದ್ಧಕರ್ಮಗಳಲ್ಲಿ. **ತನ್ನ ಚಿಂತಿಸುವ**—ತನ್ನನ್ನು ಜ್ಞಾನಾನುಸಂಧಾನದಿಂದ ಸ್ಮರಿಸುವ, **ಸಂತರನು**—ಸಜ್ಜನರನ್ನು, **ಗುರುಮಧ್ವಾಂತರಾತ್ಮಕ**—ಆಚಾರ್ಯಮಧ್ವರ ಅಂತರ್ಯಾಮಿಯಾದ (ಮಧ್ವಮಾನಸಮಂದಿರನಾದ) ಶ್ರೀಪರಮಾತ್ಮನು(ಶ್ರಾದ್ಧಸ್ವಾಮಿ ಶ್ರೀ ಜನಾರ್ದನನು) **ಇಹಪರಂಗಳಲಿ**—ಇಲ್ಲಿ ಮತ್ತು ಪರಲೋಕಗಳಲ್ಲಿ, **ಅಖಿಳಾರ್ಥಕಗಳಪಾಲಿಸಿ**—ಸಮಸ್ತ ಅಭೀಷ್ಟಗಳನ್ನು ನೆರವೇರಿಸಿದವನಾಗಿ, **ಸಂತತ**—ಎಡಬಿಡದೆ, **ಸಂತಯಿಸುವನು**—ಸಂರಕ್ಷಣೆಮಾಡುವನು ॥೪॥

# ವ್ಯಾಖ್ಯಾನಗಳು

## ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ನಿಷ್ಕಾಮದಿಂದ ಪಿತೃಕರ್ಮ ನಡೆಸಿದವರಿಗೆ ಫಲ ಹೇಳತಾರೆ. ಅನೇಕ ದಾರಗಳಿಂದ ಯುಕ್ತವಾದದ್ದು ಒಂದು ವಸ್ತ್ರ. ಈ ವಸ್ತ್ರಗತ ಅನೇಕ ದಾರಗಳೋಪಾದಿಯಲ್ಲಿ ಲಕ್ಷ್ಮೀಪತಿಯಾದ ನಾರಾಯಣದೇವರು ಅನಿರುದ್ಧಾದಿ ನಾಲ್ಕು ರೂಪಗಳು, ನಾರಾಯಣರೂಪವಾದ ತನ್ನ ರೂಪದಲ್ಲಿ ವಿದ್ಯಮಾನಗಳಾಗಿ, ಐದು ರೂಪಾತ್ಮಕನೆಂದು ನಾರಾಯಣದೇವರು ಕರಸೋವನಾಗಿದ್ದಾನೆ, ಈ ಐದು ರೂಪಗಳಿಂದ ಯುಕ್ತವಾದ ಒಂದು ರೂಪಕ್ಕೆ ಪಂಚಾತ್ಮಕ ಎಂದು ಸಾಂಕೇತವು. ಇಂಥಾ ಸಮಷ್ಠಿರೂಪಕ್ಕೆ ಅದೇ ನಾಮವು. ತದ್ವತ್ ವಾಸುದೇವಾದಿ ರೂಪಗಳಲ್ಲಿ ತಂತುಪಟದೋಪಾದಿಯಲ್ಲಿ ಪೂರ್ವೋಕ್ತಪ್ರಕಾರ ರೂಪಗಳು ಇರೋವಾಗಿ ಚತುರ್ವಿಂಶಾತ್ಮಕ, ತ್ರಯತ್ರಿಂಶಾಂತ್ಮಕ, ಷಟ್‌ತ್ರಿಂಶಾತ್ಮಕ ಎಂತ ಕರಸೋವಾಗತವೆ ಎಂತ ದಿಕ್ಪ್ರದರ್ಶನ. ಈ ರಿತ್ಯಾ ಅನ್ವಯವು. ಇಷ್ಟೇ ರೂಪಗಳೆಂದು ತಾತ್ಪರ್ಯವಲ್ಲ. ಅಪರಿಚ್ಛಿನ್ನ ಅನಂತಾನಂತರೂಪಗಳ್ಯಾವ ರೂಪವನ್ನು ವಿವಕ್ಷಾ ಮಾಡಿದರೂ ಆ ರೂಪಗಳಲ್ಲಿ ಅವೆ. ಅವು ಸಾಂತವಲ್ಲ. ಪೂರ್ವೋಕ್ತ ಪ್ರಕಾರ, ಚತುರ್ವಿಂಶಾತ್ಮಕಾದಿ ರೂಪಗಳಿಂದ ಯುಕ್ತನಾದವ ಎಂತ ಎನಿಸಿ, ವಸುಗಳಲ್ಲಿ ಪ್ರದ್ಯುಮ್ನ, ಮನ್ಮಥನ್ನ ನೇತ್ರಾಗ್ನಿಯಿಂದ ಭಸ್ಮ ಮಾಡಿದ ರುದ್ರದೇವರಲ್ಲಿ ಸಂಕರ್ಷಣ, ದ್ವಾದಶಾದಿತ್ಯರಲ್ಲಿ ವಾಸುದೇವ, ಕರ್ತೃ ಕರ್ಮ ಕ್ರಿಯೆಗಳೊಳು ಅನಿರುದ್ಧ ತಾನು ಇದ್ದವನಾಗಿ, ಪರಮಾತ್ಮನಾದ ತನ್ನ ಪೂರ್ವೋಕ್ತ ಪ್ರಕಾರ ಪಿತೃಸಾಂಕೇತವಾದ ಪ್ರತಿದಿನದಲ್ಲೂ ಮಾಡುವ ಶ್ರಾದ್ಧಾದಿಗಳಲ್ಲಿ ಅನುಸಂಧಾನ ಮಾಡುವ ಸಜ್ಜನರನ್ನ, ಮತೋದ್ಧಾರಕ ಗುರುಗಳಾದ, ವಾಯ್ವಂಶಭೂತರಾದ ಮಧ್ವಾಚಾರ್ಯರ ದ್ವಾರಾ ನಿರಂತರದಲ್ಲೂ, ಈ ಲೋಕದಲ್ಲಿ ಅಹಂಮಮತಾದಿಗಳ ಬಿಡಿಸಿ ಭಕ್ತ್ಯಾದಿಗಳ ಕೊಟ್ಟು ಸುಖಪಡಿಸಿ, ಪರಲೋಕದಲ್ಲಿ ಸುಖಾದಿಗಳನ್ನು ಕೊಟ್ಟು, ಈ ಪ್ರಕಾರ ಇಹ ಪರಗಳಲ್ಲಿ ಸಮಸ್ತ ಪ್ರಯೋಜನಗಳ ಕೊಟ್ಟವನಾಗಿ ಸಂರಕ್ಷಣ ಮಾಡುವನು ॥೪॥

## ಭಾವಪ್ರಕಾಶಿಕೆ

ದಾರಗಳು ಹೇಗೆ ಅಡ್ಡವಾಗಿಯೂ ಉದ್ದವಾಗಿಯೂ ನೇಯಲ್ಪಟ್ಟು ವಸ್ತ್ರರೂಪವಾಗಿ ಪರಿಣಮಿಸುವುವೋ ಹಾಗೆ ಅನಿರುದ್ಧಾದಿರೂಪಗಳಿಂದ ವಸು ರುದ್ರಾದಿತ್ಯರೊಳಗೆ ೯೭ ರೂಪಗಳೀದಿದ್ದು ಲಕ್ಷ್ಮೀಪತಿಯಾದ ನಾರಾಯಣ ನೊಬ್ಬನೇ ತನ್ನನ್ನು ನಿತ್ಯದಲ್ಲಿಯೂ ಧ್ಯಾನಮಾಡುತ್ತಾ ಅನುಸಂಧಾನಪೂರ್ವಕ ಶ್ರಾದ್ಧಾದಿಗಳನ್ನು ಮಾಡುವವರನ್ನು "ಆಯುಃ ಪ್ರಜಾಂ ಧನಂ ವಿದ್ಯಾಂ ಸ್ವರ್ಗಂ ಮೋಕ್ಷಂ ಸುಖಾನಿ ಚ ಪ್ರಯಚ್ಛಂತಿ" ಎಂಬುದಾಗಿ ಶ್ರಾದ್ಧಕಲ್ಪದಲ್ಲಿ ಹೇಳುವಂತೆ, ಆಯುಷ್ಯ, ಸಂತತಿ, ದ್ರವ್ಯ, ವಿದ್ಯಾ, ಸ್ವರ್ಗ, ಮೋಕ್ಷಗಳೆಂಬ ಇಹಪರಸುಖವನ್ನು ಕೊಟ್ಟುದ್ಧರಿಸುವನೆಂಬ ಭಾವ ॥೪॥

## ಭಾವದರ್ಪಣ

ಅನುಸಂಧಾನಪೂರ್ವಕ ಶ್ರಾದ್ಧಕರ್ಮ ಮಾಡತಕ್ಕವರಿಗೆ ಅಖಿಲಾರ್ಥ ಗಳನ್ನು ಕೊಡುತ್ತಾರೆಂದು ಹೇಳುತ್ತಾರೆ, ತಂತುಪಟೇತಿ ॥೪॥

## ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

"ತಂತು" ಇತಿ ॥ "ಪಟದಂದದಲಿ" "ಪಟೇ ಯಥಾ" ॥ "ಕಂತು" ಕಾಮ । "ಪಾಲಿಸಿ" ಕೊಟ್ಟು ॥೪॥

## ಕನ್ನಡಾರ್ಥ

"ತಂತುಗಳು"–ವಸ್ತ್ರ–ಅರಿವೆಗೆ ಕಾರಣವಾಗಿರುವ ಎಳೆಗಳು ಪಟವಾಗು ವಂತೆ ॥ ತಂತು ಪಟಗಳೆರಡೂ ಕಾರ್ಯಕಾರಣಗಳಾಗಿರುವದರಿಂದ ಹೇಗೆ ಅಭೇದವೋ ಹಾಗೆ ಪರಮಾತ್ಮನ ೫ ರೂಪಗಳಿಗೂ, ಪರಮಾತ್ಮನಿಗೂ ಅಭೇದವಿರುತ್ತದೆ. ಪಟವು ಅನೇಕ ತಂತುರೂಪವಾಗಿದ್ದರೂ ಒಂದೇ ಆಗಿರುವಂತೆ ಪಂಚರೂಪನಾಗಿದ್ದರೂ ಹರಿಯು ಏಕಾತ್ಮಕನೂ, ಸ್ವಗತಭೇದ ವಿವರ್ಜಿತನೂ ಆಗಿರುತ್ತಾನೆ ಎಂದು ದೃಷ್ಟಾಂತ ತಿಳಿಯಬೇಕು.

ಕಂತು–ಕಾಮ. ಪಾಲಿಸಿ–ಕೊಟ್ಟು ॥೪॥

## ಶ್ರೀಗುರುಹೃದಯಪ್ರಕಾಶಿಕೆ

ಸದೃಷ್ಟಾಂತವಾಗಿ ಐದು ರೂಪವೂ ಒಂದೇ ಎಂಬ ದೇವರ ರೂಪ ಅಭೇದೋಪಾಸನೆ ತಿಳಿಸುತ್ತಾರೆ. ತಂತು ಎಂದು. ತಂತು ಎಂಬ ನೂಲೆಲ್ಲಾ ಸೇರಿ ಒಂದೇ ಬಟ್ಟೆಯಾಗಿರುವಂತೆ, ಲಕ್ಷ್ಮೀಕಾಂತನಾದ ದೇವರು ಐದು ರೂಪನಾದರೂ, ಏಕಾಕಾರ ಒಬ್ಬನೇ ಆಗಿ ವಸು, ಕಂತುಹರನೆಂಬ ರುದ್ರ, ರವಿ ಎಂಬ ಆದಿತ್ಯ, ಕರ್ತೃ ಎಂಬ ಶ್ರಾದ್ಧ ಮಾಡುವ ಯಜಮಾನ, ಇವರಲ್ಲೆಲ್ಲಾ ಇದ್ದು, ತನ್ನನ್ನು ಸರ್ವತ್ರ ಚಿಂತನೆ ಮಾಡುವ ಸಜ್ಜನರನ್ನು ರಕ್ಷಿಸಿ ಗುರುಮಧ್ವಾಂತರ್ಗತನಾಗಿದ್ದು, ಸದಾ ಧರ್ಮಾದಿ ಸಕಲ ಪುರುಷಾರ್ಥಗಳನ್ನೂ ಇಹಪರದಲ್ಲಿ ಕೊಡುತ್ತಿರುವನು ||೪||

## ಸರ್ವವ್ಯಾಖ್ಯಾನಸಾರಸಂಗ್ರಹ

ವಸ್ತ್ರವು ದಾರಗಳಿಂದ ನಿರ್ಮಿತವಾಗುವುದು. ದಾರದ ಎಳೆಗಳನ್ನು ಓತಪ್ರೋತವಾಗಿ ಅಂದರೆ ಉದ್ದ ಅಡ್ಡವಾಗಿ ನೇಯ್ದಾಗ ವಸ್ತ್ರವು ಉಂಟಾಗುವುದು. ವಸ್ತ್ರದಲ್ಲಿ ದಾರದ ಎಳೆಗಳು ವ್ಯಾಪಕವಾಗಿವೆ. ಇದಕ್ಕೆ **ತಂತುಪಟ**ವೆಂದು ಹೆಸರು. ಪಟ–ಎಂದರೆ ವಸ್ತ್ರ. ತಂತು–ಎಂದರೆ ದಾರದ ಎಳೆಗಳು.

ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು ಈ ತಂತುಪಟದಂತೆ ಸರ್ವತ್ರ ವ್ಯಾಪ್ತನಾಗಿದ್ದಾನೆ. ಶ್ರಾದ್ಧಕರ್ಮಗಳಲ್ಲಿ, ದ್ರವ್ಯಗಳು ಭೋಜ್ಯವಸ್ತುಗಳು, ಭೋಕ್ತೃಗಳು ಅಧಿಕಾರಿಯಾದ ಕರ್ತೃ ಇವರುಗಳಲ್ಲಿ ಸರ್ವತ್ರ ವ್ಯಾಪಕನಾದ ಶ್ರೀಮನ್ನಾರಾಯಣನು ಪ್ರದ್ಯುಮ್ನ ಸಂಕರ್ಷಣ, ವಾಸುದೇವ ಮತ್ತು ಅನಿರುದ್ಧ ಈ ರೂಪಗಳಿಂದ ಯುಕ್ತನಾಗಿದ್ದು **ಪಂಚಾತ್ಮಕ**ನೆನಿಸಿದ್ದಾನೆ.

ಪಂಚಾತ್ಮಕನಾದ ಶ್ರೀಮನ್ನಾರಾಯಣನು ಪ್ರದ್ಯುಮ್ನರೂಪದಿಂದ ಅಷ್ಟ ವಸುಗಳಲ್ಲಿಯೂ, ಸಂಕರ್ಷಣರೂಪದಿಂದ ಏಕಾದಶರುದ್ರರಲ್ಲಿಯೂ ವಾಸುದೇವರೂಪದಿಂದ ದ್ವಾದಶಾದಿತ್ಯರಲ್ಲಿಯೂ ಮತ್ತು ಕರ್ತೃವಿನಲ್ಲಿ ಅನಿರುದ್ಧರೂಪದಿಂದಲೂ ಇರುವನು. **ಕಂತುಹರನೆಂದರೆ** ಮನ್ಮಥನನ್ನು

ತನ್ನ ಫಾಲನೇತ್ರಾಗ್ನಿಯಿಂದ ಭಸ್ಮಮಾಡಿದ ಮಹರುದ್ರದೇವರು. ಈ ಶಬ್ದ ದಿಂದ ಏಕಾದಶ ರುದ್ರರು ಗ್ರಾಹ್ಯ. ರವಿ ಎಂದರೆ ಸೂರ್ಯ. ಈ ಶಬ್ದದಿಂದ ದ್ವಾದಶಾದಿತ್ಯರು ಗ್ರಾಹ್ಯ.

ಶ್ರಾದ್ಧ ಸ್ವಾಮಿಯಾದ ಜನಾರ್ಧನನು ಶ್ರೀಮನ್ಮಧ್ವಮಾನಸಮಂದಿರನು. ಶ್ರಾದ್ಧಕರ್ಮಗಳನ್ನು ಜ್ಞಾನಾನುಸಂಧಾನ ಪೂರ್ವಕವಾಗಿ ಶ್ರದ್ಧಾ ಭಕ್ತಿಗಳಿಂದ ಮಾಡುವ ಸಜ್ಜನರಲ್ಲಿ ಮಧ್ವಾಂತರಾತ್ಮಕನಾಗಿ ಶ್ರೀಹರಿಯು ಇದ್ದು, ಅವರಿಗೆ ಇಹದಲ್ಲಿ ಸಕಲ ಭೋಗಭಾಗ್ಯಗಳನ್ನು ಈಯುವನು. ಜ್ಞಾನ ಭಕ್ತಿ ವೈರಾಗ್ಯಾದಿ ಭಾಗ್ಯಗಳನ್ನು ಕರುಣಿಸಿ, ಸತ್ಸಾಧನ ದ್ವಾರಾ ಪರದಲ್ಲಿ ನಿತ್ಯಾನಂದರೂಪವಾದ ಸುಖವನ್ನು ಅನುಗ್ರಹಿಸುವನು. ಹೀಗೆ ಇಹಪರಂಗಳಲ್ಲಿ ಸಕಲಾಭೀಷ್ಟಪ್ರದನಾಗಿ, ಶ್ರೀಹರಿಯು ಅಂತಹ ಸಜ್ಜನರನ್ನು ಎಡಬಿಡದೆ ಸಂರಕ್ಷಿಸುವನೆಂದು ಪ್ರಸಕ್ತ ಪದ್ಯದ ತಾತ್ಪರ್ಯ ॥೪॥

## ಪದ್ಯ—೫

ಮೂಲ :-

ತಂದೆತಾಯ್ಗಳ ಪ್ರೀತಿಗೋಸುಗ ।
ನಿಂದ್ಯ ಕರ್ಮವ ತೊರೆದು ವಿಹಿತಗ ।
ಳೊಂದು ಮೀರದೆ ಸಾಂಗಕರ್ಮಗಳಾಚರಿಸುವವರು ॥
ವಂದನೀಯರಾಗಿಳೆಯೊಳಗೆ ದೈ ।
ನಂದಿನದಿ ದೈಹಿಕ ದಹಿಕ ಸುಖ ।
ದಿಂದ ಬಾಳ್ವರು ಬಹು ದಿವಸದಲಿ ಕೀರ್ತಿಯುತರಾಗಿ ॥೫॥

**ಅವತರಣಿಕೆ :**

ಮಾತಾಪಿತೃಗಳ ಸೇವೆಯನ್ನು ಶ್ರೀಹರಿಯ ಪ್ರೀತ್ಯರ್ಥವಾಗಿ, ವಿಹಿತ ಕರ್ಮಯುತರಾಗಿ ಮಾಡುವ ಅಧಿಕಾರಿಗಳಿಗೆ ಮಹತ್ಫಲ ಉಂಟಾಗುವುದೆಂದು ತಿಳಿಸುತ್ತಾರೆ

**ಪ್ರತಿಪದಾರ್ಥ :**

**ತಂದೆತಾಯ್ಗಳ**—ಮೃತರಾದ ಮಾತಾಪಿತೃಗಳ, **ಪ್ರೀತಿಗೋಸುಗ**—ಅವರಿಗೆ ಪ್ರೀತಿ ಪಡಿಸುವ ನಿಮಿತ್ತದಿಂದ, **ನಿಂದ್ಯಕರ್ಮವ ತೊರೆದು**—ನಿಷಿದ್ಧ ಕರ್ಮಗಳನ್ನು ಬಿಟ್ಟವರಾಗಿ, **ವಿಹಿತಗಳೊಂದು ಮೀರದೆ**—ತಿಥಿಮಾಡ ತಕ್ಕ ದಿನಗಳಲ್ಲಿ ಶಾಸ್ತ್ರೋಕ್ತ ಪ್ರಕಾರ ವಿಧಿಕರ್ಮಗಳನ್ನು ಆಚರಿಸುತ್ತಾ, **ಸಾಂಗಕರ್ಮಗಳಾಚರಿಸುವವರು**—ವಿಧ್ಯುಕ್ತವಾಗಿ ಪಿತೃಯಜ್ಞ ರೂಪವಾದ ಶ್ರಾದ್ಧ ಕರ್ಮಗಳಿಗೆ ಸಂಬಂಧಿಸಿದ ಸಕಲ ಕರ್ಮಗಳನ್ನು ಮಾಡುವವರು, **ವಂದನೀಯರಾಗಿ**—ಅವರರಿಂದ ವಂದನೆಗೆ ಪಾತ್ರರಾಗಿ, **ದೈನಂದಿನದಿ**—ದಿವಸ ದಿವಸದಲ್ಲಿಯೂ, (ಪ್ರತಿದಿವಸವೂ) **ದೈಶಿಕ**—ದೇಶಕಾಲಗಳಿಗನುಗುಣ ವಾಗಿ ಪುಣ್ಯಕ್ಷೇತ್ರಗಳಲ್ಲಿ ಮಾಡತಕ್ಕ ಪುಣ್ಯಕಾರ್ಯಗಳು, **ದಹಿಕ**—ದೇಹಗತ ಇಂದ್ರಿಯಗಳ ದ್ವಾರಾ ಮಾಡತಕ್ಕ ವಿಧ್ಯುಕ್ತ ಕರ್ಮಗಳು ಇವುಗಳಿಂದ, **ಇಳೆಯೊಳಗೆ**—ಭೂಮಿಯಲ್ಲಿ. **ಬಹುದಿವಸದಲಿ**—ದೀರ್ಘಕಾಲ, **ಕೀರ್ತಿಯುತರಾಗಿ**—ಪ್ರಸಿದ್ಧರಾಗಿ, **ಬಾಳ್ವರು**—ಬಾಳುತ್ತಾರೆ ॥೫॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪಿತೃಕಾರ್ಯಗಳನ್ನು ದೋಷರಹಿತರಾಗಿ ಮಾಡಿದವರಿಗೆ ಫಲ ಹೇಳ ತಾರೆ.

ಮೃತರಾದ ಮಾತಾ–ಪಿತೃಗಳ ಪ್ರೀತಿ ಆಗೋ ನಿಮಿತ್ತ, ಪಿತೃಗಳ ತಿಥಿ ದಿನಕ್ಕೆ ಪೂರ್ವಾಪರದಿನಗಳಲ್ಲಿ, ತಿಥಿಮಾಡತಕ್ಕ ದಿನದಲ್ಲಿ ಶಾಸ್ತ್ರೋಕ್ತ ಪ್ರಕಾರ

ವಿಧಿಕರ್ಮ ಆಚರಿಸತಾ, ತದ್ವಿರುದ್ಧವಾದ ನಿಂದ್ಯಕರ್ಮಗಳ ತೊರೆದು ಕರ್ಮ ಮಾಡಿದರೆ ಶ್ರೀಹರಿಗೆ ಪ್ರೀತಿಯಾಗತದೆ ಎಂತ ತಿಳಿದು ನಿಷ್ಕಾಮರಾಗಿ ವಿಧಿಯಾದದ್ದು ಮೀರದೆ ವಿದ್ಯುಕ್ತಪ್ರಕಾರ ಪಿತೃಕಾರ್ಯ ಆಚರಿಸತಕ್ಕವರು ಮತ್ತು ಪ್ರತಿದಿನದಲ್ಲೂ ಭೂಮಿಯಲ್ಲಿ ಸಾಧನಿ ಮಾಡತಕ್ಕ ಮನುಷ್ಯರು, ಪುಣ್ಯಕ್ಷೇತ್ರಗಳಲ್ಲಿ ಮಾಡತಕ್ಕ ಪುಣ್ಯಗಳೇನು, ಸ್ವದೇಹಸ್ಥ ಇಂದ್ರಿಯಾದಿಗಳಿಂದ ಮಾಡತಕ್ಕ ವಿದ್ಯುಕ್ತವಾದ ನಿತ್ಯಕರ್ಮಗಳೇನು, ನಿಷ್ಕಾಮರಾಗಿ ಪರಮಾತ್ಮನ ಅನುಸಂಧಾನ ಪೂರ್ವಕ ಕರ್ಮ ಮಾಡತಕ್ಕವರು ವಂದನಾ ಮಾಡಿಸಿಕೊಂಡವ ರಾಗಿ ಎಂದರೆ, ತಮಗಿಂತ ಅವರರಿಂದ ವಂದನೀಯರು ಎಂತಲೂ, ತಮಗಿಂತ ಉತ್ತಮರಾದವರ ಕಡಿಯಿಂದ ಶ್ಲಾಘನಾರ್ಹರೆಂತಲೂ ತಾತ್ಪರ್ಯ. ಸ್ವೋತ್ತಮ ರಿಂದ ವಂದನ ಎಂದರೆ, ಅನಾಪರೋಕ್ಷದಶಾದಲ್ಲಿ ಸ್ವೋತ್ತಮರನ್ನು ತಿಳಿಯೋದಿಲ್ಲ, ಸಚ್ಛಾಸ್ತ್ರಾಭಿಜ್ಞರಾದವರ ಅನುಗ್ರಹ ಸಂಪಾದಿಸಿ ಇರತಕ್ಕವರು ಕೀರ್ತಿಪಡೆದವರಾಗಿ, ಆಯುರ್ವೃದ್ಧಿಯಾಗಿ ಚಿರಕಾಲ ಸತ್ಸಾಧನಗಳ ಮಾಡತಾ ಸಂತೋಷದಿಂದ ಭೂಮಿಯಲ್ಲಿ, ನಿರಂತರ ಪರಲೋಕದಲ್ಲಿ ವಾಸವಾಗಿರು ತ್ತಾರೆ ॥೫॥

## ಭಾವಪ್ರಕಾಶಿಕೆ

ಶ್ರಾದ್ಧಕರ್ಮಗಳನ್ನು ಮಾಡುವವರು ತಾಯಿತಂದೆಗಳಲ್ಲಿ ಪ್ರೀತಿಯಿಂದ ಶಾಸ್ತ್ರನಿಂದ್ಯವಾದ ನಿಷಿದ್ಧ ಕರ್ಮಗಳನ್ನಾಚರಿಸದೇ, ವಿಧಿವಿಹಿತವಾದ ಕರ್ಮ ಗಳನ್ನು ಬಿಡದೆ ಸಾಂಗವಾಗಿ ಶ್ರಾದ್ಧಕರ್ಮವನ್ನು ಮಾಡಿ ಪಿತೃಗಳಂತರ್ಯಾಮಿ ಜನಾರ್ದನ ವಾಸುದೇವಗೆ ಪ್ರೀತಿಯಾಗಲಿ ಎಂದು ಸಮರ್ಪಿಸಿದರೆ, ಭೂಮಿ ಯಲ್ಲಿ ಜನರಿಂದ ಪೂಜ್ಯರಾಗಿ, ಪ್ರತಿದಿವಸದಲ್ಲಿಯೂ ದೇಶಸಂಬಂಧದಿಂದಲೂ, ದೇಹಸಂಬಂಧದಿಂದಲೂ ಸುಖವನ್ನೇ ಅನುಭವಿಸುತ್ತಾ ಕೀರ್ತಿವಂತರಾಗಿ ಬಹುಕಾಲದವರೆಗೂ ಇರುವರು. ದೇಶಸಂಬಂಧವೆಂದರೆ ಕೆಲವು ದೇಶಗಳಲ್ಲಿ ಬಿಸಿಲು ಕಾಲದಲ್ಲಿಯೂ ಸಹ ಛಳಿ ಆಗುತ್ತಿರುವುದು. ಕೆಲವು ಕಡೆ ಛಳಿಕಾಲ ದಲ್ಲೂ ಸಹ ತಾಪವಾಗಿ ಇರುವುದು. ಇಂತಹ ದೇಶಗಳಲ್ಲಿದ್ದರೂ ದೇಶ ಸಂಬಂಧವಾದ ಶೀತೋಷ್ಣಗಳ ಬಾಧೆ ಇಲ್ಲದೇ ಸಮೋಷ್ಣದಿಂದ ಸುಖವಾಗಿರು

ವರೆಂಬ ಭಾವ. ದೇಹ ಸಂಬಂಧವೆಂದರೆ ನಿರೋಗರಾಗಿ ದೃಢಗಾತ್ರರಾಗಿ ಇರುವರೆಂಬ ಭಾವ.

**ಭಾವದರ್ಪಣ**

ತಂದೆ ತಾಯಿ ॥೫॥

**ಶ್ರೀವ್ಯಾಸದಾಸಸಿದ್ಧಾಂತಕೌಮುದಿ**

ಪಿತೃಮಾತೃಪ್ರೀತಿಕಾಮೋ ಫಲಂ ಆಹ–
"ತಂದೆ" ಇತಿ ॥ "ಗೋಸುಗ" ಗೋಸ್ಕರ । ದೈಶಿಕ ದೇಶಭವ ॥೫॥

**ಕನ್ನಡಾರ್ಥ**

ಪಿತ್ರಂತರ್ಯಾಮಿ ಶ್ರೀವಿಷ್ಣುವಿನ ಪ್ರೀತ್ಯುದ್ದೇಶವಾಗಿಯೇ ಮಾಡುವ ಕರ್ಮಗಳಿಗೆ ಫಲವನ್ನು ಹೇಳುತ್ತಾರೆ, "ತಂದೆ" ಎಂಬ ಪದ್ಯದಿಂದ ॥೫॥

**ಶ್ರೀಗುರುಹೃದಯಪ್ರಕಾಶಿಕೆ**

ಸಕಾಮ್ಯ ಶ್ರಾದ್ಧಕರ್ಮಫಲ, ಐಹಿಕ ಮಾತ್ರವೆಂದು ತಿಳಿಸುತ್ತಾರೆ, ತಂದೆ ಎಂದು. ತಂದೆ, ತಾಯಿ ಇವರುಗಳ ಪ್ರೀತಿಯಾಗಬೇಕೆಂದು ವಿಹಿತ ಕ್ರಿಯೆಗಳನ್ನು ಬಿಡದೆ, ನಿಷಿದ್ಧ ವ್ಯಾಪಾರಗಳನ್ನು ಮಾಡದೇ ಸಾಂಗವೆಂಬ ಮಂತ್ರತಂತ್ರಾದಿ ಲೋಪವು ಆಗದಂತೆ, ಶ್ರಾದ್ಧ ಕ್ರಿಯೆ ನಡೆಸುವ, ಕರ್ತೃತ್ವಾಭಿ ಮಾನವಿರುವ ಜನರು, ಈ ಭೂಮಿಯಲ್ಲಿ ವಂದನೀಯರಾಗಿ ಎಂದರೆ ಜನರಿಂದ ಪೂಜ್ಯರಾಗಿ ದೈಹಿಕ, ದೈಶಿಕ ಎಂದರೆ ಸದಾ ದೇಹಾರೋಗ್ಯಾದಿ ಸುಖ, ಆಯಾಯಾ ದೇಶಗತ ವಸ್ತುಪ್ರಾಪ್ತಿ ಮೊದಲಾದ ಸುಖಸಹ ಹೊಂದಿ ಬಹು ದಿವಸ ಕೀರ್ತಿಯುಕ್ತರಾಗಿ ಬಾಳುವರು ॥೫॥

# ಸರ್ವವ್ಯಾಖ್ಯಾನ ಸಾರಸಂಗ್ರಹ

ಮಾತಾಪಿತೃಗಳು ಜೀವಂತವಾಗಿರುವಾಗ, ಮಕ್ಕಳು ಅವರ ಸೇವೆ ಶುಶ್ರೂಷಾದಿಗಳನ್ನು ನಿಷ್ಕಾಮಮನಸ್ಕರಾಗಿ ಕೇವಲ ಶ್ರೀಹರಿಯ ಪ್ರೀತ್ಯರ್ಥವಾಗಿ ಮಾಡಿದರೆ, ಮಾತೃ ಪಿತ್ರಂಗರ್ತಗತ ಶ್ರೀಹರಿಯು ಅವರಿಗೆ ಸುಖಪ್ರದನಾಗಿರುವನು. ಮಾತಾಪಿತೃಗಳು ಮೃತರಾದ ನಂತರ ಮಾಡತಕ್ಕ ಪಿತೃಯಜ್ಞರೂಪವಾದ ಶ್ರಾದ್ಧಾದಿ ಕರ್ಮಗಳನ್ನು ವಿದ್ಯುಕ್ತವಾಗಿ ಆಚರಿಸ ಬೇಕು. ಶ್ರಾದ್ಧದಪೂರ್ವಾಪರ ದಿವಸಗಲ್ಲಿ ಆಚರಿಸತಕ್ಕ ಕರ್ಮಗಳು, ಶ್ರಾದ್ಧದಿನದಲ್ಲಿ ನಿಷ್ಕಾಮನೆಯಿಂದ ಆಚರಿಸುವ ಕಾರ್ಯಕಲಾಪಗಳಿಂದ ಶ್ರೀಹರಿಯು ಸಂತುಷ್ಟನಾಗುವನು. ವಿಧಿವಿಹಿತವಾದ ಕರ್ಮಗಳನ್ನು ಸಾಂಗೋಂಪಾಂಗವಾಗಿ ಅಂದರೆ ಮಂತ್ರ, ತಂತ್ರ, ಕ್ರಿಯಾಲೋಪಗಳುಂಟಾಗ ದಂತೆ ಶಾಸ್ತ್ರೋಕ್ತವಾಗಿ ಆಚರಿಸುವ ಅಧಿಕಾರಿಗಳು ಮಧ್ವಾಂತರಾತ್ಮಕ ಶ್ರಾದ್ಧ ಸ್ವಾಮಿಯಾದ ಶ್ರೀಜನಾರ್ದನನ ಕೃಪೆಗೆ ಪಾತ್ರರಾಗುವರು. ಅಂತಹವರು ಈ ಜಗತ್ತಿನಲ್ಲಿ ತಮಗಿಂತ ಕಿರಿಯವರಾದವರಿಂದ ಪೂಜ್ಯರಾಗಿ ವಂದನೀಯ ರಾಗುವರು. ಹಿರಿಯರ ಆಶೀರ್ವಾದಕ್ಕೆ ಪಾತ್ರರಾಗುವರು. ಪ್ರತಿದಿವಸ ದಲ್ಲಿಯೂ ದೇಹಗತ ಇಂದ್ರಿಯಗಳ ದ್ವಾರಾ ನಡೆಯುವ ಕರ್ಮಗಳನ್ನು, ಶ್ರೀಹರಿಯೇ ಮಾಡಿ ಮಾಡಿಸುತ್ತಾನೆಂದು ತಿಳಿದು, ಪುಣ್ಯಕ್ಷೇತ್ರಗಳಲ್ಲಿ ಮಾಡುವ ಶ್ರಾದ್ಧಕರ್ಮಗಳು ತೀರ್ಥಸ್ನಾನ, ಕ್ಷೇತ್ರಮೂರ್ತಿ ಸಂದರ್ಶನ ಇತ್ಯಾದಿ ದೈಹಿಕಕರ್ಮಗಳ ದ್ವಾರಾ ಮಹತ್ಫಲವನ್ನು ಹೊಂದುವರು. ಅಂತಹ ನಿಷ್ಕಾಮಕರ್ಮಿಗಳು ದೀರ್ಘಾಯುಗಳಾಗಿ ದೇಹಾರೋಗ್ಯಾದಿ ಸುಖ ಸಂಪತ್ತನ್ನು ಹೊಂದುವರು. ಯಶಸ್ಸನ್ನು ಪಡೆದು ಕೀರ್ತಿಶಾಲಿಗಳಾಗುವರು. ತಮ್ಮ ಬಾಳಿನ ಸಾಫಲ್ಯವನ್ನು ಶ್ರೀಹರಿವಾಯು ಗುರುಗಳ ಅನುಗ್ರಹದಿಂದ ಪಡೆದು ಸುಖದಿಂದಿರುವರು.

ಹೀಗೆ ದಾಸರಾಯರು ಮಾತಾಪಿತೃಗಳ ಸೇವೆಯ ರೂಪವಾದ ಮಹತ್ಫಲವನ್ನು ಪ್ರಸಕ್ತ ಪದ್ಯದಿಂದ ತಿಳಿಸಿದ್ದಾರೆ. ॥೫॥

## ಪದ್ಯ—೬

**ಮೂಲ :–**

**ಅಂಶಿ ಅಂಶಾಂತರ್ಗತ ತ್ರಯ ।**
**ಹಂಸವಾಹನ ಮುಖ್ಯ ದಿವಿಜರ ।**
**ಸಾಂಶದಲಿ ತಿಳಿದಂತರಾತ್ಮಕ ಜನಾರ್ದನನ ॥**
**ಸಂಸ್ಮರಣೆ ಪೂರ್ವಕದಿ ಷಡಧಿಕ ।**
**ತ್ರಿಂಶತಿತ್ರಯ ರೂಪವರಿತು ವಿ ।**
**ಪಾಂಸಗನ ಪೂಜಿಸುವವರೆ ಕೃತಾರ್ಥರೆನಿಸುವರು ॥ ೬ ॥**

**ಅವತರಣಿಕೆ :–**

ಪಿತೃತ್ರಯರಲ್ಲಿ ಆವಾಹಿತರಾದ ಬ್ರಾಹ್ಮಣರಲ್ಲಿ ಅಂತರ್ಗತರೂಪದಿಂದಿರುವ ಪ್ರದ್ಯುಮ್ನ ಸಂಕರ್ಷಣ ಮತ್ತು ವಾಸುದೇವರೂಪಾತ್ಮಕನಾದ ಶ್ರಾದ್ಧಸ್ವಾಮಿಯಾದ ಜನಾರ್ದನನ ೯೬ ರೂಪಗಳನ್ನು ಅರಿತು ಶ್ರೀಹರಿಯನ್ನು ಪೂಜಿಸುವರೇ ಕೃತಾರ್ಥರೆಂದು ತಿಳಿಸುತ್ತಾರೆ. ॥೬॥

**ಪ್ರತಿಪದಾರ್ಥ**

**ಅಂಶಿ** – ವಸು ರುದ್ರ ಮತ್ತು ಆದಿತ್ಯರಮೂಲರೂಪಗಳು ಅಂಶಿ ಸಾಂಕೇತವು. **ಅಂಶ** – ಇವರ ಮೂಲರೂಪಗಳಿಂದ ಹೊರಟು ಬ್ರಾಹ್ಮಣ ತ್ರಯರಲ್ಲಿ ಆವಾಹಿತರಾದ ಪಿತೃತ್ರಯರಲ್ಲಿರುವ ರೂಪಗಳು ಅಂಶಸಾಂಕೇತವು. **ಅಂತರ್ಗತತ್ರಯ** = ವಸು, ರುದ್ರ ಆದಿತ್ಯರಲ್ಲಿ ಆವಾಹಿತರಾದ ಪ್ರದ್ಯುಮ್ನ ಸಂಕರ್ಷಣ ಮತ್ತು ವಾಸುದೇವ ಎಂಬ ಅಂತರ್ಗತ ರೂಪ

ತ್ರಯಗಳು. **ಹಂಸವಾಹನೆ**— ಹಂಸವನ್ನೇ ವಾಹನವನ್ನಾಗಿ ಉಳ್ಳ ಬ್ರಹ್ಮ ದೇವರು, **ಮುಖ್ಯದಿವಿಜರ**—ಇವರೇ ಆದಿಯಾದ ಮುಖ್ಯ ದೇವತೆಗಳನ್ನು **ಸಾಂಶದಲಿ**—ಅಂಶರೂಪಸಹಿತವಾಗಿ, **ತಿಳಿದು**—ಅರಿತವರಾಗಿ, **ಅಂತರಾತ್ಮಕ** —ಪೂರ್ವೋಕ್ತ ಅಧಿಷ್ಠಾನಗಳಲ್ಲಿ ಅಂತರ್ಯಾಮಿರೂಪದಿಂದ ವಿದ್ಯಮಾನ ನಾಗಿರುವ, **ಶ್ರೀಜನಾರ್ದನನ**—ಶ್ರಾದ್ಧಸ್ವಾಮಿಯಾದ ಜನಾರ್ದನನಾಮಕ ಶ್ರೀಹರಿಯನ್ನು, **ಸಂಸ್ಮರಣೆ ಪೂರ್ವಕದಿ**— ಚೆನ್ನಾಗಿ ಮನಸ್ಸಿನಲ್ಲಿ ಧ್ಯಾನಿಸಿ ಕೊಳ್ಳುತ್ತಾ. **ಷಡಧಿಕತ್ರಿಂಶತಿತ್ರಯರೂಪವರಿತು**—ತೊಂಭತ್ತಾರು ರೂಪ ಗಳನ್ನು ತಿಳಿದು (ತ್ರಿಶಂತಿತ್ರಯ=೩೦ × ೩=೯೦, ಷಡಧಿಕ=೯೦ + ೬= ೯೬ ಅಂದರೆ ಷಣ್ಣವತಿರೂಪಗಳು) **ವಿಪಾಂಸಗನ**——ಗರುಡವಾಹನನಾದ ಶ್ರೀಕೃಷ್ಣನಿಗೆ ಅರ್ಪಿತವೆಂದು (ವಿಪ–ಪಕ್ಷಿಶ್ರೇಷ್ಠರಾದ ಗರುಡದೇವರು. ಅಂಸಗ—ಗರುಡನ ಹೆಗಲೇರಿ ಸಂಚರಿಸುವ ಶ್ರೀಹರಿ) **ಪೂಜಿಸುವವರೆ**–ಪಿತೃ ಕಾರ್ಯನಿಮಿತ್ತ ಪೂಜೆಮಾಡುವವರೇ, **ಕೃತಾರ್ಥರೆನಿಸುವರು**—ಬಾಳಿನ ಸಾರ್ಥಕ್ಯವನ್ನು ಹೊಂದಿದವರೆಂದು ಕರೆಯಿಸುವರು (ಜನ್ಮಸಾಫಲ್ಯಸಿದ್ಧಿ) ॥೬॥

## ವ್ಯಾಖ್ಯಾನಗಳು

### ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಪಿತೃಕರ್ಮದಿಂದ ಕೃತಾರ್ಥನಾಗತಕ್ಕ ವಿಧವನ್ನ ಹೇಳತಾರೆ.

ವಸು–ರುದ್ರಾದಿತ್ಯರ ಮೂಲರೂಪಗಳು ಅಂಶಿ ಎಂತ ಸಾಂಕೇತವು. ಇವರ ಮೂಲರೂಪದಿಂದ ಪ್ರತ್ಯೇಕವಾಗಿ ಹೊರಟು ಪಿತೃಕರ್ಮದಲ್ಲಿ ಉದ್ದೇಶಿತ ರಾದ ಬ್ರಾಹ್ಮಣತ್ರಯರಲ್ಲಿ ಆವಾಹಿತರಾದ ಪಿತೃತ್ರಯರಲ್ಲಿ ವಸು–ರುದ್ರಾ ದಿತ್ಯರು ಆವಾಹಿತರಾಗಿದ್ದಾರೆ. ಈ ವಸು–ರುದ್ರಾದಿತ್ಯರಲ್ಲಿ ಆವಾಹಿತರಾದ ಪ್ರದ್ಯುಮ್ನ, ಸಂಕರ್ಷಣ, ವಾಸುದೇವರೂಪಗಳು ಅಂಶಿಯಿಂದ ಅಂಶ ಹೊರಟು ಪ್ರವಿಷ್ಟರು ಎಂತ ಅರ್ಥ, ಇದೇ ಪ್ರಕಾರ ಪಿತಾಮಹಾದಿ ಮೃತ ರಾದ ಪಿತೃಗಳು ಮೂರು ಮಂದಿ. ಅವರು ಎಲ್ಲಿ ಇದ್ದ ಕಾಲಕ್ಕೂ ಆವಾಹನ ಕಾಲಕ್ಕೆ ಆಯಾ ಪಿತ್ರಂತರ್ಗತ ಪರಮಾತ್ಮ, ಆಯಾ ಪಿತೃದೇವತೆಗಳ ದ್ವಾರಾ

ಪಿತೃಗಳ ಅಂಶ ವಿಭಾಗ ಮಾಡಿ ತೆಗೆದು, ಆಯಾ ದೇವತೆಗಳ ಸಹಿತನಾಗಿ ಆವಾಹನಕಾಲಕ್ಕೆ ಬ್ರಾಹ್ಮಣರ ಶರೀರದಲ್ಲಿ ಪ್ರವಿಷ್ಟನಾಗತಾನೆ. ಈ ಅಂಶ ವಿಭಾಗ ಪಿತೃಗಳಿಗೆ ತಿಳಿಯೋದಿಲ್ಲ. ಪೂರ್ವೋಕ್ತ ಉಪಸಂಹಾರವೂನೂ. 'ಅನಂಶಸ್ಯಾಪಿ ಜೀವಸ್ಯ ವಿಭಾಗಂ ಬಹುಧಾ ಹರಿಃ । ಕೃತ್ವಾ ಭೋಗಾನ್ ಪ್ರದಾಯೈವ ಚೈಕ್ಯಮಾಪದ್ಯತೇ ಪುನಃ ॥' ಎಂತ ಪ್ರಮಾಣ ಸಿದ್ಧ. ಇಲ್ಲಿ ಬಾಲ ಖಂಡಿಸಿದ ದೃಷ್ಟಾಂತ. ನಂತರ ಅಂಶ ಅಂಶಿಯಲ್ಲಿ ಸೇರತದೆ. ಜೀವರು ಯದ್ಯಪಿ ನಿರಂಶರೇ ಆದರೂ ಈ ರೀತ್ಯಾ ಅಂಶವಿಭಾಗ ಉಂಟು. ಬಾಲ ಖಂಡಿಸಿದರೂ ಹಲ್ಲೀಗೆ ಮಾತ್ರ ತಿಳಿಯೋದಿಲ್ಲ. ಈ ರೀತ್ಯಾ ಹತ್ತು ಮಂದಿ ಪುತ್ರರು ಹತ್ತು ಪ್ರದೇಶದಲ್ಲಿ ಪಿತೃಕಾರ್ಯ ಮಾಡೋದರಲ್ಲಿ ಬಹುಪ್ರಕಾರ ವಿಭಾಗೆ ಮಾಡಿ, ಹುಟ್ಟುತ್ತಾ ಬಹುರೂಪದಿಂದ ಇರುತ್ತಾರೆ. ಮೂರುವಿಧ ಪಿತೃಗಳಲ್ಲಿ ಕರ್ತೃ, ಕರ್ಮ, ಕ್ರಿಯೆ ಈ ಮೂರರಲ್ಲಿ ಪೂರ್ವೋಕ್ತ ಪ್ರಕಾರ ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ಅನಿರುದ್ಧ ಈ ನಾಲ್ಕುರೂಪಗಳ ಆಯಾ ಅಂತರ್ಗತಲ್ಲಿ ಅನುಸಂಧಾನ ಮಾಡಬೇಕು. ಬ್ರಹ್ಮದೇವರೇ ಮೊದಲಾದ ಮುಖ್ಯರಾದ ತತ್ತ್ವಾಭಿಮಾನಿ ದೇವತೆಗಳ, ಆಯಾತ್ರಯಗಳಲ್ಲಿ, ಬ್ರಾಹ್ಮಣರ ದೇಹದಲ್ಲಿ ಒಂದೊಂದಂಶದಿಂದ ಪ್ರವಿಷ್ಟರಾಗಿದ್ದಾರೆಂದು ತಿಳಿಯೋವನಾಗಬೇಕು. ಈ ಪ್ರಕಾರ ತಿಳಿದು ಇನ್ನೂ ಪೂರ್ವೋಕ್ತ ಅಧಿಷ್ಠಾನ ಗಳ ಅಂತರ್ಗತದಲ್ಲಿ ಪ್ರಚುರನಾದ ಶ್ರಾದ್ಧಸ್ವಾಮಿಯಾದ ದುಷ್ಟಜನಮರ್ದಕ ಶ್ರೀಪರಮಾತ್ಮನಾದ ಜನಾರ್ದನದೇವರ ಚಂದಾಗಿ ಸ್ಮರಣೆಪೂರ್ವಕ, ಆರು ಅಧಿಕವಾಗಿ ಉಳ್ಳ ತೊಂಭತ್ತು, ತೊಂಭತ್ತಾರು ಜನಾರ್ದನರೂಪಗಳು, ಇಷ್ಟೇ ಸಂಖ್ಯಾ ಉಳ್ಳ ಅನಿರುದ್ಧಾದಿರೂಪಗಳು, ಈ ಪ್ರಕಾರ ಅನುಸಂಧಾನದಿಂದ ಅರಿತು ಪಿತೃಕಾರ್ಯಗಳ ನಡಿಸಿ ಪರಿಯುವಸಾನಕ್ಕೆ. ಗರುಡವಾಹನನಾದ ಶ್ರೀಕೃಷ್ಣಗೆ ಅರ್ಪಿತವೆಂದು, ಉಭಯುವಿಧವಾದ ತೊಂಭತ್ತಾರು ಭಗವದ್ರೂಪ ಗಳ ಪಿತೃಗಳ ವ್ಯಾಜದಿಂದ ಪೂಜಿಸತಕ್ಕವರು ದಾರೋ ಅವರೇ ಮಾಡಲ್ಪಟ್ಟ ಕರ್ಮದಿಂದ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗಿ ಪ್ರಯೋಜನವನ್ನು ಹೊಂದಿದವರೆಂದು ಎನಿಸೋವರಾಗತಾರೆಂತ ತಾತ್ಪರ್ಯ ॥೬॥

## ಭಾವಪ್ರಕಾಶಿಕೆ

ಅಂಶಿಗಳೆಂದರೆ ಸಾಂಶರೆಂದರ್ಥ. ಅಂದರೆ ಒಂದು ರೂಪದಿಂದ ಒಂದು ಕಡೆಯೂ, ರೂಪಾಂತರದಿಂದ ಮತ್ತೊಂದು ಕಡೆಯೂ ಇರುವ ಯೋಗ್ಯತೆಯುಳ್ಳ ತತ್ವಾಭಿಮಾನಿದೇವತೆಗಳು. ಮನುಷ್ಯರು ನಿರಂಶರು. ಸೂರ್ಯನು ಅಂತರಿಕ್ಷದಲ್ಲಿ ಶೋಭಿಸುತ್ತಿರುವನು. ಕೆಲವುಕಾಲ ಸುಗ್ರೀವನಾಗಿಯೂ, ಕರ್ಣನಾಗಿಯೂ, ಹುಟ್ಟಿದ್ದನು. ಮತ್ತು ಎಲ್ಲರ ಕಣ್ಣುಗಳಲ್ಲೂ ಅಂಶದಿಂದ ಇದ್ದೇ ಇರುವನು. ಆದರೂ ಮೇಲೆ ಕಾಣುವ ಸೂರ್ಯನೂ ಇರುವನು. ಅಂಶದಿಂದ ರೂಪಾಂತರ ತೆಗೆದುಕೊಂಡು ಅನ್ಯತ್ರ ಇರುವನು. ಈ ಶಕ್ತಿಯು ಎಲ್ಲಾ ದೇವ ದೈತ್ಯರಲ್ಲಿ ಉಂಟು. ಮನುಷ್ಯರಿಗೆ ಇಲ್ಲವಾದುದರಿಂದ ಅವರು ನಿರಂಶರು. ಪ್ರಕೃತ ಶ್ರಾದ್ಧದಲ್ಲಿ ನಿರಂಶರಾದ ಪಿತೃ ಪಿತಾಮಹ ಪ್ರಪಿತಾಮಹರಲ್ಲಿ ಪ್ರವಿಷ್ಟರಾದ ೮ ವಸುಗಳು, ೧೧ ರುದ್ರರು, ೧೨ ಆದಿತ್ಯರು ಅಂಶಿಗಳು. ಇವರಲ್ಲಿ ಮೇಲಿನ ಪದ್ಯದಲ್ಲಿ ಹೇಳಿದಂತೆ ಒಬ್ಬೊಬ್ಬರಲ್ಲಿಯೂ ಪ್ರದ್ಯುಮ್ನ ಸಂಕರ್ಷಣ ವಾಸುದೇವರೆಂಬ ಮೂರು ರೂಪಗಳಿರುವವು. ಇವು ಅಂಶರೂಪಗಳು. ಅಂತರ್ಯಾಮಿ ರೂಪಗಳು ೩ ಪಿತ್ರಂತರ್ಯಾಮಿ, ಪಿತಾಮಹಾಂತರ್ಯಾಮಿ, ಪ್ರಪಿತಾಮಹಾಂತರ್ಯಾಮಿ, ಎಂದು. ಈ ಮೂವರಲ್ಲೂ ಜನಾರ್ದನನು ಅಂತರ್ಯಾಮಿಯು. ಈ ರೂಪವನ್ನು ಪಿತೃಗಳನ್ನು ಆವಾಹನ ಮಾಡಿರುವ ಬ್ರಾಹ್ಮಣರ ದೇಹದಲ್ಲಿರುವ ತತ್ವಾಭಿಮಾನಿಗಳಾದ ಬ್ರಹ್ಮಾದಿಗಳ ಅಂತರ್ಯಾಮಿಯಾಗಿದ್ದು ಶ್ರೀಜನಾರ್ದನನು ಶ್ರಾದ್ಧವನ್ನು ಸ್ವೀಕರಿಸುವನೆಂದು ತಿಳಿದು ಸ್ಮರಣೆ ಮಾಡುತ್ತ ಮೇಲೆ ಹೇಳಿದ ಪ್ರಕಾರ ಪಿತ್ರಂತರ್ಗತ ವಸುಗಣರಲ್ಲಿ ೨೪ ರೂಪಗಳು, ಪಿತಾಮಹಾಂತರ್ಗತ ರುದ್ರಗಣದಲ್ಲಿ ೩೩ ರೂಪಗಳು, ಪ್ರಪಿತಾಮಹಾಂತರ್ಗತ ಆದಿತ್ಯಗಣದಲ್ಲಿ ೩೬ ರೂಪಗಳು, ಪಿತ್ರಾದಿ ಮೂವರಲ್ಲೂ ಜನಾರ್ದನರೂಪ ೩, ಅಂತೂ ೯೬ ರೂಪಗಳನ್ನು ಬ್ರಾಹ್ಮಣರಲ್ಲಿ ಚಿಂತಿಸಿ, ಬ್ರಾಹ್ಮಣರಲ್ಲಿ ಆವಾಹಿತರಾಗಿ ಪಿತೃಗಳಂತರ್ಯಾಮಿಯಾದ ಗರುಡವಾಹನನಾದ ಶ್ರೀಪರಮಾತ್ಮನನ್ನು ಪೂಜಿಸುವವರೇ ಕೃತಾರ್ಥರೆಂದು ತಿಳಿಯಬೇಕು. ಈ ಪದ್ಯದಲ್ಲಿ "ಹಂಸವಾಹನ ಮುಖ್ಯದಿವಿಜರ ಸಂಶಯಾದಿ" ಎಂಬ ಸ್ಥಳದಲ್ಲಿ "ಅಸಂಶಯಾದಿ" ಎಂದು ಪದಮಾಡಿದರೂ

ಆಗಬಹುದು. ಸಂಶಯದಿ ಎಂತಲೂ ಪದ ಮಾಡಬಹುದು. ಅಸಂಶಯದಿ ಅಂದರೆ ಬ್ರಹ್ಮ ಮೊದಲಾದ ದೇವತೆಗಳ ಅಂತರಾತ್ಮಕನೆಂದು ಸಂಶಯವಿಲ್ಲದೆ (ನಿಃಸಂಶಯವಾಗಿ) ತಿಳಿದು ಎಂದರ್ಥ. ಸಂಶಯದಿ ಅಂದರೆ "ಸಮ್ಯಕ್ ಶೇತೇ ಅಸ್ಮಿನ್ನಿತಿ ಸಂಶಯಃ" ಬ್ರಹ್ಮಾದಿ ದೇವತೆಗಳ, ಸಂಶಯದಿ–ಒಳ್ಳೆಯ ಹಾಸಿಗೆಯಲ್ಲಿ ಅಂದರೆ ವಾಸಮಾಡಲು ಯೋಗ್ಯವಾದ ಅವರ ಹೃದಯಾಕಾಶದಲ್ಲಿ ಅಂತರಾತ್ಮಕನೆಂದು ತಿಳಿದು ಎಂದು ಅರ್ಥವಾಗುವುದು ॥೬॥

## ಭಾವದರ್ಪಣ

ಮೂವತ್ತೊಂಭತ್ತು ರೂಪದಿಂದ ಬ್ರಹ್ಮಾದಿ ದೇವತೆಗಳಲ್ಲಿ ಶ್ರೀಜನಾರ್ದನ ದೇವರು ಇದ್ದಾನೆಂದು ನಿಃಸಂಶಯದಿಂದ ತಿಳಿದು ಪೂಜಿಸುವರೇ ಕೃತಾರ್ಥರೆಂದು ಹೇಳುತ್ತಾರೆ, ಅಂಶ ಇತಿ. ಅಂಶಿ–ಅಂಶ ಉಳ್ಳವ, ಅಂಶನಾಮಕ–ಅಂತರ್ಗತ ಅಧಿಷ್ಠಾನದಲ್ಲಿ ಇದ್ದವನೆಂಬರ್ಥ ॥೬॥

## ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

"ಅಂಶಿ" ಇತಿ ॥ ಅಂಶೀ ಮೂಲಂ ಬಿಂಬರೂಪಮ್ ॥ "ಇಂದ್ರಿಯಾಗಂ " ಅಂಶಃ । (ಇಂದ್ರಿಯಾಗಂ) ಅಂತರ್ಗತಾಃ ತಾತ್ವಿಕಾಃ ॥ ಹಂಸವಾಹಃ ಬ್ರಹ್ಮಾ ॥ "ದ್ವಿಚತ್ವಾರಿಂಶದಾತ್ಮಜಃ ಅಂಶಾಂಶ್ಯಂತರ್ಗತಃ ಸ್ಥಿತಃ" ॥೬॥

## ಕನ್ನಡಾರ್ಥ

ಅಂಶಿ ಎಂದರೆ ಮೂಲ ಬಿಂಬರೂಪವು. ಅಂಶವೆಂದರೆ ಇಂದ್ರಿಯಗತವಾದ ರೂಪಗಳು. ಅಂತರ್ಗತರೆಂದರೆ ತಾತ್ವಿಕದೇವತೆಗಳು. ಹಂಸವಾಹಃ– ಬ್ರಹ್ಮಾ ಎಂದು ಅರ್ಥ.

೪೨ ರೂಪಗಳಿಂದ ಹರಿಯು ಅಂಶಿ ಅಂಶಗಳಲ್ಲಿ ಅಂತರ್ಗತನಾಗಿ ಇರುತ್ತಾನೆ. ॥೬॥

**ಶ್ರೀಗುರುಹೃದಯಪ್ರಕಾಶಿಕೆ**

ನಿಷ್ಕಾಮಕರ್ಮ ಜ್ಞಾನದ್ವಾರಾ. ಕೃತಕೃತ್ಯರನ್ನು ಮಾಡುವುದೆಂದು ತಿಳಿಸುತ್ತಾರೆ, ಅಂಶಿ ಎಂದು. ಅಂಶಿ ಎಂಬ ಮೂಲರೂಪ ಅಂಶ ಎಂಬ ಅವತಾರಾದಿ ರೂಪವಿಶೇಷ. ಅಂತರ್ಗತವೆಂಬ ಜೀವದೇಹಾಂತರ್ಗತ ರೂಪ ಸಹ, ಮೂರು ವಿಧವಾದ ಹಂಸವಾಹನನೆಂಬ ಬ್ರಹ್ಮ ಮೊದಲಾದ ದೇವತೆಗಳ ರೂಪಗಳನ್ನು ಸಂಶಯಂದಿ (ಅಂದರೆ, "ಸಮ್ಯಕ್ ಶೇತೇ ಅಸ್ಮಿನ್" ಎಂಬ ವ್ಯುತ್ಪತ್ತಿಯಿಂದ ಸಂಶಯುವೆಂದರೆ ದೇಹ) ಆವಾಸವಾಗಿರುವ ತನ್ನ ದೇಹದಲ್ಲಿ ತಿಳಿದು, ತದಂತರ್ಗತ ಶ್ರೀಜನಾರ್ದನನ ರೂಪಸ್ಮರಣೆ ಪೂರ್ವಕ, ಷಡಧಿಕ ತ್ರಿಂಶತಿತ್ರಯರೂಪ ಎಂದರೆ, ಮಹತ್ತತ್ವ, ಅಹಂಕಾರತತ್ವ, ಮನಸ್ಸು, ಜ್ಞಾನೇಂದ್ರಿಯ ೫, ಕರ್ಮೇಂದ್ರಿಯ ೫, ಪಂಚಭೂತತನ್ಮಾತ್ರಸಹ ೧೦, ಹೀಗೆ ವೈಕೃತ ತತ್ವಗತ ರೂಪಗಳು ೨೩, ಲಿಂಗ ಶರೀರಗತ ಪ್ರಾಕೃತ ಶೋಡಶ ಕಳೆಗಳೆಂಬ ಜ್ಞಾನಕರ್ಮೇಂದ್ರಿಯ ೧೦, ತನ್ಮಾತ್ರಾ ೫, ಮನಸ್ಸು ೧, ಸಹಾ ೧೬. ಅಂತೂ ೩೯ ತತ್ವಾಂತರ್ಗತ ದೇವತಾಂತರ್ಯಾಮಿ ದೇವರ ರೂಪಗಳ ಸ್ವಾತಂತ್ರ್ಯ ತಿಳಿದು, ಎಂದರೆ ಕರ್ತೃತ್ವಾಭಿಮಾನವಿಲ್ಲದೆ, ವಿಹಾಂಸಗನೆಂಬ ಗರುಡನ ಹೆಗಲಲ್ಲಿರುವ ದೇವರನ್ನು ಪೂಜಿಸುವ ಸಜ್ಜನರು ಕೃತಾರ್ಥರು ಎಂದರೆ ಅಪರೋಕ್ಷಜ್ಞಾನ ಹೊಂದಿ ಮೋಕ್ಷಾದಿ ಸಕಲ ಪುರುಷಾರ್ಥವನ್ನು ಹೊಂದುವರೆಂದರ್ಥ. ॥೬॥

## ಸರ್ವವ್ಯಾಖ್ಯಾನ ಸಾರಸಂಗ್ರಹ

ದೇವತೆಗಳು ಹಾಗೆಯೇ ದೈತ್ಯರು (ತತ್ತ್ವಕಾರ್ಯ ಮಾಡುವ) ಸಾಂಶರೆಂದು ಕರೆಯಿಸುತ್ತಾರೆ. ಅಂದರೆ ಅವರ ಮೂಲರೂಪಗಳು. ಇದಕ್ಕೆ ಅಂಶಿ ಎಂದು ಸಾಂಕೇತ. ಅಷ್ಟ ವಸುಗಳು ಏಕಾದಶರುದ್ರರು ಮತ್ತು ದ್ವಾದಶಾದಿತ್ಯರು ಸಾಂಶರಾದ್ದರಿಂದ ಅವರು ಅಂಶಿ ಎನಿಸುತ್ತಾರೆ. ಅದೇ ಮೂಲರೂಪದಿಂದ ಹೊರಟು ಆಹ್ವಾನಿತ ಬ್ರಾಹ್ಮಣರಲ್ಲಿ ಆವಿಷ್ಟವಾಗಿರುವ ರೂಪಗಳಿಗೆ ಅಂಶ ಎಂತ ಸಾಂಕೇತ. ಅಂಶಿಗಳಾಗಿ ಮೂಲರೂಪದಿಂದಿರುವ ಅಷ್ಟ ವಸುಗಳು

ಪಿತೃವಿನ ಸ್ಥಾನದಲ್ಲಿ ಆಮಂತ್ರಿತರಾದ ಬ್ರಾಹ್ಮಣರಲ್ಲಿ ಆವಿಷ್ಟವಾಗಿದ್ದು ಅಂಶ ರೂಪದಿಂದಿರುತ್ತಾರೆ. ಅಂತೆಯೇ ಪಿತಾಮಹಸ್ಥಾನದಲ್ಲಿ ಏಕಾದಶರುದ್ರರು ಅಂಶರೂಪದಿಂದಲೂ ಮತ್ತು ಪ್ರಪಿತಾಮಹನ ಸ್ಥಾನದಲ್ಲಿ ಆವಾಹಿಸಲ್ಪಟ್ಟ ಬ್ರಾಹ್ಮಣರಲ್ಲಿ ದ್ವಾದಶಾದಿತ್ಯರೂ ಅಂಶರೆನಿಸುವರು. ಇದೇ ರೀತಿಯಲ್ಲಿ (೧) ಪಿತ್ರಂತರ್ಗತ ವಸ್ವಂತರ್ಗತ ಕೃತಿಪತಿ ಪ್ರದ್ಯುಮ್ನ (೨) ಪಿತಾಮಹಾಂತರ್ಗತ ರುದ್ರಾಂತರ್ಗತ ಜಯಾರಮಣ ಸಂಕರ್ಷಣ ಮತ್ತು (೩) ಪ್ರಪಿತಾಮಹಾಂತರ್ಗತ ಆದಿತ್ಯಾಂತರ್ಗತ ಮಾಯಾಪತಿ ವಾಸುದೇವ ಈ ರೂಪತ್ರಯಗಳು ಅಂತರ್ಗತರೂಪಗಳೆಂದು ತಿಳಿಯಬೇಕು. ಕರ್ತೃ, ಕರ್ಮ, ಕ್ರಿಯೆ ಈ ಅಧಿಷ್ಠಾನತ್ರಯಗಳಲ್ಲಿ ಶಾಂತೀಪತಿ ಅನಿರುದ್ಧನು ಅಂತರ್ಯಾಮಿಯಾಗಿದ್ದಾನೆ. ಪ್ರದ್ಯುಮ್ನಾದಿ ರೂಪಗಳಿಂದ ಶ್ರಾದ್ಧಸ್ವಾಮಿಯಾದ ಜನಾರ್ದನನು ೯೬ ರೂಪಗಳಿಂದಿದ್ದು ಷಣ್ಣವತಿ ನಾಮಕನಾಗಿದ್ದಾನೆ. ಈ ಸಂಖ್ಯೆಯನ್ನು ದಾಸರಾಯರು ಷಡಧಿಕ ತ್ರಿಂಶತಿತ್ರಯ ರೂಪಗಳು ಎಂದಿದ್ದಾರೆ.

ಅಂದರೆ ತ್ರಿಶಂತಿ–ಮೂವತ್ತು ತ್ರಿಶಂತಿತ್ರಯ ೩೦ × ೩ = ೯೦ ಷಡಧಿಕ ೯೦ + ೬ = ೯೬ ರೂಪಗಳೆಂದು ತಿಳಿಯಬೇಕು. (ಕೆಲವ್ಯಾಖ್ಯಾನಗಳಲ್ಲಿ ೩೯ ಎಂದು ತಿಳಿಸುತ್ತಾರೆ. ತ್ರಿಂಶತಿತ್ರಯ ೩೦ + ೩ = ೩೩ ಅದರ ಮೇಲೆ ೬ ಅಧಿಕ ಎಂದರೆ ೩೩ + ೬ = ೩೯ ಆದರೆ ಶ್ರಾದ್ಧಸ್ವಾಮಿಯಾದ ಜನಾರ್ದನನು ಷಣ್ಣನವತಿ ನಾಮಕನಾಗಿರುವುದರಿಂದ ೯೬ ರೂಪಗಳೆಂದು ತಿಳಿಯುವುದು ಉತ್ತಮ ಪಕ್ಷ)

ಈ ವಿಚಾರವನ್ನು ಜ್ಞಾನಾನುಸಂಧಾನದಿಂದ ತಿಳಿದು, ಶ್ರೀಹರಿ ಸ್ಮರಣ ಪೂರ್ವಕ ಕೃಷ್ಣಾರ್ಪಣ ಬುದ್ಧಿಯಿಂದ ಪಿತೃಕಾರ್ಯ ಮಾಡುವವರು ಧನ್ಯರು. ಜೀವನದಲ್ಲಿ ಕೃತಾರ್ಥರೆನಿಸುವರು. ವಿಪ–ಪಕ್ಷಿಶ್ರೇಷ್ಠರಾದ ಗರುಡ ದೇವರು ಅಂಸಗ–ಹೆಗಲಿನ ಮೇಲೆ ಕುಳಿತು ಸಂಚರಿಸುವ ಶ್ರೀಕೃಷ್ಣಪರಮಾತ್ಮನೆಂದರ್ಥ ॥೬॥

## ಪದ್ಯ—೭

**ಮೂಲ :–**

ಮೂರುವರೆಸಾವಿರದ ಮೇಲರೆ ।
ನೂರೈದು ರೂಪದಿ ಜನಾರ್ದನ ।
ಸೂರಿಗಳು ಮಾಡುವ ಸಮಾರಾಧನೆಗೆ ವಿಘ್ನಗಳು ॥
ಬಾರದಂತೆ ಬಹುಪ್ರಕಾರ ಖ ।
ರಾರಿ ಕಾಪಾಡುವನು ಸರ್ವಶ ।
ರೀರಗಳೊಳಿದ್ದವರವರ ಪೆಸರಿಂದ ಕರೆಸುತಲಿ ॥೭॥

**ಅವತರಣಿಕೆ :–**

ಶ್ರಾದ್ಧ ಸ್ವಾಮಿಯಾದ ಜನಾರ್ದನನಾಮಕ ಶ್ರೀಹರಿಯು ಪಿತೃಕರ್ಮಕ್ಕೆ ಬರುವ ವಿಘ್ನಗಳನ್ನು ಪರಿಹರಿಸಿ, ಕರ್ತೃಗಳನ್ನು ಸಂರಕ್ಷಿಸುವನೆಂದು ತಿಳಿಸುತ್ತಾರೆ ॥೭॥

**ಪ್ರತಿಪದಾರ್ಥ**

**ಜನಾರ್ದನ**–ಶ್ರಾದ್ಧ ಸ್ವಾಮಿಯಾದ ಜನಾರ್ಧನರೂಪೀ ಶ್ರೀಪರಮಾತ್ಮನು, **ಮೂರುವರೆ ಸಾವಿರದ ಮೇಲೆ ಅರೆನೂರೈದುರೂಪದಿ**–೩೫೫೫ ರೂಪಗಳಿಂದ (೩೫೦೦+೫೦+೫) **ಸೂರಿಗಳು**–ಅನುಸಂಧಾನಪೂರ್ವಕ ಜ್ಞಾನಿಗಳು, **ಮಾಡುವ**–ಆಚರಿಸುವ, **ಸಮಾರಾಧನೆಗೆ**–ಪಿತೃಯಜ್ಞರೂಪವಾದ ಶ್ರಾದ್ಧಕಾರ್ಯಕ್ಕೆ, **ವಿಘ್ನಗಳು ಬಾರದಂತೆ**–ದುಷ್ಟಶಕ್ತಿಗಳಿಂದ ಆತಂಕಗಳ್ಯಾವುವೂ ಬರದಂತೆ, **ಬಹುಪ್ರಕಾರ**–ನಾನಾ ವಿಧಗಳಲ್ಲಿ, **ಖರಾರಿ**–ಖರಾಸುರನನ್ನು ಸಂಹರಿಸಿದ ಶ್ರೀಕೃಷ್ಣನು (ಶ್ರೀರಾಮದೇವರೂ ಗ್ರಾಹ್ಯ), **ಸರ್ವಶರೀರಗಳೊಳಿದ್ದು**–ಶ್ರಾದ್ಧಕಾರ್ಯಕ್ಕೆ ಆಮಂತ್ರಿತರಾದ

ಬ್ರಾಹ್ಮಣರು, ಕರ್ತೃಗಳು, ಶ್ರಾದ್ಧ ಪಾಕಮಾಡುವವರು ಇತ್ಯಾದಿಗಳ ಸ್ಥೂಲ ಶರೀರಗಳಲ್ಲಿ ವಿದ್ಯಮಾನನಾಗಿದ್ದು, **ಅವರವರ ಹೆಸರಿನಿಂದ**–ಕರ್ತೃ, ಭೋಕ್ತೃ ಇತ್ಯಾದಿ ಹೆಸರುಗಳಿಂದ, **ಕರೆಸುತಲಿ**–ಕರೆಯಿಸಿಕೊಳ್ಳುತ್ತಾ **ಕಾಪಾಡುವನು**– ಶ್ರಾದ್ಧಕಾರ್ಯದಲ್ಲಿ ನಿರತರಾದವರನ್ನೆಲ್ಲಾ ಸಂರಕ್ಷಿಸುವನು ॥೭॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರಾದ್ಧಸ್ವಾಮಿಯಾದ ಶ್ರೀಜನಾರ್ದನದೇವರು ಪಿತೃಕರ್ಮಕ್ಕೆ ಬಾಧಕ ಬಾರದಂತೆ ಕಾಪಾಡತಾನೆಂತ ಹೇಳತಾರೆ.

ಮೂರು ಸಾವಿರದ ಐನೂರು ಮ್ಯಾಲೆ ಐವತ್ತೈದು ಅಂತು ೩೫೫೫ ಜನಾರ್ದನರೂಪಗಳು, ಹಿಂದೆ ಸಂಧ್ಯಂತರದಲ್ಲಿ ಹೇಳಿದ್ದ ಪ್ರಕಾರ ವಾಮಾಂಕ ದಿಂದ ೫೫೫೩ ಆಗತದೆ. ಪ್ರಕೃತ ಸಮಗತಿ ಅನುಸರಿಸಿ ಹೇಳಿದ್ದಾರೆ. ಮೂರು ಸಾವಿರದ ಐನೂರ ಐವತ್ತೈದು ರೂಪದಿಂದ ಶ್ರಾದ್ಧಸ್ವಾಮಿಯಾದ ಶ್ರೀಜನಾರ್ದನದೇವರು ಅನುಸಂಧಾನದಿಂದ ಜ್ಞಾನಿಗಳು ಮಾಡತಕ್ಕ ಸಮೀಚೀನವಾದ ಪಿತೃಗಳಂತರ್ಗತ ವಸು ರುದ್ರ ಆದಿತ್ಯ ದೇವತಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಪ್ರದ್ಯುಮ್ನ ಸಂಕರ್ಷಣ ವಾಸು ದೇವರೂಪಗಳಾದ ಭಗವದ್ರೂಪಗಳ ಸಮೀಚೀನವಾದ ಆರಾಧನಿಗೆ ಆತಂಕ ಗಳು ಬಾರದಂತೆ ದಶದಿಕ್ಕಿನಲ್ಲಿ ವ್ಯಾಪ್ತನಾಗಿದ್ದು ಜನಾರ್ದನದೇವರು ಕಾಪಾಡತಾನೆ. ಇದರನ್ನ ತಿಳಿದು ದಶದಿಕ್ಕಿನಲ್ಲಿ ಜನಾರ್ದನದೇವರನ್ನು ಆವಾಹನಿ ಮಾಡಬೇಕು. ಮತ್ತು ಕರ್ತೃ, ಭೋಕ್ತೃ, ವಿಶ್ವೇದೇವರ ಸ್ಥಾನಕ್ಕೆ ನೇಮಿತ ಬ್ರಾಹ್ಮಣರು, ಶ್ರಾದ್ಧಪಾಕಕರ್ತೃಗಳು, ಶ್ರಾದ್ಧ ಮಾಡಿಸತಕ್ಕ ಮಂತ್ರಜ್ಞ ಏತಾದೃಶರಾದವರಲ್ಲಿ ಅವರವರ ಹೆಸರಿನಿಂದ ಕರಸತಾ, ಪೂರ್ವೋಕ್ತರಾದ ಸರ್ವರ ಸ್ಥೂಲಶರೀರಗಳಲ್ಲಿದ್ದು, ಖರಾಸುರಗೆ ಶತ್ರುವಾದ ಶ್ರೀಕೃಷ್ಣದೇವರು ನಾನಾ ಪ್ರಕಾರ ಅವರವರು ಮಾಡತಕ್ಕ ಪಿತೃಯಜ್ಞಕ್ಕೆ

ಸಹಕಾರಿ ಕಾರ್ಯಗಳಿಗೆ ವಿಘ್ನಗಳು ಬಾರದಂತೆ ಕಾಪಾಡೋವನಾಗತಾನೆ. ಅವರವರ ದೇಹಗಳಲ್ಲಿ ಶ್ರಾದ್ಧಘಾತಕಗಳಾದ ನಾನಾ ವಿಕಾರಗಳು ಪ್ರಾಪ್ತವಾಗದಂತೆ ಶ್ರೀಕೃಷ್ಣ ಕಾಪಾಡತಾನೆ. ತನ್ನಿಮಿತ್ತ ಅನುಸಂಧಾನ ಮಾಡಿ, ಪೂರ್ವೋಕ್ತದಲ್ಲಿ ಶ್ರೀಕೃಷ್ಣನ್ನ ಆವಾಹನಿ ಮಾಡಬೇಕು. ಶ್ರೀಜನಾರ್ದನ ದೇವರು ಶ್ರಾದ್ಧಕರ್ಮಕ್ಕೆ ಫಲ ಕೊಡತಕ್ಕವನೆಂದು ತಾತ್ಪರ್ಯ ॥೭॥

## ಭಾವಪ್ರಕಾಶಿಕೆ

ಜನಾರ್ದನ ಎಂಬ ಪದವನ್ನು ಅಕ್ಷರಸಂಖ್ಯಾ ಮಾಡಲು ಜ–೩, ನಾ–೫, (ರ್–೨, ದ–೩, ೨+೩=೫) ನ–೫. ಅಂತು ೩೫೫೫ ಆಗುವವು. ಈ ಸ್ಥಳದಲ್ಲಿ ಅಂಕಿಯುಗ್ನ ವಾಮಾಂಕ ಮಾಡದೇ ಸಮಾಂಕವಾಗಿಯೇ ಹೇಳಿರುವರು. ಇಷ್ಟು ರೂಪಗಳಿಂದ ಶ್ರೀಜನಾರ್ದನನು ಜ್ಞಾನಿಗಳು ಅಂದರೆ, ಮೇಲೆ ಹೇಳಿದಂತೆ ಅನುಸಂಧಾನಪೂರ್ವಕ ಪರಮಾತ್ಮನನ್ನು ಸರ್ವತ್ರ ಸ್ಮರಿಸುತ್ತ ಶ್ರಾದ್ಧವನ್ನು ಮಾಡುವವರೆಂದರ್ಥ. ಇಂತಹವರು ಮಾಡುವ ಸಮಾರಾಧನೆ ಅಂದರೆ ಬ್ರಾಹ್ಮಣಪಾದಪ್ರಕ್ಷಾಲನೆ ಮೊದಲು ಗಂಧಾಕ್ಷತೆ, ಭೋಜನ, ತಾಂಬೂಲ ದಕ್ಷಿಣಾದಿಗಳಿಂದ ಪೂಜಿಸುವುದೆಂದರ್ಥ. ಶ್ರಾದ್ಧಕಲ್ಪದಲ್ಲಿ ಕಲಶ ಪೂಜಾದಿಗಳು ಆದಮೇಲೆ "ಪಿತ್ರಂತರ್ಯಾಮಿ ಜನಾರ್ದನ ವಾಸುದೇವಸ್ಯ ಸಮಾರಾಧನಂ ಕರಿಷ್ಯೇ" ಎಂದು ಸಂಕಲ್ಪಮಾಡುವುದರಿಂದ ಸಮಾರಾಧನೆ ಶಬ್ದಕ್ಕೆ ಸಮ್ಯಕ್ ಆರಾಧನೆ–ಚೆನ್ನಾಗಿ ಪೂಜಿಸುವುದೆಂದು ತಾತ್ಪರ್ಯ. ಇಂತಹ ಸಮಾರಾಧನೆಗೆ ಯಾವ ವಿಧವಾದ ವಿಘ್ನಗಳೂ ಬಾರದೆ ಕರ್ತೃ ಭೋಕ್ತೃ ಮೊದಲಾದವರಲ್ಲಿ ತತ್ತಚ್ಛಬ್ದವಾಚ್ಯನಾಗಿದ್ದು ಸರ್ವಪ್ರಕಾರದಿಂದಲೂ ರಕ್ಷಿಸುವನು ॥೭॥

## ಭಾವದರ್ಪಣ

ಜ್ಞಾನಿಗಳು ಮಾಡತಕ್ಕ ಸಮಾರಾಧನೆಗೆ ವಿಘ್ನಬಾರದಂತೆ ಶ್ರೀಜನಾರ್ದನೆ ೩೫೫೫ ರೂಪದಿಂದ ಇದ್ದಾನೆಂದು ಸಂಖ್ಯಾಕದಿಂದ ಗಣನೆ ಮಾಡೆಂದು ಹೇಳುತ್ತಾರೆ. ಮೂರುವರೆ ಸಾವಿರ ॥೭॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

"ಮೂರೇತಿ" । ತ್ರಿಸಹಸ್ರಾರ್ಧಸಾಹಸ್ರ ಪಂಚಪಂಚಾಶದಾತ್ಮಕಃ ॥ ತಾತ್ವಿಕಾಶ್ರಿತಚಾರ್ವಂಗಃ ಸಮಾರಾಧನ ವಿಘ್ನಹೃತ್" ॥೭॥

## ಕನ್ನಡಾರ್ಥ

೩೫೫೫ ರೂಪಗಳಿಂದ ಜನಾರ್ದನನು ಸರ್ವರಲ್ಲಿದ್ದು ವಿಘ್ನಗಳನ್ನು ಪರಿಹರಿಸಿ ಭಕ್ತರನ್ನು ಬಗೆಬಗೆಯಾಗಿ ಸಂರಕ್ಷಿಸುವನೆಂದು ತಾತ್ಪರ್ಯ ॥೭॥

## ಶ್ರೀಗುರುಹೃದಯಪ್ರಕಾಶಿಕೆ

ಕರ್ಮವಿಘ್ನ ಪರಿಹಾರಕಜನಸ್ಥ ದೇವರರೂಪ ಅಕ್ಷರಸಂಖ್ಯೆಯಿಂದ ತಿಳಿಸುತ್ತಾರೆ, ಮೂರುವರೆ ಎಂದು. ಮೂರುವರೆಸಾವಿರದೈವತ್ತೈದು ರೂಪದಿ ಅಂದರೆ ಜನಾರ್ದನ ಸವ್ಯಗಣನೆಯಿಂದ ೩೫೫೫ ಜನಾರ್ದನ ರೂಪನಾದ ದೇವರು ಜ್ಞಾನಿಗಳು ಮಾಡುವ ಸಮಾರಾಧನೆ ಎಂಬ ಶ್ರಾದ್ಧಾದಿ ಸತ್ಕರ್ಮ ಗಳಿಗೆ ವಿಘ್ನ ಬರದಂತೆ ಸರ್ವಜನರಲ್ಲಿದ್ದು ಆಯಾಯಾ ನಾಮದಿಂದ ಖರಾರಿ ಎಂಬ ಶ್ರೀರಾಮನು ಯಜ್ಞವಿಘ್ನವನ್ನು ಪರಿಹರಿಸಿದಂತೆ ಬಹುಪ್ರಕಾರ ರಕ್ಷಿಸುವನು ॥೭॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪಿತೃಯಜ್ಞ ರೂಪವಾದ ಶ್ರಾದ್ಧಕರ್ಮಗಳಲ್ಲಿ ಶ್ರಾದ್ಧಸ್ವಾಮಿಯು ಜನಾರ್ದನನಾಮಕನಾದ ಶ್ರೀಹರಿಯು. ಈ ಭಗವದ್ರೂಪದ ಸಂಖ್ಯಾವಿವರ ತಿಳಿಸಿದ್ದಾರೆ.

ಜ–ಚ–ವರ್ಗಪಂಚಕ ೩

ನಾ–ತ–ವರ್ಗಪಂಚಕ ೫

ರ್ದ–ದ–೩+ರ–೨ ೫ (ಸಂಯುಕ್ತಾಕ್ಷರ)

ನ–ತ–ವರ್ಗ ಪಂಚಕ ೫

ಈ ಸಂಖ್ಯೆಯನ್ನು ವಾಮಾಂಕಮಾಡದೆ ಸಮಂಗತಿಯಿಂದಲೇ ಹೇಳಿರುವರು. ಇದನ್ನು ಮೂರುವರೆ ಸಾವಿರದ ಮೇಲೆ ಅರೆನೂರೈದು ಎಂದಿದ್ದಾರೆ.

| | | |
|---|---|---|
| ಅಂದರೆ, | ಮೂರುವರೆ ಸಾವಿರ | ೩೫೦೦ |
| | ಅರೆನೂರು | ೫೦ |
| | ಐದು | ೫ |
| | | ೩೫೫೫ ರೂಪಗಳಾಗುವುವು |

ದುರಿತಪರಿಹಾರಕ ರೂಪವೂ ಮತ್ತು ದುಷ್ಟಶಕ್ತಿಗಳ ದಮನರೂಪವೂ ಆಗಿರುವುದರಿಂದ ಶ್ರೀಹರಿಗೆ ಜನಾರ್ದನನೆಂದು ಹೆಸರು. ಶ್ರಾದ್ಧಕರ್ಮಗಳಲ್ಲಿ ಒದಗಬಹುದಾದ ದುರಿತಗಳು ನಾನಾಪ್ರಕಾರವಾದ ವಿಘ್ನಗಳನ್ನು ಮತ್ತು ಅವುಗಳಿಗೆ ಪ್ರೇರಕರಾದ ಅಸುರರನ್ನು ದಮನಮಾಡಿ ಪರಿಹರಿಸಿ, ಕರ್ತೃಗಳನು ಜನಾರ್ದನನು ಸಂರಕ್ಷಿಸುವನು. ಈ ಕಾರಣದಿಂದಲೇ ಪೀಡಾ ವಿಘ್ನಾದಿಗಳ ಪರಿಹಾರಾರ್ಥವಾಗಿ ದಶದಿಕ್ಕುಗಳಲ್ಲಿ ಜನಾರ್ದನನ್ನು ಆವಾಹನೆಮಾಡುವರು. ಅನುಸಂಧಾನಪೂರ್ವಕ ಶ್ರಾದ್ಧಕರ್ಮಗಳನ್ನು ಆಚರಿಸುವ ಜ್ಞಾನಿಗಳಿಗೆ (ಸೂರಿಗಳು) ರಕ್ಷಣೆ. ಶ್ರಾದ್ಧಕರ್ಮಗಳಲ್ಲಿ ಪಿತೃಗಳ ಅಂತರ್ಗತ ವಸು ರುದ್ರ ಆದಿತ್ಯಾಂತರ್ಗತ ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂಬ ರೂಪತ್ರಯಗಳು ಶ್ರಾದ್ಧಸ್ವಾಮಿಯಾದ ಜನಾರ್ದನ ರೂಪದಿಂದ ವಿದ್ಯಮಾನಗಳಾಗಿದ್ದು ಸಕಲ ದುರಿತ ಪರಿಹಾರ ಮಾಡುವುವು. ಇಲ್ಲಿ ಖರಾರಿ ಎಂದರೆ ಖರಾಸುರನನ್ನು ಸಂಹರಿಸಿದ ಶ್ರೀಕೃಷ್ಣನೆಂತಲೂ, ಖರದೂಷಣ ವಿದಾರಣನಾದ ಶ್ರೀರಾಮಚಂದ್ರನೆಂತಲೂ, ಗ್ರಾಹ್ಯ. ಸಕಲಕರ್ಮಗಳನ್ನೂ ಕೃಷ್ಣಾರ್ಪಣಬುದ್ಧಿಯಿಂದ ಮಾಡುವುದರಿಂದ ಖರಾರಿ–ಎಂದರೆ ಶ್ರೀಕೃಷ್ಣನೆಂದು ತಿಳಿಯಬಹುದು.

ಸಮ್ಯಕ್ ಆರಾಧನೆ–ಸಮಾರಾಧನೆ ಎಂಬ ವಿಶ್ಲೇಷಣದಿಂದ ಶ್ರಾದ್ಧ ಕರ್ಮದಲ್ಲಿ ಆಹ್ವಾನಿತರಾಗಿರುವ ಬ್ರಾಹ್ಮಣರನ್ನು ಪಾದಪ್ರಕ್ಷಾಳನ ಗಂಧ ದಕ್ಷಿಣೆ ತಾಂಬೂಲ ಭೋಜನಾದಿಗಳಿಂದ ತೃಪ್ತಿಪಡಿಸುವುದರಿಂದ ಸಮಾರಾಧನೆ ಎಂದಿದ್ದಾರೆ. "ಪಿತ್ರಂತರ್ಯಾಮಿ ಜನಾರ್ದನ ವಾಸುದೇವಸ್ಯ ಸಮಾರಾಧನಂ ಕರಿಷ್ಯೆ"–ಎಂತಲೂ ಶ್ರಾದ್ಧಸಂಕಲ್ಪಮಾಡುವರು.

ಜನಾರ್ದನನು ಕರ್ತೃ ಭೋಕ್ತೃ ಪಿತೃಸ್ಥಾನಕ್ಕೆ ಮತ್ತು ವಿಶ್ವೇದೇವರ ಸ್ಥಾನಕ್ಕೆ ಆಮಂತ್ರಿತರಾದ ಬ್ರಾಹ್ಮಣರು ಶ್ರಾದ್ಧಪಾಕಕರ್ತೃಗಳು ಭೋಜ್ಯ ವಸ್ತುಗಳು ಹಾಗೂ ಬಂಧು ಬಾಂಧವರಲ್ಲಿ ಅಂತರ್ಗತನಾಗಿದ್ದು ಅದೇ ಹೆಸರುಗಳಿಂದ ವಾಚ್ಯನಾಗಿ ಕರ್ತೃಗಳಿಗೆ ಶ್ರೇಯಸ್ಸನ್ನು ಅನುಗ್ರಹಿಸುವನು ॥೭॥

## ಪದ್ಯ—೮

**ಮೂಲ :–**

ಜಯ ಜಯ ಜಯಾಕಾಂತ ದತ್ತಾ ।
ತ್ರೇಯ ಕಪಿಲ ಮಹಿದಾಸ ಭಕ್ತ ।
ಪ್ರಿಯ ಪುರಾತನಪುರುಷ ಪೂರ್ಣಾನಂದ ಜ್ಞಾನಘನ ॥
ಹಯವದನ ಹರಿ ಹಂಸ ಲೋಕ ।
ತ್ರಯವಿಲಕ್ಷಣ ನಿಖಿಳಜಗದಾ ।
ಶ್ರಯ ನಿರಾಮಯ ದಯದಿ ಸಂತೈಸೆಂದು ಪ್ರಾರ್ಥಿಪುದು॥೮॥

**ಅವತರಣಿಕೆ :**

ನಾನಾವತಾರ ರೂಪ ವಿಶಿಷ್ಟನಾದ ಜನಾರ್ದನನಾಮಕ ಶ್ರೀಹರಿಯು ಪಿತೃಯಜ್ಞ ರಕ್ಷಕನು. ಅವನನ್ನು ಸಂಸ್ಮರಣಪೂರ್ವಕ ಪ್ರಾರ್ಥಿಸಿ, ಆವಾಹಿಸ ಬೇಕೆಂದು ಹೇಳುತ್ತಾರೆ. ॥೮॥

**ಪ್ರತಿಪದಾರ್ಥ**

**ಜಯಾಕಾಂತ**–ಜಯಾನಾಮಕರಾದ ಶ್ರೀಲಕ್ಷ್ಮೀದೇವಿಯ ಪತಿಯಾದ ಸಂಕರ್ಷಣಮೂರ್ತಿಯೇ. **ಜಯಜಯ**–ಪಿತೃಕಾರ್ಯಗಳಲ್ಲಿ ಒದಗುವ ದುರಿತಗಳನ್ನು ಪರಿಹರಿಸಿ, ಮಂಗಳಪ್ರದನಾಗಿ ಭಕ್ತರಾದ ನಮಗೆ ಜಯ

ವನ್ನು ಪಾಲಿಸು. **ದತ್ತಾತ್ರೇಯ**–ಅತ್ರಿ ಅನುಸೂಯರಲ್ಲಿ ದತ್ತಾತ್ರೇಯ ರೂಪದಿಂದ ಅವತರಿಸಿದವನೇ, **ಕಪಿಲ**–ಕಪಿಲನಾಮಕನೇ, **ಮಹಿದಾಸ**–ಇತರಾದೇವಿಯ ಪುತ್ರನಾಗಿ ಅವತರಿಸಿದ ಮಹಿದಾಸರೂಪಿಯೇ, **ಭಕ್ತಪ್ರಿಯ**–ಭಕ್ತರಿಗೆ ಅತ್ಯಂತ ಪ್ರಿಯಕರನಾಗಿ ದತ್ತಾತ್ರೇಯ ಕಪಿಲ ಮತ್ತು ಮಹಿದಾಸ ರೂಪತ್ರಯಗಳಿಂದ ಜ್ಞಾನೋಪದೇಶ ಮಾಡಿದ ಶ್ರೀಹರಿಯೇ, **ಪುರಾತನ ಪುರುಷ**–ಅನಾದ್ಯನಂತಕಾಲದಿಂದಲೂ ಏಕಮೇವ ಅದ್ವಿತೀಯನಾಗಿ ಸರ್ವೋತ್ತಮನಾದ ಪುರುಷನಾಮಕನೇ, **ಪೂರ್ಣಾನಂದ ಜ್ಞಾನಘನ**–ಜ್ಞಾನಾನಂದಾದಿಗುಣಗಳಿಂದ ಯಾವಾಗಲೂ ಪರಿಪೂರ್ಣನಾಗಿರುವವನೇ, **ಹಯವದನ**—ಜ್ಞಾನಬೋಧಕನಾದ ಹಯಗ್ರೀವರೂಪಿ ಶ್ರೀಪರಮಾತ್ಮನೇ, **ಹರಿ**—ಸಜ್ಜನರಿಗೆ ಸಕಲ ಪಾಪಪರಿಹಾರಕನೇ, **ಹಂಸ**–ಅಹಂಮಮತಾದಿ ಗಳಿಂದ ಗ್ರಸ್ತವಾದ ಈ ಸಂಸಾರಬಂಧನವನ್ನು ಪರಿಹರಿಸುವವನೇ, (ಸಂಸಾರ ಬಂಧಂ ಹಂತೀತಿ–ಹಂಸ–ಎಂಬ ಪರಿಷ್ಕಾರದಂತೆ.) **ಲೋಕತ್ರಯ ವಿಲಕ್ಷಣ**–ಲೋಕತ್ರಯಯುಕ್ತವಾದ ಬ್ರಹ್ಮಾಂಡದಲ್ಲಿರತಕ್ಕ ಸಮಸ್ತ ಜೀವ ಮತ್ತು ಜಡ ರಿಂದ ಅತ್ಯಂತ ಭಿನ್ನನೇ. (ಹಾಗೆಯೇ ಅಸ್ಪೃಷ್ಟ ಮತ್ತು ಮುಕ್ತಜೀವರುಗ ಳಿಂದಲೂ ಪರಮವಿಲಕ್ಷಣನು–ಎಂದು ಗ್ರಾಹ್ಯ). **ನಿರಾಮಯ**–ರೋಗಾ ದ್ಯುಪದ್ರವಗಳಿಂದ ದೂರನಾದವನೇ(ಸಮಸ್ತ ದೋಷವಿದೂರನೇ) **ನಿಖಿಳಜಗ ದಾಶ್ರಯ**-ಸಮಸ್ತ ಚರಾಚರ ಜಗತ್ತಿಗೆ ಆಧಾರನೂ ಮತ್ತು ಆಶ್ರಯದಾತನೂ ಆದವನೇ, **ದಯದಿ**–ಕರುಣದಿಂದ, **ಸಂತೈಸು ಎಂದು**–ಸಂರಕ್ಷಣೆಮಾಡೆಂದು, **ಪ್ರಾರ್ಥಿಸುವುದು**–ಭಕ್ತಿಪುರಸ್ಸರವಾಗಿ ಪ್ರಾರ್ಥಿಸಬೇಕು ॥೮॥

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪಿತೃಯಜ್ಞವನ್ನು ರಕ್ಷಿಸತಕ್ಕ ಶ್ರೀಜನಾರ್ದನದೇವರು, ಶ್ರೀಕೃಷ್ಣ ದೇವರು ಇವರುಗಳ ಪ್ರಾರ್ಥನೆ ಮಾಡಬೇಕಂತ ಹೇಳತಾರೆ.

ಜಯಾ ಸಾಂಕೇತರಾದ ಲಕ್ಷ್ಮೀದೇವಿಯರಿಗೆ ಪತಿಯಾದ ಸಂಕರ್ಷಣನೇ, ಚರಾಚರದಿಂದ ಅಪಜಯ ಹೊಂದದವನೇ, ಪಿತೃಕಾರ್ಯಕ್ಕೇನು, ಸತ್ಕರ್ಮಾನು ಷ್ಠಾನಕ್ಕೇನು, ಭಕ್ತರನ್ನೇನು, ಇವರುಗಳಿಗೆ ವಿಘ್ನಗಳು ಮಾಡತಕ್ಕ ಪೀಡಿಸತಕ್ಕ

ಅಸುರರನ್ನೇನು ಸಂಹಾರಕರ್ತನೇ, ತದ್ದ್ವಾರಾ ಪೀಡಾ ವಿಘ್ನಾದಿಗಳ ಪರಿಹಾರಕನೇ ವಿಘ್ನಗಳ ಪರಿಹರಿಸು ಎಂತಲೂ, ನಿನ್ನ ಭಕ್ತರಾದ ನಮಗೆ ಜಯವನ್ನ ಕೊಡೋವನಾಗು ಎಂತಲೂ, ಭಕ್ತರಿಗೆ ಪ್ರಿಯಂಕರವಾದ ಜ್ಞಾನಬೋಧ ಮಾಡತಕ್ಕ ದತ್ತಾತ್ರೇಯ, ಕಪಿಲ, ಮಹಿದಾಸ ಈ ಮೂರು ರೂಪಗಳಿಂದ ಜ್ಞಾನಾನುಸಂಧಾನ ಸರಿಯಾಗಿ, ಬುದ್ಧಿಯಲ್ಲಿ ಇದ್ದು ಪ್ರೇರಿಸುವನಾಗು ಎಂತಲೂ, ಹಯಗ್ರೀವರೂಪಿಯಾದ ಪರಮಾತ್ಮನೇ ಎಂತಲೂ, ದೇಹಗತ ಇಂದ್ರಿಯಾಭಿಮಾನಿಗಳಾದ ದುಷ್ಟದೈತ್ಯರ ವ್ಯಾಪಾರದಿಂದ ಇಂದ್ರಿಯಾದಿಗಳು ಚಲನವಾಗದಂತೆ ಅವರ ಸಂಹಾರ ಮಾಡು ಎಂತಲೂ, ಪಾಪಪರಿಹಾರಕನು, ಶ್ರಾದ್ಧಕರ್ಮಗಳಲ್ಲಿ ಪ್ರಾಪ್ತವಾದ ಲೋಪ-ದೋಷಗಳ ಪರಿಹಾರ ಮಾಡು ಎಂತಲೂ ಹಂಸ– 'ಸಂಸಾರಬಂಧಂ ಹಂತೀತಿ ಹಂಸಃ' ಅಹಂ ಮಮತಾದಿ ಸಂಸಾರಬಂಧನವನ್ನು ಪರಿಹಾರ ಮಾಡು ಎಂತಲೂ, ಅನಾದಿಕಾಲದಿಂದಲೂ ಸರ್ವೋತ್ತಮನಾದ ಪುರುಷ ಏಕ ಎಂತಲೂ, ಆನಂದಪೂರ್ಣ ಎಂತಲೂ, ನಿಬಿಡೀಕೃತವಾದ ಅಪರಿಚ್ಛಿನ್ನವಾದ ಜ್ಞಾನಸ್ವರೂಪಿ ಎಂತಲೂ, ಲೋಕತ್ರಯಗಳ ಸ್ವರೂಪಗಳಕ್ಕಿಂತಲೂ ವಿಲಕ್ಷಣಸ್ವರೂಪ ಉಳ್ಳವ ಎಂದರೆ, ಇಂಥಾ ಆಕಾರವೇ ಎಂತ ನಿರ್ಧಾರ ಮಾಡೋದಕ್ಕೆ ಶಕ್ಯವಲ್ಲದ ಸ್ವರೂಪ ಉಳ್ಳವ ಎಂತಲೂ, ಸಮಸ್ತ ಚರಾಚರಕ್ಕೆ ಆಶ್ರಯ ಎಂತಲೂ, ದೋಷದೂರ ರೋಗಾದ್ಯುಪದ್ರವಗಳಿಂದ ದೂರ ಎಂತಲೂ, ಇತ್ಯಾದಿ ಗುಣಗಳಿಂದ ಯುಕ್ತನಾದ ಸರ್ವೋತ್ತಮನಾದ ಶ್ರೀಪರಮಾತ್ಮನೇ ಕೇವಲ ಅಂತಃಕರಣದಿಂದ ಸಂರಕ್ಷಣಮಾಡೆಂದು ಪ್ರಾರ್ಥನಾ ಮಾಡೋವರಾಗಬೇಕು.

**ತಾತ್ಪರ್ಯ :** ಈ ಪ್ರಕಾರ ಪ್ರಾರ್ಥನಾ ಮಾಡಿ, ಶ್ರೀಜನಾರ್ದನ ರೂಪವನ್ನ ದಶದಿಕ್ಕಿನಲ್ಲೂ, ಶ್ರೀಕೃಷ್ಣರೂಪವನ್ನು ಭೋಕ್ತೃ, ಪಾಕಕರ್ತೃಗಳು ಮೊದಲಾದವರಲ್ಲೀನೂ ಆವಾಹನ ಮಾಡಬೇಕು ಎಂತ ತಾತ್ಪರ್ಯ ॥೮॥

## ಭಾವಪ್ರಕಾಶಿಕೆ

ಜಯಾಕಾಂತ, ಪರಮಾತ್ಮನು ಸಂಕರ್ಷಣರೂಪವನ್ನು ಸ್ವೀಕರಿಸಿದಾಗ ಲಕ್ಷ್ಮೀದೇವಿಯರು ಜಯಾ ಎಂಬ ಹೆಸರಿನಿಂದ ರೂಪಾಂತರವನ್ನು ತಾಳಿ

ಸಂಕರ್ಷಣನ ಪತ್ನಿಯಾಗಿರುವರು. ಆದ್ದರಿಂದ ಜಯಾಕಾಂತನೆಂದರೆ ಸಂಕರ್ಷಣ ಎಂದರ್ಥ. ಅತ್ರಿಋಷಿಗಳ ತಪಸ್ಸಿಗೆ ಮೆಚ್ಚಿ ತನ್ನ ದೇಹವನ್ನು "ಪುತ್ರತ್ವೇನ ದತ್ತಃ" ಪುತ್ರವಾತ್ಸಲ್ಯದಿಂದ ಲಾಲಿಸುವುದಕ್ಕಾಗಿ ಕೊಟ್ಟನು. ಈ ರೀತಿಯಾಗಿ ಅತ್ರಿಯಲ್ಲಿ ಅವತಾರ ಮಾಡಿದ್ದರಿಂದ ದತ್ತಾತ್ರೇಯನೆಂದು ಹೆಸರು. ಪುತ್ರನನ್ನು ದತ್ತ ಮಾಡಿದ್ದರಿಂದ ದತ್ತ ಎಂತಲೂ, "ಅತ್ರೇರಪತ್ಯಂಪುಮಾನ್ ಆತ್ರೇಯಃ" ಅತ್ರಿಋಷಿಗಳ ಮಗನಾದುದರಿಂದ ಆತ್ರೇಯನೆಂತಲೂ, ಎರಡೂ ಸೇರಿ ದತ್ತಾತ್ರೇಯ ಎಂದು ಹೆಸರಾಯಿತು. ಅಥವಾ "ದದಾತಿ ಅಭೀಷ್ಟಮಿತಿ ದತ್ತಃ" ಅಭೀಷ್ಟವನ್ನು ಭಕ್ತರಿಗೆ ಕೊಡುವವನಾದ್ದರಿಂದ ದತ್ತ ಎಂದು ಹೆಸರು. ಕಪಿಲ ಅಂದರೆ "ಕಂ ಸುಖಂ ಪಿಬತೀತಿ ಕಪಿಃ ಲಾತಿ–ಭಕ್ತಾನ್ಸ್ವೀಕರೋತೀತಿ ಲಃ– ಕಪಿಲಾಶ್ಚಾಸೌ ಲಶ್ಚೇತಿ ಕಪಿಲಃ"ಕಂ ಅಂದರೆ ಸುಖ. ಪಿ ಅಂದರೆ ಪಾನ ಮಾಡುವವನು. ಒಟ್ಟು ಕಪಿ ಅಂದರೆ ಸುಖಸ್ವರೂಪನೆಂಬ ತಾತ್ಪರ್ಯ. ಲಾತಿ ಅಂದರೆ ಸ್ವೀಕರಿಸುವುದು. ಭಕ್ತರನ್ನು ಸ್ವೀಕರಿಸುವವನೆಂದರ್ಥ. ಹೀಗೆ ಸುಖಸ್ವರೂಪನೂ, ಭಕ್ತೋದ್ಧಾರಕನೂ ಆದುದರಿಂದ ಕಪಿಲ ಎಂದು ಹೆಸರು. ಮಹಿದಾಸನೆಂಬುದು ದೇವರ್ಷಿ ಅವತಾರವು. ಮಹಿ ಅಂದರೆ ಪೂಜ್ಯರೆಂದರ್ಥ. ಲೋಕಪೂಜ್ಯರಾದ ಬ್ರಹ್ಮಾದಿಗಳೆಲ್ಲರೂ ಪರಮಾತ್ಮನಿಗೆ ದಾಸರಾಗಿರುವುದರಿಂದ ಮಹಿದಾಸನೆಂದು ಹೆಸರು. ಹರಿ–ದುರಿತ ನಿವರ್ತಕ, ಹಂಸ—ದುಃಖನಾಶಕನೆಂದರ್ಥ. ಮಿಕ್ಕವು ಪ್ರಸಿದ್ಧಿಯಾದ ಪದಗಳೇ ಇರುವುವು ॥೮॥

**ಭಾವದರ್ಪಣ**

ಜಯಜಯೇತಿ–ಉತ್ಕೃಷ್ಟನಾಗಿದ್ದಿ. ಲೋಕತ್ರಯವಿಲಕ್ಷಣ–ಹದಿನಾಲ್ಕು ಲೋಕಗಳಲ್ಲಿ ಇರುವ ಜೀವರಿಗೆ ವಿಲಕ್ಷಣನಾದವ ಎಂಬರ್ಥ ॥೮॥

## ೪. ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ

ಏವಂ ಪರಮೋಪಕಾರಕರ್ತಾರಂ ರಮಾಭರ್ತಾರಂ ಸಮಿದ್ಯ್ಯ ಹರ್ಷೋದ್ರೇಕಾತ್ ಸ್ಮಾರಯಂತಿ" "ಜಯ" ಇತಿ॥ "ನಿರಾಮಯ" ನಿಷ್ಪಾಪ ॥೮॥

**ಕನ್ನಡಾರ್ಥ :**

ಹಿಂದೆ ನಿರೂಪಿಸಿದಂತೆ ಪರಮ ಉಪಕಾರವನ್ನು ಮಾಡುವ ರಮಾರಮಣ ಶ್ರೀಹರಿಯನ್ನು ಸ್ತುತಿಸಿ ಹರ್ಷೋದ್ರೇಕದಿಂದ ನೆನಪಿಸುತ್ತಾರೆ. "ಜಯ" ಎಂಬ ಪದ್ಯದಿಂದ. "ನಿರಾಮಯ"—ಪಾಪಗಳಿಂದ ಸದಾ, ದೂರ–ರಹಿತನು ॥೮॥

**ಶ್ರೀಗುರುಹೃದಯಪ್ರಕಾಶಿಕೆ**

ಕರ್ಮಾಚರಣ ಕಾಲದಲ್ಲಿ ದೇವರ ಅವತಾರ ರೂಪಗಳ ಪ್ರಾರ್ಥನಾ ರೂಪ ಸ್ಮರಣೆಯು ಬೇಕೆಂದು ತಿಳಿಸುತ್ತಾರೆ, ಜಯ ಎಂದು. ಜಯಾಕಾಂತನಾದ ಸಂಕರ್ಷಣನೇ, ಅತ್ರಿಋಷಿಗೆ ದತ್ತನಾದ್ದರಿಂದ ದತ್ತಾತ್ರೇಯನೆಂದು ಹೆಸರುಳ್ಳವನೇ, ಸುಖವನ್ನು ಸ್ವೀಕರಿಸಿ ಕೊಡುವುದರಿಂದ ಕಪಿಲನಾಮಕನೇ, ಪೂಜ್ಯರಾದ ಬ್ರಹ್ಮಾದಿಗಳನ್ನು ದಾಸರನ್ನಾಗಿ ಮಾಡಿಕೊಂಡಿರುವುದರಿಂದ ಮಹೀದಾಸನೇ ("ಮಹೀಯಾಂಸಃ ದಾಸಾಃ ಯಸ್ಯ" ಎಂಬ ವ್ಯುತ್ಪತ್ತಿಯಿಂದ) ಭಕ್ತಪ್ರಿಯನೇ, ಅನಾದಿಪುರುಷನೇ, ಹಂಸಮೂರ್ತಿಯೇ, ಸರ್ವಲೋಕ ವಿಲಕ್ಷಣನೇ, ನಿಖಿಳ ಜಗದಾಧಾರನೇ, ನಿರ್ದೋಷನೇ, ದಯದಿಂದ ರಕ್ಷಿಸೆಂದು ಪ್ರಾರ್ಥಿಸುವುದು, ಈ ರೂಪಗಳಿಂದ ದುಷ್ಟನಿಗ್ರಹ ಶಿಷ್ಟಪರಿಪಾಲನ ಆದದ್ದನ್ನೆಲ್ಲಾ ತಿಳಿಯಬೇಕೆಂದು ಅಭಿಪ್ರಾಯ. ಗ್ರಂಥವಿಸ್ತಾರ ಭಯದಿಂದ ವಿವರಿಸಿಲ್ಲ. ॥೮॥

## ಸರ್ವವ್ಯಾಖ್ಯಾನಸಾರಸಂಗ್ರಹ

ಜಯಾನಾಮಕಳಾದ ಶ್ರೀಲಕ್ಷ್ಮೀದೇವಿಯ ಕಾಂತನಾದ ಶ್ರೀಹರಿಗೆ ಸಂಕರ್ಷಣನೆಂದು ಹೆಸರು. ಜಯಾರಮಣನಾದ ಹೇ ಸಂಕರ್ಷಣ, ನಮಗೆ ಮಂಗಳಪ್ರದನಾಗು. ಪಿತೃಯಜ್ಞ ರೂಪವಾದ ಶ್ರಾದ್ಧ ಕರ್ಮಗಳಲ್ಲಿ ಅಸುರರು ಹಾಗೂ ದುಷ್ಟಶಕ್ತಿಗಳಿಂದ ಒದಗುವ ಸಕಲ ವಿಘ್ನಗಳನ್ನೂ ಪರಿಹರಿಸಿ, ಜಯಪ್ರದನಾಗೆಂದು ಪ್ರಾರ್ಥಿಸುತ್ತಾರೆ.

ಅತ್ರಿಋಷಿಗಳ ತಪಸ್ಸಿಗೆ ಮೆಚ್ಚಿ, ತನ್ನ ದೇಹವನ್ನು ಪುತ್ರದ್ವಾರಾ ದತ್ತ ಮಾಡಿದ್ದರಿಂದ ಶ್ರೀಪರಮಾತ್ಮನಿಗೆ ದತ್ತಾತ್ರೇಯ ಎಂಬ ಹೆಸರಾಯಿತು. ಪುತ್ರತ್ವೇನ ದತ್ತಃ ಎಂಬ ವಚನಾನುಸಾರ ಅತ್ರಿಋಷಿಗೆ ಅನುಸೂಯಾ ದೇವಿಯಲ್ಲಿ ಜನಿಸಿದ ಭಗವದವತಾರವೇ ದತ್ತಾತ್ರೇಯ ರೂಪವು. ಅತ್ರೇರಪತ್ಯಂ ಪುಮಾನ್ ಆತ್ರೇಯಃ ಎಂಬ ಪರಿಷ್ಕಾರ ಕ್ರಮದಂತೆ ಅತ್ರಿಋಷಿಗಳ ಪುತ್ರನಾದ್ದರಿಂದ ಆತ್ರೇಯನೆಂತಲೂ. ಎರಡೂ ಸೇರಿ ದತ್ತಾತ್ರೇಯ ಎಂದಾಯಿತು, ದದಾತಿ ಅಭೀಷ್ಟಮಿತಿ ದತ್ತಃ ಎಂಬ ಅರ್ಥಾನುಸಾರ ಭಕ್ತರಿಗೆ ಅವರ ಅಭೀಷ್ಟಗಳನ್ನು ಕೊಡುವವನಾದ್ದರಿಂದ ದತ್ತನೆಂದು ನಾಮ,

ಕರ್ದಮಋಷಿಗಳಿಂದ ದೇವಹೂತಿಯಲ್ಲಿ ಅವತಾರಮಾಡಿದ್ದರಿಂದ, ಕಪಿಲನಾಮಕನಾದನು. ಕಪಿಲರೂಪೀ ಶ್ರೀಹರಿಯು ತಾಯಿಗೆ ಸಾಂಖ್ಯಶಾಸ್ತ್ರವನ್ನು ಉಪದೇಶಿಸಿದನು. ಕಂ–ಸುಖಂ ಪಿಬತೀತಿ ಕಪಿಃ ಲಾತಿ–ಭಕ್ತಾನ್ ಸ್ವೀಕರೋತಿ ಲಃ–ಕಪಿಲಾಶ್ಚಾಸೌ ಲಶ್ಚೇತಿ ಕಪಿಲಃ" ಅಂದರೆ ಕಂ–ಸುಖ, ಪಿ–ಪಾನ ಮಾಡುವವನು ಅಂದರೆ ಕಪಿನಾಮಕ್ಕೆ ಸುಖಸ್ವರೂಪನೆಂದರ್ಥ. ಲಾತಿ–ಸ್ವೀಕರಿಸುವುದು ಅಂದರೆ ಸುಖ ಸ್ವರೂಪನಾದ ಶ್ರೀಭಗವಂತನು ತನ್ನ ಭಕ್ತರನ್ನು ಸ್ವೀಕರಿಸಿ, ತನ್ನವರಾಗಿ ಮಾಡಿಕೊಳ್ಳುವುದರಿಂದ ಕಪಿಲನಾಮಕನು ಅಂದರೆ ಭಕ್ತೋದ್ಧಾರನೆಂದರ್ಥ.

ಇತರಾದೇವಿಯಲ್ಲಿ ಅವತಾರ ಮಾಡಿದ ಹರಿಯು ಮಹಿದಾಸನಾಮಕನು. ಅದು ದೇವರ್ಷಿ ಅವತಾರವು. ಮಹಿ–ಎಂದರೆ ಪೂಜ್ಯನೆಂದರ್ಥ. ಲೋಕ ಪೂಜ್ಯರಾದ ಬ್ರಹ್ಮಾದಿಗಳೆಲ್ಲರೂ ಯಾರಿಗೆ ದಾಸರಾಗಿರುವರೋ ಅಂತಹ ಶ್ರೀಹರಿಯೇ ಮಹಿದಾಸನಾಮಕನು. ಮಹಿನಃ ಬ್ರಹ್ಮಾದಯಃ ದಾಸಾಃ ಯಸ್ಯ ಸಃ ಮಹಿದಾಸಃ ಎಂದು ಅರ್ಥಪರಿಷ್ಕಾರ ಕ್ರಮ.

ದತ್ತಾತ್ರೇಯ ಕಪಿಲ ಮತ್ತು ಮಹಿದಾಸ ಈ ರೂಪತ್ರಯಗಳೂ ಜ್ಞಾನ ಪ್ರಬೋಧಕ ರೂಪಗಳು. ಇದರಿಂದ ಹೇ ಶ್ರೀಹರಿಯೇ ಪೂರ್ವೋಕ್ತ ರೂಪತ್ರಯಗಳಿಂದ ನನ್ನಲ್ಲಿ ಇದ್ದು, ಬುದ್ಧಿ ಪ್ರೇರಕನಾಗು, ಜ್ಞಾನಪ್ರದನಾಗೆಂದು ಪ್ರಾರ್ಥಿಸಿದ್ದಾರೆ.

ಯುಗಾಂತ ಸಮಯದಲ್ಲಿ, ಅಂದರೆ ಮಹಾಪ್ರಳಯಕಾಲದಲ್ಲಿ ಸಮಸ್ತ ಜಗತ್ತೂ ಶ್ರೀಪರಮಾತ್ಮನ ಉದರಲ್ಲಿ ಆಶ್ರಯ ಹೊಂದಿದಾಗ, ಶ್ರೀಮನ್ನಾರಾಯಣನೊಬ್ಬನೇ ಮೂಲರೂಪದಿಂದ ಏಕಮೇವ ಅದ್ವಿತೀಯನಾಗಿದ್ದನು. ಇದರಿಂದ ಬಹು ಪ್ರಾಚೀನ ವಸ್ತುವಾಗಿದ್ದು ಪುರಾತನ ಪುರುಷನೆಂದಿದ್ದಾರೆ.

ಅಂತಹ ಭಕ್ತಪ್ರಿಯನಾದ ಪುರಾತನ ಪುರುಷನು ಜ್ಞಾನಾನಂದಪರಿಪೂರ್ಣನು. ಅವನ ಜ್ಞಾನ ಆನಂದ ಶಕ್ತಿ ಇತ್ಯಾದಿ ಸಕಲ ಗುಣಗಳೂ ಪರಿಪೂರ್ಣಗಳು. ಅತ ಏವ ಜ್ಞಾನಾನಂದಘನನು. ಹಯಗ್ರೀವ ರೂಪದಿಂದ ಚತುರ್ಮುಖಬ್ರಹ್ಮದೇವರಿಗೆ ವೇದೋಪದೇಶ ಮಾಡಿದ ಜಗದಾದಿಗುರುವಾದ್ದರಿಂದ ಹಯವದನನು.

ಅಂತಹ ಹಯವದನನು ಸಕಲ ಸಜ್ಜನರ ಪಾಪಪ್ರಕ್ಷಾಳನೆಗೈಯ್ಯುವುದರಿಂದ ಹರಿನಾಮಕನು,

ಸಂಸಾರ ಬಂಧಂ ಹಂತೀತಿ ಹಂಸ–ಎಂಬರ್ಥದಂತೆ ಪ್ರಕೃತಿಬದ್ಧರಾದ ಜೀವರನ್ನು ಲಿಂಗಭಂಗದ್ವಾರಾ ಬಂಧವಿಮೋಚನ ಗೈದು, ಅವರಿಗೆ ಸ್ವರೂಪಗತ ಆನಂದರೂಪವಾದ ಮೋಕ್ಷವನ್ನು ಕರುಣಿಸುವುದರಿಂದ ಹಂಸನಾಮಕನು.

ಚರಾಚರಾತ್ಮಕವಾದ ಜಗತ್ತಿನಿಂದ ಅತ್ಯಂತ ಭಿನ್ನನು. ಜೀವಜಡರಿಂದ ಅತ್ಯಂತ ಭಿನ್ನನಾದ್ದರಿಂದ ಲೋಕತ್ರಯವಿಲಕ್ಷಣನು.

ತನ್ನಿಂದ ಸೃಷ್ಟವಾದ ಸ್ಥಾವರ ಜಂಗಮಾತ್ಮಕವಾದ ಇಡೀ ಜಗತ್ತಿಗೇ ಆಶ್ರಯದಾತನು, ಆಧಾರನು. ಇದರಿಂದ ನಿಖಿಳಜಗದಾಶ್ರಯನು. ಅಂದರೆ ಸಮಸ್ತ ಬ್ರಹ್ಮಾಂಡವು ಅವನ ಆಶ್ರಯದಲ್ಲಿದೆ.

ಅನಂತಕಲ್ಯಾಣಗುಣಗಣಪರಿಪೂರ್ಣನು. ಅತ ಏವ ಸಮಸ್ತ ದೋಷ ವಿದೂರನು. ಯಾವ ರೋಗಾದ್ಯುಪದ್ರವಗಳಿಂದ ಬಾಧಿತನಲ್ಲ. ಇದರಿಂದ ನಿರಾಮಯನು.

ಹೀಗೆ ನಾನಾರೂಪ ಧಾರನಾದ ನಾನಾ ನಾಮಾತ್ಮಕನಾದ ಶ್ರೀಹರಿಯೇ ಸತ್ಕಾರ್ಯಗಳಲ್ಲಿ ಆಗಾಗ್ಗೆ ಬಂದೊದಗುವ ದುರಿತಗಳನ್ನು ಪರಿಹರಿಸಿ, ವಿಘ್ನ ಗಳನ್ನು ಕಳೆದು ಮಂಗಳ ಪ್ರದನಾಗೆಂದೂ, ನಮ್ಮನ್ನು ಸದಾ ಆಸುರೀ ಬಾಧೆ ಯಿಂದ ಸಂರಕ್ಷಿಸೆಂದೂ ಪ್ರಾರ್ಥಿಸಬೇಕೆಂದು ತಿಳಿಸುತ್ತಾರೆ. ॥೮॥

## ಪದ್ಯ—೯

**ಮೂಲ :–**

ಷಣ್ಣವತಿಯೆಂಬಕ್ಷರೇಡ್ಯನು ।
ಷಣ್ಣವತಿ ನಾಮದಲಿ ಕರೆಸುತ ।
ತನ್ನವರು ಸದ್ಭಕ್ತಿಪೂರ್ವಕದಿಂದೆ ಮಾಡುತಿಹ ॥
ಪುಣ್ಯಕರ್ಮವ ಸ್ವೀಕರಿಸಿ ಕಾ ।
ರುಣ್ಯಸಾಗರ ಸಲಹುವನು ಬ್ರ ।
ಹ್ಮಣ್ಯದೇವ ಭವಾಬ್ಧಿಪೋತ ಬಹುಪ್ರಕಾರದಲಿ ॥ ॥೯॥

**ಅವತರಣಿಕೆ :**

ಬ್ರಹ್ಮಜ್ಞಾನಿಗಳಿಗೆ ಸ್ವಾಮಿಯಾದ ಬ್ರಹ್ಮಣ್ಯದೇವನಾಮಕನು ಸಂಸಾರಾಖ್ಯ ದುಸ್ತರ ಸಮುದ್ರಕ್ಕೆ ನಾವೆಯಂತಿದ್ದು, ನಾನಾ ರೀತಿಗಳಲ್ಲಿ ಸಂರಕ್ಷಿಸುವನೆಂದು ಹೇಳುತ್ತಾರೆ, ಈ ಪದ್ಯದಿಂದ ॥೯॥

**ಪ್ರತಿಪದಾರ್ಥ :**

ಅಕ್ಷರೇಡ್ಯನು–ಅಕ್ಷರನಾಮಕಳಾದ ಶ್ರೀಲಕ್ಷ್ಮೀದೇವಿಯಿಂದ ಸ್ತುತ್ಯ ನಾದ, ಷಣ್ಣವತಿಯೆಂಬ ೯೬ ರೂಪಗಳಿಂದ ವಿಶಿಷ್ಟನಾದ ಶ್ರೀಪರಮಾತ್ಮನು,

**ಷಣ್ಣವತಿ ನಾಮದಲಿ**–ಷಣ್ಣನವತಿ ಎಂಬ ಹೆಸರಿನಿಂದಲೇ, **ಕರೆಸುತ**–ಕರೆಯಿಸಿಕೊಳ್ಳುತ್ತಾ, **ತನ್ನವರು**–ತನ್ನ ಭಕ್ತರು, **ಸದ್ಭಕ್ತಿಪೂರ್ವಕದಿಂದ**–ವಿಧ್ಯುಕ್ತವಾಗಿ ಶ್ರದ್ಧಾಭಕ್ತಿಗಳಿಂದೊಡಗೂಡಿ **ಮಾಡುತಿಹ**–ಮಾಡುತ್ತಿರುವ ಪಿತೃಶ್ರಾದ್ಧರೂಪವಾದ, **ಪುಣ್ಯಕರ್ಮವ**–ಪುಣ್ಯಕರ್ಮಗಳನ್ನು, **ಕಾರುಣ್ಯ ಸಾಗರ**–ಕರುಣಾಸಮುದ್ರನಾದ ಶ್ರೀಪರಮಾತ್ಮನು. **ಸ್ವೀಕರಿಸಿ**–ಕೃಷ್ಣಾರ್ಪಣ ಬುದ್ಧಿಪೂರ್ವಕವಾಗಿ ಕೊಟ್ಟದ್ದನ್ನು ತೆಗೆದುಕೊಂಡು, **ಬ್ರಹ್ಮಣ್ಯದೇವ**–ಬ್ರಹ್ಮಜ್ಞಾನಿಗಳಿಗೆ ಸ್ವಾಮಿಯಾದವನು (ಬ್ರಾಹ್ಮಣ ಪ್ರಿಯನು) **ಭವಾಬ್ಧಿ ಪೋತ**–ಸಂಸಾರವೆಂಬ ದುಸ್ತರವಾದ ಸಮುದ್ರವನ್ನು ದಾಟಿಸುವ ನಾವೆ ಯಂತಿರುವ ಶ್ರೀಹರಿಯು, **ಬಹುಪ್ರಕಾರದಲಿ**–ನಾನಾ ರೀತಿಗಳಲ್ಲಿ, **ಸಲಹುವನು**–ಸಂರಕ್ಷಿಸುತ್ತಾನೆ. ॥೯॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತ ಪ್ರಕಾರ ಅನುಸಂಧಾನದಿಂದ ಮಾಡಿದ ಕರ್ಮ ಸ್ವೀಕರಿಸಿ ರಕ್ಷಿಸುತ್ತಾನೆಂದು ಹೇಳತಾರೆ.

ಅಕ್ಷರರಾದ ಲಕ್ಷ್ಮೀದೇವೇರಿಂದ ಸ್ತುತ್ಯನಾದ ನಾರಾಯಣದೇವರು ಷಣ್ಣವತಿ ಎಂತ ನಾಮದಿಂದ ಕರಸಿದವನಾಗಿ ಪ್ರದ್ಯುಮ್ನಾದಿ ವಾಸುದೇವಾಂತ ನಾಲ್ಕು ರೂಪಗಳಿಂದ ಅಭಿವ್ಯಕ್ತನಾಗಿ. ಇಪ್ಪತ್ತಾಲ್ಕು ಪ್ರದ್ಯುಮ್ನರೂಪಗಳು, ಮೂವತ್ಮೂರು ಸಂಕರ್ಷಣರೂಪಗಳು. ಮೂವತ್ತಾರು ವಾಸುದೇವರೂಪ ಗಳು. ಮೂರು ಅನಿರುದ್ಧರೂಪಗಳು ಅಂತು ತೊಂಭತ್ತಾರು ಈ ಪ್ರಕಾರ ತೊಂಭತ್ತಾರು ನಾಮದಿಂದ, ಆಯಾ ಅಧಿಷ್ಠಾನಗಳಲ್ಲಿದ್ದು ಕರಸುತ್ತಾ ತನ್ನ ಭಕ್ತರು. ಸಮೀಚೀನವಾದ ತಾರತಮ್ಯ ಪಂಚಭೇದ ಯುಕ್ತವಾದ ಜ್ಞಾನದಿಂದ ಅಂತರ್ಗತನಾದ ಪರಮಾತ್ಮನಲ್ಲಿ ಭಕ್ತಿಪೂರ್ವಕವಾಗಿ ಮಾಡತಾ ಇರತಕ್ಕ ಪಿತೃಕರ್ಮ ದಾವದದೆ ಇದೇ, ಪಿತೃವಿಷಯುಕವಾದ ಪುಣ್ಯಕರ್ಮ ಎಂತ ಎನಿಸೋ

ದಾಗತದೆ, ಇಂಥಾ ಪುಣ್ಯಕರ್ಮವನ್ನ ಕರುಣಾಸಮುದ್ರನಾದ ಶ್ರೀಪರಮಾತ್ಮನು ಕೃಷ್ಣಾರ್ಪಣ ಎಂದು ಕೊಟ್ಟದ್ದರನ್ನ ತೆಗೆದುಕೊಂಡವನಾಗಿ. ಬ್ರಹ್ಮಜ್ಞಾನಿಗಳಿಗೆ ಸ್ವಾಮಿಯಾದ ಪರಮಾತ್ಮ ತನ್ನ ಪಿತೃಗಳ ಸಂರಕ್ಷಿಸುವನು. ಈ ಪರಮಾತ್ಮ ಸಂಸಾರಾಖ್ಯ ಸಮುದ್ರಕ್ಕೆ ನಾವಿಸ್ಥಾನಾಪನ್ನನು (ಜಲದಿಂದ ಯುಕ್ತವಾದ ಸಂಸಾರ ಸಮುದ್ರದಲ್ಲಿ ಮುಣಗದೆ ಇರಬೇಕಾದರೆ, ಪರಮಾತ್ಮ ಎಂಬ ನಾವಿಯನ್ನ ಆಶ್ರಯ ಮಾಡಿದವ ಮುಣುಗೋದಿಲ್ಲ), ಆದ್ದರಿಂದ ಪೂರ್ವೋಕ್ತ ಪ್ರಕಾರ ಶ್ರೀಪರಮಾತ್ಮನ್ನ ನಂಬಿದರೆ, ಅವನು ನಾನಾ ಪ್ರಕಾರದಿಂದ ಕಾಪಾಡತಾನೆಂತ ತಾತ್ಪರ್ಯ ॥೯॥

## ಭಾವಪ್ರಕಾಶಿಕೆ

ಮೇಲೆ ೧–೨–೩–೬ನೆಯ ಪದ್ಯಗಳಲ್ಲಿ ಹೇಳಿರುವ ಪ್ರಕಾರ ಪರಮಾತ್ಮನು ೯೬ ರೂಪಗಳಿಂದ ಪಿತೃಗಳಲ್ಲಿ ಇರುವುದರಿಂದ ಷಣ್ಣವತಿ (ಅಂದರೆ ೯೬ ಎಂದರ್ಥ) ಈ ಹೆಸರಿನಿಂದ ಕರೆಸಿಕೊಳ್ಳುತ್ತ, ಕರುಣಾಸಮುದ್ರನೂ, ಬ್ರಾಹ್ಮಣರಲ್ಲಿ ಪರಮ ಪ್ರೀತಿ ಉಳ್ಳವನೂ ಆದ, ಸಂಸಾರ ಸಮುದ್ರಕ್ಕೆ ವಾಡೆಯಂತಿರುವ ಲಕ್ಷ್ಮೀವಂದ್ಯನಾದ ಶ್ರೀಹರಿಯು ತನ್ನ ಭಕ್ತರು ಮಾಡುವ ಶ್ರಾದ್ಧಾದಿ ಕರ್ಮಗಳನ್ನು ಸ್ವೀಕರಿಸಿ ಅವರಿಗೆ ಇಹದಲ್ಲೂ ಪರದಲ್ಲೂ ಸಹ ಸುಖವನ್ನು ಕೊಟ್ಟುದ್ಧರಿಸುವನು. ಅಕ್ಷರೇಡ್ಯನು ಅಂದರೆ ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಕ್ಷರ ಉಚ್ಯತೆ ಎಂಬ ಗೀತಾವಾಕ್ಯಾನುಸಾರ, ಕ್ಷರ ಎಂದರೆ ಸರ್ವಪ್ರಾಣಿಗಳಿಗೆ ಹೆಸರು. ಅಕ್ಷರ ಅಂದರೆ ಲಕ್ಷ್ಮೀದೇವಿಯರಿಗೆ ಹೆಸರು. ಆದ್ದರಿಂದ ಲಕ್ಷ್ಮೀದೇವಿಯರಿಂದ ಸ್ತುತ್ಯನೆಂದು ಅರ್ಥ. ॥೯॥

## ಭಾವದರ್ಪಣ

ಷಣ್ಣವತ್ಯೆಂಬ ಅಕ್ಷರಗಳಿಂದ ಸ್ತುತ್ಯನಾದ ಶ್ರೀಹರಿಯು ಭಕ್ತರ ಕರ್ಮ ಸ್ವೀಕರಿಸಿ ಸಂಸಾರಾಬ್ಧಿ ದಾಟಿಸುವನೆಂದು ಹೇಳುತ್ತಾರೆ. ಷಣ್ಣವತೀತಿ. ಪೋತ ನೌಕೆ. ॥೯॥

## ಶ್ರೀವ್ಯಾಸದಾಸಸಿದ್ಧಾಂತಕೌಮುದಿ

ಷಣ್ಣವತಿ ಇತಿ॥ ಷಡ್ಗುಣತ್ವೇನ ಷಟ್ । ನವತಿ ದೇವಾಂತರಾತ್ಮಕತ್ವಾತ್ ತಥಾ ॥ ಪೋತ–ನಾವಿ. ॥೯॥

## ಕನ್ನಡಾರ್ಥ

ಷಣ್ಣವತಿ ಎಂಬಲ್ಲಿ ಷಟ್ ನವತಿ ಹೀಗೆ ಪದಗಳನ್ನು ಬಿಡಿಸಿ, ಆ ಪದಗಳಿಂದ ಸ್ತುತ್ಯನು ಎಂದು ಅರ್ಥ ಮಾಡಬೇಕು. ಪೂರ್ಣಜ್ಞಾನ ಮುಂತಾದ ಷಡ್ಗುಣಪರಿಪೂರ್ಣನಾದುದರಿಂದ ಷಟ್ ಎಂದೂ ೯೦ ದೇವತೆಗಳಲ್ಲಿ ನಿಯಾಮಕನಾಗಿದ್ದು, ಅವರನ್ನು ಚಕ್ರದಂತೆ ತಿರುಗಿಸುವುದರಿಂದ ನವತಿ ಎಂದೂ, ಪರಮಾತ್ಮನಿಗೆ ಷಣ್ಣವತಿ ಎಂದು ಕರೆಯುವರು.

ಪೋತ-ನಾವೆ: ಭವಾಬ್ಧಿಪೋತ ಸಂಸಾರವೆಂಬ ಸಮುದ್ರವನ್ನು ದಾಟಿಸುವ ದೋಣಿ ಎಂದು ಅರ್ಥ. ॥೯॥

## ಶ್ರೀಗುರುಹೃದಯಪ್ರಕಾಶಿಕೆ

ಷಣ್ಣವತಿ ಎಂಬ ಅಕ್ಷರ ಮೊದಲಾದ ಸರ್ವತ್ರದಲ್ಲೂ ದೇವರ ಸ್ಮರಣೆಯಿರಬೇಕೆಂಬ ಅಭಿಪ್ರಾಯ ಸೂಚನಾರ್ಥವಾಗಿ, ದೇವರ ಸಂರಕ್ಷಣಾ ಕ್ರಿಯವನ್ನು ಪುನರಪಿ ಹೇಳುತ್ತಾರೆ, ಷಣ್ಣವತಿ ಎಂದು. ಷಣ್ಣವತಿ ಎಂಬ ಪ್ರತ್ಯೇಕ ಪ್ರತ್ಯೇಕ ವರ್ಣದಿಂದ ಷಡ್ಗುಣ ಪೂರ್ಣ, ಆನಂದ, ವರ್ಣನೀಯ, ತಿರೋಧಾನಕರ್ತಾ ಎಂದು ಷಣ್ಣವತಿನಾಮದಿಂದ ಕರೆಸಿಕೊಳ್ಳುತ್ತಾ ತನ್ನವರು ಸದ್ಭಕ್ತಿಪೂರ್ವಕ ಮಾಡುವ ಪುಣ್ಯಕರ್ಮ ಸ್ವೀಕರಿಸಿ, ಬಹುಪ್ರಕಾರದಿಂದ ಸಲಹುವ ಎಂದರೆ,

ಬ್ರಹ್ಮಾರ್ಪಣಂ ಬ್ರಹ್ಮಹವಿಃ ಬ್ರಹ್ಮಾಗ್ನೌ ಬ್ರಹ್ಮಣಾಹುತಂ ।
ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮ ಸಮಾಧಿನಾ ॥

ಎಂಬ ಗೀತಾರೀತ್ಯಾ, ಅರ್ಪಣಕ್ರಿಯಾದಲ್ಲೂ, ಹವಿಸ್ಸಿನಲ್ಲೂ, ಅಗ್ನಿಯಲ್ಲಿಯೂ, ಹೋಮಕ್ರಿಯಾದಲ್ಲೂ, ಕರ್ಮದಲ್ಲೂ, ಸಮಾಧಿ ಎಂಬ ಧ್ಯಾನದಲ್ಲೂ ಸಹ ಇದ್ದು, ಗಂತವ್ಯನೆಂದರೆ ಪ್ರಾಪ್ಯನು ಆಗುವನೆಂದರ್ಥ. ಆದ್ದರಿಂದ

ದೇವರು ಬ್ರಹ್ಮಣ್ಯದೇವ ಎಂದರೆ ಬ್ರಾಹ್ಮಣಪ್ರಿಯ ಭವಾಬ್ಧಿ ಎಂಬ ಸಂಸಾರ ಸಮುದ್ರಕ್ಕೆ ಪೋತ ಎಂದರೆ ವಾಡೆಯಂತೆ ತಾರಕ. ಕಾರುಣ್ಯಸಾಗರ ಎಂದರ್ಥ. ಇದರಿಂದ ಇದಂ ಪಿತೃಭ್ಯೋನಮಃ ಇತಿ ನಮಸ್ಕಾರವತೀ ಮಂತ್ರಶಂಸತೀ ಇತ್ಯಾದಿ ಬ್ರಾಹ್ಮಣ ಖಂಡಾರ್ಥ ವಿವರಿಸುವ ಪೈಕೃತಸುಳಾದಿ ಅರ್ಥವೆಲ್ಲಾ ಸಂಗ್ರಹಿಸಿ ಹೇಳಿದೆ ಎಂದು ತಿಳಿಯಬೇಕು.

**ವಿಶೇಷಪ್ರಮೇಯ**–ಪೈಕೃತಸುಳಾದಿ ಎಂಬುದು ಶ್ರೀವಿಜಯರಾಯಾಖ್ಯ ದಾಸವರ್ಯರಿಂದ ರಚಿಸಲ್ಪಟ್ಟಿರುವ ಸುಳಾದಿಗಳ ಪೈಕಿ ಒಂದು ಅಮೋಘವಾದ ಸುಳಾದಿ. ಇದರಲ್ಲಿ ಪೈಕೃತದಿನಗಳಲ್ಲಿ ಯಾವ್ಯಾವ ದೇವತೆಗಳನ್ನು ಅನುಸಂಧಾನಕ್ಕೆ ತರಬೇಕೋ ಆಯಾ ರೂಪಗಳನ್ನು ಅನಿರುದ್ಧ ಪ್ರದ್ಯುಮ್ನ ಸಂಕರ್ಷಣ ವಾಸುದೇವ ಜನಾರ್ದನ ಮೂರ್ತಿಗಳ ಸ್ಮರಣೋಪಾಸನೆಯನ್ನೂ, ಯಾವ್ಯಾವ ಕ್ಷೇತ್ರಗಳನ್ನು ಧ್ಯಾನಕ್ಕೆ ತರಬೇಕೆಂಬುದನ್ನೂ, ಎಂಥೆಂಥಾ ಜನಗಳನ್ನು ಶ್ರಾದ್ಧಕ್ಕೆ ಕೂಡಿಸಕೂಡದೋ. ಎಂಥೆಂಥಾವರನ್ನು ಮಾತ್ರ ಪಿತೃಯಜ್ಞದಲ್ಲಿ ಆಹ್ವಾನ ಮಾಡಬೇಕೋ ಇತ್ಯಾದಿ ಅನೇಕಾನೇಕ ಪ್ರಮೇಯಗಳನ್ನು ಹೇಳಿರುತ್ತಾರೆ. ಈ ಸುಳಾದಿಯಲ್ಲಿ 'ಈ ರೀತಿ ಚಿತ್ರ ವೈಚಿತ್ರ ಮಹಿಮೆ ತಿಳಿದು ಆಚರಿಸಿದರೆ ಪುತ್ರ ಪೌತ್ರ ಪ್ರಪೌತ್ರವಂಶಾಭಿವೃದ್ಧಿಯಿಂದ ಗಾತ್ರನಿರ್ಮಲರಾಗಿ ಪಾತ್ರಸತ್ಪಾತ್ರರಾಗಿ ತೃಪ್ತಿಯಾಗುವುದು. ನೇತ್ರೋತ್ಸಾಹದಿಂದ ಸಾಗಿ ಸಾರುವರೋ, ಸ್ವಗೋತ್ರರೊಡನೆ ಹರಿಯ ಕೊಂಡಾಡುತ, ಎಂಬುದಾಗಿಯೂ 'ಧಾತ್ರಿಯೊಳಗೆ ಒಬ್ಬ ಜ್ಞಾನಿ ಪುಟ್ಟಲು ಮೇರುಗೋತ್ರ ಸಮ ಪುಣ್ಯತಂದು ಕೊಡುವ' ಎಂತಲೂ, 'ಅಧರ ಭೂ ಭುವರ್ಲೋಕ ನಾಕ ಭುವನಾದಲ್ಲಿದ್ದ ಸರ್ವಪಿತೃಗಣದವರು ತೃಪ್ತಿಯಾಗುವರೈಯ್ಯಾ' ಎಂತಲೂ, 'ಉಪರಾಗ ಕಾಲದಲ್ಲಿ ಬದರಿ, ಪ್ರಯಾಗ, ಗಯಾ, ಅಯೋಧ್ಯಾ, ಅವಂತಿಕಾದಿ ಪುಣ್ಯ ಕ್ಷೇತ್ರಗಳಲ್ಲಿ ಸುರರು ಭೂಸುರರಿಗೆ ಭೋಜನ ಮಾಡಿಸಿದ ಪುಣ್ಯ ಬರುವುದೈಯ್ಯಾ' ಎಂತಲೂ 'ಇಂತು ಪಿತೃಪುಣ್ಯಕಾಲದಲ್ಲಿ ಯೋಚನೆ ಮಾಡಿ ಮತಿಯಿಂದ ಕೊಂಡಾಡಿ ಚರಿಸಿದ ಮನುಜನ ಸುಕೃತಕೆ ಕಡೆಗಾಣೆ ಪಡಿಗಾಣೆ' ಎಂತಲೂ ಹೇಳಿ, ಜತ್ತೆಯಲ್ಲಿ 'ನರಕೋದ್ಧಾರ ಸತ್ಯ ಇದರಿಂದ ಪಿತೃಗಳಿಗೆ । ನರಸಾರಥಿ ನಮ್ಮ ವಿಜಯವಿಠಲ ಒಲಿವ' ಎಂಬುದಾಗಿ ಅಪ್ಪಣೆ ಕೊಡಿಸಿರುತ್ತಾರೆ. ॥೯॥

# ಸರ್ವವ್ಯಾಖ್ಯಾನಸಾರಸಂಗ್ರಹ

೧ ಪಿತೃ–ಪಿತಾಮಹ – ಪ್ರಪಿತಾಮಹ – ಕರ್ತೃ – ಕರ್ಮ– ಕ್ರಿಯಾದಿ ಅಧಿಷ್ಠಾನಗತನಾಗಿ ಶ್ರಾದ್ಧಸ್ವಾಮಿಯಾದ ಜನಾರ್ದನನು ೯೬ ರೂಪಗಳಿಂದ ಷಣ್ಣವನತಿನಾಮಕನಾಗಿ ವಿದ್ಯಮಾನನಾಗಿದ್ದಾನೆ. ಷಟ್ + ನವತಿ–ಎಂದರೆ ೬+೯೦=೯೬ ರೂಪಗಳು.

**ವಿಶೇಷಾರ್ಥ :–**

ಪೂರ್ಣಜ್ಞಾನ, ಆನಂದಾದಿ ಷಡ್ಗುಣ ಪರಿಪೂರ್ಣನಾದ ಶ್ರೀಪರಮಾತ್ಮನಿಗೆ ಷಟ್ ಎಂದು ಹೆಸರು. ೯೦ ದೇವತೆಗಳಲ್ಲಿ ನಿಯಾಮಕನಾಗಿದ್ದು ಅವರನ್ನು ಚಕ್ರದಂತೆ ತಿರುಗಿಸುವುದರಿಂದ ನವತಿ ಎಂದು ಹೆಸರು. ಇದರಿಂದ, ಷಟ್ + ನವತಿ= ಷಣ್ಣವತಿ ೯೬ ರೂಪಗಳೆಂದು ಅರ್ಥ.

ಶ್ರೀಲಕ್ಷ್ಮೀದೇವಿಗೆ ಅಕ್ಷರ ಎಂದು ಹೆಸರು, ನಾಶವಿಲ್ಲದವಳೆಂದರ್ಥ. ಬ್ರಹ್ಮಾದಿ ಇತರರಿಗೆ ದೇಹನಾಶವುಂಟು. ಅವರು ಕ್ಷರವರ್ಗಕ್ಕೆ ಸೇರಿದ ಚೇತನರು. ಅಕ್ಷರನಾಮಕಳಾದ ಶ್ರೀಲಕ್ಷ್ಮೀದೇವಿಯರಿಂದ ನಿತ್ಯ ಸಂಸ್ತುತ್ಯನಾದ ಶ್ರೀಹರಿಯು ೯೬ ರೂಪಗಳಿಂದ ವಿದ್ಯಮಾನನಾದ ಅಕ್ಷರೇಡ್ಯನು ಷಣ್ಣವತಿನಾಮದಲಿಕರೆಸುತ ತನ್ನ ಭಕ್ತರು ಶ್ರದ್ಧಾಭಕ್ತ್ಯಾದಿಗಳಿಂದ ಮಾಡುವ ಪಿತೃಯಜ್ಞರೂಪವಾದ ಶ್ರಾದ್ಧಕರ್ಮಗಳನ್ನು ಸ್ವೀಕರಿಸಿ, ತತ್ಫಲವಾಗಿ ಪುಣ್ಯವನ್ನು ಅವರಿಗೆ ಈಯುವನು. ಅವರ ಬಾಳನ್ನು ಸುಖಮಯವನ್ನಾಗಿ ಮಾಡುವನು.

ಭಕ್ತರ ಆತ್ಮೋದ್ಧಾರಕ್ಕಾಗಿಯೇ ಜಗತ್ಸೃಷ್ಟ್ಯಾದಿ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವ ಆ ಪರಮಾತ್ಮನು ಕಾರುಣ್ಯಸಾಗರನು. ಅಂತಹ ಕೃಪಾಸಮುದ್ರನಿಗೆ ಬ್ರಹ್ಮಣ್ಯದೇವನೆಂದು ಹೆಸರು. ಬ್ರಹ್ಮಜ್ಞಾನಿಗಳಿಗೆ ಸ್ವಾಮಿಯಾದ್ದರಿಂದ ಬ್ರಹ್ಮಣ್ಯದೇವನಾಮಕನು. ಗೋ ಬ್ರಾಹ್ಮಣ ಪ್ರಿಯನಾದ್ದರಿಂದ ಬ್ರಹ್ಮಣ್ಯ ಶಬ್ದವಾಚ್ಯನು

ಜನನಮರಣಾಖ್ಯವಾದ ಸಂಸಾರವೆಂಬುದೇ ದುಸ್ತರವಾದ ಮಹಾ ಸಾಗರ. ಅದನ್ನು ದಾಟಲು ನಾವೆ ಅತ್ಯಗತ್ಯ. ಶ್ರೀಹರಿಯ ಕಾರುಣ್ಯವೇ ಆ ನಾವೆಯು. ಇದರಿಂದ ಭವಾಬ್ಧಿಪೋತ ಎಂದಿದ್ದಾರೆ. ಭವ ಎಂದರೆ, ಸಂಸಾರ. ಅಬ್ಧಿ ಎಂದರೆ ಸಮುದ್ರ. ಸಂಸಾರವೆಂಬ ಅಪಾರ ಜಲರಾಶಿ. ಪೋತ ಎಂದರೆ ನಾವೆ. ಆದ್ದರಿಂದ ಆ ಕಂಜದಳನೇತ್ರನು ಭವಾಬ್ಧಿಪೋತನೆನಿಸಿದ್ದಾನೆ. ಅಂತಹ ಭವಾಬ್ಧಿಪೋತನಾದ ಭಗವಂತನು ಭಗವದ್ಭಕ್ತರನ್ನು ನಾನಾ ರೀತಿ ಗಳಲ್ಲಿ ಸಂರಕ್ಷಿಸುತ್ತಾ, ಕೊನೆಯಲ್ಲಿ ಪರಮಾನುಗ್ರಹದಿಂದ ಜೀವರ ಸ್ವರೂಪ ಗತ ಆನಂದವನ್ನು ಆವಿರ್ಭಾವಗೊಳಿಸುವನು ॥೯॥

## ಪದ್ಯ - ೧೦

**ಮೂಲ :**

**ದೇಹಗಳನು ಕೊಡುವವನು ಅವರವ**
**ರಾಹರವನು ಕೊಡದಿಹನೆ ಸುಮನಸ**
**ಮಹಿತ ಮಂಗಳ ಚರಿತ ಸದ್ಗುಣಭರಿತನನವರತ ॥**
**ಅಹಿಕ ಪಾರತ್ರಿಕ ಸುಖಪ್ರದ ।**
**ವಹಿಸಿ ಬೆನ್ನಲಿ ಬೆಟ್ಟವಮೃತವ ।**
**ದ್ರುಹಿಣ ಮೊದಲಾದವರಿಗುಣಿಸಿದ ಮುರಿದನಹಿತರನ ॥೧೦॥**

**ಅವತರಣಿಕೆ :–**

ಜೀವರಿಗೆ ಸಾಧನ ದೇಹಗಳನ್ನು ಕೊಡುವ ಶ್ರೀಶನು ಅವರವರ ಆಹಾರ ಗಳನ್ನು ಕೊಟ್ಟೇ ಕೊಡುವನು ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ :**

**ದೇಹಗಳ ಕೊಡುವವನು**–ಮಾತಾಪಿತೃಗಳಲ್ಲಿ ಅಂತರ್ಗತನಾಗಿ, ಅವರ ದ್ವಾರಾ ಪಾಂಚಭೌತಿಕವಾದ ಸ್ಥೂಲ ದೇಹಗಳನ್ನು ಜೀವರಿಗೆ ಕೊಡುವ ಶ್ರೀಪರಮಾತ್ಮನು, **ಅವರವರ**—ಆಯಾಯಾ ಜೀವರ, **ಆಹರವನು ಕೊಡ**

**ದಿಹನೆ**–ಆಹಾರವನ್ನು ನೀಡದಿರುತ್ತಾನೆಯೇ ? **ಸುಮನಸಸಮಹಿತ**–ಬ್ರಹ್ಮಾದಿ ದೇವತೆಗಳಿಂದ ಸಂಪೂಜ್ಯನಾದ, **ಮಂಗಳಚರಿತ**–ಮಂಗಳ ಮಹಿಮಾ ವಿಶೇಷ ವುಳ್ಳ ಚರಿತ್ರೆವುಳ್ಳವನು, **ಸದ್ಗುಣಭರಿತ**–ಅಸದೃಶವಾದ ಅಪರಿಚ್ಛಿನ್ನವಾದ ಅನಂತಕಲ್ಯಾಣಗುಣಗಣಪರಿಪೂರ್ಣನು. **ಅನವರತ**–ನಿತ್ಯದಲ್ಲೂ, **ಅಹಿಕ**–ಇಹಲೋಕದಲ್ಲಿ ಕ್ಲೇಶ ಪರಿಹಾರಕನಾಗಿ, **ಪಾರತ್ರಿಕ**–ಪರಲೋಕದಲ್ಲಿ ಸ್ವರೂಪ ದರ್ಶನ ದ್ವಾರಾ, ಸಜ್ಜನರಿಗೆ ಸ್ವಸ್ವರೂಪಭೂತ ಆನಂದವನ್ನು ಅಭಿವ್ಯಕ್ತಿ ಗೊಳಿಸಿ,**ಸುಖಪ್ರದ**–ಇಂತು, ಇಹಪರಗಳಲ್ಲಿ ಆನಂದದಾಯಕನಾಗಿ, **ಬೆಟ್ಟವ**–ಮಂದರಗಿರಿಯನ್ನು, **ಬೆನ್ನಿಲಿ**–ಕೂರ್ಮರೂಪದಿಂದ ತನ್ನ ಬೆನ್ನಿನ ಡುಬ್ಬದ ಮೇಲೆ, **ವಹಿಸಿ**–ಹೊತ್ತುಕೊಂಡು, **ದ್ರುಹಿಣ ಮೊದಲಾದವರಿಗೆ**–ಬ್ರಹ್ಮಾದಿ ದೇವತಾವರ್ಗಕ್ಕೆ, – **ಅಮೃತವ ಉಣಿಸಿದ**–ಅಮೃತಪ್ರಾಶನ ಮಾಡಿಸಿದನು. **ಅಹಿರತನ**–ಅಯೋಗ್ಯರಾದ, ತಮೋಯೋಗ್ಯರಾದ ದೈತ್ಯರನ್ನು, **ಮುರಿದನು**–ನಿಗ್ರಹಿಸಿದನು ॥೧೦॥

# ವ್ಯಾಖ್ಯಾನಗಳು

## ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀದೇವರು ಜೀವರಿಗೆ ಜೀವನವನ್ನು ಉಂಟುಮಾಡಿದ್ದಾನೆಂತ ಹೇಳ ತಾರೆ.

ಮಾತಾಪಿತೃಗಳ ಅಂತರ್ಗತನಾಗಿ, ಅವರ ದ್ವಾರಾ ಪಾಂಚಭೌತಿಕ ಸ್ಥೂಲದೇಹಗಳ ಮಾತೃ ಉದರದಲ್ಲಿ ನಿರ್ಮಾಣಮಾಡಿ, ಜೀವರನ್ನ ಗರ್ಭ ದಿಂದ ಹೊರಗೆ ಸೃಷ್ಟಿಮಾಡಿದ ಪರಮಾತ್ಮನು, ಆಯಾ ಪ್ರಾಣಿಗಳ ಆಹಾರ ವನ್ನ ಕೊಡದೆ ಇರತಾನೆಯೆ ? ತಾಯಿಸ್ತನದಲ್ಲಿ ಶಿಶುಸಂರಕ್ಷಣಾರ್ಥ, ಶಿಶು ಜನಿಸುವುದಕ್ಕೆ ಪೂರ್ವದಲ್ಲೇ ಕ್ಷೀರವನ್ನು ಸಿದ್ಧಮಾಡಿ ಇಡಲಿಲ್ಲವೆ ? ತದ್ವತ್ ಪೂರ್ವಜನ್ಮಕರ್ಮಾನುಸಾರ ಜನನಾರಭ್ಯ ಮರಣಾಂತವರಿಗೂ ಭೋಜನಕ್ಕೆ ಯೋಗ್ಯವಾದ ಆಹಾರ ಸಿದ್ಧಮಾಡಿ ಕೊಡತಲೇ ಇದ್ದಾನೆ. ಆದ್ದರಿಂದ ಈಶನಿಂದ ದಾವಕಾಲಕ್ಕೂ ಏನು ಲಭ್ಯವಾಗೆತದೋ ಅದರನ್ನ ಭುಂಜಿಸುತ್ತ,

ಅಧಿಕ ಆಶಾಪಡಾಬ್ಯಾಡಾ ಎಂತ ತಾತ್ಪರ್ಯ. ಆದ್ದರಿಂದ ಈ ಪರಮಾತ್ಮನು ಬ್ರಹ್ಮಾದಿ ದೇವತೆಗಳಿಂದ ಪೂಜ್ಯ ಎಂತಲೂ, ಅವತಾರಾದಿ ರೂಪಗಳಿಂದ ಮಾಡಿದ ಚರಿತ್ರೆಗಳ ಸ್ಮರಿಸಿದವರಿಗೆ ಅಮಂಗಳವಾದ ಲಿಂಗದೇಹವನ್ನ ಭಂಗ ಪಡಿಸಿ ಮಂಗಳವಾದ ಸ್ವರೂಪಾನಂದವನ್ನ ಭೋಗಕ್ಕೆ ಕೊಡತಕ್ಕವ ಎಂತಲೂ, ಅಸದೃಶವಾದ ಅಪರಿಚ್ಛಿನ್ನವಾದ ಸ್ವಾಖ್ಯಗಳಾದ ಸದ್ಗುಣಗಳಿಂದ ಪೂರ್ಣ ಎಂತಲೂ ಸ್ತೋತ್ರಮಾಡತಕ್ಕವರಿಗೆ, ಇಹಲೋಕದಲ್ಲಿ ಸಂಸಾರದುಃಖದಿಂದ ದೂರಮಾಡಿ, ಸುಖಪ್ರದಗಳಾದ ಜ್ಞಾನಭಕ್ತಿ ವೈರಾಗ್ಯಗಳ ಕೊಟ್ಟೂನೂ, ಪರ ಲೋಕದಲ್ಲಿ ಜ್ಞಾನಭಕ್ತಿ ವೈರಾಗ್ಯಗಳಿಗೆ ಅನುಸರಿಸಿದ ಸುಖಪ್ರದಗಳಾದ ಲೋಕ ದಲ್ಲಿ ಇಟ್ಟೂನೂ, ಸರ್ವಕಾಲದಲ್ಲೂ ಇಂಥಾ ಸುಖವನ್ನು ಕೊಡೋವನಾಗ ತಾನೆ. ಮಂದರಪರ್ವತವ ಕೂರ್ಮರೂಪದಿಂದ ಬೆನ್ನಮ್ಯಾಲೆ, ತನ್ನ ನಂಬಿದ ವರಾದ ದೇವತೆಗಳಿಗೋಸ್ಕರ ಹೊತ್ತುಕೊಂಡು, ಕ್ಷೀರಸಮುದ್ರದಲ್ಲಿ ಪರ್ವತ ಮಥನದಿಂದ ಜನಿಸಿದ ಅಮೃತವನ್ನ ಬ್ರಹ್ಮಾದಿ ದೇವತೆಗಳಿಗೆ ಸ್ತ್ರೀರೂಪದಿಂದ ಅಮೃತ ಪರಿವೇಷಣ ಮಾಡಿ ಅಮೃತಪಾನ ಮಾಡಿಸಿ, ದೈತ್ಯರಿಗೆ ಅಮೃತಪಾನ ಇಲ್ಲದಂತೆ ಮಾಡಿ, ಅವರ ಆಶಾಪೂರ್ಣ ಮಾಡದೆ ಅವರನ್ನ ನಿಗ್ರಹ ಮಾಡಿ ದ್ದಾನೆ. ಆದಕಡಿಯಿಂದ ಪರಮಾತ್ಮ ತನ್ನ ನಂಬಿದವರನ್ನ ಉದ್ಧಾರ ಮಾಡಿ ಅವರವರಿಗೆ ಯೋಗ್ಯವಾದ ಅನ್ನಾದಿಗಳ ಕಲ್ಪನ ಮಾಡಿದ್ದಾನೆ. ಇದರನ್ನ ತಿಳಿದು ವೃಥಾ ಶ್ರಮಪಡದೆ ಪರಮಾತ್ಮನ್ನ ನಂಬಿ ಉದ್ಧಾರವಾಗಬೇಕು ಎಂತ ತಾತ್ಪರ್ಯ. ॥೧೦॥

ಭಾವಪ್ರಕಾಶಿಕೆ

ಸರ್ವಪ್ರಾಣಿಗಳಿಗೂ ಶರೀರವನ್ನು ಕೊಟ್ಟು ಸೃಷ್ಟಿಸಿದ ಶ್ರೀಹರಿಯು ಅವರವರ ಯೋಗ್ಯತಾನುಸಾರವಾದ ಆಹಾರವನ್ನು ಕೊಡದೇ ಇರುವನೇ ? ಭಾಗವತ ಪ್ರಥಮಸ್ಕಂಧದಲ್ಲಿ ಅಹಸ್ತಾನಿಸಹಸ್ತಾನಾಮಪದ್ಯೋದ್ವಿ ಚತುಷ್ಪದಾಂ ॥ ಅಣೂನಿತಾತ ಮಹತಾಂ ಜೀವೋಜೀವಸ್ಯ ಜೀವನಂ– ಕೈ ಉಳ್ಳ ಮನುಷ್ಯಾದಿಗಳಿಗೆ ಕೈಯಿಲ್ಲದ ಪ್ರಾಣಿಗಳೂ, ತೃಣಾದಿಗಳೂ ಜೀವರೇ ಆದುದರಿಂದ ಸಸ್ಯಾದಿಗಳಿಂದ ಹುಟ್ಟುವ ಭತ್ತ, ಜೋಳ ಮೊದಲಾದವೆಲ್ಲವೂ ಇವರಲ್ಲೇ ಸೇರಿದಂತಾಯಿತು. ಇಂತಹ ವಸ್ತುಗಳನ್ನು ಆಹಾರವೆಂದು

ಕಲ್ಪಿಸಿರುವನು. ಎರಡು ಕಾಲು, ನಾಲ್ಕು ಪಾದಗಳುಳ್ಳ ಪ್ರಾಣಿಗಳಿಗೆ, ಕಾಲಿಲ್ಲದ ಪ್ರಾಣಿಗಳು, ಅಂದರೆ ಗೋವು, ಕುದುರೆ ಆನೆ ಮೊದಲಾದುವುಗಳಿಗೆ ತೃಣಗಳು, ಸೊಪ್ಪುಗಳು, ಧಾನ್ಯಗಳು ಇಂತಹ ಆಹಾರಗಳನ್ನು ಕ್ಲುಪ್ತ ಮಾಡಿರುವನು. ಸಣ್ಣ ಸಣ್ಣ ಪ್ರಾಣಿಗಳನ್ನು ದೊಡ್ಡ ದೊಡ್ಡ ಪ್ರಾಣಿಗಳಿಗೆ ಆಹಾರವನ್ನಾಗಿ ಮಾಡಿರುವನು. ಅಂದರೆ ಹುಲಿ ಮೊದಲಾದುವುಗಳಿಗೆ ಕುರಿ, ಮೇಕೆ ಮೊದಲಾದುವುಗಳನ್ನೂ, ನಾಯಿ ಮೊದಲಾದುವುಗಳಿಗೆ ಅವುಗಳಿಗಿಂತಲೂ ಸಣ್ಣವಾದ ಬೆಕ್ಕು ಮೊದಲಾದುವುಗಳನ್ನೂ, ಬೆಕ್ಕು ಮೊದಲಾದುವುಗಳಿಗೆ ಇಲಿ ಮೊದಲಾದುವುಗಳನ್ನೂ, ಕೋಳಿ, ಕಾಗೆ, ಗುಬ್ಬಿ, ಮೊದಲಾದುವುಗಳಿಗೆ ಸಣ್ಣ ಸಣ್ಣ ಕ್ರಿಮಿಕೀಟಾದಿಗಳನ್ನೂ, ನೀರಿನೊಳಗಿರುವ ಮತ್ಸ್ಯಾದಿಗಳಿಗೆ ಅಲ್ಲಿರುವ ಜಲಚರಪ್ರಾಣಿಗಳನ್ನೂ ಆಹಾರವನ್ನಾಗಿ ಕಲ್ಪಿಸಿರುವನು. ಅಂತು ಒಂದು ಜೀವಕ್ಕೆ ಮತ್ತೊಂದು ಜೀವವನ್ನು ಜೀವನ ಎಂದು ಕಲ್ಪಿಸಿರುವನು. ನಾವು ಭ್ರಾಂತಿಯಿಂದ ನಮ್ಮ ಹೆಂಡಿರು ಮಕ್ಕಳನ್ನು ಸಾಕುತ್ತೇವೆಂದು ತಿಳಿದುಕೊಳ್ಳುವೆವೇ ಹೊರತು ಸಾಕಲು ನಾವು ಸ್ವತಂತ್ರರಲ್ಲ. ಏಕೆಂದರೆ ಕಾಲಕರ್ಮಗುಣಾಧೀನೋ ದೇಹೋಯಂ ಪಾಂಚಭೌತಿಕಃ ॥ ಕಥಮನ್ಯಾಂಸ್ತು ಗೋಪಾಯೇತ್ಸರ್ಪಗ್ರಸ್ತೋ ಯಥಾಪರಂ—ಕಾಲ, ಪ್ರಾರಬ್ಧ, ಕರ್ಮ, ಪ್ರಕೃತಿ, ಗುಣಗಳು ಇವುಗಳಿಗೆ ಅಧೀನವಾದ ಪಂಚಭೂತಗಳಿಂದಾದ ಶರೀರವಿದು. ಅಂದರೆ ನಮ್ಮ ಶರೀರವೇ ನಮಗೆ ಸ್ವಾಧೀನವಿಲ್ಲ. ಬಾಲ್ಯದಲ್ಲಿ ಪರಾಧೀನತೆ ಎಲ್ಲರಿಗೂ ತಿಳಿದಿದೆ. ಮುದುಕನಾದ ಮೇಲೂ ಪರಾಧೀನವೆಂಬುವದು ತಿಳಿದ ವಿಷಯವೆ. ಮಧ್ಯಕಾಲದಲ್ಲಿ ನಾನು ಸ್ವತಂತ್ರದಿಂದ ಸಂಪಾದನೆ ಮಾಡುತ್ತೇನೆಂದು ತಿಳಿದಿರುವನು. ಅದು ಭ್ರಾಂತಿ. ಆಗಲೂ ಇವನ ಪ್ರಾಚೀನ ಕರ್ಮಾನುಸಾರವಾಗಿ ನಡೆಯುವುದೇ ಹೊರತು, ನಾವು ಏನು ಪ್ರಯತ್ನ ಮಾಡಿದರೂ ನಮ್ಮ ಇಷ್ಟಾನುಸಾರವಾಗಿ ನಡೆಯುವಂತಿಲ್ಲ. ಇಷ್ಟೇಕೆ! ನಮ್ಮ ದೇಹವು ನಮ್ಮ ಸ್ವಾಧೀನದಲ್ಲಿದ್ದುದೇ ಆದರೆ ನಾವು ಮುದುಕರಾದರೆ ಹಲ್ಲು ಹೋಯಿತು; ಕಿವಿ ಹೋಯಿತು; ಕಣ್ಣು ಹೋಯಿತು ಎಂದು ವ್ಯಸನಪಡುವುದೇಕೆ? ಮುಖ ವಿಕಾರ ಹೊಂದುವುದೇಕೆ? ನಮ್ಮ ಸ್ವತಂತ್ರದಿಂದ ನಾವು ಸ್ವೇಚ್ಛೆಯಾಗಿ ಯೌವನದಲ್ಲಿ ಹೇಗೋ ಹಾಗೆ ನಮ್ಮ ಶರೀರವನ್ನು ಇಟ್ಟುಕೊಳ್ಳಬಹುದಾಗಿತ್ತು. ಹಾಗೇಕಿಲ್ಲ! ಇದು

ನೋಡುವಾಗಲೇ ನಮ್ಮ ದೇಹವು ನಮ್ಮ ಸ್ವಾಧೀನದಲ್ಲಿಲ್ಲವೆಂದು ಗೊತ್ತಾಗುವು ದಿಲ್ಲವೇ? ಹೀಗಿರಲು ಮತ್ತೊಬ್ಬರನ್ನು ಕಾಪಾಡುವುದೆಂತು? ನಾವು ಕಾಪಾಡುತ್ತೇವೆಂದು ಹೇಳುವುದು ಹೇಗಿದೆಯೆಂದರೆ "ಸರ್ಪಗ್ರಸ್ತೋ ಯಥಾಪರಂ" ಒಂದು ಹಾವಿನ ಬಾಯಲ್ಲಿ ಮರಣೋನ್ಮುಖವಾಗಿ ಸಿಕ್ಕಿ ಕೊಂಡಿರುವ ಒಂದು ಕಪ್ಪೆಯು ಮತ್ತೊಂದು ಹಾವಿನ ಬಾಯಿಯಲ್ಲಿ ತಗಲಿ ಕೊಂಡು ಪ್ರಾಣ ಬಿಡುತ್ತಿರುವ ಕಪ್ಪೆಯನ್ನು ಬಿಡಿಸುತ್ತೇನೆಂದು ಪ್ರಯತ್ನ ಪಡುವುದು ಹೇಗೋ ಹಾಗೆ. ಆದ್ದರಿಂದ ದೇವತಾವಂದ್ಯನೂ, ಮಂಗಳ ಚರಿತನೂ, ಸದ್ಗುಣಪೂರ್ಣನೂ ಆದ ಶ್ರೀಹರಿಯನ್ನು ನೀನೇ ಗತಿಯೆಂದು ನಂಬಿದರೆ ನಮ್ಮನ್ನು ರಕ್ಷಿಸದೇ ಬಿಡುವನೇ? ಇಹ ಲೋಕದಲ್ಲೂ, ಪರ ಲೋಕದಲ್ಲೂ ನಮಗೆ ಸುಖವನ್ನು ಕೊಟ್ಟು ನಮ್ಮ ದುಃಖಗಳನ್ನು ಪರಿಹರಿಸಿ ಸರ್ವಕಾಲದಲ್ಲೂ, ಸಂರಕ್ಷಣೆ ಮಾಡೇ ಮಾಡುವನು. ಇಂದ್ರಾದಿ ದೇವತೆಗಳು ರಾಜ್ಯಭ್ರಷ್ಟರಾಗಿ ಪರಮಾತ್ಮನನ್ನು ಮೊರೆ ಹೊಕ್ಕಾಗ ಪರಮಾತ್ಮನು ಅಮೃತ ಮಥನ ಕಾಲದಲ್ಲಿ ಕಡಗೋಲು ರೂಪವಾದ ಮಂದರಪರ್ವತವು ಕ್ಷೀರ ಸಮುದ್ರದಲ್ಲಿ ಮುಣಗಿ ಹೋಗಲು, ಕೂರ್ಮರೂಪವನ್ನು ತಾಳಿ ಬೆಟ್ಟವನ್ನು ಹೊತ್ತುಕೊಂಡು, ದೇವತೆಗಳಿಗೋಸ್ಕರ ತಾನೇ ಅಮೃತಮಥನ ಮಾಡಿ, ಇಂದ್ರಾದಿ ದೇವತೆಗಳಿಗೆ ಅಮೃತವನ್ನುಣಿಸಿ, ಅವರ ಶತ್ರುಗಳನ್ನು ಸಂಹಾರ ಮಾಡಲಿಲ್ಲವೆ? ಅವರು ನಂಬಿದಂತೆ ನಾವೂ ನಂಬಿದರೆ ನಮ್ಮನ್ನೇಕೆ ಸಂರಕ್ಷಣೆ ಮಾಡಲಾರನು? ಮಾಡೇಮಾಡುವನು. ಇಲ್ಲಿ ದ್ರುಹಿಣ ಮೊದಲಾದವರಿಗೆ ಎಂಬ ಪದದಲ್ಲಿ ದ್ರುಹಿಣ ಅಂದರೆ ಬ್ರಹ್ಮ ಮೊದಲಾದ ದೇವತೆಗಳಿಗೆ ಎಂದರ್ಥವಾದರೂ, ಬ್ರಹ್ಮದೇವರಿಗೆ ಅಮೃತಪ್ರಾಶನೆ ಮಾಡಿದ್ದರಿಂದ ಅಮರ ರಾಗಬೇಕಾಗಿಲ್ಲ, ಅವರಿಗೆ ಬ್ರಹ್ಮಕಲ್ಪ ೧ ಕಲ್ಪಾಯುಷ್ಯ ಮೊದಲೇ ಕ್ಲುಪ್ತ ವಾಗಿರುವುದು, ರುದ್ರ ಗರುಡ ಶೇಷರಿಗೂ ಇಲ್ಲ.. ಇಂದ್ರಾದಿಗಳಿಗೆ ಯುದ್ಧ ದಲ್ಲಿ ಮರಣ ಇಲ್ಲದೆ ಇರುವುದಕ್ಕಾಗಿ ಅಮೃತಪ್ರಾಶನದಿಂದ ಅಮರರಾಗ ಬೇಕೆಂದು ಮೊದಲಿನಿಂದಲೂ ಕ್ಲುಪ್ತವಾಗಿರುವುದು. ಆದ್ದರಿಂದ ಬ್ರಹ್ಮದೇವರು ಮೊದಲಾದವರು ಅಂದರೆ ಬ್ರಹ್ಮದೇವರು ಯಾವದೇವತೆಗಳಿಗೆ ಮೊದಲಾಗಿರು ವರೋ ಆ ದೇವತೆಗಳೆಂದರೆ, ಇಂದ್ರಾದಿಗಳೆಂದು ಅರ್ಥಮಾಡತಕ್ಕದ್ದು. ಭಾಗವತ ಚತುರ್ಥ ಸ್ಕಂಧದಲ್ಲಿ ದಕ್ಷಾಧ್ವರಧ್ವಂಸವನ್ನು ಹೇಳುವಾಗ ಬ್ರಹ್ಮಾದಿ

ಗಳು ರುದ್ರದೇವರಿಗೆ ನಮಸ್ಕಾರ ಮಾಡುತ್ತಿರುವರು ಎಂಬಂತೆ ಬ್ರಹ್ಮಾದಯಃ ಸ್ತಮುವಕೀರ್ಯಜಟಾಃ ಸ್ಮಶಾನೇ ಎಂಬ ವಾಕ್ಯದಿಂದ ತೋರುವುದು. ಅಲ್ಲಿ ಬ್ರಹ್ಮಾದಯಃ ಎಂಬ ಪದಕ್ಕೆ ಬ್ರಹ್ಮಾ ಆದಿಃ ಪಿತಾ ಯೇಷಾಂತೆ ಬ್ರಹ್ಮಾದಯಃ ಸನಕಾದಯಃ ಎಂದು ವ್ಯಾಖ್ಯಾನ ಮಾಡಿರುವರು. ಅಂದರೆ ಬ್ರಹ್ಮದೇವರು ಯಾರಿಗೆ ಆದಿಯೋ ಅಂದರೆ ತಂದೆಯೋ ಅವರು ಬ್ರಹ್ಮಾದಿಗಳು ಎಂದು ಅರ್ಥ. ಆದ್ದರಿಂದ ಬ್ರಹ್ಮದೇವರ ಮಕ್ಕಳಾದ ಸನಕಾದಿಗಳಿಗೆ ಬ್ರಹ್ಮಾದಿಗಳು ಎಂದು ಹೇಳಿರುವರು. ಇಲ್ಲೂ ಬ್ರಹ್ಮದೇವರು ರುದ್ರದೇವರು ಅಮೃತಪ್ರಕಾಶನ ಕಾಲದಲ್ಲಿ ಅಲ್ಲಿ ಇರಲಿಲ್ಲವೆಂದು ಭಾಗವತಾದಿಗಳಲ್ಲಿ ಇರುವದರಿಂದ ಇಂದ್ರ ಮೊದಲಾದವರೆಂದು ಅರ್ಥಮಾಡುವುದು, ನ್ಯಾಯ. ॥೧೦॥

### ಭಾವದರ್ಪಣ

ದೇಹಗಳೀತಿ ॥೧೦॥

### ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ದೇಹ ಇತಿ ॥ ಇಹನೆ ಇದ್ದಾನೆ ॥೧೦॥

### ಕನ್ನಡಾರ್ಥ

ಸೃಷ್ಟಿಸಿದವನು ಸಂರಕ್ಷಿಸಿಯೇ ತೀರುತ್ತಾನೆ. ಆದುದರಿಂದ ರಕ್ಷಣೆಗಾಗಿ ಸೃಷ್ಟಿಕರ್ತನನ್ನು ಬಿಟ್ಟು ಅನ್ಯರಲ್ಲಿ ಮೊರೆಯಿಡಬೇಡವೆಂದು ಆಕೂತದಿಂದ ಉಪದೇಶಿಸುತ್ತಾರೆ, ಈ ಪದ್ಯದಿಂದ ॥೧೦॥

### ಶ್ರೀಗುರುಹೃದಯಪ್ರಕಾಶಿಕೆ

ದೇವರ ಸ್ಮರಣೆ ಬಿಟ್ಟು ಆಹಾರಾರ್ಥ ಅತ್ಯಾಯಾಸಪಡಬೇಡವೆಂತ ಸದೃಷ್ಟಾಂತ ಬೋಧಿಸುತ್ತಾರೆ, ದೇಹವೆಂದು. ಗರ್ಭಗತಜೀವನು ಯತ್ನವಿಲ್ಲದಿದ್ದರೂ ಮಾತಾಪಿತೃಗಳ ಶುಕ್ಲಶೋಣಿತಗಳನ್ನು ಪರಿಣಾಮಮಾಡಿಸಿ,

ದೇಹಾಕಾರ ಮಾಡಿಕೊಡುವ ದೇವರು, ಹೊರಗೆ ಆಹಾರಾದಿಗಳನ್ನು ಕರ್ಮಾನುಸಾರ ಕೊಟ್ಟೇಕೊಡುತ್ತಾನೆಂದು ತಿಳಿದು, ಶ್ರೀಹರಿಸ್ಮರಣೆ ಬಿಡಬಾರದೆಂತ ಅಭಿಪ್ರಾಯ. ನಿರಂತರ ಸದ್ಗುಣಭರಿತನಾದ, ಐಹಿಕ ಪಾರತ್ರಿಕ ಸುಖಪ್ರದನಾದ, ಶುಭಚರಿತನಾದ ದೇವರು ಕೂರ್ಮರೂಪದಿಂದ ಮಂದರಪರ್ವತ ಧರಿಸಿ, ದ್ರುಹಿಣನೆಂಬ ಬ್ರಹ್ಮ ಮೊದಲಾದವರಿಗೆ ಅಮೃತ ಉಣಿಸಿದ, ಅಹಿತರಾದ ಅಸುರರನ್ನು ಮುರಿದ ಎಂತ ಭಾಗವತಾದಿಶಾಸ್ತ್ರ ಸಹಾ ಈ ಮೇಲೆ ಹೇಳಿದ ಯುಕ್ತಿಗೆ ಇದೆ ಎಂದು ಆಶಯ ॥೧೦॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪಂಚಾಗ್ನಿಸಂಧಿಯಲ್ಲಿ ವಿವರಿಸಿರುವಂತೆ, ಜೀವನು, ಆಕಾಶಾಗ್ನಿಯಿಂದ ಪರ್ಜನ್ಯಾಗ್ನಿಯಲ್ಲಿ ಹೋಮಿಸಲ್ಪಟ್ಟು ಮಳೆಯ ದ್ವಾರಾ ಭೂಮಿಯನ್ನು ಸೇರಿ ಧಾನ್ಯಾದಿಗಳಲ್ಲಿ ಸೂಕ್ಷ್ಮರೂಪದಿಂದ ಪೃಥ್ವ್ಯಗ್ನಿಯಿಂದ ತಂದೆಯ ರೇತಸ್ಸನ್ನು ಸೇರುವನು. ಪಿತಾಗ್ನಿಯಿಂದ ಯೋಷಿತಾಗ್ನಿಯಾದ ಮಾತೃಗರ್ಭವನ್ನು ಸೇರಿ, ಶುಕ್ಲಶೋಣಿತಸಂಬಂಧದಿಂದ ಈ ಪಾಂಚಭೌತಿಕದೇಹವನ್ನು ಪಡೆದು ಶ್ರೀಪರಮಾತ್ಮನ ಆದೇಶದಂತೆ ಅಪಾನವಾಯುವಿನ ದೆಸೆಯಿಂದ ಮಾತೃಗರ್ಭದಿಂದ ಹೊರಬಂದು, ಭೂಮಿಯಲ್ಲಿ ಜನಿಸುವನು. ಇದು ಜೀವರ ಜನನ ಕ್ರಮ.

ಶ್ರೀಪರಮಾತ್ಮನು ಮಾತಾಪಿತೃಗಳಲ್ಲಿ ಅಂತರ್ಯಾಮಿಯಾಗಿದ್ದು ಜೀವರ ಜನನ ರೂಪವಾದ ಈ ಸೃಷ್ಟಿಚಕ್ರದ ವ್ಯಾಪಾರವನ್ನು ಮಾಡಿಸುತ್ತಿರುವನು. ಜೀವನ ಸ್ವರೂಪ ಅನಾದಿನಿತ್ಯ. ಅದರ ಸುತ್ತಲೂ ಆವರ್ಕರೂಪದಲ್ಲಿ ಅನಾದಿ ಲಿಂಗದೇಹವಿದೆ. ಇನ್ನು ಅದರ ಮೇಲಿರುವ ಅನಿರುದ್ಧ ಶರೀರವು ಜನ್ಮಾಂತರಗಳಿಗೆ ಕಾರಣಭೂತವಾದ ಶರೀರವು. ಅದರ ಮೇಲೆ ನಮಗೆ ಪ್ರತ್ಯಕ್ಷಗೋಚರವಾಗಿರುವ ಪಾಂಚಭೌತಿಕ ಸ್ಥೂಲದೇಹವು. ಈ ಶರೀರವು ಸಾಧನೆಗಾಗಿ ಶ್ರೀಶನಿಂದ ನಮಗೆ ಪ್ರಾಪ್ತಿಯಾಗಿದೆ. ಇಂತಹ ಸಾಧನ ಶರೀರವನ್ನು ಕೊಟ್ಟಿರುವ ಸರ್ವನಿಯಾಮಕನು ಆಯಾಯಾ ಜೀವರಿಗೆ ದೇಹೋಪಚಯಕ್ಕಾಗಿ ಅವರವರ ಆಹಾರಗಳನ್ನು ನೀಡದಿರುವನೇ ?

ಬೆಟ್ಟದಾ ತುದಿಯಲ್ಲಿ ಪುಟ್ಟಿರುವ ವೃಕ್ಷಕ್ಕೆ ಕಟ್ಟೆಯನ್ನು ಕಟ್ಟಿ ನೀರೆರೆದ ವರಾರು ಎಂದಿದ್ದಾರೆ ಶ್ರೀಕನಕದಾಸವರೇಣ್ಯರು. ಸೂಕ್ಷ್ಮ ಜಂತುಗಳಿಂದ ಪ್ರಾರಂಭಿಸಿ ಬೃಹದಾಕಾರವಾದ ಸಕಲ ಪ್ರಾಣಿಗಳ ಪರ್ಯಂತ, ಅವರವರ ಆಹಾರಗಳನ್ನು ಇಟ್ಟಿದ್ದಾನೆ ಕರುಣಾಸಾಗರನಾದ ಶ್ರೀಪರಮಾತ್ಮನು.

ಸಾತ್ವಿಕ ಮನೋಭಾವವುಳ್ಳವರಾದುದರಿಂದ ದೇವತೆಗಳಿಗೆ ಸುಮನಸರು ಎಂದು ಹೆಸರು. ಅಂತಹ ದೇವತಾವರ್ಗದಲ್ಲಿ ಶ್ರೇಷ್ಠರು ಬ್ರಹ್ಮದೇವರು. ಅವ ರಿಂದ ಕೋಟಿ ಗುಣಗಳಿಂದ ಅಧಿಕಳು ಶ್ರೀರಮಾ. ಪರನಾಮಕಳಾದ ಲಕ್ಷ್ಮಿಗಿಂತ ಅನಂತಾನಂತ ಗುಣಗಳಿಂದ ಶ್ರೇಷ್ಠನು ಸರ್ವೋತ್ತಮನಾದ ಸ್ವರಮಣನು. ಸರ್ವದೇವತೆಗಳಿಂದಲೂ ಅತ್ಯಂತ ಶ್ರೇಷ್ಠನಾದ ಶ್ರೀಹರಿಯೇ ಸುಮನಸಮ ಹಿತನು. ಮಹಿಮಾ ಎಂದರೆ ಪೂಜ್ಯ ಎಂದರ್ಥ. ಇದರಿಂದಲೇ ಮಹಿದಾಸ ನಾಮಕನು. ರಮಾಬ್ರಹ್ಮಾದಿಗಳೆಲ್ಲರೂ ಯಾರಿಗೆ ದಾಸಾನುದಾಸರೋ ಅಂತಹ ಶ್ರೀಪರಮಾತ್ಮನೇ ಮಹಿದಾಸನಾದ ಸುಮನಸಮಹಿತನು.

ಅವನ ದಿವ್ಯಚರಿತ್ರೆಯ ಶ್ರವಣದಿಂದ ಭವಕ್ಲೇಶಗಳನಾಶ. ಯಾವಾತನ ಅಂಚಿತ್ಯ ಮಹಿಮೆಯಿಂದ ಸಚ್ಚೇತನರ ಸ್ವಸ್ವರೂಪಗತ ಆನಂದದ ಅಭಿವ್ಯಕ್ತಿಯಾಗುವುದೋ ಅಂತಹ ಶುಭಚರಿತನೇ ಮಂಗಳಚರಿತನು.

ಸಮನಸಮಹಿಮನೂ, ಮಂಗಳ ಚರಿತನೂ ಆದ ಆ ಶ್ರವಣ ಮಂಗಳನಾಮಧೇಯನು ಅನಂತ ಕಲ್ಯಾಣಗುಣಗಣಪರಿಪೂರ್ಣನು. ಅತ ಏವ ಸಮಸ್ತ ದೋಷವಿದೂರನು ಪೂರ್ಣಾನಂದ ಜ್ಞಾನಮಯನು.

ತನ್ನ ನಂಬಿದ ಭಕ್ತರಿಗೆ, ಸಾಧನಶರೀರವನ್ನು ಕೊಟ್ಟು, ಪ್ರಾಣ ಧಾರಣೆಗೆ ಆಹಾರವನ್ನು ಕಲ್ಪಿಸಿ. ಇಹದಲ್ಲಿ ಪ್ರಾಪಂಚಿಕ ಸುಖೋಪಭೋಗ ಗಳನ್ನು ನೀಡುವನು. ಪರದಲ್ಲಿ ಕರ್ಮವಿಮೋಚನೆಗೈದು ನಿತ್ಯಾನಂದರೂಪವಾದ ಶಾಶ್ವತಮುಕ್ತಿಸುಖವನ್ನೀಯುವನು.

ಇದಕ್ಕೆ ಕೂರ್ಮಾವತಾರದ ದೃಷ್ಟಾಂತವನ್ನು ಕೊಡುತ್ತಾರೆ. ದಾಸರಾಯರು. ಹಿಂದೆ ಅಮೃತೋತ್ಪತ್ತಿಗಾಗಿ ದೇವಾಸುರರು ಮಂದರಪರ್ವತವನ್ನು ಕಡಗೋಲಾಗಿಯೂ, ವಾಸುಕಿಯನ್ನು ಹಗ್ಗವಾಗಿಯೂ ಮಾಡಿಕೊಂಡು, ಕ್ಷೀರಸಮುದ್ರವನ್ನು ಕಡೆದರು. ಆಗ ಮಂದರಗಿರಿಯು ಭಾರದಿಂದ ಸಮುದ್ರದಲ್ಲಿ ಮುಳುಗಿತು. ಸರ್ವರಿಂದಲೂ ಪ್ರಾರ್ಥ್ಯಮಾನನಾದ ಶ್ರೀಪರಮಾತ್ಮನು ಕೂರ್ಮರೂಪವನ್ನು ತಾಳಿ, ತನ್ನ ಬೆನ್ನಿನ ಡುಬ್ಬದ ಮೇಲೆ ಆ ಮಂದರಾಚಲವನ್ನು ಎತ್ತಿ ಹಿಡಿದನು. ಕೊನೆಯಲ್ಲಿ ಧನ್ವಂತ್ರೀರೂಪೀ ಶ್ರೀಪರಮಾತ್ಮನು ಅಮೃತದಿಂದ ತುಂಬಿದ ಸುವರ್ಣಕಳಸವನ್ನು ಹಿಡಿದುಕೊಂಡು ಸಮುದ್ರದಿಂದ ಮೇಲೆದ್ದನು. ಆಗ ದುರುಳ ದಾನವರು ಅಮೃತವನ್ನು ಕಸಿದುಕೊಳ್ಳಲು ಮುನ್ನುಗ್ಗಿ ಎರಗಿದರು. ಆಗ ಶ್ರೀಪರಮಾತ್ಮನು ಮೋಹಿನೀರೂಪಧಾರಿಯಾಗಿ ಅಸುರರನ್ನು ತನ್ನ ಅಪೂರ್ವರೂಪಲಾವಣ್ಯಗಳಿಂದ ಮೋಹಿಸಿದನು. ಪರಮಸಾತ್ವಿಕಸ್ವಭಾವವುಳ್ಳ ದೇವತೆಗಳಿಗೆ ಅಮೃತ ಬಡಿಸಿದನು. ದುರುಳರೂ ಲೋಕಕಂಟಕರೂ, ಅಯೋಗ್ಯಸ್ವಭಾವದರೂ ಆದ ಅಸುರರನ್ನು ನಿಗ್ರಹಿಸಿದನು.

## ವಿಶೇಷ ವಿಚಾರ

ಬ್ರಹ್ಮದೇವರು ಅಮೃತನಾಮಕರು. ಅವರು ಸಮುದ್ರಮಥನ ಸಮಯದಲ್ಲಿ ದೇವತಾವರ್ಗದಲ್ಲಿರಲಿಲ್ಲ. ಋಜುಗಳಾದ ಬ್ರಹ್ಮವಾಯುಗಳಿಗೆ ಅಮೃತ ಪ್ರಾಶನದ ಅಗತ್ಯವೇ ಇಲ್ಲ. ಪ್ರಸಕ್ತ ಪದ್ಯದಲ್ಲಿ ದ್ರುಹಿಣ ಮೊದಲಾದವರಿಗೆ ಎಂದಿದೆ. "ದ್ರುಹಿಣ" ಎಂದರೆ "ಬ್ರಹ್ಮ" ಎಂದರ್ಥ. ಅಮೃತಪ್ರಾಶನ ಮಾಡಿಸಿದ್ದು ಇಂದ್ರಾದಿ ದೇವತೆಗಳಿಗೆ. ಈ ಕಾರಣದಿಂದ ಬ್ರಹ್ಮನನ್ನು ಆದಿ (ಮೂಲ) ಯಾಗಿ ಉಳ್ಳ ಇಂದ್ರಾದಿಗಳೆಂದು ಅರ್ಥಮಾಡಬೇಕು. ಇದು ಶ್ರೀಮದ್ಭಾಗವತದ ಹೃದ್ಗತಭಾವ ॥೧೦॥

# ಪದ್ಯ—೧೧

**ಮೂಲ :–**

ದ್ರುಹಿಣ ಮೊದಲಾದಮರರಿಗೆ ಸ ।
ನ್ಮಹಿತ ಮಾಯಾರಮಣ ತಾನೇ ।
ಸ್ವಹನೆನಿಸಿ ಸಂತೃಪ್ತಿ ಬಡಿಸುವ ಸರ್ವಕಾಲದಲಿ ॥
ಪ್ರಹಿತ ಸಂಕರುಷಣನು ಪಿತೃಗಳಿ ।
ಗಹರನೆನಿಪ ಸ್ವಧಾಖ್ಯರೂಪದಿ ।
ಮಹಿಜ ಫಲತೃಣ ಪೆಸರಿನಲಿ ಪ್ರದ್ಯುಮ್ನ ಅನಿರುದ್ಧ ॥೧೧॥

**ಅವತರಣಿಕೆ :–**

ಬ್ರಹ್ಮಾದಿ ದೇವತೆಗಳಿಗೆ ಪೂಜ್ಯನಾದ ಮಾಯಾಪತಿ ಶ್ರೀವಾಸುದೇವನು ಆಯಾಯಾ ಪ್ರಾಣಿಗಳಿಗೆ ತೃಪ್ತಿಪ್ರದನಾಗಿರುವನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ದ್ರುಹಿಣ**–ಬ್ರಹ್ಮದೇವರೇ, **ಮೊದಲಾದ**–ಆದಿಯಾಗಿ, **ಅಮರರಿಗೆ**–ದೇವತೆಗಳಿಗೆ, **ಸನ್ಮಹಿತ**–ಪೂಜ್ಯನೂ, ಸರ್ವೋತ್ತಮನೂ ಆದ, **ಮಾಯಾ ರಮಣ**–ಮಾಯಾಪತಿಯಾದ ಶ್ರೀವಾಸುದೇವನು, **ತಾನೇ** – ಸ್ವಯಂ, **ಸ್ವಹನೆನಿಸಿ**–ಸ್ವಾಹಾ ಎಂದು ದೇವತೆಗಳ ಉದ್ದಿಶ್ಯವಾಗಿ ಕೊಡುವ ಆಹುತಿಗಳಲ್ಲಿ, ಸ್ವಾಹಾನಾಮಕನಾಗಿ, **ಸರ್ವಕಾಲದಲಿ**—ನಿರಂತರ, **ಸಂತೃಪ್ತಿ ಬಡಿಸುವ**–ದೇವತೆಗಳಿಗೆ ತೃಪ್ತಿಪಡಿಸುವನು, **ಪ್ರಹಿತ**–ಪ್ರಕರ್ಷೇಣ ಮುಕ್ತಿ

ಯೋಗ್ಯರಿಗೆ ಹಿತನಾದ, **ಸಂಕರ್ಷಣನು**–ಜಯಾರಮಣ ಸಂಕರ್ಷಣನು, **ಪಿತೃಗಳಿಗೆ**–ಪಿತೃದೇವತೆಗಳಿಗೆ, **ಅಹರನೆನಿಪ**– ಆಹಾರಪ್ರದನೆನಿಸುವನು, **ಸ್ವಧಾಖ್ಯರೂಪದಿ**–ಸ್ವಧಾ ಎಂಬ ಹೆಸರಿನಿಂದ ಪಿತೃದೇವತೆಗಳಿಗೆ ಆಹಾರಪ್ರದನಾಗಿ ತೃಪ್ತಿಪಡಿಸುವನು. **ಪ್ರದ್ಯುಮ್ನ**–ಕೃತೀಪತಿ ಪ್ರದ್ಯುಮ್ನನು. **ಮಹಿಜ**-ಭೂಮಿಯಲ್ಲಿ ಬೆಳೆಯುವ, **ಫಲ**–ವೃಕ್ಷಗಳಲ್ಲಿ ಬಿಡುವ ರಸಭರಿತವಾದ ಫಲಗಳಲ್ಲಿರುವನು. **ಅನಿರುದ್ಧ**–ಅನಿರುದ್ಧನು, **ತೃಣ**–ಗೋವು ಇತ್ಯಾದಿ ಪಶು ಪ್ರಾಣಿಗಳು ತಿನ್ನುವ ಹುಲ್ಲಿನಲ್ಲಿ, **ಪೆಸರಿನಲಿ**–ಫಲನಾಮಕನಾಗಿ, . ತೃಣನಾಮಕನಾಗಿ ಇದ್ದು, ಧಾನ್ಯಗಳ ದ್ವಾರಾ ಮಾನವರಿಗೂ, ತೃಣಾದಿ ಆಹಾರವಸ್ತುಗಳ ದ್ವಾರಾ ಪಶ್ವಾದಿಗಳಿಗೂ ಆಹಾರನೀಡಿ, ತೃಪ್ತಿಪಡಿಸುವವನು. ॥೧೧॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನು ಪ್ರಾಣಿಗಳಿಗೆ ಆಹಾರರೂಪವಾದ ಅನ್ನಾದಿಗಳಲ್ಲಿ ಅನ್ನರೂಪದಿಂದ ಇದ್ದಾನೆ ಎಂತ ಹೇಳತಾರೆ.

ನಿರ್ದುಷ್ಟನಾದ ಸರ್ವೋತ್ತಮನೆಂದು ಕರೆಸಿ ಪೂಜ್ಯನಾದ ಮಾಯಾನಾಮಕ ಲಕ್ಷ್ಮೀದೇವೇರಿಗೆ ಪತಿಯಾದ ವಾಸುದೇವ, ದ್ರುಹಿಣ ಎಂಬ ಬ್ರಹ್ಮನೇ ಮೊದಲು ಮಾಡಿ ಯಾವತ್ತೂ ದೇವತೆಗಳಿಗೆ ಸ್ವಾಹಾ ಎಂತ ಕೊಡುವ ಆಹುತಿಗಳ ಒಳಗೆ ವಾಸುದೇವನಾವ ತಾನೇ ಸ್ವಾಹಾ ಎಂತ ಕರಸಿದವನಾಗಿ ನಿರಂತರ ಚಂದಾಗಿ ತೃಪ್ತಿಯನ್ನು ಪಡಿಸೋವನಾಗತಾನೆ. ದೇವತೆಗಳಿಗೆ ತೃಪ್ತಿಪಡಿಸುವವ ವಾಸುದೇವರೂಪ ಎಂತಲೂ, ಪ್ರಕರ್ಷೇಣ ಮುಕ್ತಿಯೋಗ್ಯರಿಗೆ ಹಿತನಾದವ ಸಂಕರ್ಷಣರೂಪಿಯಾದ ಪರಮಾತ್ಮ ಸ್ವಧಾ ಎಂತ ಕೊಡುವ ಆಹುತಿಗಳಲ್ಲಿ ಪ್ರಸಿದ್ಧನಾಗಿ ತನ್ನಾಮರೂಪದಿಂದ ಇದ್ದವನಾಗಿ ಪಿತೃದೇವತೆಗಳಿಗೆ ಆಹಾರ ಕೊಡತಕ್ಕವ ಎಂತ ಅನಿಸೋವನಾಗತಾನೆ. ಎಂದರೆ, ದೇವತೆಗಳು ಸರ್ವತ್ರ ವ್ಯಾಪ್ತರು. ಆದ್ದರಿಂದ ಸ್ವಾಹಾ ಸ್ವಧಾ ಎಂತ ಕೊಡತಕ್ಕ ಆಹುತಿದ್ರವ್ಯಗಳಲ್ಲಿ

ದೇವತೆಗಳು ಅಂಶದಿಂದ ವ್ಯಾಪ್ತರಾಗಿ ಇರುವ ಅವರವರ ರೂಪಗಳ ಅವರವರ ಮೂಲರೂಪಕ್ಕೆ ಆತ್ಮಪ್ರದರ್ಶನರೂಪದಿಂದ ತೃಪ್ತಿಪಡಿಸತಾನೆ. ಅಗ್ನಿದೇವರಿಗೆ ಸ್ವಾಹಾ ಸ್ವಧಾ ಎಂತ ಉಭಯ ಪತ್ನೇರು. ಅಗ್ನಿಯಲ್ಲಿ ಮಾಡಿದ ಅಹುತಿ ಅಗ್ನಿ ದ್ವಾರಾ ಸ್ವಾಹಾ ಸ್ವಧಾ ಎಂಬ ಅಗ್ನಿಪತ್ನೇರ ದ್ವಾರಾ ವಾಸುದೇವ ಸಂಕರ್ಷಣ ದೇವತೆಗಳಿಗೆ, ಪಿತೃಗಳಿಗೆ ಆತ್ಮಪ್ರದರ್ಶನರೂಪದಿಂದ ಸೇರಿಸಿ ತೃಪ್ತಿಪಡಿಸ ತಾನೆ. ಭೂಮಿಯನ್ನು ಭೇದಿಸಿಕೊಂಡು ಉತ್ಪನ್ನಗಳಾದ ವೃಕ್ಷಸಸ್ಯಾದಿಗಳಲ್ಲಿ, ಫಲಿಸಿದ ಧಾನ್ಯಾದಿ ಫಲಗಳಲ್ಲಿ ಪ್ರದ್ಯುಮ್ನನಾಮಕ ಪರಮಾತ್ಮ, ಭೂಮಿ ಭೇದಿಸಿಕೊಂಡು ಬರುವ ಹುಲ್ಲು ಮೊದಲಾದವುಗಳಲ್ಲಿ ಅನಿರುದ್ಧರೂಪಿ ಪರಮಾತ್ಮ, ಆದರದರ ಅಂತರ್ಗತನಾಗಿ ಆಯಾ ಪೆಸರಿನಿಂದ ಕರಸತಾ ಇರೋವನಾಗಿದ್ದಾನೆ. ಇದ್ದು ದಾರನ್ನ ರಕ್ಷಿಸತಾನೆ ಎಂದರೆ ಮುಂದೆ ಹೇಳತಾರೆ. ॥೧೧॥

## ಭಾವಪ್ರಕಾಶಿಕೆ

ಯಾಗಾದಿಗಳಲ್ಲಿ ಆಹುತಿಗಳನ್ನು ಕೊಡುವ ಕಾಲದಲ್ಲಿ ದೇವತೆಗಳಿಗೆ ಬ್ರಹ್ಮಣೇಸ್ವಾಹಾ, ರುದ್ರಾಯಸ್ವಾಹಾ, ಎಂದು ಸ್ವಾಹಾಕಾರದಿಂದಲೂ, ಪಿತೃ ಗಳಿಗೆ ಸ್ವಧಾಕಾರದಿಂದಲೂ ಕೊಡುವ ವಿಧಿ ಇರುವುದು. ಆದ್ದರಿಂದ ಶ್ರೀಮಾಯಾಪತಿಯಾದ ವಾಸುದೇವನು ಬ್ರಹ್ಮಾದಿ ದೇವತೆಗಳಿಗೆ ಸ್ವಾಹಾ ನಾಮಕನಾಗಿ ತಾನೇ ಅನ್ನರೂಪನಾಗಿದ್ದು ಅವರನ್ನು ತೃಪ್ತಿಪಡಿಸುವನು. ಸಂಕರ್ಷಣನು ಸ್ವಧಾ ಶಬ್ದವಾಚ್ಯನಾಗಿ ಅನ್ನವಾಗಿದ್ದು ಪಿತೃಗಳನ್ನು ತೃಪ್ತಿ ಪಡಿಸುವನೆಂದರ್ಥ. ॥೧೧॥

## ಭಾವದರ್ಪಣ

ಬ್ರಹ್ಮಾದಿ ದೇವತೆಗಳಿಗೆ ಸ್ವಾಹಾರೂಪದಿಂದ, ಪಿತೃಗಳಿಗೆ ಸ್ವಧಾರೂಪ ದಿಂದ ಪಶ್ವಾದಿಗಳಿಗೆ ತೃಣರೂಪದಿಂದ ಏವಂ ರೀತ್ಯಾ ಪ್ರದ್ಯುಮ್ನ ಅನ್ನ ಕೊಡು ತ್ತಾನೆಂದು ಹೇಳುತ್ತಾರೆ, ದೃಹಿಣೇತಿ. ದೃಹಿಣ ಬ್ರಹ್ಮಾ. ಸ್ವಧಾಖ್ಯ, ತರ್ಪಣ ರೂಪ, ಸ್ವಾಹಾಖ್ಯ ಆಹುತಿರೂಪ, ಎಂಬರ್ಥ. ॥೧೧॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಸಪ್ತಾನ್ನವಿದ್ಯಾಂ ಉಪದಿಶತಿ ದ್ರುಹಿಣ ಇತಿ ॥ ದ್ರುಹಿಣ ಬ್ರಹ್ಮಾ ॥ ತದ್ಗತಃ ಸನ್॥ ಸ್ವೀಯಂ ಸ್ವೀಕುರುತೇ ದದಾತಿ ಚ ಇತಿ ಸ್ವಾಹಾ–ಜನಾರ್ದನಃ॥ ಪ್ರಹಿತ ಪರಮೋಪಕಾರೀ ॥ ಸ್ವತಃ ಏವ ಧಾರಣಾತ್ ಸ್ವಧಾ ॥ ಮಹೀ– ಭೂಮಿಃ ॥೧೧॥

## ಕನ್ನಡಾರ್ಥ

ಸಪ್ತಾನ್ನ ವಿದ್ಯೆಯನ್ನು ಉಪದೇಶಿಸುತ್ತಾರೆ,ದ್ರುಹಿಣ ಎಂಬ ಪದ್ಯದಿಂದ. ದ್ರುಹಿಣನೆಂದರೆ ಚತುರ್ಮುಖನು. ಬ್ರಹ್ಮಾದಿಗಳಲ್ಲಿ ಇರುತ್ತ ಸ್ವಾಹಾ ಎಂಬ ಶಬ್ದದ ವಾಚ್ಯನಾಗಿ ಆಹುತಿಯನ್ನು ಸ್ವೀಕರಿಸಿ, ಬ್ರಹ್ಮಾದಿ ದೇವತೆಗಳಿಗೆ ಕೊಟ್ಟು, ತೃಪ್ತಿ ಬಡಿಸುವನು. ಸ್ವೀಯನ್ನು ಸ್ವೀಕಾರಮಾಡುವುದರಿಂದ, ಸರ್ವವನ್ನೂ ಸ್ವಕೀಯವನ್ನಾಗಿ ಮಾಡಿ ಸ್ವೀಕರಿಸುವುದರಿಂದ, ಸ್ವಾಹಾ ಎಂದು ಹರಿಗೆ ಕರೆಯುತ್ತಾರೆ.

ಪ್ರಹಿತ ಎಂದರೆ ಪರಮೋಪಕಾರಿ ಎಂದು ಅರ್ಥ. ಸ್ವತಃ ತನ್ನಷ್ಟಕೆ ತಾನೇ ಧಾರಣ ಪೋಷಣ ಮಾಡುವದರಿಂದ ಸ್ವಧಾ ಎಂದು ಕರೆಯುತ್ತಾರೆ.

ಸ್ವಾಹಾ ಸ್ವಧಾ ನಾಮಗಳಿಂದ ವಾಸುದೇವ ಹಾಗೂ ಸಂಕರ್ಷಣರು ಆಹುತಿ ಸ್ವೀಕರಿಸಿ ಬ್ರಹ್ಮಾದಿದೇವತೆಗಳಿಗೂ, ಪಿತೃಗಳಿಗೂ ತೃಪ್ತಿಬಡಿಸುವರು. ಮಹೀ–ಭೂಮಿ. ॥೧೧॥

## ಶ್ರೀಗುರುಹೃದಯಪ್ರಕಾಶಿಕೆ

(ಸೂ॥ ಹನ್ನೊಂದು ಮತ್ತು ಹನ್ನೆರಡನೆಯ ಶ್ಲೋಕಗಳಿಗೆ ಒಟ್ಟಿಗೆ ವ್ಯಾಖ್ಯಾನ ಮಾಡಿದ್ದಾರೆ).

ಸಪ್ತಾನ್ನಸೃಷ್ಟಿ ಮಹಿಮಾಜ್ಞಾನದಿಂದ ಸಮರ್ಪಣೋಪಾಸನ ಸಹ ಐದು ಪದ್ಯದಿಂದ ನಿರೂಪಿಸುತ್ತಾರೆ, ದ್ರುಹಿಣ ಎಂದು. ದೃಹಿಣ ಎಂಬ ಬ್ರಹ್ಮ ಮೊದಲಾದ ಸರ್ವದೇವತೆಗಳಿಗೂ ಮಾಯಾದೇವೀಪತಿ ಶ್ರೀವಾಸುದೇವನೇ ಸ್ವಾಹಾ ಎಂಬ ಆಹುತಿರೂಪ ಅನ್ನ ಕಲ್ಪಿಸಿ ಅದರಲ್ಲಿದ್ದು ತೃಪ್ತಿಪಡಿಸುವನು. (ಸ್ವೀಯಂ ಸ್ವೀಕುರುತೇ ಸ್ವಾಹೇತ್ಯುಕ್ತೋ ಜನಾರ್ದನಃ ಎಂಬ ರೀತಿಯಿಂದ) ಸದಾ ಪೂಜ್ಯನಾದ ಸಂಕರುಷಣನು ಪಿತೃಗಳಿಗೆ ಸ್ವಧಾಖ್ಯ ಆಹುತಿಯಿಂದ ಆಹಾರ ಕಲ್ಪಿಸಿ ಕೊಡುವನು. ಮಹಿಜವೆಂಬ ವೃಕ್ಷಾದಿಫಲ ಅನ್ನ ಸಹ ಕಲ್ಪಿಸಿ ಮನುಷ್ಯರಿಗೆ ಪದ್ಯುಮ್ನರೂಪನು ತೃಪ್ತಿಕೊಡುವನು. ತೃಣಾದಿರೂಪ ಅನ್ನವನ್ನು ಅನಿರುದ್ಧರೂಪನು ಕಲ್ಪಿಸಿ ಪಶುಗಳಿಗೆ ಅನ್ನನೆನಿಸಿಕೊಂಡು ತೃಪ್ತಿ ಕೊಡುವನು. ಹಿರಣ್ಯಗರ್ಭಾಂಡವೆಂಬ ಈ ಜಗತ್ತಿನಲ್ಲಿ ಶ್ರೀಹರಿಯು ತನ್ನನ್ನು ಈ ಪರಿ ಎಂದರೆ, ಮೇಲೆ ಹೇಳಿದ ಪ್ರಕಾರ ಚತುರ್ಮೂರ್ತಿಯಾಗಿ ಅನ್ನಕೊಟ್ಟು ರಕ್ಷಿಸುವನೆಂದು ಉಪಾಸನೆ ಮಾಡುವ ಭಕ್ತರನ್ನು ಬನ್ನ ಎಂದರೆ, ಬಗೆಬಗೆ ವಿಕಾರ ಕ್ಲೇಶಪಡಿಸದೆ, ಭವಸಮುದ್ರ ಮಹೋನ್ನತಿ ಎಂಬ ಜನನಾದಿ ಸಂಸೃತಿ ಪರಿಹರಿಸಿ ಸ್ವಾಹಾ, ಸ್ವಧಾ, ಫಲಾದ್ಯನ್ನ, ತೃಣ ಎಂಬ ಚತುರ್ವಿಧ ಅನ್ನಪ್ರಚುರವುಳ್ಳ ಸ್ವಾಮಿಯು ತನ್ನ ಸಂದರ್ಶನಸುಖ ಕೊಡುವನು. ॥೧೧॥ ॥೧೨॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸಪ್ತಾನ್ನವಿದ್ಯೆಯನ್ನು ಹೇಳುತ್ತಾರೆ.

ಚತುರ್ಮುಖಬ್ರಹ್ಮದೇವರಿಗೆ ದ್ರುಹಿಣ ಎಂದು ಹೆಸರು. ಬ್ರಹ್ಮದೇವರಿಂದ ಆರಂಭಿಸಿ ಸಕಲದೇವತಾವರ್ಗಕ್ಕೆ ಸ್ವಾಹಾನಾಮಕನಾಗಿ ಶ್ರೀಪರಮಾತ್ಮನು ತೃಪ್ತಿಪ್ರದನಾಗಿದ್ದಾನೆ. ಮಾಯಾರಮಣನಾದ ಶ್ರೀವಾಸುದೇವರೂಪೀ ಶ್ರೀಪರಮಾತ್ಮನು ಅಗ್ನಿಯಲ್ಲಿ ಸ್ವಾಹಾಕಾರದಿಂದ, ಬ್ರಹ್ಮಣೇಸ್ವಾಹಾ–ರುದ್ರಾಯಸ್ವಾಹಾ–ಇಂದ್ರಾಯಸ್ವಾಹಾ–ಇತ್ಯಾದಿ ಮಂತ್ರಪೂರ್ವಕ ಕೊಡುವ ಹವಿಸ್ಸನ್ನು ಸ್ವಾಹಾನಾಮಕನಾಗಿ ತಾನೇ ಸ್ವೀಕರಿಸಿ ಅಗ್ನಿಯದ್ವಾರಾ ಆತ್ಮಪ್ರದರ್ಶನರೂಪದಿಂದ ತೃಪ್ತಿ ನೀಡುವನು.

ಪ್ರಕರ್ಷೇಣ ಮುಕ್ತಿಯೋಗ್ಯರಾದ ಸಚ್ಚೇತನರಿಗೆ ಹಿತನಾಗಿರುವುದರಿಂದ ಜಯಾಪತಿಯಾದ ಸಂಕರ್ಷಣನಿಗೆ ಪ್ರಹಿತನೆಂದು ಹೆಸರು. ಪಿತೃಯಜ್ಞ ಕಾರ್ಯದಲ್ಲಿ ಪಿತೃಗಳ ಪ್ರೀತ್ಯರ್ಥವಾಗಿ, ಸ್ವಧೇಯಂ ಸ್ವಧೇಯಂ ಎಂದು ತರ್ಪಣಪೂರ್ವಕ ಆಹುತಿ ಕೊಡುತ್ತೇವೆ. ಸಂಕರ್ಷಣನು ಪಿತೃದೇವತೆಗಳಿಗೆ ಸ್ವಧಾ ಶಬ್ದ ವಾಚ್ಯನಾಗಿದ್ದು, ಕರ್ತೃಗಳು ಕೊಡುವ ಆಹುತಿಗಳ ದ್ವಾರಾ. ತೃಪ್ತಿ ಬಡಿಸುವನು. ಅಗ್ನಿ ಪುರುಷದೇವರಿಗೆ ಸ್ವಾಹಾ ಸ್ವಧಾ-ನಾಮಕರಾದ ಇಬ್ಬರು ಪತ್ನಿಯರು. ಇಂತು ಅಗ್ನಿದ್ವಾರಾ ಸ್ವಾಹಾ ಎಂಬ ಅಗ್ನಿಪತ್ನಿಯ ಮೂಲಕ ಶ್ರೀವಾಸುದೇವನು ಬ್ರಹ್ಮಾದಿ ದೇವತೆಗಳಿಗೆ ಹವಿಸ್ಸನ್ನು ಮುಟ್ಟಿಸಿ, ತೃಪ್ತಿ ಬಡಿಸುವನು. ಅದೇರೀತಿಯಲ್ಲಿ ಸ್ವಧಾ ಎಂಬ ಅಗ್ನಿಪತ್ನಿಯ ದ್ವಾರಾ ಸಂಕರ್ಷಣನು ಪಿತೃದೇವತೆಗಳಿಗೆ ಆಹುತಿದ್ವಾರಾ ತೃಪ್ತಿಪ್ರದನಾಗಿರುವನು.

ಮಹೀ ಎಂದರೆ ಭೂಮಿ. ಮಹಿಜ ಎಂದರೆ ಭೂಮಿಯಲ್ಲಿ ಬೆಳೆಯುವ ವೃಕ್ಷಾದಿಗಳು. ವೃಕ್ಷಗಳು ಬಿಡುವ ಹಣ್ಣುಗಳಿಗೆ ಫಲ ಎಂದು ಹೆಸರು. ಭತ್ತ, ರಾಗಿ, ಗೋಧಿ ಇತ್ಯಾದಿ ಧಾನ್ಯಾದಿಗಳಿಗೂ ಸಹ ಫಲ ಎಂತಲೇ ಹೆಸರು. ವೃಕ್ಷಗತ ರಸಭರಿತ ಫಲಗಳಲ್ಲಿ ಧಾನ್ಯರೂಪದ ಆಹಾರ ದ್ರವ್ಯ ವಸ್ತುಗಳಲ್ಲಿ ಕೃತಿರಮಣ ಪ್ರದ್ಯುಮ್ನನು ಅದೇ ಹೆಸರಿನಿಂದ ಫಲಶಬ್ದ ವಾಚ್ಯನಾಗಿದ್ದಾನೆ. ಮಾನವರಿಗೆ, ಪಕ್ಷಿ ಇತ್ಯಾದಿ ಪ್ರಾಣಿಗಳಿಗೆ ಫಲ, ಧಾನ್ಯಗಳ ರೂಪದಲ್ಲಿ ಪ್ರದ್ಯುಮ್ನನು ಆಹಾರಪ್ರದನಾಗಿದ್ದು ತೃಪ್ತಿಬಡಿಸುವನು.

ಭೂಮಿಯಲ್ಲಿ ಬೆಳೆಯುವ ಹುಲ್ಲನ್ನು ಮೇಯುವ ಗೋವು, ಕುದುರೆ ಇತ್ಯಾದಿ ಪಶುಪ್ರಾಣಿಗಳಿಗೆ ತೃಣನಾಮಕನಾಗಿ ಶಾಂತೀಪತಿಯಾದ ಅನಿರುದ್ಧನು ಆಹಾರಪ್ರದನಾಗಿದ್ದು, ತೃಪ್ತಿಯನ್ನೀವನು ॥೧೧॥

# ಪದ್ಯ—೧೨

**ಮೂಲ :–**

**ಅನ್ನನೆನಿಸುವ ನೃ ಪಶುಗಳಿಗೆ ಹಿಂ ।**
**ರಣ್ಯಗರ್ಭಾಂಡದೊಳು ಸಂತತ ।**
**ತನ್ನನೀಪರಿಯಿಂದುಪಾಸನೆ ಗೈವ ಭಕುತರನ ॥**
**ಬನ್ನಪಡಿಸದೆ ಭವಸಮುದ್ರವು ।**
**ಹೋನ್ನತಿಯು ದಾಟಿಸಿ ಚತುರ್ವಿಧ ।**
**ಅನ್ನಮಯನಾತ್ಮಪ್ರದರ್ಶನ ಸುಖನೀವ ಹರಿ ॥ ॥೧೨॥**

**ಅವತರಣಿಕೆ :–**

ಅನ್ನಶಬ್ದವಾಚ್ಯರಾದ ಪ್ರದ್ಯುಮ್ನ ಅನಿರುದ್ಧರು ಆತ್ಮ ಪ್ರದರ್ಶನ ಸುಖ, ಅಂದರೆ ಆಯಾಯಾ ದೇವತೆಗಳ ಅಂಶವನ್ನು ಅಂಶಿಯಲ್ಲಿ ಮೇಳನ ಮಾಡಿಸಿ. ಸುಖಪ್ರದರಾಗಿದ್ದಾರೆ ಎಂದು ಹೇಳುತ್ತಾರೆ.

**ಪ್ರತಿಪದಾರ್ಥ**

**ನೃ**—ಮಾನವವರ್ಗಕ್ಕೆ, **ಪಶುಗಳಿಗೆ**—ಗೋವು ಇತ್ಯಾದಿ ಪಶುಪ್ರಾಣಿ ವರ್ಗಕ್ಕೆ, **ಅನ್ನನೆನಿಸುವ**—ಫಲ—ಧಾನ್ಯರೂಪದಿಂದಲೂ, ತೃಣಾದಿರೂಪ ದಿಂದಲೂ ಆಹಾರ ಪ್ರದನಾಗಿದ್ದು, "ಅನ್ನ" ನಾಮಕನಾದ ಶ್ರೀಅನಿರುದ್ಧನು ವಿದ್ಯಮಾನನಾಗಿದ್ದಾನೆ. **ಹಿರಣ್ಯಗರ್ಭಾಂಡದೊಳು**—ಈ ಬ್ರಹ್ಮಾಂಡದಲ್ಲಿ, **ಸಂತತ**—ನಿರಂತರದಲ್ಲಿ, **ತನ್ನನು**—ಶ್ರೀಪರಮಾತ್ಮನನ್ನು. **ಈ ಪರಿಯಿಂದ**—ಪೂರ್ವೋಕ್ತಪ್ರಕಾರದಿಂದ, **ಉಪಾಸನೆ ಗೈವ**—ಸ್ಮರಣ ಪೂರ್ವಕ ಧ್ಯಾನ ಮಾಡುವ, **ಭಕುತರನ**—ಭಗವದ್ಭಕ್ತರನ್ನು, **ಬನ್ನಪಡಿಸದೆ**—ಸಂಸಾರ ಜನ್ಯ

ಕ್ಲೇಶಾದಿಗಳಿಂದ ಆಯಾಸ ಪಡಿಸದೆ, **ಭವಸಮುದ್ರ**–ಸಂಸಾರಾಖ್ಯ ಈ ಮಹಾಸಮುದ್ರವನ್ನು, **ದಾಟಿಸಿ**–ದಾಟಿಸುವವನಾಗಿ, **ಮಹೋನ್ನತಿಯು**–ಅತ್ಯಂತ ಉನ್ನತವಾದ (ಶ್ರೇಷ್ಠವಾದ) ನಿತ್ಯಾನಂದರೂಪವನ್ನು ಮುಕ್ತಿ ಸುಖವನ್ನು ದಯಪಾಲಿಸಿ. **ಚತುರ್ವಿಧಅನ್ನಮಯನು**–ಮಾನವ ಪಶುಗಳಿಗೆ ಅನ್ನಪ್ರದನಾಗಿ ಅನಿರುದ್ಧನು, ಪ್ರದ್ಯುಮ್ನ–ಸಂಕರ್ಷಣ–ವಾಸುದೇವರೂಪ ಗಳಿಂದ ದೇವತೆಗಳಿಗೆ ಸ್ವಾಹಾಶಬ್ದವಾಚ್ಯನಾಗಿ, ಪಿತೃಗಳಿಗೆ ಸ್ವಧಾಶಬ್ದ ವಾಚ್ಯನಾಗಿ ನಾಲ್ಕುರೂಪಗಳಿಂದ ಆಹಾರಪ್ರದನಾಗಿದ್ದು, ಅನ್ನಮಯನೆಂದೆನಿಸಿ, **ಹರಿ**–ಸಜ್ಜನರ ಪಾಪಪ್ರಕ್ಷಾಳಕನಾದ ಬಿಂಬರೂಪೀ ಶ್ರೀಹರಿಯು, **ಆತ್ಮ ಪ್ರದರ್ಶನ ಸುಖನೀವ**–ಆಯಾಯಾದೇವತೆಗಳ ಅಂಶವನ್ನು ಅಂಶಿಯಲ್ಲಿ ಮೇಳನ ಮಾಡಿಸಿ, ತನ್ನ ದರ್ಶನ ಭಾಗ್ಯವನ್ನು ನೀಡಿ, ಆನಂದ ಪ್ರದನಾಗಿ ದ್ದಾನೆ. ॥೧೨॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅನ್ನಾಂತರ್ಗತ ಭಗವದುಪಾಸನಾ ಮಾಡುವವರಿಗೆ ಫಲವನ್ನ ಹೇಳ ತಾರೆ. ಮಾನುಷಾದಿಗಳಿಗೆ ಫಲರೂಪದಿಂದಲೂ. ಪಶುಗಳಿಗೆ ತೃಣಾದಿರೂಪ ದಿಂದಲೂ, ಪ್ರದ್ಯುಮ್ನ ಅನಿರುದ್ಧರೂಪದಿಂದ ಅನ್ನನೆನಿಸುತ್ತಾನೆ. ಪೂರ್ವೋಕ್ತ ನಾಲ್ಕು ವಿಧದೊಳು ವಾಸುದೇವಾದಿ ನಾಲ್ಕುರೂಪಗಳಿಂದ ಅಂತರ್ಗತನಾಗಿದ್ದು, ಆಯಾ ಅನ್ನನಾಮದಿಂದ ಪ್ರಚುರನಾಗಿ, ದೇವತೆಗಳಿಗೆ, ಪಿತೃಗಳಿಗೆ ಪೂರ್ವೋಕ್ತ ಪ್ರಕಾರ ವಾಸುದೇವ ಸಂಕರ್ಷಣ ಆತ್ಮಪ್ರದರ್ಶನ ಎಂದರೆ, ಆಯಾ ಅಂಶವನ್ನು ಅಂಶಿಯಲ್ಲಿ ಮೇಳನ ಮಾಡಿಸಿ ಸುಖಕೊಡುತಾನೆ. ಮನುಷ್ಯ, ಪಶು ಮೃಗಾದಿಗಳಿಗೆ ಫಲ ತೃಣಾದಿ ಭಕ್ಷಣದ್ವಾರಾ ದೇಹಕ್ಕೆ ಉಪಚಯ ಮಾಡಿ ಸುಖಕೊಡತಾನೆ. ಈ ಬ್ರಹ್ಮಾಂಡದಲ್ಲಿ ದಾರಾದರೆ ನಿರಂತರದಲ್ಲೂ, ಪರಮಾತ್ಮನಾದ ತನ್ನ ಈ ಪ್ರಕಾರವಾಗಿ ವಿಸ್ಮೃತಿ ಇಲ್ಲದೆ ಉಪಾಸನಾ ಮಾಡತಕ್ಕ, ಮಾಹಾತ್ಮ್ಯಜ್ಞಾನಪೂರ್ವಕ ಸುದೃಢ ಸ್ನೇಹಯುಕ್ತ

ರಾದ ಭಕ್ತರನ್ನ ಸಂಸಾರ ದುಃಖದಿಂದ ಆಯಾಸಪಡಿಸದೆ, ಸುಜ್ಞಾನವನ್ನು ಕೊಟ್ಟು, ತದ್ದ್ವಾರಾ ಸಂಸಾರಾಖ್ಯ ಸಮುದ್ರವನ್ನ ದಾಟಿಸುವನಾಗಿ, ಅತ್ಯಂತ ಉನ್ನತವಾದ, ಅಚಂಚಲವಾದ ಐಶ್ವರ್ಯರೂಪವಾದ ಭಕ್ತಿಯನ್ನಕೊಟ್ಟು. ತನ್ನ ರೂಪವನ್ನ ಅಪರೋಕ್ಷದಿಂದ ಪ್ರದರ್ಶನ ಮಾಡಿ. ಶ್ರೀಹರಿ ಕ್ರಮಾತ್ ಲಿಂಗಭಂಗ ಐದಿಸಿ. ಸ್ವರೂಪಸುಖ ಅಭಿವ್ಯಕ್ತಿಮಾಡಿ ಕೊಡತಾನೆ ಮತ್ತು ಸ್ವಾಹಾ. ಸ್ವಧಾ, ಫಲ, ತೃಣ ಈ ನಾಲ್ಕುವಿಧ ಆಹಾರಗಳಿಂದ ಪಿತೃಗಳ ತೃಪ್ತಿ ಪಡಿಸತಾನೆ. ಬ್ರಾಹ್ಮಣರಲ್ಲಿ ಆವಾಹಿತರಾದ ಪಿತೃಗಳು ಮೂರು ಪ್ರಕಾರದ ವರು, ಅಂಶ ಭೂತರಾದವರು. ಈ ಅಂಶಕ್ಕೆ ಅಂಶಿ ಬ್ಯಾರೆ ಇರೋದಾಗಿ ಅದೆ. ಬ್ಯಾರೆ ಇರುವ ಅಂಶೀಭೂತರಾದ ಪಿತೃಗಳು ದೇವತೆಗಳು ಎಂತಲೂ, ಪಿತೃದೇವತೆಗಳು ಎಂತಲೂ, ಮಾನುಷರೆಂತಲೂ ಮೂರು ಪ್ರಕಾರದವರು. ಈ ಪಿತೃಕಾರ್ಯದಿಂದ, ಮೂಲ ರೂಪದಿಂದ ಇರುವ ಪೂರ್ವೋಕ್ತರಾದ ಪಿತೃ ಗಳಿಗೆ, ಸ್ವಾಹಾಖ್ಯ ಅನ್ನದಿಂದ ದೇವಸಾಂಕೇತ ಪಿತೃಗಳಿಗೂ, ಸ್ವಧಾಖ್ಯ ಅನ್ನದಿಂದ ಪಿತೃದೇವಾಖ್ಯ ಪಿತೃ ಗಳಿಗೂ, ಫಲಾಖ್ಯ ಅನ್ನದಿಂದ ನಿರಂಶರಾದ ಮಾನುಷ ದೇಹ ಧರಿಸಿರುವಪಿತೃಗಳಿಗೂ. ತೃಣಾಖ್ಯ ಅನ್ನದಿಂದ ತನ್ನ ಪಿತೃ ಗಳು ಪಶುಗಳಾಗಿ ಜನಿಸಿದ್ದರೆ ತೃಣಾಖ್ಯ ಅನ್ನದಿಂದಲೂ, ಅನ್ನದಲ್ಲಿ ಈ ನಾಲ್ಕು ವಿಧ ಅನ್ನವನ್ನು ಅಲ್ಲಲ್ಲಿ ವಿಶೇಷಾಕಾರವಾಗಿ ಅವರವರಿಗೆ ಘಟನ ಮಾಡಿಕೊಟ್ಟು ತೃಪ್ತಿಪಡಿಸೋಣವಲ್ಲದೆ, ಆ ದಿನದಲ್ಲಿ ಒಂದು ವಿಚಿತ್ರವಾದ ಆನಂದವನ್ನುಂಟುಮಾಡಿ ಕೊಡತಾನೆ. ದೇವತೆಗಳು, ಪಿತೃದೇವತೆಗಳು. ಮಾನಷತ್ವೇನ ಅವತಾರ ಮಾಡಿದಕಾಲದಲ್ಲಿ ಸಂತಾನಗಳ ಪಡದು, ದೇವತೆ ಗಳು ಪಿತೃಗಳಾಗತಾರೆ. ಅಂಥ ಪಿತೃಗಳು ಇದ್ದಲ್ಲಿ, ಸ್ವಾಹಾ ಸ್ವಧಾದಿಂದ ತೃಪ್ತಿ ಮತ್ತು ಅವರೇ ಮಾನುಷರಾಗಿ ಪಶುಗಳಾಗಿ ಜನಿಸಿದ್ದಲ್ಲಿ ಫಲತೃಣಾದಿ ಗಳಿಂದ ತೃಪ್ತಿ. ಇನ್ನು ದಾವ ಜನ್ಮಬಂದಿದ್ದರೂ ಸರಿಯೆ, ಆಯಾ ಜನ್ಮಗಳಿಗೆ ಯೋಗ್ಯವಾದ ಆಹಾರಗಳಿಂದ ತೃಪ್ತಿ.

ಪ್ರಮಾಣ

ಅಗ್ನೌಕರಣೇನ ದೇವಸ್ಥಾಃ ಸ್ವರ್ಗಸ್ಥಾಃ ವಿಪ್ರಭೋಜನೇ ।
ಯಮಸ್ಥಾಃ ಪಿಂಡ ದಾನೇನ ನರಕೇ ವಿಕಿರೇಣ ತು ॥

ಉಚ್ಛಿಷ್ಟೇನ ಚ ಪೈಶಾಚಾಃ ಅಸುರಾ ಭೂರಿ ಭೋಜನಾತ್ ।
ದಕ್ಷಿಣೇನ ಮನುಷ್ಯಾದ್ಯಾಃ ಶ್ರಾದ್ಧೇ ಸಪ್ತ ವಿಧೀಯತೇ ॥

ಇದು ಅಂಶಾಂಶಿ ಎರಡರಲ್ಲೂ ಸಮನ್ವಯವೆಂದು ತಿಳಿಯಬೇಕು. ॥೧೨॥

**ಭಾವಪ್ರಕಾಶಿಕೆ**

ಬ್ರಹ್ಮಾಂಡದೊಳಗೆ ಸಕಲ ಪ್ರಾಣಿಗಳಿಗೂ ಅವರವರ ಯೋಗ್ಯತಾನು ಸಾರವಾಗಿ ಯಾವಯಾವ ಪ್ರಾಣಿಗಳಿಗೆ ಯಾವ ಯಾವುದು ಆಹಾರವೋ ಅಂದರೆ ಮನುಷ್ಯನಿಗೆ ಖಾದ್ಯ, ಲೇಹ್ಯ, ಚೋಷ್ಯ, ಪೇಯ, ಇದರರ್ಥ ತಿನ್ನುವುದು, ಅನ್ನಾದಿಗಳಿಗೆ ಸಾಧಕವಾದ ಹಿಟ್ಟು, ಬೆಣಸು, ಚಟ್ಟಿಣಿ ಮೊದಲಾದವು, ಕುಡಿಯುವುದು ಎಂದು ೪ ಪ್ರಕಾರ. ಪಶು ಮೊದಲಾದುವು ಗಳಿಗೆ ತೃಣಾದಿಗಳು, ಈ ಹೆಸರಿನಿಂದ ಪ್ರದ್ಯುಮ್ನನೂ, ಅನಿರುದ್ಧನೂ ತೃಪ್ತಿ ಪಡಿಸುವರು. ಹೀಗೆ ಸಕಲ ಪ್ರಾಣಿಗಳೂ ಭುಂಜಿಸುವ ಅನ್ನರೂಪನಾಗಿ ಪರಮಾತ್ಮನೇ ಎಲ್ಲರನ್ನೂ ತೃಪ್ತಿಪಡಿಸುವನು. ಅನ್ನಂ ಬ್ರಹ್ಮೇತಿ ವ್ಯಜಾನಾತ್ ಎಂಬ ಉಪನಿಷದ್ವಾಕ್ಯಾನುಸಾರವಾಗಿ ಪರಮಾತ್ಮನನ್ನು ಅನ್ನನೆಂದು ಉಪಾಸನೆ ಮಾಡಬೇಕೆಂದರ್ಥ. ಯದ್ಯಪಿ ಅನ್ನಶಬ್ದಕ್ಕೆ ಅತ್ತೀತ್ಯನ್ನಂ ಪ್ರಪಂಚವನ್ನೆಲ್ಲ ಭಕ್ಷಿಸುವದರಿಂದ ಪರಮಾತ್ಮನಿಗೆ ಅನ್ನನೆಂದು ಹೆಸರು ಎಂದು ಅರ್ಥಮಾಡಿರು ವರು. ಆದ್ದರಿಂದ ಪ್ರಪಂಚದಲ್ಲಿ ಅನ್ನರೂಪನಾಗಿ ಇರುವದರಿಂದಲೂ, ಪ್ರಳಯಕಾಲದಲ್ಲಿ ಪ್ರಪಂಚವನ್ನು ತನ್ನ ಉದರದಲ್ಲಿ ಇಟ್ಟುಕೊಳ್ಳುವುದ ರಿಂದಲೂ ಅನ್ನನೆಂದು ಪರಮಾತ್ಮನಿಗೆ ಹೆಸರು. ಪ್ರಕೃತ ಹೀಗೆ ಪರಮಾತ್ಮನು ಅನ್ನರೂಪನಾಗಿ ಇರುವನೆಂದು ಯಾರು ಉಪಾಸನೆ ಮಾಡುವರೋ ಅಂತಹ ಭಕ್ತರನ್ನು ಸಂಸಾರದಲ್ಲಿ ಕಷ್ಟಪಡಿಸದೆ ದಾಟಲಶಕ್ಯವಾದ ಸಂಸಾರವೆಂಬ ಸಮುದ್ರದಿಂದ ಪಾರಗಾಣಿಸಿ ಚತುರ್ವಿಧ ಅನ್ನಮಯನಾದ ಶ್ರೀಹರಿಯು ಇಹದಲ್ಲಿ ತನ್ನ ಅಪರೋಕ್ಷದರ್ಶನ ಸುಖವನ್ನು ಕೊಟ್ಟು, ಸಂಪೂರ್ಣ ಸಾಧನೆ ಮಾಡಿಸಿ, ಮುಕ್ತಿಯಲ್ಲಿ ಸಾಮೀಪ್ಯಾದಿ ಸ್ಥಾನವನ್ನು ಕೊಟ್ಟು, ಅಲ್ಲಿಯೂ ತನ್ನ ಸಂದರ್ಶನಸುಖವನ್ನು ಸರ್ವದಾ ಕೊಡುತ್ತಾ ಪಾಲಿಸುವನು ॥೧೨॥

**ಭಾವದರ್ಪಣ**

ಅನ್ನೇತಿ, ನೃ ನರ ಆತ್ಮರೂಪದರ್ಶನ ಎಂಬೋದಕ್ಕೆ ೪ನೇ ಸಂಧಿಯಲ್ಲಿ ವಿವರಿಸಿ ಅದೆ, ಅಲ್ಲೇ ನೋಡತಕ್ಕದ್ದು. ॥೧೨॥

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಅನ್ನ ಇತಿ ॥ ಪಯಃ ಆತ್ಮಕವಪ್ ॥ ಬನ್ನ–ಕ್ಲೇಶ। ಆತ್ಮಪ್ರದರ್ಶನೇತಿ ಅಪರೋಕ್ಷದಃ ॥ ತದುತ್ತರಂ ಅನುಪ್ಮಾತುಃ ಸುಖಂ ಮೋಕ್ಷಃ ॥೧೨॥

**ಕನ್ನಡಾರ್ಥ**

ಪ್ರದ್ಯುಮ್ನನು ಧಾನ್ಯಾದಿಗಳಿಂದ, ಅನಿರುದ್ಧನು ತೃಣಾದ್ಯನ್ನದಿಂದ ನರರನ್ನೂ, ಪಶುಗಳನ್ನೂ ಸಂರಕ್ಷಿಸುತ್ತಾರೆ. ಆತ್ಮಪ್ರದರ್ಶನವೆಂದರೆ ಅಪರೋಕ್ಷಜ್ಞಾನವೆಂದು ಅರ್ಥ. ತದನಂತರ ಸಾಧನಪರನಿಗೆ ಮೋಕ್ಷ ಸುಖ ವಾಗುವುದು. ॥೧೨॥

## ಸರ್ವವ್ಯಾಖ್ಯಾನ ಸಾರಸಂಗ್ರಹ

ಶ್ರೀಪರಮಾತ್ಮನು ಅನಿರುದ್ಧಾದಿ ನಾಲ್ಕು ರೂಪಗಳಿಂದ ಪಿತೃದೇವತೆ ಗಳಿಗೆ ಅನ್ನಪ್ರದನಾಗಿ ತೃಪ್ತಿಬಡಿಸುವ ವಿಷಯವನ್ನು ತಿಳಿಸುತ್ತಾರೆ.

ಶ್ರಾದ್ಧಕರ್ಮದಲ್ಲಿ ಆಮಂತ್ರಿತರಾಗಿ ಇರುವ ಬ್ರಾಹ್ಮಣರಲ್ಲಿ ಪಿತೃಗಳು ಆವಾಹಿತರಾಗಿರುತ್ತಾರೆ. ಇಂತಹ ಪಿತೃಗಳಲ್ಲಿ ನಾಲ್ಕು ವರ್ಗಗಳಿವೆ.

1. ಅಂಶೀಭೂತರಾದ ಪಿತೃಗಳು–ದೇವತೆಗಳು.
2. ಪಿತೃ ದೇವತೆಗಳು.

3 ಮಾನುಷರು (ನಿರಂಶರು.)

4. ಪಶುಜನ್ಮ ಎತ್ತಿರುವ ಪಿತೃಗಳು.

ಮೂಲರೂಪದಿಂದ ಇರುವ ಪೂರ್ವೋಕ್ತರಾದ ಪಿತೃಗಳಿಗೆ ಪಿತೃಕಾರ್ಯದಿಂದ–

ಸ್ವಾಹಾಖ್ಯ ಅನ್ನದಿಂದ ದೇವ ಸಾಂಕೇತ ಪಿತೃಗಗಳಿಗೆ ವಾಸುದೇವನಾಗಿ ತೃಪ್ತಿ ಪ್ರದನು.

ಸ್ವಧಾಖ್ಯ ಅನ್ನದಿಂದ ಪಿತೃದೇವಾಖ್ಯ ಪಿತೃಗಳಿಗೆ ಸಂಕರ್ಷಣನಾಗಿ ತೃಪ್ತಿಪ್ರದನು.

ಫಲಾಖ್ಯ ಅನ್ನದಿಂದ ನಿರಂಶರಾದ ಮಾನವದೇಹಧಾರಿಗಳಾದ ಪಿತೃಗಳಿಗೆ ಪ್ರದ್ಯುಮ್ನನಾಗಿ ತೃಪ್ತಿಪ್ರದನು.

ತೃಣಾಖ್ಯ ಅನ್ನದಿಂದ ಪಶುಜನ್ಮಧರಿಸಿರುವ ಪಿತೃಗಳಿಗೆ ಅನಿರುದ್ಧನಾಗಿ ತೃಪ್ತಿಪ್ರದನು.

ಶ್ರೀಪರಮಾತ್ಮನು ಅನಿರುದ್ಧಾದಿರೂಪಚತುಷ್ಟಯಗಳಿಂದ ಹವಿಸ್ಸನ್ನು ಸ್ವೀಕರಿಸಿ ಸ್ವಾಖ್ಯರಸ ಸ್ವೀಕಾರದ್ವಾರಾ ಪೂರ್ವೋಕ್ತ ನಾಲ್ಕುವಿಧವಾದ ಪಿತೃಗಳಿಗೆ ಅನ್ನನೆನಿಸಿದ್ದಾನೆ.

ಅತ್ತೀತ್ಯನ್ನಂ–ಎಂಬ ಶಬ್ದ ಪರಿಷ್ಕಾರದಂತೆ ಪ್ರಪಂಚವನ್ನೆಲ್ಲಾ ಭಕ್ಷಿಸುವುದರಿಂದ ಶ್ರೀಪರಮಾತ್ಮನಿಗೆ ಅನ್ನ ಎಂದು ಹೆಸರು.

ಜಗತ್ತಿನಲ್ಲಿ ಸರ್ವಪ್ರಾಣಿಗಳಿಗೂ ಅನ್ನರೂಪನಾಗಿರುವುದರಿಂದ ಅನ್ನಶಬ್ದವಾಚ್ಯನು. ಪ್ರಳಯಕಾಲದಲ್ಲಿ ಸರ್ವಜಗತ್ತನ್ನೂ ತನ್ನ ಉದರದಲ್ಲಿ ಧರಿಸುವುದರಿಂದ ಅನ್ನನಾಮಕನು.

ಬ್ರಹ್ಮಾಂಡವನ್ನು ದಾಸರಾಯರು ಹಿರಣ್ಯಗರ್ಭಾಂಡ ಎಂದಿದ್ದಾರೆ. ಶ್ರೀಪದ್ಮನಾಭರೂಪೀ ಪರಮಾತ್ಮನ ನಾಭಿಯಿಂದ ಅವನ ಇಚ್ಛಾಮಾತ್ರದಿಂದ ಅಭಿವ್ಯಕ್ತವಾದ ಸುವರ್ಣಾತ್ಮಕ ಕಮಲದಲ್ಲಿ ಬ್ರಹ್ಮದೇವರು ಆವಿರ್ಭೂತರಾದರು. ಇದರಿಂದ ಬ್ರಹ್ಮದೇವರಿಗೆ ಹಿರಣ್ಯಗರ್ಭ ಎಂದು ಹೆಸರಾಯಿತು. ಇದರಿಂದ ಹಿರಣ್ಯಗರ್ಭಾಂಡ ಎಂದರೆ ಬ್ರಹ್ಮಾಂಡ ಎಂದರ್ಥ.

ಇಂತಹ ಹಿರಣ್ಯಗರ್ಭಾಂಡದಲ್ಲಿ ಪೂರ್ವೋಕ್ತ ಪ್ರಕಾರ ಪಿತೃದೇವತೆಗಳಿಗೆ ಅನ್ನಪ್ರದನಾದ ಶ್ರೀಪರಮಾತ್ಮನ ಅನಿರುದ್ಧಾದಿ ರೂಪಚತುಷ್ಟಯುಗಳನ್ನು ಎಡಬಿಡದೆ, ಉತ್ತಮಜ್ಞಾನಾನುಸಂಧಾನ ಪೂರ್ವಕವಾಗಿ ಉಪಾಸನೆ ಮಾಡುತ್ತಿರುವ ತನ್ನ ಭಕ್ತಜನರನ್ನು ಆ ಕರುಣಾಸಾಗರನಾದ ಕಮಲೇಶನು ಸಂಸಾರವೆಂಬ ಅಗಾಧವಾದ ಸಮುದ್ರವನ್ನು ಸುಲಭವಾಗಿ ದಾಟಿಸುವನು. ಅವರ ಸ್ವಸ್ವರೂಪಗತ ಆನಂದವನ್ನು ಆವಿರ್ಭಾವಗೊಳಿಸಿ ನಿತ್ಯಾನಂದರೂಪವಾದ ಮುಕ್ತಿಸುಖವನ್ನು ಈಯುವನು. ಈ ಉತ್ತಮಗತಿಯನ್ನು ಮಹೋನ್ನತಿ ಎಂದಿದ್ದಾರೆ. ಸಮುದ್ರಕ್ಕೆ ಹೋಲಿಸಿದರೆ ಅತ್ಯಂತ ಆಳವಾದ ದುಸ್ತರವಾದ ಸಂಸಾರಸಾಗರವನ್ನು ದಾಟಿಸಿ ಎಂತಲೂ ಅರ್ಥಮಾಡಬಹುದು. ಆದರೆ ಫಲಪ್ರದತ್ವ ದೃಷ್ಟಿಯಿಂದ, ಮೋಕ್ಷಾನಂದವೆಂದು ಅರ್ಥ ಮಾಡಿದರೆ ಉತ್ತಮಪಕ್ಷ. ಅನ್ನಮಯನಾದ ಶ್ರೀಪರಮಾತ್ಮನು ಚತುರ್ವಿಧ ರೂಪಗಳಿಂದ ಆಯಾಯ ಅಂಶವನ್ನು ಅಂಶಿಯಲ್ಲಿ ಮೇಳನ ಮಾಡಿ ಸುಖಪ್ರದನಾಗಿದ್ದಾನೆ. ತನ್ನ ಸಂದರ್ಶನಭಾಗ್ಯ ನೀಡುತ್ತಾನೆ. ಇದರಿಂದ ಆತ್ಮಪ್ರದರ್ಶನಸುಖಪ್ರದನು. ಮಾನವ, ಪಶು, ಮೃಗಾದಿಗಳಿಗೆ ಭಕ್ಷಣ ದ್ವಾರಾ, ದೇಹೋಪಚಯ ಮಾಡಿಸಿ, ಇಂದ್ರಿಯಗಳಿಗೆ ಆನಂದವನ್ನು ಕೊಡುವನು. ॥೧೨॥

## ಪದ್ಯ—೧೩

**ಮೂಲ :–**

**ಮನವಚನಕಾಯಗಳ ದೆಶೆಯಿಂ ।**
**ದನುದಿನದಿ ಬಿಡದಾಚರಿಸುತಿ ।**
**ಪ್ಪನುಚಿತೋಚಿತ ಕರ್ಮಗಳ ಸದ್ಭಕ್ತಿಪೂರ್ವಕದಿ ॥**
**ಅನಿಳದೇವನೊಳಿಪ್ಪ ನಾರಾ ।**
**ಯಣಗಿದನ್ನವು ಎಂದು ಕೃಷ್ಣಾ ।**
**ರ್ಪಣವೆನುತ ಕೊಡೆ ಸ್ವೀಕರಿಸಿ ಸಂತೈಪ ಕರುಣಾಳು ॥೧೩॥**

**ಅವತರಣಿಕೆ :**

ಶ್ರೀಮನ್ನಾರಾಯಣನ ನಳಿನ ಪದಗಳಿಗೆ ಆ ಕರ್ಮಗಳನ್ನು ಅನ್ನ ಎಂಬ ಅನುಸಂಧಾನದಿಂದ ಕೃಷ್ಣಾರ್ಪಣಪೂರ್ವಕವಾಗಿ ಅರ್ಪಿಸಲು ಶ್ರೀಪರಮಾತ್ಮನು ಸ್ವೀಕರಿಸಿ, ಉತ್ತಮ ಫಲವನ್ನು ತನ್ನ ಭಕ್ತರಿಗೆ ನೀಡಿ, ಅವರನ್ನು ರಕ್ಷಿಸುತ್ತಾನೆಂದು ತಿಳಿಸತ್ತಾರೆ.

**ಪ್ರತಿಪದಾರ್ಥ**

**ಮನ**–ಮನಸ್ಸಿನ ದ್ವಾರಾ (ಮನಸಾ), **ಕಾಯ**–ದೇಹಗತ ಇಂದ್ರಿಯಗಳ ದ್ವಾರಾ, (ಕಾಯೇನ), **ವಚನ**–ವಾಗ್ರೂಪವಾಗಿ (ವಾಚಾ) **ದೆಶೆಯಿಂದ**–ಹೀಗೆ ತ್ರಿಕರಣಪೂರ್ವಕವಾಗಿ, **ಅನುದಿನದಿ**–ಪ್ರತಿದಿನದಲ್ಲೂ (ಎಡಬಿಡದೆ), **ಆಚರಿಸುತ್ತಿಪ್ಪ**–ಅನುಷ್ಠಾನ ಮಾಡುತ್ತಿರುವ, **ಅನುಚಿತ ಉಚಿತ**–ನಿಂದ್ಯಾನಿಂದ್ಯವಾದ, **ಕರ್ಮಗಳ**–ಉಭಯ ಕರ್ಮಗಳನ್ನು, **ಸದ್ಭಕ್ತಿಪೂರ್ವಕದಿ**–ಮಾಹಾತ್ಮ್ಯಜ್ಞಾನಪೂರ್ವಕ ಸುದೃಢವಾದ ಭಕ್ತಿ ಮತ್ತು ಶ್ರದ್ಧೆಗಳಿಂದ, **ಅನಿಳ ದೇವನೊಳು ಇಪ್ಪ**–ತನ್ನ ಹೃದಯಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತನಾಗಿ ಇರುವ, **ನಾರಾಯಣಗೆ**–ಬಿಂಬರೂಪೀ

ಶ್ರೀಮನ್ನಾರಾಯಣದೇವರಿಗೆ. **ಇದು ಅನ್ನವು**–ದ್ವಂದ್ವ ಕರ್ಮಗಳನ್ನೇ ಅನ್ನವೆಂದು ಅನುಸಂಧಾನಮಾಡಿ. **ಕೃಷ್ಣಾರ್ಪಣವೆನುತ**–ಉಭಯ ಕರ್ಮಗಳಲ್ಲಿ, ಕರ್ಮರೂಪಿಯಾಗಿ, ಕರ್ಮಪ್ರೇರಕನಾಗಿ. ಕರ್ಮಶಬ್ದವಾಚ್ಯನಾಗಿ ಇರುವ ಶ್ರೀಪರಮಾತ್ಮನೇ ಸ್ವಾಖ್ಯರಸ್ವೀಕಾರ ಮಾಡುತ್ತಾನೆಂಬ ಅರ್ಪಣಾ ಭಾವದಿಂದ, **ಕೊಡೆ**–ಅರ್ಪಿಸಿದರೆ. **ಸ್ವೀಕರಿಸಿ**–ಅವುಗಳನ್ನು ತೆಗೆದುಕೊಂಡು, **ಕರುಣಾಳು**–ದಯಾಳುವಾದ ಶ್ರೀಮನ್ನಾರಾಯಣನು. **ಸಂತೈಪ**–ಜ್ಞಾನ ಭಕ್ತ್ಯಾದಿ ದೈವೀಸಂಪತ್ತನ್ನೂ, ಇಹದಲ್ಲಿ ಐಶ್ವರ್ಯಾದಿರೂಪವಾದ ಭೋಗ ಭಾಗ್ಯಗಳನ್ನೂ ಕೊಟ್ಟು ಆನಂದಪಡಿಸುವನು. ॥೧೩॥

# ವ್ಯಾಖ್ಯಾನಗಳು

## ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಸರ್ವಕರ್ಮಗಳ ಪರಮಾತ್ಮಗೆ ಅನ್ನತ್ವೇನ ಅರ್ಪಿಸಬೇಕೆಂದು ಹೇಳತಾರೆ.

ಮಾನಸಾ ವಾಚಾ ಕಾಯೇನ ದೇಹೇಂದ್ರಿಯಾದಿಗಳಿಂದ ಪ್ರತಿದಿನದಲ್ಲೂ, ಕ್ಷಣಲವಕಾಲಗಳಲ್ಲಿ ಆಚರಣೆ ಮಾಡತಕ್ಕ ನಿಂದ್ಯಾನಿಂದ್ಯ ಈ ಉಭಯ ಕರ್ಮಗಳ ಮಾಹಾತ್ಮ್ಯಜ್ಞಾನಪೂರ್ವಕ ಸುದೃಢಸ್ನೇಹದಿಂದ, ಅಹಂಜ್ಞಾನರಹಿತನಾಗಿ ಬಿಂಬಕ್ರಿಯಾದ್ವಾರಾ ಪ್ರತಿಬಿಂಬಕ್ರಿಯಾ ಎಂದು ತಿಳದು, ಈ ಉಭಯ ಕರ್ಮಗಳ ತನ್ನ ಹೃದಯಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತನಾದ ಶ್ರೀನಾರಾಯಣದೇವರಿಗೆ, ಈ ಉಭಯವಿಧವಾದ ಕರ್ಮಗಳು ಅನ್ನ ಎಂತ ಅನುಸಂಧಾನ ಮಾಡಿ ಎಂದರೆ, ಪರಮಾತ್ಮಗೆ ತನ್ನ ಸ್ವಾಖ್ಯಗಳು ತನಗೆ ಅನ್ನವಾಗ ಬೇಕೇ ಹೊರತು, ಅನ್ಯವಾದವು ಅನ್ನವಾಗೋದಿಲ್ಲ. ಕರ್ಮಾಂತರ್ಗತ ಕರ್ಮ ಶಬ್ದವಾಚ್ಯವಾದ ತನ್ನ ರೂಪವೇ, ದೇಹಾಂತರ್ಗತ ತನ್ನ ಬಿಂಬರೂಪೀ ಪರಮಾತ್ಮಗೆ ಅನ್ನ ಎಂತ ಕರಸೋದಾಗತದೆ. ಇದೇ ಅನ್ನವೆಂದು ತಿಳದು ವಾಚಾ ಕೃಷ್ಣಾರ್ಪಣ ಎಂದು ಉಚ್ಚಾರಮಾಡುತ್ತಾ ಅರ್ಪಿಸಿದರೆ, ದಯಾಳು ವಾದ ಶ್ರೀನಾರಾಯಣದೇವರು ತೆಗೆದುಕೊಂಡು ಜ್ಞಾನಭಕ್ತಿಗಳು, ಐಶ್ವರ್ಯಾದಿ ಗಳ ಕೊಟ್ಟು ಸಂತೋಷಪಡಿಸತಾನೆಂತ ತಾತ್ಪರ್ಯ. ॥೧೩॥

**ಭಾವಪ್ರಕಾಶಿಕೆ**

ಮನೋವಾಕ್ಕಾಯಗಳಿಂದ ನಾವು ನಿತ್ಯದಲ್ಲೂ ಮಾಡುವ ಪುಣ್ಯ ಪಾಪ ಕರ್ಮಗಳನ್ನು ಪರಮಾತ್ಮನೇ ಮಾಡಿಸುವನೆಂದು ತಿಳಿದು ದೃಢವಾದ ಭಕ್ತಿಯಿಂದ ಇವೆಲ್ಲವೂ ಪರಮಾತ್ಮನಿಗೆ ಅನ್ನವು ಎಂದು ಭಾವಿಸಿ, ಭಾರತೀರಮಣಮುಖ್ಯ ಪ್ರಾಣಾಂತರ್ಗತ ಶ್ರೀಲಕ್ಷ್ಮೀನಾರಾಯಣಃ ಪ್ರೀಯತಾಂ, ಕೃಷ್ಣಾರ್ಪಣಮಸ್ತು, ಎಂದು ಸಮರ್ಪಿಸಿದರೆ ಪರಮಾತ್ಮನು ಸ್ವೀಕರಿಸಿ ಪಾಪಗಳನ್ನು ಸುಟ್ಟು, ಪುಣ್ಯ ಗಳನ್ನು ವೃದ್ಧಿಗೊಳಿಸಿ, ಕರುಣಾಸಮುದ್ರನಾದ ಶ್ರೀಹರಿಯು ನಮ್ಮನ್ನು ಸಂರಕ್ಷಿಸುವನು. ॥೧೩॥

**ಭಾವದರ್ಪಣ**

ಮುಖ್ಯಪ್ರಾಣಾಂತರ್ಗತ ಶ್ರೀಹರಿಗೆ ಎಂದು ಅರ್ಪಣ ಮಾಡಿದರೆ ಸ್ವೀಕಾರ ಮಾಡುತ್ತಾನೆಂದು ತಾತ್ಪರ್ಯ ತೋರಿಸುತ್ತಾರೆ, ಮನವಚನೇತಿ

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ತ್ರೀಣಿ ಅನ್ನಾನಿ ನಿರ್ದಿಶತಿ–ಮನ ಇತಿ ॥೧೩॥

**ಕನ್ನಡಾರ್ಥ**

ಏಳು ವಿಧ ಅನ್ನಗಳಲ್ಲಿ ಸ್ವಾಹಾ–ಸ್ವಧಾ–ಧಾನ್ಯ–ತೃಣ ಈ ನಾಲ್ಕು ಅನ್ನಗಳನ್ನು ಹೇಳಿ ಇನ್ನುಳಿದ ಮೂರು ಅನ್ನಗಳನ್ನು ತಿಳಿಸುತ್ತಾರೆ ಮನ ಎಂಬ ಪದ್ಯದಿಂದ. ॥೧೩॥

**ಶ್ರೀಗುರುಹೃದಯಪ್ರಕಾಶಿಕೆ**

ಮನಸ್ಸು ವಾಕ್ಕು ಶರೀರ ಈ ಮೂರರಿಂದ ಮಾಡುವ ಯುಕ್ತಾಯುಕ್ತ ಸರ್ವಕ್ರಿಯೆಗಳನ್ನು, ಸದಾ ಸದ್ಭಕ್ತಿಪೂರ್ವಕದಿಂದ ಅನಿಲದೇವನಲ್ಲಿರುವ

ನಾರಾಯಣನಿಗೆ ಇದು ಅನ್ನವೆಂದು ತಿಳಿದು ಕೃಷ್ಣಾರ್ಪಣ ಅಂತ ಕೊಡಲು ಎಂದರೆ. ಪ್ರಾಣಾಂತರ್ಯಾಮಿ ನಾರಾಯಣನು ನಮ್ಮಲ್ಲಿದ್ದು. ಉಚಿತಾನುಚಿತ ಸರ್ವಕ್ರಿಯವೂ ವ್ಯಕ್ತಿ ಮಾಡಿ, ತನ್ನ ಪೂಜಾರೂಪವೆಂದು ಮಾಡಿಸುವದ್ದರಿಂದ ಸರ್ವವೂ ಅವನಿಗೆ ಸಂತೋಷಕರ. ಆ ಸ್ವಾಮಿ ಅಧೀನವೆಂದು ಭಾವಿಸುವುದೇ ಕೃಷ್ಣಾರ್ಪವೆಂಬ ಸಮರ್ಪಣೆ ಎಂದು ಅರ್ಥ. ಹೀಗೆ ಸರ್ವಾರ್ಪಣವನ್ನೂ ಅಂಗೀಕರಿಸಿ ದೇವರು ರಕ್ಷಿಸುವನಾದ್ದರಿಂದ ಕರುಣಾಳು. ||೧೩||

# ಸರ್ವವ್ಯಾಖ್ಯಾನಸಾರಸಂಗ್ರಹ

ತ್ರಿಕರಣಗಳಿಂದಾಗುವ ಕರ್ಮಾರ್ಪಣೆಯ ವಿಷಯ ತಿಳಿಸುತ್ತಾರೆ. ಪಂಚ ಜ್ಞಾನೇಂದ್ರಿಯಗಳ ದ್ವಾರಾ ಗಂಧಾದಿ ವಿಷಯಗಳನ್ನು ಗ್ರಹಿಸುವ ಪಂಚ ಕರ್ಮೇಂದ್ರಿಯಗಳ ದ್ವಾರಾ ವ್ಯಾಪಾರಗಳಿಗೆ ಅಭಿವ್ಯಕ್ತಿ ಕೊಡುವ ಕೇಂದ್ರಸ್ಥಾನ ವಾದ ಮನಸ್ಸು ಅತ್ಯಂತ ಪ್ರಮುಖವಾದ ಏಕಾದಶೇಂದ್ರಿಯವೆನಿಸಿದೆ. ಮಾನಸಿಕವಾಗಿ ಯುಕ್ತಾಯುಕ್ತಕಾರ್ಯಗಳು ನಾನಾ ರೂಪದಲ್ಲಿ ನಡಿಯುತ್ತಿರು ವುವು. ಧ್ಯಾನ, ಸ್ಮರಣ, ಭಗವಚ್ಚಿಂತನೆ, ಜಪ, ತಪ ಸದಾಲೋಚನೆ ಇತ್ಯಾದಿ ಗಳೆಲ್ಲವೂ ಪುಣ್ಯರೂಪವಾದ ಮಾನಸಿಕ ಕ್ರಿಯೆಗಳು. ದುರಾಲೋಚನೆ, ಕೋಪ, ಮಾತ್ಸರ್ಯ, ದುರಹಂಕಾರ, ದುರಾಸೆ, ಕಾಮೇಚ್ಛೆ ಇವೆಲ್ಲವೂ ಪಾಪಫಲ ವನ್ನು ಕೊಡುವ ಮಾನಸಿಕ ವ್ಯಾಪಾರಗಳು.

ವಚನ–ವಾಗ್ರೂಪವಾದ ಕ್ರಿಯಾಕಲಾಪಗಳು, ಸಜ್ಜನರೊಡನೆ ಸಂಭಾಷಣೆ ವೇದಪಠಣ, ಭಗವಂತನ ಗುಣಗಾನ ಮಾಡುವಿಕೆ, ಭಗವತ್ಸಂಬಂಧವಾದ ಗಾಯನ, ಪಾಠಪ್ರವಚನಾದಿಗಳು. ಇತ್ಯಾದಿ ಉಚಿತಕರ್ಮಗಳು ವಚನ ರೂಪವಾದ ಕ್ರಿಯೆಗಳು. ಪರನಿಂದಾ, ದುಷ್ಟಮಾತುಗಳು. ಮನಸ್ಸನ್ನು ನೋಯಿಸುವ ಬಿರುನುಡಿಗಳು, ಹಾಳು ಹರಟೆ ಇತ್ಯಾದಿಗಳು ವಾಗ್ರೂಪವಾದ ಅನುಚಿತ ಕರ್ಮಗಳು.

ಕಾಯ–ದೇಹದ ದ್ವಾರಾ ನಡಿಯುವ ಕ್ರಿಯಾವಿಶೇಷಗಳು ದೈಹಿಕ ಕ್ರಿಯೆಗಳೆನಿಸುವುವು. ದೇವತಾನಮನ, ಗುರುಹಿರಿಯರಿಗೆ ಸಾಷ್ಟಾಂಗಪೂರ್ವಕ

ನಮಸ್ಕಾರ, ಇತ್ಯಾದಿ ಕಾಯಿಕವಾದ ಕ್ರಿಯೆಗಳು ಭಗವತ್ಪ್ರೀತಿಪಾತ್ರವು. ಶರೀರಗತ, ಪಂಚಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ಇವುಗಳ ದ್ವಾರಾ ನಡೆಯುವ ಐಂದ್ರಿಕಕ್ರಿಯೆಗಳೂ ಸಹ ಶಾರೀರಿಕ ಕರ್ಮಗಳೇ. ಶರೀರದ ದ್ವಾರಾ ಹಾಗೂ ಇಂದ್ರಿಯಗಳ ದ್ವಾರಾ ನಡೆಯುವ ದುಷ್ಟ ಕ್ರಿಯೆಗಳು ಪಾಪ ಫಲಪ್ರದಗಳು.

ಶರೀರಧಾರಿಗಳಾದ ಸಮಸ್ತಜೀವರೂ ಜನನಾರಭ್ಯ ಮರಣಪರ್ಯಂತ ವಾಗಿ, ಎಡಬಿಡದೆ, ಮಾನಸಿಕ, ವಾಚನಿಕ, ಕಾಯಿಕ, ಈ ಪ್ರಕಾರ ತ್ರಿಕರಣ ಗಳಿಂದ ವ್ಯಾಪಾರಗಳನ್ನು ಮಾಡುತ್ತಲೇ ಇರುತ್ತಾರೆ. ಇಂತಹ ಕರ್ಮಗಳು ಮೂರು ಪ್ರಕಾರ :

1. ಪುಣ್ಯಫಲವನ್ನು ಕೊಡುವ ಸುಕರ್ಮಗಳು ಸತ್ತ್ವಗುಣಪ್ರಾಚುರ್ಯ ದಿಂದ
2. ಪಾಪಫಲಪ್ರದವಾದ ದುಷ್ಕರ್ಮಗಳು ತಮೋಗುಣಪ್ರಾಚುರ್ಯ ದಿಂದ
3. ಸುಖದುಃಖ ಉಭಯಾನುಭವಗಳ ಕೊಡುವ ಮಿಶ್ರಕರ್ಮಗಳು ರಜೋಗುಣಪ್ರಾಚುರ್ಯದಿಂದ

ಪೂರ್ವೋಕ್ತ ಮೂರು ಪ್ರಕಾರವಾದ ಸಕಲಕರ್ಮಗಳೂ ಜೀವರ ಅನಾದಿ ಕರ್ಮದಂತೆ ಶ್ರೀಪರಮಾತ್ಮನಿಂದ ಪ್ರೇರಿತವಾಗಿ ನಡೆಯುತ್ತಲೇ ಇರುವುವು. ಇದು ಅನಿವಾರ್ಯ.

ಸರ್ವತಂತ್ರಸ್ವತಂತ್ರನಾದ ಬಿಂಬರೂಪೀ ಶ್ರೀಪರಮಾತ್ಮನು ಗುಣತ್ರಯ ಗಳನ್ನು ಉಪಾದಾನ ಕಾರಣವನ್ನಾಗಿ ಮಾಡಿಕೊಂಡು, ತ್ರಿವಿಧ ರೂಪವಾದ ಕರ್ಮಗಳನ್ನು ಮಾಡಿ ಮಾಡಿಸುತ್ತಿರುವನು. ಅನಾದಿಲಿಂಗಶರೀರಗತ ಕರ್ಮ ಬೀಜಗಳ ಅಭಿವ್ಯಕ್ತಿಯೇ ಈ ಕ್ರಿಯಾರೂಪದಲ್ಲಿ ಮಾನಸಿಕವಾಗಿ, ವಾಚನಿಕ ವಾಗಿ, ಕಾಯಿಕವಾಗಿ ಹೊರಬೀಳುವುವು. ಈ ಕರ್ಮಾಭಿವ್ಯಕ್ತಿಗೆ ಜೀವರು ಸ್ವತಂತ್ರರಲ್ಲ. ಬಿಂಬನು ಕರ್ಮಾಂತರ್ಗತನಾಗಿದ್ದು, ಕರ್ಮರೂಪಿಯಾಗಿದ್ದು, ಕರ್ಮನಾಮಕನಾಗಿ, ಜೀವರ ಅನಾದಿ ಕರ್ಮಗಳ ಅಭಿವ್ಯಕ್ತಿಗೆ ಪ್ರೇರಕಶಕ್ತಿ

ನಾಗಿದ್ದಾನೆ. ಜೀವನಿಗೆ ನಿಜವಾಗಿಯೂ ಸ್ವಾತಂತ್ರ್ಯವಿದ್ದಿದ್ದರೆ, ಅವನು ಏನೇನು ಕರ್ಮಗಳನ್ನು ಮಾಡುತ್ತಿದ್ದನೋ ಆ ಸಕಲ ಕರ್ಮಗಳನ್ನೂ ಜೀವಾಂತರ್ಗತನಾಗಿ, ಜೀವನ ಹೆಸರಿನಲ್ಲಿ ಜೀವೇಶನೇ ಬಿಂಬಕ್ರಿಯಾದ್ವಾರಾ ಮಾಡಿ, ತತ್ತ್ವದೇವತೆಗಳ ದ್ವಾರಾ ಪುಣ್ಯಕರ್ಮಗಳನ್ನೂ, ತತ್ತ್ವದೈತ್ಯರ ದ್ವಾರಾ ಪಾಪಕ್ರಿಯೆಗಳನ್ನು ಮಾಡಿಸಿ, ಈ ದೇಹಾದ್ಯಂತ ಇಂದ್ರಿಯಗಳಲ್ಲಿ (ಕಾಯಾ–ವಾಚಾ–ಮನಸಾ) ಪ್ರಕಾಶತೋ ವ್ಯಾಪ್ತನಾದ ಜೀವನದ್ವಾರಾ ಮಾಡಿಮಾಡಿಸಿ, ಅವನ ಅನುಭವಕ್ಕೆ ತಂದೀಯುವನು.

ಈ ಕರ್ಮದ ನಿಜ ಮರ್ಮವನ್ನು ಅರಿತು, ಸಕಲ ಕರ್ಮಗಳಿಗೂ ಆ ಸರ್ವೇಶನ ಪ್ರೇರಣೆಯೇ ಮುಖ್ಯಕಾರಣವೆಂದು ಉತ್ತಮ ಜ್ಞಾನಾನುಸಂಧಾನವುಳ್ಳ ಭಗವದ್ಭಕ್ತರು ಕೃಷ್ಣಾರ್ಪಣಬುದ್ಧಿಯಿಂದ ದ್ವಂದ್ವಕರ್ಮಗಳನ್ನು ಭಾರತೀರಮಣರ ದ್ವಾರಾ ಅರ್ಪಿಸುತ್ತಿರುವರು. ಆ ಕರ್ಮಗಳನ್ನು ಕರುಣಾಳುವಾದ ಕಂಜೋದ್ಭವಪಿತನು ಸ್ವೀಕರಿಸಿ, ತನ್ನ ಭಕ್ತರ ಪುಣ್ಯಕರ್ಮಗಳನ್ನು ಅನಂತ ಮಾಡಿ ಕೊಟ್ಟು, ಸುಖಪಡಿಸುವನು. ದುಷ್ಕರ್ಮಗಳನ್ನು ತನ್ನ ಕರುಣಾ ಕಟಾಕ್ಷವೀಕ್ಷಣದಿಂದ ಭಸ್ಮಮಾಡಿ, ಆ ದುಷ್ಕರ್ಮಗಳ ಫಲರೂಪವಾದ ಪಾಪಗಳ ಲೇಪವಿಲ್ಲದಂತೆ ಮಾಡಿ, ಶುದ್ಧರನ್ನಾಗಿ ಮಾಡುವನು. ಇದೇ ದ್ವಂದ್ವ ಕರ್ಮ ಸಮರ್ಪಣೆಯ ಮರ್ಮವು. ॥೧೩॥

## ಪದ್ಯ—೧೪

**ಮೂಲ :–**

ಏಳುವಿಧದನ್ನಪ್ರಕರಣವ ।  
ಕೇಳಿ ಕೋವಿದರಾಸ್ಯದಿಂದಲಿ ।  
ಆಲಸವ ಮಾಡದೆಲೆ ಅನಿರುದ್ಧಾದಿರೂಪಗಳ ॥  
ಕಾಲಕಾಲಕೆ ನೆನೆದು ಪೂಜಿಸು ।  
ಸ್ಥೂಲಮತಿಗಳಿಗಿದನು ಪೇಳದೆ ।  
ಶ್ರೀಲಕುಮಿವಲ್ಲಭನೆ ಅನ್ನಾದನ್ನ ಅನ್ನದನು ॥ ॥೧೪॥

**ಅವತರಣಿಕೆ :-**

ಸಪ್ತಾನ್ನಪ್ರಕರಣದ ರಹಸ್ಯತತ್ತ್ವವನ್ನು ಬ್ರಹ್ಮಜ್ಞಾನಿಗಳ ಮುಖದಿಂದ ತಿಳಿದು ಆ ರಮಾಧವನನ್ನು ಚಿಂತನ ಮಾಡಬೇಕೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಏಳುವಿಧದನ್ನಪ್ರಕರಣವ**–ಏಳುವಿಧ ಪಿತೃಗಳಿಗೆ ಕೊಡುವ ಸಪ್ತಾನ್ನದ ವಿಷಯವನ್ನು, **ಕೋವಿದರ**–ಬ್ರಹ್ಮಜ್ಞಾನಿಗಳ. **ಆಸ್ಯದಿಂದಲಿ**–ಮುಖದಿಂದ (ಉಪದೇಶ ದ್ವಾರಾ). **ಕೇಳಿ**–ಶ್ರವಣಮಾಡಿ. **ಆಲಸವ ಮಾಡದೆಲೆ**–ಅಶ್ರದ್ಧಾ ಮಾಡದೆ (ಉದಾಸೀನನಾಗದೇ) **ಅನಿರುದ್ಧಾದಿರೂಪಗಳ**–ಪೂರ್ವೋಕ್ತ ವಿವರಿಸಲ್ಪಟ್ಟಂತೆ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ಮೂರು ರೂಪಗಳನ್ನು ಮೂರು ವಿಧ ಪಿತೃಗಳಲ್ಲಿಯೂ. ಅನಿರುದ್ಧನ ಕರ್ತೃ, ಕರ್ಮ, ಕ್ರಿಯೆಗಳಲ್ಲಿಯೂ. ನಾರಾಯಣನ ಸರ್ವತ್ರಗತರೂಪಗಳು ಹೀಗೆ ರೂಪ ಚಿಂತನೆಯನ್ನು, **ಕಾಲಕಾಲಕೆ**–ಶ್ರಾದ್ಧ ಮಾಡತಕ್ಕ ಪ್ರತಿಕಾಲದಲ್ಲಿಯೂ **ನೆನೆದು**–ಪೂರ್ವೋಕ್ತಪ್ರಕಾರ ಷಣ್ಣವತಿನಾಮಕನ ೯೬ ರೂಪಗಳನ್ನು ಸಂಸ್ಮರಿಸುತ್ತಾ. **ಪೂಜಿಸು**–ವಾಯ್ವಂತರ್ಗತ ಭಗವದ್ರೂಪಗಳನ್ನು ಅರ್ಚಿಸು. **ಸ್ಥೂಲಮತಿಗಳಿಗೆ**–ಅಲ್ಪರಾದ ಅಜ್ಞಾನಿಗಳಿಗೆ ಪಂಡಿತಮಾನಿಗಳಿಗೆ. **ಇದನು ಪೇಳದೆ**–ಈ ರಹಸ್ಯವನ್ನು ತಿಳಿಸದೇ. **ಶ್ರೀಲಕುಮಿವಲ್ಲಭನೆ**–ಶ್ರೀಲಕ್ಷ್ಮೀ ರಮಣನಾದ ನಾರಾಯಣನೇ. **ಅನ್ನ**–ಸಪ್ತಾನ್ನಗಳಲ್ಲಿ ಅನ್ನ ಶಬ್ದವಾಚ್ಯನಾಗಿ, **ಅನ್ನದ** – ಆಹಾರಪ್ರದನೆಂದೂ, **ಅನ್ನಾದ**–ಸ್ವಾಖ್ಯರಸಸ್ವೀಕಾರಮಾಡುವನೆಂದೂ, ಚಿಂತನೆಮಾಡಬೇಕು. ॥೧೭॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತ ಏಳುವಿಧ ಅನ್ನವಿಚಾರ ಹೇಳುತಾರೆ,

ಏಳು ಪ್ರಕಾರ, ಪಿತೃಗಳಿಗೆ ಕೊಡತಕ್ಕ ಅನ್ನವು. ಪಿತೃಗಳು ಮೃತಾ ನಂತರದಲ್ಲಿ ಏಳು ಸ್ಥಾನವನ್ನು ಆಶ್ರಯ ಮಾಡಿ ಇರತಾರೆ. ಅದಕ್ಕೆ ಅಧಿಕ ವಾಗಿ ಸ್ಥಾನ ಆಶ್ರಯ ಮಾಡಿ ಇರೋದಿಲ್ಲ. ಈ ಏಳು ಸ್ಥಾನದೊಳಗೆ ತನ್ನ ಪಿತೃಗಳು ದಾವಸ್ಥಾನದಲ್ಲಿ ಇರ್ತಾರೋ ತಿಳಿಯದು. ಆದ್ದರಿಂದ ಏಳು ಪ್ರಕಾರ ಅನ್ನಕೊಟ್ಟರೆ, ಏಳು ಸ್ಥಾನದಲ್ಲಿ ಎಲ್ಲಿ ಇದ್ದರೂ ಅವರಿಗೇ ಸೇರೋ ದಾಗತದೆ. ಆದ್ದರಿಂದ ಏಳು ಪ್ರಕಾರ ಅನ್ನಕೊಡಬೇಕು. ಆ ಏಳು ವಿಧ ದಾವದೆಂದರೆ ಹೇಳತಾರೆ–

೧. **ಅಗ್ನೌ ಕರಣೇನ ದೇವಸ್ಥಾಃ** –ತನ್ನ ಪಿತೃಗಳು ದೇವತೆಗಳಾಗಿ ದೇವಲೋಕದಲ್ಲಿದ್ದರೆ, ಅವರಿಗೆ ಅಗ್ನೌಕರಣಾಖ್ಯ ಅನ್ನದಿಂದ ತೃಪ್ತಿಯಾಗತದೆ.

೨. **ಸ್ವರ್ಗಸ್ಥಾಃ ವಿಪ್ರಭೋಜನೇ**–ತನ್ನ ಪಿತೃಗಳು ಸ್ವರ್ಗದಲ್ಲಿ ಇದ್ದರೆ, ಬ್ರಾಹ್ಮಣ ಭೋಜನಾಖ್ಯ ಅನ್ನದಿಂದ ಅವರಿಗೆ ತೃಪ್ತಿ ಯಾಗತದೆ.

೩. **ಯಮಸ್ಥಾಃ ಪಿಂಡ ದಾನೇನ**–ತನ್ನ ಪಿತೃಗಳು ಯಮ ಲೋಕದಲ್ಲಿದ್ದರೆ ಪಿಂಡಪ್ರದಾನರೂಪವಾದ ಅನ್ನದಿಂದ ಅವರಿಗೆ ತೃಪ್ತಿಯಾಗತದೆ.

೪. **ನರಕೇ ವಿಕಿರೇಣ ತು**–ತನ್ನ ಪಿತೃಗಳು ನರಕಲೋಕದಲ್ಲಿ ಇದ್ದರೆ ವಿಕಿರಾಖ್ಯ ಅನ್ನದಿಂದ ಅವರಿಗೆ ತೃಪ್ತಿಯಾಗತದೆ.

೫. **ಉಚ್ಛಿಷ್ಟೇನ ಚ ಪೈಶಾಚಾಃ**–ತನ್ನ ಪಿತೃಗಳು ಪೈಶಾಚರಾಗಿದ್ದರೆ ಉಚ್ಛಿಷ್ಟಾನ್ನದಿಂದ (ಉಚ್ಛಿಷ್ಟಪಿಂಡ) ಅವರಿಗೆ ತೃಪ್ತಿ ಆಗತದೆ.

೬. **ಅಸುರಾ ಭೂರಿಭೋಜನಾತ್**–ತನ್ನ ಪಿತೃಗಳು ಅಸುರರಾಗಿ ದ್ದರೆ ಭೂರಿಭೋಜನದಿಂದ ಅವರಿಗೆ ತೃಪ್ತಿಯುಂಟಾಗತದೆ.

೭. **ದಕ್ಷಿಣೇನ ಮನುಷ್ಯಾದ್ಯಾಃ** –ತನ್ನ ಪಿತೃಗಳು ಮನುಷ್ಯರಾಗಿ ಜನಿಸಿದ್ದ ಕಾಲಕ್ಕೂ ಅಥವಾ ದಾವ ಯೋನಿಯಲ್ಲಿ ಜನಿಸಿ ದಾವ

ಜನ್ಮ ಬಂದಿದ್ದ ಕಾಲಕ್ಕೂ ದಕ್ಷಿಣಾಖ್ಯ ಅನ್ನದಿಂದ ಅವರಿಗೆ ತೃಪ್ತಿ ಆಗತದೆ.

ಆದ್ದರಿಂದ ಶ್ರಾದ್ದೇ ಸಪ್ತ ವಿಧೀಯಂತೇ ಎಂತ. ಶ್ರಾದ್ಧಕಾಲದಲ್ಲಿ ಈ ಪ್ರಕಾರ ಏಳುವಿಧ ಅನ್ನದಿಂದ ತೃಪ್ತಿ. ಈ ಏಳರಲ್ಲಿ ದಾವುದೋ ಒಂದು ಸೇರತದೆ. ಅಥವಾ ಮೂರು ವಿಧ ಪಿತೃಗಳು ಬ್ಯಾರೆ ಬ್ಯಾರೆ ಮೂರು ಸ್ಥಾನದಲ್ಲಿ ಇದ್ದರೂ, ಮೂರು ವಿಧ ಅಂಶ ಸೇರತದೆ. ಉಳಿದದ್ದಕ್ಕೆ ಭಾಗಿಗಳಿಲ್ಲ. ಭಾಗಿಗಳು ಇಲ್ಲದಿದ್ದರೆ ಪುಣ್ಯ ಪಿತೃದೇವತೆಗಳಿಗೆ ಸೇರತದೆ. ಉಚ್ಛಿಷ್ಟಪಿಂಡದ ವಿಚಾರ ಏಳರಲ್ಲಿ ಅಂತರ್ಭೂತ. ಪ್ರತ್ಯೇಕವಲ್ಲ. ಇವೇ ಏಳುವಿಧ ಅನ್ನಗಳು.

ಇದರ ವಿಚಾರ ಬಹಳ ವಿಸ್ತಾರವಾಗಿ ಅದೆ. ಈ ವಿಷಯಗಳನ್ನು ಸಾವಕಾಶ ಮಾಡಧಾಂಗೆ ಅಶ್ರದ್ಧಾ ಮಾಡದೆ, ಇದರ ಮರ್ಮವನ್ನು ತಿಳಿದ ಜ್ಞಾನಿಗಳ ಮುಖದಿಂದಲಿ ಶ್ರವಣಮಾಡಿ ತಿಳಕೊಂಡು. ಪೂರ್ವೋಕ್ತ ಪ್ರಕಾರ ಪ್ರದ್ಯುಮ್ನ ಸಂಕರ್ಷಣ ವಾಸುದೇವ ಮೂರು ರೂಪಗಳ ಮೂರುವಿಧ ಪಿತೃಗಳೊಳಗೂ, ಅನಿರುದ್ಧನ ಕರ್ತೃ ಕರ್ಮ ಕ್ರಿಯೆಗಳೊಳಗೂ, ಅಂತು ನಾಲ್ಕು ರೂಪಗಳ ಶ್ರಾದ್ಧ ಮಾಡತಕ್ಕ ಪ್ರತಿಕಾಲದಲ್ಲೂ ಪೂರ್ವೋಕ್ತ ತೊಂಭತ್ತಾರು ರೂಪಗಳು ಅನಿರುದ್ಧಾದಿ ರೂಪಗಳ, ಉಭಯಪ್ರಕಾರವಾದ ರೂಪಗಳ ತಿಳಿದು ಭಾರತೀರಮಣಮುಖ್ಯಪ್ರಾಣಾಂತರ್ಗತನ್ನಾಗಿ ಪೂಜಿಸು. ಅಲ್ಪರಾದ ಅಜ್ಞಾನಿಗಳಿಗೆ, ಪಂಡಿತಮಾನಿಗಳಿಗೆ ಈ ವಿಚಾರವನ್ನು ಹೇಳಬ್ಯಾಡ. ಹೇಳ ದೇನೇ ಕಾಂತಿಸಂಪನ್ನರಾದ ಲಕ್ಷ್ಮೀದೇವರಿಗೆ ಪತಿಯಾದ ನಾರಾಯಣನೇ ಸಪ್ತಾನ್ನದಲ್ಲಿ ಅನ್ನಶಬ್ದವಾಚ್ಯನಾಗಿದ್ದಾನೆ. ತನ್ನ ಸ್ವಾಖ್ಯ ಅನ್ನವನ್ನ ಅಧಿಷ್ಠಾನಾಂತರ್ಗತನಾಗಿ ತನಗೆ ತಾನೇ ಕೊಡತಕ್ಕವ. ಮತ್ತೊಂದು ಅಧಿಷ್ಠಾ ನಾಂತರ್ಗತನಾಗಿ ತನಗೆ ತಾನೇ ಭಕ್ಷಿಸತಕ್ಕವ, ಈ ಪ್ರಕಾರ ನಿಮಂತ್ರಿತ ಬ್ರಾಹ್ಮಣರ ಭುಕ್ತಾನ್ನಗತ ದ್ವಾರಾ ತನ್ನ ಸ್ವಾಖ್ಯ ಅನ್ನವನ್ನ ಭೋಜನ ಮಾಡತಕ್ಕವ, ಈ ಪ್ರಕಾರ ಅನುಸಂಧಾನದಿಂದ ಪಿತೃಕಾರ್ಯದಲ್ಲಿ ಚಿಂತನ ಮಾಡಬೇಕು ಎಂತ ತಾತ್ಪರ್ಯ.

**ವಿಶೇಷಾರ್ಥ :–**

ಏಳುವಿಧ ಅನ್ನವೆಂದರೆ ಪ್ರಕಾರಾಂತರ ಅರ್ಥ–ದೇವ, ಪಿತೃ, ಮಾನುಷ್ಯ, ಪಶುಗಳು ಈ ನಾಲ್ಕು ವಿಧ ಜೀವರಿಗೆ ಮಾನೋವಾಕ್ಕಾಯವೆಂಬ ಮೂರು ವಿಧದಿಂದ ಆದ ಮೂರು ವಿಧ ಸರ್ವಕರ್ಮಗಳು ದೇವರಿಗೆ ಅನ್ನ ಎಂತ ಹೇಳುವ ಬೃಹದಾರಣ್ಯಕೋಪನಿಷದ್ಭಾಷ್ಯದ ಅರ್ಥವು. ಅನ್ನ ಎಂದರೆ, ಉಪಜೀವ್ಯ ಆಶ್ರಯನಾದ್ದರಿಂದ ಅನ್ನ ಎಂತ ಹೆಸರು. ಅನ್ನಾದ ಎಂದರೆ, ಜಠರಾಗ್ನಿ ಯಲ್ಲಿದ್ದು ಅನ್ನಪರಿಪಾಕಾದಿಗಳ ಮಾಡಿ ಸ್ವರಸ ಕೊಳ್ಳುವದ್ದರಿಂದ ಅನ್ನ ಭೋಕ್ತೃ ಎಂದೂ ಹೆಸರುಳ್ಳವನು. ಎಲ್ಲರಿಗೂ ತನಗೂ ಸಹ ಮೇಲೆ ಹೇಳಿದ ಅನ್ನ ಕಲ್ಪಿಸಿಕೊಡುವದ್ದರಿಂದ, ಅನ್ನ ಕೊಡುವ ತಾನು ಅನ್ನದ ಎನಿಸಿ ಕೊಂಬೋನು. ॥೧೪॥

**ಭಾವಪ್ರಕಾಶಿಕೆ**

೧೧, ೧೨, ೧೩ನೆ ಮೂರು ಪದ್ಯಗಳಿಂದ ೭ ವಿಧವಾದ ಅನ್ನಪ್ರಕರಣ ವನ್ನು ಹೇಳಿದರು. ಆ ಸಪ್ತಾನ್ನವನ್ನೇ ಕ್ರೋಡೀಕರಿಸಿ ಈ ಪದ್ಯದಲ್ಲಿ ಹೇಳು ತ್ತಾರೆ. ಏಳು ವಿಧ (ಸಪ್ತಾನ್ನ) ಅನ್ನಪ್ರಕರಣವನ್ನು ಬೃಹದಾರಣ್ಯಕೋಪ ನಿಷತ್ತಿನಲ್ಲಿ ವಿಶದ ಮಾಡಿರುವರು. ಬೃಹದಾರಣ್ಯಕೋಪನಿಷತ್ ೩ನೆಯ ಅಧ್ಯಾಯ ೫ನೆಯ ಸಪ್ತಾನ್ನ ಬ್ರಾಹ್ಮಣದಲ್ಲಿ ಮೊದಲನೆಯ ಖಂಡ ಯತ್ಸಪ್ತಾ ನ್ನಾಗಿ ಮೇಧಯಾ ತಪಸಾ ಅಜನಯತ್ಪಿತೈಕಮಸ್ಯ ಸಾಧಾರಣಂ ದ್ವೇದೇವಾನ ಭಾಜಯತ್, ತ್ರೀಣಾತ್ಮನೇ ಕುರುತಪಶುಭ್ಯ ಏಕಂ ಪ್ರಾಯಚ್ಛತ್ ತಸ್ಮಿನ್ಸರ್ವಂ ಪ್ರತಿಷ್ಠಿತಂ ಇತ್ಯಾದಿ ವಿಷ್ಣು, ಬ್ರಹ್ಮದೇವರಿಬ್ಬರೂ ಗೃಹಸ್ಥಾಶ್ರಮಿಗಳಾದರು. ಆದುದರಿಂದ ಗೃಹಸ್ಥಾಶ್ರಮದಲ್ಲಿರುವವನು ಉತ್ತಮನು ಎಂದು ಆತ್ಮೈವ ಇತ್ಯಾದಿ ಖಂಡಗಳಿಂದ ಹೇಳಿದರು. ಆ ಗೃಹಸ್ಥನು ಭಗವಂತನಿಂದ ಸೃಷ್ಟವಾದ ಅನ್ನವನ್ನು ಎಲ್ಲಾ ಪ್ರಾಣಿಗಳಿಗೂ ಸಮಬಾಧ್ಯವೆಂದರಿಯಬೆ ತನ್ನದೆಂದು ತಿಳಿಯಬಾರದೆಂದು ಹೇಳುತ್ತಾರೆ. ಯತ್ಸಪ್ತಾನ್ನಾನಿ ಎಂಬ ಖಂಡದಿಂದ ಪಿತಾ–ಸರ್ವ ಜಗತ್ತಿಗೂ ತಂದೆಯಾದ ಶ್ರೀಹರಿಯು, ಮೇಧಯಾ–ತನ್ನ ಇಚ್ಛೆಯಿಂದ, ತಪಸಾ–ಪ್ರಾಣಿಗಳ ಸಂಬಂಧವಾದ ಕರ್ಮಗಳಿಂದ, ಸಪ್ತಾನ್ನಾನಿ–

೭ ವಿಧ ಅನ್ನಗಳನ್ನು, ಅಜನಯಂತ್-ಸೃಷ್ಟಿಸಿದನು. ಪ್ರಾಣಿಗಳಿಗೆ ತೃಪ್ತಿಯಾಗುವುದರಿಂದ ಅನ್ನವೆಂದು ಹೆಸರು. ಆ ೭ ವಿಧಾನ್ನಗಳು ಯಾವುವೆಂದರೆ ಪ್ರಾಣಿಭಿರದ್ಯಮಾನಮೇಕಂ–ಪ್ರಾಣಿಗಳು ಭುಂಜಿಸುವ ಸಾಧಾರಣವಾದ ಅನ್ನ ಒಂದು. ವೈಶ್ವದೇವ, ಬಲಿಹರಣ ಇವೆರಡು. ಪ್ರಾಣಿಗಳ ಮನಸ್ಸು, ವಾಕ್ ಪಂಚಪ್ರಾಣರೂಪವಾದವು ಮೂರು, ಹಾಲು ಅಥವಾ ನೀರು ಒಂದು ಅಂತು ೭ ಈ ಏಳರ ಪೈಕಿ ಒಂದು ಮಾತ್ರ ಜಗತ್ತಿಗೆ ಸಾಧಾರಣವಾದುದು. ವೈಶ್ವದೇವ, ಬಲಿಹರಣರೂಪವಾದ ಎರಡು ಅನ್ನಗಳು ದೇವತೆಗಳಿಗೆ, ಉಪಲಕ್ಷಣಯಾ ಪಿತೃಗಳಿಗೂ ಸೇರುವದು. ಸಪ್ತಾನ್ನಗಳಲ್ಲಿ ವೈಶ್ವದೇವ ಬಲಿಹರಣ ರೂಪವಾದ ಎರಡು ಅನ್ನಗಳಿಗೆ ದೇವತೆಗಳನ್ನೂ ಪಿತೃಗಳನ್ನೂ ಭಾಗಿಗಳನ್ನಾಗಿ ಮಾಡಿದರೆಂದರ್ಥ. ಮನಸ್ಸು ವಚನ ಪ್ರಂಚಪ್ರಾಣ ಈ ಮೂರು ಅನ್ನಗಳನ್ನು ಪರಮಾತ್ಮನು ತನಗಾಗಿ ಇಟ್ಟುಕೊಂಡನು. ಪಶುಗಳಿಗೆ ಉದಕರೂಪವಾದ ಒಂದು ಅನ್ನವನ್ನು ಕೊಟ್ಟನು. ಆದರೆ ಈ ಉದಕವು ಪಶುಗಳಿಗೆ ಮಾತ್ರವೇ ಅಲ್ಲ, ಸರ್ವ ಜಗತ್ತೂ ಉದಕದಿಂದ ಉಪಜೀವಿಸಿಕೊಂಡು ಇರುವಂತೆ ಮಾಡಿದನು, ಎಂಬಿವೇ ಮುಂತಾದ ವಿಷಯಗಳನ್ನು ವಿಸ್ತಾರವಾಗಿ ಹೇಳಿರುವರು. ಈ ಸಪ್ತಾನ್ನ ಬ್ರಾಹ್ಮಣವು ಒಟ್ಟು ೨೩ ಖಂಡಗಳಿರುವುವು. ಪ್ರಕೃತ ನಮಗೆ ಬೇಕಾದ ೧ ಖಂಡದಲ್ಲಿ ಸ್ವಲ್ಪಭಾಗವು ಮಾತ್ರ ಇಲ್ಲಿ ಬರೆಯಲ್ಪಟ್ಟಿದೆ. ಹೆಚ್ಚು ವಿಷಯಗಳನ್ನು ತಿಳಿಯಬೇಕಾದರೆ ಬೃಹದಾರಣ್ಯಕೋಪನಿಷತ್ತಿನಲ್ಲೂ, ಖಂಡಾರ್ಥದಲ್ಲೂ, ಭಾಷ್ಯದಲ್ಲೂ, ಸಪ್ತಾನ್ನ ಬ್ರಾಹ್ಮಣವೆಂಬ ಆನೆಯ ಬ್ರಾಹ್ಮಣವನ್ನು ನೋಡಿ ತಿಳಿಯಬಹುದು. ಇದೇ ಉಪನಿಷತ್ತಿನ ಈ ಖಂಡಕ್ಕೆ ಭಾಷ್ಯದಲ್ಲಿ ಹೇಳಿರುವ ಖಂಡಾರ್ಥ ಹೀಗಿದೆ. ಶ್ರೀಪರಮಾತ್ಮನು ಯಾವಾಗ ಸಪ್ತಾನ್ನವನ್ನು ಸೃಷ್ಟಿಸಿದನೋ ಆಗ ಪರಮಪುರುಷನಾದ ಪ್ರಭುವಾದ ಶ್ರೀಹರಿಯು ಮನಸ್ಸಿನಿಂದಲೂ, ವಾಕ್ಯದಿಂದಲೂ, ಪಂಚಪ್ರಾಣಗಳಿಂದಲೂ ಮಾಡುವ ಕ್ರಿಯಾ ರೂಪವಾದ ಮೂರು ವಿಧ ಅನ್ನಗಳನ್ನು ತನ್ನ ಭಾಗವೆಂದು ಇಟ್ಟುಕೊಂಡನು. ಈ ಮೂರುವಿಧವಾದ ಕರ್ಮಗಳಿಂದ ಪರಮಾತ್ಮನು ಪ್ರೀತನಾಗುವನು, ಆದ್ದರಿಂದ ಮನಸ್ಸಂಬಂಧವಾದ ಅನ್ನವೆಂದರೆ ಮನಸ್ಸನ್ನು ಪರಮಾತ್ಮನ ಪಾದಾರವಿಂದದಲ್ಲಿಟ್ಟು ಭಗವತ್ಸೇವಾ ರೂಪವಾದ ಕರ್ಮವನ್ನು ಮಾಡುವೆನೆಂದು ಮನಸಾ ಸಂಕಲ್ಪಮಾಡಿ ಕರ್ಮವನ್ನು ಮಾಡಿದ ಮೇಲೆ

ಅಸ್ವತಂತ್ರನು ನಾನು, ಪರಮಾತ್ಮನೇ ನನ್ನೊಳಗಿದ್ದು ಮಾಡಿಸಿದನೆಂದು ತಿಳಿದು ಪರಮಾತ್ಮನಿಗೆ ಅರ್ಪಿಸಬೇಕು. ಇದು ಮಾನಸ್ಸಂಬಂಧವಾದ ಅನ್ನವು. ವಾಕ್ಯವನ್ನು ಭಗವನ್ನಿಂದಾ ಮತ್ತು ಭಗವದ್ಭಕ್ತರ ನಿಂದಾದಿಗಳಲ್ಲಿ ಉಪಯೋಗಿಸದೆ ಕೇವಲ ಅವರ ಸ್ತೋತ್ರಾದಿಗಳು ಮಾಡಲು ನಿಲ್ಲಿಸಬೇಕು. ಪ್ರಾಣಾಪಾನಾದಿ ೫ರಲ್ಲಿ ಪ್ರಾಣವನ್ನು ಭಗವತ್ಸಂಬಂಧ ಕರ್ಮವನ್ನು ಮಾಡಲಿಕ್ಕೂ, ಅಪಾನವನ್ನು ಅನ್ಯಕರ್ಮಗಳ ತ್ಯಾಗಕ್ಕೂ, ಭಗವದ್ವಿರೋಧಿಗಳ ನಿರಾಸನಕ್ಕಾಗಿ ವ್ಯಾನವನ್ನು, ಯೋಗಧಾರಣಕ್ಕೋಸ್ಕರ ಉದಾನವನ್ನು ಮನೋವಾಕ್ ಮೊದಲಾದ ಇಂದ್ರಿಯಗಳನ್ನು ನಿಗ್ರಹ ಮಾಡುವುದಕ್ಕಾಗಿ ಸಮಾನವನ್ನು ಹೀಗೆ ಪಂಚಪ್ರಾಣಗಳಿಂದಾಗುವ ಕೃತ್ಯವನ್ನು ಅನ್ನವೆಂದು ಪರಮಾತ್ಮನಿಗೆ ಸಮರ್ಪಿಸಬೇಕು. (ಈ ವಿಷಯಗಳು ಇನ್ನೂ ಬಹಳವಿರುವವು. ಅಷ್ಟು ವಿಸ್ತಾರ ಬರೆಯಲು ಗ್ರಂಥವಿಸ್ತಾರವಾಗುವುದರಿಂದ ಇಷ್ಟಕ್ಕೇ ಬಿಟ್ಟಿರುತ್ತೆ.) ೪ನೆಯದು ಸರ್ವಜನ ಸಾಮಾನ್ಯವಾದ ಭೋಜ್ಯವಾದ ಅನ್ನವು. ಈ ಅನ್ನವು ಸರ್ವ ಜನರಿಗೂ ಸಾಮಾನ್ಯವಾಗಿರುವುದರಿಂದ ಯಾವನು ಅದನ್ನು ತನ್ನದೆಂದು ಭಾವಿಸುವನೋ ಅಂತಹವನಿಗೆ ದೇವಬ್ರಾಹ್ಮಣರ ಸೊತ್ತನ್ನು ಅಪಹರಿಸಿದ ಪಾಪಿಗಳಿಗೆ ಬರುವ ಮಹಾಪಾಪವು ಸಂಭವಿಸುವುದು. ಈ ಅನ್ನದಲ್ಲಿ ಬಲಿಹೋಮ ರೂಪವಾಗಿ ಎರಡನ್ನು ದೇವತೆಗಳಿಗಾಗಿ ಶ್ರೀಪರಮಾತ್ಮನು ಕೊಟ್ಟಿರುವನು. ಅದೇ ವೈಶ್ವದೇವ, ಬಲಿಹರಣ. ವೈಶ್ವದೇವವು ದೇವತೆಗಳಿಗೆ ಮಾತ್ರ. ಬಲಿಹರಣವು ದೇವತೆಗಳಿಗೂ ಪಿತೃಗಳಿಗೂ ಸಹ. ಆದ್ದರಿಂದ ನಾವು ಅನ್ನಪಕ್ವಮಾಡಿದ ಮೇಲೆ ಆ ಅನ್ನವು ದೇವತೆಗಳಿಗೆ ಸೇರಿದುದು. ಏಕೆಂದರೆ ಮಳೆಗೆ ಅಭಿಮಾನಿಯಾದ ದೇವತೆ ಮಳೆಯನ್ನು ಸಕಾಲಕ್ಕೆ ಬರಿಸಿ ಬೆಳೆಯನ್ನು ಬೆಳೆಸಬೇಕು. ಬೆಂಕಿಗೆ ಅಭಿಮಾನಿದೇವತೆ ಅನ್ನವನ್ನು ಪಕ್ವಮಾಡಬೇಕು. ಈ ರೀತಿ ಅನೇಕ ದೇವತೆಗಳ ಸಹಾಯವಿಲ್ಲದೆ ನಮ್ಮ ಅನ್ನವು ಸಿದ್ಧವಾಗುವಂತಿಲ್ಲ. ಆದ್ದರಿಂದ ಅದನ್ನು ಅವರಿಗೆ ಕೊಡದೆ ಅವರಪ್ಪಣೆ ಇಲ್ಲದೆ ಸ್ವತಂತ್ರವಾಗಿ ನಮ್ಮ ಇಚ್ಛೆಗೆ ಬಂದಂತೆ ವಿನಿಯೋಗಮಾಡಿದರೆ ದೇವತೆಗಳ ಸೊತ್ತನ್ನು ಅಪಹರಿಸಿದ ದೋಷವು ನಮಗೆ ಬರುವುದು. ಚತುಷ್ಪಾದಿ ದ್ವಿಪಾದಿಗಳ ಅಂದರೆ, ಪಶು ಮನುಷ್ಯಾದಿಗಳ ಉಪಜೀವನಕ್ಕಾಗಿ ಪಯಃ ಉದಕಮಯವಾದ ಎಳನೆಯ ಅನ್ನವನ್ನು ಸೃಷ್ಟಿಸಿದನು. ಆ ಅನ್ನದಲ್ಲಿ ಹಸುವಿನ

ಹಾಲು ಮುಖ್ಯವಾದುದು. ಆ ಹಾಲನ್ನು ತನಗೂ ದೇವತೆಗಳಿಗೂ ಹೋಮಾದಿಗಳನ್ನು ಮಾಡುವುದಕ್ಕಾಗಿ ಕಲ್ಪಿಸಿದನು. ಆದ್ದರಿಂದ ಯಾವ ಪುರುಷನು ಒಂದು ಸಂವತ್ಸರದವರೆಗೂ ಹಸುವಿನ ಹಾಲಿನಿಂದ ಹೋಮಾದಿಗಳನ್ನು ಮಾಡುವನೋ ಅವನು ಮುಕ್ತಿಯನ್ನು ಹೊಂದುವನು. ಅಪರೋಕ್ಷದಲ್ಲಿ ಭಗವದ್ರೂಪವನ್ನು ಕಾಣದವನಿಗೆ ಈ ಸಪ್ತಾನ್ನೋಪಾಸನವು ದರ್ಶನಕ್ಕೆ ಕಾರಣವು. ಸಪ್ತಾನ್ನೋಪಾಸನವು ದೇವತಾಯೋಗ್ಯವಾದುದರಿಂದ ಪರಮ ಉತ್ತಮವಾದುದು. ಆದ್ದರಿಂದ ಈ ಸಪ್ತಾನ್ನೋಪಾಸನೆಯನ್ನು ಮಾಡುವವನು ದೇವಪದಕ್ಕೆ ಯೋಗ್ಯನೇ ಸರಿ. ಅವನು ದೇವತ್ವವನ್ನು ಹೊಂದುವನು, ಎಂಬಿವೇ ಮೊದಲಾದ ಅನೇಕ ವಿಷಯಗಳನ್ನು ಬೃಹದಾರಣ್ಯೋಪನಿಷದ್ಭಾಷ್ಯದಲ್ಲಿ ಹೇಳಿರುವರು. ಇವೇ ಅರ್ಥಗಳನ್ನೇ ೧೧ನೇ ಪದ್ಯ ಮೊದಲು ೧೪ನೆಯ ಪದ್ಯದವರೆಗೂ ದಾಸರಾಯರು ಹೇಳಿರುವರು. ಇಂತಹ ೭ ವಿಧವಾದ ಅನ್ನಪ್ರಕರಣವನ್ನು ತಿಳಿದವರ ಮುಖದಿಂದ ವಿಸ್ತಾರವಾಗಿ ಕೇಳಿ ತಿಳಿದುಕೊಂಡು ಅನಿರುದ್ಧಾದಿ ರೂಪಗಳನ್ನು ಸ್ಮರಿಸಿ ಪೂಜಿಸಬೇಕು. ಬೃಹದಾರಣ್ಯೋಪನಿಷದ್ಭಾಷ್ಯೋಕ್ತ ವೈಶ್ವದೇವ ಬಲಿಹರಣರೂಪವಾದ ಎರಡು ಅನ್ನಗಳ ಪ್ರಕರಣವನ್ನು "ದ್ರುಹಿಣ ಮೊದಲಾದ" ಎಂಬ ಪದ್ಯದಿಂದ ಹೇಳಿರುವರು. ಅದರಲ್ಲಿ ಹೇಳಿರುವ ದೇವತೋದ್ದೇಶ ಮಾಡಿ ಹೋಮ ಮಾಡುವ ಸ್ವಾಹಾ ಎಂಬ ಉಪಾಸನೆಯೇ ವೈಶ್ವದೇವವೆಂದರ್ಥ. ಅಲ್ಲಿ ವಾಸುದೇವ ಮೂರ್ತಿಯನ್ನು ಚಿಂತಿಸಬೇಕು. ಸ್ವಧಾರೂಪದಿಂದ ಪಿತೃಗಳಿಗೆ ಆಹಾರಸಲ್ಲಿಸುವ ಎಂದು ಹೇಳಿದುದೇ ಬಲಿಹರಣ. ದೇವತೆಗಳಿಗೆ ಸ್ವಾಹ ಶಬ್ದದಿಂದಲೂ ಪಿತೃಗಳಿಗೆ ಸ್ವಧಾ ಶಬ್ದದಿಂದಲೂ ಬಲಿಯನ್ನು ಕೊಡಬೇಕು. ಅಲ್ಲಿ ಸಂಕರ್ಷಣನನ್ನು ಚಿಂತಿಸಬೇಕು. ಹೀಗೆ ಎರಡು ಅನ್ನಗಳಾ..ವು. ೧೨ನೆಯ ಪದ್ಯದಲ್ಲಿ ೩–೪ ಈ ಎರಡು ಅನ್ನಗಳನ್ನು ಹೇಳಿರುವರು. ತೃಣ ಮೊದಲಾದ ಹೆಸರಿನಿಂದಲೂ, ಮಹಿಜ ಎಂದರೆ ಭೂಮಿಯಲ್ಲಿ ತೋಡಿದರೆ ಸಿಕ್ಕುವ ನೀರೆಂದು ಅರ್ಥ ಮಾಡಬೇಕು. ಪಶು ಮೊದಲಾದ ಸರ್ವ ಪ್ರಾಣಿಗಳಿಗೂ ಜೀವನಪ್ರದವಾದುದು ನೀರು. ಇದು ಮೂರನೆಯ ಅನ್ನ. ೪ನೆಯದು ಸರ್ವಸಾಧಾರಣವಾದ ಮನುಷ್ಯ, ದೇವತೆ ಮೊದಲಾದ ಎಲ್ಲರಿಗೂ ಉಪಯೋಗವಾದ ಅನ್ನ. ಈ ನೃಪಶುಗಳಿಗೆ ಆಹಾರವಾದ ಅನ್ನದಲ್ಲಿ ಪ್ರದ್ಯುಮ

ಅನಿರುದ್ಧರನ್ನು ಚಿಂತಿಸಬೇಕು. ಉಳಿದ ಮೂರು ಅನ್ನಗಳನ್ನು ೧೩ನೆಯ ಮನವಚನಕಾಯಾದಿಯೆಂಬ ಪದ್ಯದಿಂದ ಹೇಳಿರುವರು. ಈ ಮೂರರಲ್ಲೂ ನಾರಾಯಣನನ್ನು ಚಿಂತಿಸಬೇಕು. ಬೃಹದಾರಣ್ಯ ಭಾಷ್ಯದಲ್ಲಿ ಮನ, ವಚನ, ಪ್ರಾಣವೆಂಬ ಮೂರು ಅನ್ನವನ್ನು ಹೇಳಿರುವರು. ಭಾಷ್ಯದಲ್ಲಿ ಹೇಳಿದ ಪ್ರಾಣ ಶಬ್ದವನ್ನೇ ದಾಸರಾಯರು ಕಾಯವೆಂದು ಹೇಳಿರುವರು. ಈ ವ್ಯತ್ಯಾಸ ವೇಕೆಂದರೆ ಪ್ರಾಣಾಪಾನಾದಿಗಳಿಂದ ಆಗಬೇಕಾದ ಕರ್ಮಗಳನ್ನು ಭಾಷ್ಯದಲ್ಲಿ ಹೇಳುವಾಗ, ಭಗವತ್ಸಂಬಂಧ ಕರ್ಮ ಮಾಡಲು ಪ್ರಾಣ ಕಾರಣವೆಂತಲೂ, ಅಪಾನ ಅನ್ಯಕರ್ಮ ತ್ಯಾಗಕ್ಕೂ, ವ್ಯಾನವು ಭಗವದ್ವಿರೋಧಿಗಳ ನಿರಾಸನಕ್ಕೂ ಎಂಬಿವೇ ಮೊದಲಾದ ವಿಷಯಗಳು ಪಂಚಪ್ರಾಣರ ಕಾರ್ಯವೆಂದು ಬೃಹದಾರಣ್ಯಭಾಷ್ಯವಾಕ್ಯ. ದಾಸರಾಯರ ಅಭಿಪ್ರಾಯವೇನೆಂದರೆ ಈ ಪ್ರಾಣಾಪಾನಾದಿ ಐದು ಪ್ರಾಣರಿಂದ ಆಗುವ ಕರ್ಮಗಳು ಶರೀರದ್ವಾರಾ ಆಗುವವೇ ಹೊರತು ದೇಹವನ್ನು ಬಿಟ್ಟು ಆಗುವಂತಿಲ್ಲವೆಂದು ಭಾವಿಸಿ ಮನ ವಚನ ಕಾಯವೆಂಬುವ ದೇಹಕೃತ್ಯವನ್ನು ಒಂದು ಅನ್ನವೆಂದು ತೆಗೆದುಕೊಂಡರು, ಆದ್ದರಿಂದ ಇದು ಆಚಾರ್ಯರ ವಾಕ್ಯಕ್ಕೆ ವಿರೋಧವಿಲ್ಲ. ಈ ರೀತಿಯಾಗಿ ಅನಿರುದ್ಧಾದಿ ೫ ರೂಪಗಳನ್ನು ಮೇಲೆ ಹೇಳಿದಂತೆ ೭ ಅನ್ನಗಳಲ್ಲಿ ವೈಶ್ವದೇವದಲ್ಲಿ ಸ್ವಾಹಾ ರೂಪಾನ್ನ, ಬಲಿಹರಣದಲ್ಲಿ ಸ್ವಧಾರೂಪಾನ್ನ, ಸಾಧಾರಣಾನ್ನ, ಉದಕ ಈ ನಾಲ್ಕರಲ್ಲಿ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ಈ ನಾಲ್ಕು ರೂಪಗಳನ್ನೂ. ಮನ ವಚನ ಕಾಯರೂಪಗಳಾದ ೩ ಅನ್ನಗಳಲ್ಲಿ ನಾರಾಯಣ ರೂಪವನ್ನೂ, ಹೀಗೆ ೫ ರೂಪಗಳನ್ನು ೭ ವಿಧ ಅನ್ನಗಳಲ್ಲಿ ಚಿಂತಿಸಬೇಕೆಂಬ ತಾತ್ಪರ್ಯ. ಇದನ್ನು ತಿಳಿಯು ಯಾವ ಯಾವ ಕಾಲದಲ್ಲಿ ಯಾವ ಯಾವ ಅನ್ನವನ್ನು ಸಮರ್ಪಿಸುವಿರೋ ಆಯಾಕಾಲಕ್ಕೆ ಆಯಾ ಮೂರ್ತಿಯನ್ನು ಸ್ಮರಿಸಬೇಕು. ಈ ವಿಷಯವನ್ನು ಬರೇ ಇಂದ್ರಿಯಗಳಿಗೆ ಪ್ರೀತಿ ವಿಷಯವಾದ ಸ್ಥೂಲವಿಷಯದಲ್ಲೇ ಮನಸ್ಸನ್ನು ಇಟ್ಟಿರುವರಿಗೆ ಉಪದೇಶ ಮಾಡಬಾರದು ಶ್ರೀಪರಮಾತ್ಮನೇ ಈ ಪ್ರಕಾರ ಅನ್ನಸ್ವರೂಪನೂ, ಅನ್ನಪ್ರದನೂ, ಅನ್ನ ಭುಂಜಿಸುವವನೂ ಎಂದು ತಿಳಿದು ಉಪಾಸನೆ ಮಾಡಬೇಕು. ॥೧೪॥

**ಭಾವದರ್ಪಣ**

ಖಾದ್ಯ ಪೇಯ ಚೋಷ್ಯ ಲೇಹ ಹೀಗೆ ಚತುರ್ವಿಧಾನ್ನ ಮನುಷ್ಯರಿಗೆ, ಸ್ವಾಹಾ ದೇವತೆಗಳಿಗೆ, ಸ್ವಧಾ ಪಿತೃಗಳಿಗೆ, ತೃಣಫಲ ಪಶುಪಕ್ಷಿಗಳಿಗೆ ಅಂತು ಏಳುವಿಧಾನ್ನವೆಂದು ಹೇಳುತ್ತಾರೆ ಏಳುವಿಧೇತಿ ॥೧೪॥

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ನನು ಏತತ್ ಕದಾಪಿ ಅಶ್ರುತಂ ಕಥಂ ಉಪಾಸ್ಯಂ ಚೇತ್ ಬೃಹದ್ಭಾಷ್ಯಾದಿ ನಿಪುಣಾಚಾರ್ಯಾನ್ ಉಪೇಹಿ ಶರಣಮ್ ಇತ್ಯಾಹ–ಏಳುವಿಧ ಇತಿ॥ ಸ್ವಯಂ ಅನ್ನಗಃ ಅನ್ನಂ ಭೂತ್ವಾ ಅನ್ನ ಪ್ರಭಕ್ಷ್ಯ ಸರ್ವಗಃ ಸನ್ ಅನ್ನಂ ದದಾತಿ ಇತಿ.

ಇತಿ ನಾಮಾತ್ರಯೋಽರ್ಥ್ಯಃ । ಯಥಾಹ
ಸಪ್ತಾನ್ನವಿತ್ ವೇದದ್ರಷ್ಟಾ ॥ ತದ್ಬ್ರಾಹ್ಮಣೇ

ಯತ್ಸಪ್ತಾನ್ನಾನಿ ತಪಸಾ ಜನಯತ್ ಪಿತಾ । ಏಕಮಸ್ಯ ಸಾಧಾರಣಮ್ ದ್ವೇದೇವಾನ್ ಅಭಾಜಯತ್ । ತ್ರೀಣಿ ಆತ್ಮನೇಽಕುರುತ ॥ ಪಶುಭ್ಯ ಏಕಂ ಪ್ರಾಯಚ್ಛತ್ ಇತಿ ॥ ತ್ರೀಣಿ ಆತ್ಮನೇಽಕುರುತೇತಿ ಮನೋ ವಾಚಂ ಪ್ರಾಣಂ ತಾನಿ ಆತ್ಮನೇಂಕುರುತ ॥ ತದ್ಭಾಷ್ಯೇ ಚ ।

ಪಿತಾ ವಿಷ್ಣುಃ ॥ ಯತ್ ಯದಾ । ತಪಸಾ ಪ್ರಾಣಿನಾಂ ಕರ್ಮಭಿಃ । ಮೇಧಯಾ ಸ್ವೇಚ್ಛಯಾ। ಸಪ್ತಾನ್ನಾನಿ ಯದಾ ವಿಷ್ಣುಃ ಪರಮಃ ಪುರುಷಃ ವಿಭುಃ ॥ ಸಸರ್ಜ ತೇಷಾಂ ಸ್ವಾರ್ಥಾನಿ ಚಕಾರ ತ್ರೀಣಿ ಕೇಶವಃ ॥ ಮನೋ ವಾಚಂ ತಥಾ ಪ್ರಾಣಂ ತಸ್ಮಾತ್ ತೈಃ ತುಷ್ಟಿಂ ಏತಿ ಸಃ ॥ ತತ್ಪ್ರಕಾರಶ್ಚ ತತ್ರೈವ ದ್ರಷ್ಟವ್ಯಃ ॥ ವಿಸ್ತೃತಿಭಿಯಾ ಉಪರಮ್ಯತೇ ॥ ಚತುರ್ಥಂ ಭೋಜ್ಯಮೇವಾನ್ನಂ ಸರ್ವಸಾಧಾರಣಂ ಸ್ಮೃತಮ್ ॥ ತದೇವ ಮಂತ್ರ ಯುಕ್ತತ್ವಾತ್ ಬಲಿಹೋಮಾತ್ಮನಾದ್ವಯಮ್ ॥ ದೇವಾನಾಂ ಪ್ರದದೌ ॥ ಚತುಷ್ಪಾದ್ಭ್ಯಃ ದ್ವಿಪಾದ್ಭ್ಯಶ್ಚ ಪಶುಭ್ಯಃ ಪಯ ಆತ್ಮಕಮ್ ಪ್ರಾಯಚ್ಛತ್ ಸಪ್ತಮಾನ್ನಂ

ಸಃ ॥ ನ ನರಾ ಯೋಗ್ಯಾಃ ಏತದುಪಾಸನೇ ॥ ಜ್ಞಾನಮಾತ್ರೇಣ ದೇವಾನಾಂ ಸಾಮೀಪ್ಯಂ ಪ್ರಾಪ್ನುವಂತಿ ತೇ ॥ ಇತಿ ನಾರಾಯಣೀಯೇ ॥ ಚತುರ್ವಿಧ ನಾಲ್ಕನೇದು ॥೧೪॥

## ಕನ್ನಡಾರ್ಥ

ಪರಮಾತ್ಮನು ಅನ್ನನೆನಿಸುವನೆಂಬುದಾಗಿ ಹೇಳಿದ ಸಂಗತಿಯು ನಮ್ಮ ಅನುಭವದಲ್ಲಿ ಕಂಡುಬಂದಿರುವುದಿಲ್ಲ; ನಾವು ಈ ಉಪಾಸನೆಯನ್ನೇ ಎಂದೂ ಕೇಳಲಿಲ್ಲ. ಆದುದರಿಂದ ಹೇಗೆ ಉಪಾಸಿಸಬೇಕು ? ಎಂದು ಸಂಶಯವು ಬರಬಹುದು. ಆದರೆ ಬೃಹದಾರಣ್ಯಭಾಷ್ಯ ಪ್ರವಚನದಲ್ಲಿ ನಿಪುಣರಾದ ಗುರುಗಳಿಗೆ ಶರಣು ಹೋಗಬೇಕು. ಆದರೆ ಈ ಸಂಶಯವು ದೂರವಾಗುತ್ತದೆ, ಎಂದು ಹೇಳುತ್ತಾರೆ. ಏಳು ವಿಧದ ಎಂಬ ಪದ್ಯದಿಂದ.

ತಾನು (ಹರಿಯು) ಸ್ವತಃ ಅನ್ನರೂಪನಾಗಿ. ಅನ್ನದಲ್ಲಿ ಇದ್ದು, (ಅನ್ನನಾಮಕನಾಗಿ) ಅನ್ನವನ್ನು ಭಕ್ಷಿಸಿ. ಎಲ್ಲ ಕಡೆಗಳಲ್ಲಿ ಇದ್ದು, ಅನ್ನವನ್ನು ಕೊಡುವನು ಎಂಬುದಾಗಿ ಅನ್ನದ. ಅನ್ನದಾತಾ ಎಂಬ ಮೂರು ನಾಮಗಳಿಂದ ಹರಿಯನ್ನು ಸ್ತುತಿಸಬೇಕು. ಇದೇ ಅಭಿಪ್ರಾಯವನ್ನು ಸಪ್ತಾನ್ನವಿದ್ ವೇದ ದ್ರಷ್ಟಾ ಏಳುವಿಧ ಅನ್ನವನ್ನು ತಿಳಿದವನು, ವೇದ–ದ್ರಷ್ಟಾ ಎನಿಸುವನು ಎಂಬುದು ಹೇಳುತ್ತದೆ.

ಸಪ್ತಾನ್ನ ಬ್ರಾಹ್ಮಣದಲ್ಲಿ ಸಮಸ್ತಾ ಜಗಜ್ಜನಕನಾದ ಶ್ರೀವಿಷ್ಣುವು ೧. ಪ್ರಾಣಿಗಳು ತಿನ್ನಬೇಕಾದುದು ೨. ವೈಶ್ವದೇವ ೩. ಬಲಿಹರಣ ೪. ಮನಸ್ಸು ೫. ವಾಕ್ಕು ೬. ಪ್ರಾಣ ೭. ಹಾಲು, ಎಂಬ ಏಳು ವಿಧ, ಅನ್ನಗಳನ್ನು ತನ್ನದೇ ಇಚ್ಛೆಯಿಂದ ಪ್ರಾಣಿಗಳ ಕರ್ಮಗಳನ್ನನು ಸರಿಸಿ ಸೃಷ್ಟಿಸಿದನು, ಈ ಏಳು ಅನ್ನಗಳ ಮಧ್ಯದಲ್ಲಿ ಒಂದು ವಿಧ ಅನ್ನವು (ಮೊದಲನೆಯದು) ಈ ಸಮಸ್ತ ಜಗತ್ತಿಗೆ ಸಾಧಾರಣವಾದುದು. ದೇವತೆಗಳಿಗೆ ವೈಶ್ವದೇವ, ಬಲಿಹರಣಗಳೆಂಬ ಎರಡು ವಿಧ ಅನ್ನಗಳನ್ನು ಹಂಚಿದನು. ಮನಸ್ಸು ವಾಕ್ ಪ್ರಾಣಗಳೆಂಬ ಮೂರು ವಿಧ ಅನ್ನಗಳನ್ನು ತನಗೋಸ್ಕರ

ಮಾಡಿಕೊಂಡನು. ಕೊನೆಯದಾದ ಹಾಲು ಎಂಬ ಅನ್ನವನ್ನು ಪಶು ಮೊದಲಾದವುಗಳಿಗೆ ಹಂಚಿದನು (ಕೊಟ್ಟನು) ಎಂಬುದಾಗಿ ಉಕ್ತವಾಗಿದೆ, ಮಾತ್ತ್ರಿ ತ್ರೀಣಿ ಎಂಬ ವಾಕ್ಯವನ್ನು ಉಪನಿಷತ್ತು ತಾನೇ ಮನಸ್ಸು, ವಾಕ್ಕು, ಪ್ರಾಣ, ಈ ಮೂರು ಅನ್ನಗಳನ್ನು ತನಗೆ ಮಾಡಿಕೊಂಡನು ಎಂದು ವ್ಯಾಖ್ಯಾನಿಸುತ್ತದೆ.

ಬೃಹದಾರಣ್ಯ ಭಾಷ್ಯದಲ್ಲಿ–ಪಿತಾ ಎಂಬುದಕ್ಕೆ ವಿಷ್ಣುವು ಎಂದು ಅರ್ಥ. ಯೋನಃ ಪಿತಾ ಎಂದು ಹೇಳಿರುವುದರಿಂದ ವಿಷ್ಣುವೇ ಪಿತೃಶಬ್ದ ವಾಚಗಃ ಯತ್ ಯಾವಾಗ ತಪಸಾ ಪ್ರಾಣಿಗಳ ಕರ್ಮಗಳಿಂದ ಅಂದರೆ ಅವುಗಳನ್ನನು ಸರಿಸಿ ಎಂದು ಅರ್ಥ. ಮೇಧಯಾ ಸ್ವೇಚ್ಛೆಯಿಂದ (ತನ್ನ ಇಚ್ಛೆಯಿಂದ) ಉಪಲಕ್ಷಣ ಪದಗಳಿಗೆ ಹೀಗೆಯೇ ಅರ್ಥ ಹೇಳಬೇಕು. ಅದೇ ಸಮಂಜಸ, ಎಂಬ ವಿಷಯದಲ್ಲಿ ಪ್ರಮಾಣವಿರುತ್ತದೆ. ಪರಮಪುರುಷ ಶ್ರೀಹರಿಯು ಏಳು ಅನ್ನಗಳನ್ನು ಸೃಷ್ಟಿಸಿ ಅವುಗಳ ಮಧ್ಯದಲ್ಲಿ ಮನೋ, ವಾಕ್, ಪ್ರಾಣಗಳೆಂಬ ಮೂರು ಅನ್ನಗಳನ್ನು ತನಗಾಗಿ ಮಾಡಿಕೊಂಡನು. ಹೀಗೆ ತಾನು ಅವುಗಳನ್ನು ಅನ್ನಗಳನ್ನಾಗಿ ಮಾಡಿರುವುದರಿಂದ ಅನ್ನಗಳಾದುದರಿಂದ ಶ್ರೀಹರಿಯು ಅವುಗಳಿಂದ ತೃಪ್ತಿಹೊಂದುತ್ತಾನೆ. ಎಂದು ಹೇಳಲಾಗಿರುತ್ತದೆ.

ತೃಪ್ತಿ ಹೊಂದುವ ಬಗೆಯನ್ನು ಭಾಷ್ಯದಲ್ಲಿಯೇ ನೋಡಿ ತಿಳಿದುಕೊಳ್ಳಬೇಕು. ಗ್ರಂಥವಿಸ್ತಾರದ ಭೀತಿಯಿಂದ ನಾವು ಇಷ್ಟಕ್ಕೆ ವಿಶ್ರಮಿಸುತ್ತೇವೆ. ಹೆಚ್ಚಿನ ಸಂಗತಿಯನ್ನು ಬರೆಯುವುದಿಲ್ಲ.

ಸರ್ವರೂ ತಿನ್ನುವ ಅನ್ನವು ನಾಲ್ಕನೆಯದು ಅಂದರೆ ಉಪನಿಷತ್ತಿನಲ್ಲಿ "ಅಸ್ಯಸುಧಾರಸಂ" ಎಂದು ಮೊದಲು ಹೇಳಲ್ಪಟ್ಟಿದ್ದು. ಸರ್ವರಿಗೂ ಸಾಧಾರಣವಾದ ಅನ್ನವೇ ಮಂತ್ರಗಳಿಂದ ಸಂಸ್ಕೃತವಾದರೆ ವೈಶ್ವದೇವ ಹಾಗೂ ಬಲಿಹರಣಗಳೆನಿಸುವವು. ಇವೆರಡನ್ನು ದೇವತೆಗಳಿಗೆ ಕೊಟ್ಟನು. ನಾಲ್ಕು ಕಾಲುಗಳುಳ್ಳ ಪಶುಗಳಿಗೂ (ಎರಡು ಕಾಲಿನ) ಮನುಷ್ಯರಿಗೂ ಹಾಲು ಎಂಬ ಏಳನೆಯ ಅನ್ನವನ್ನು ಕೊಟ್ಟನು. ಈ ಸಪ್ತಾನ್ನ ಉಪಾಸನೆಯಲ್ಲಿ ದೇವತೆಗಳು ಯೋಗ್ಯ ಅಧಿಕಾರಿಗಳು, ಮನುಷ್ಯರಲ್ಲ. ಮನುಷ್ಯರು ಈ ಸಪ್ತಾನ್ನ ವಿದ್ಯೆಯ ಜ್ಞಾನದಿಂದ ಮಾತ್ರವೇ ದೇವತೆಗಳ ಸಾಮೀಪ್ಯವನ್ನು ಹೊಂದುತ್ತಾರೆ. ಎಂದು ಭಾಷ್ಯದಲ್ಲಿ ನಾರಾಯಣೀಯ ಗ್ರಂಥದ ಆಧಾರವನ್ನು ತೋರಿಸುತ್ತಾರೆ. ॥೧೪॥

# ಸರ್ವವ್ಯಾಖ್ಯಾನ ಸಾರಸಂಗ್ರಹ

ಸಪ್ತಾನ್ನ ಪ್ರಕರಣದ ಪ್ರಮೇಯ ರಹಸ್ಯಾರ್ಥವನ್ನು ತಿಳಿಸುತ್ತಾರೆ.

ಸಪ್ತಾನ್ನ ಪ್ರಕರಣದ ವಿಚಾರಗಳು ಬೃಹದಾರಣ್ಯೋಕಪನಿಷತ್ತಿನಲ್ಲಿಯೂ ಶ್ರೀಮದಾಚಾರ್ಯರ ಉಪನಿಷದ್ಭಾಷ್ಯದಲ್ಲಿಯೂ, ಶ್ರೀರಾಘವೇಂದ್ರ ಗುರುಸಾರ್ವಭೌಮರ ಉಪನಿಷತ್ ಖಂಡಾರ್ಥದಲ್ಲಿಯೂ ಈ ಪ್ರಕರಣವು ವಿವರಿಸಲ್ಪಟ್ಟಿದೆ.

ಸಪ್ತಾನ್ನಗಳು ಏಳು ಪ್ರಕಾರ

1. ಪಿತೃಗಳು ದೇವತೆಗಳಾಗಿ ದೇವಲೋಕದಲ್ಲಿದ್ದರೆ, ಅವರಿಗೆ ಅಗ್ನೌಕರಣಾಖ್ಯ ಅನ್ನದಿಂದ ತೃಪ್ತಿಯಾಗುವುದು.

ಅಗ್ನೌಕರಣೇನ ದೇವಸ್ಥಾಃ

2. ಪಿತೃಗಳು ಸ್ವರ್ಗದಲ್ಲಿದ್ದರೆ, ಬ್ರಾಹ್ಮಣ ಭೋಜನಾಖ್ಯ ಅನ್ನದಿಂದ ತೃಪ್ತಿಯಾಗುವುದು.

ಸ್ವರ್ಗಸ್ಥಾಃ ವಿಪ್ರಭೋಜನೇ

3. ಪಿತೃಗಳು ಯಮಲೋಕದಲ್ಲಿದ್ದರೆ, ಪಿಂಡಪ್ರದಾನರೂಪವಾದ ಅನ್ನದಿಂದ ತೃಪ್ತಿಯಾಗುವುದು.

ಯಮಸ್ಥಾಃ ಪಿಂಡದಾನೇನ

4. ಪಿತೃಗಳು ನರಕಲೋಕದಲ್ಲಿದ್ದರೆ, ವಿಕಿರಾಖ್ಯ ಅನ್ನದಿಂದ ತೃಪ್ತಿಯಾಗುವುದು (ತಿಲತರ್ಪಣದ್ವಾರ)

ನರಕೇ ವಿಕಿರೇಣತು

5. ಪಿತೃಗಳು ಪಿಶಾಚಜನ್ಮ ಹೊಂದಿದ್ದರೆ. ಉಚ್ಛಿಷ್ಟಾನ್ನದಿಂದ (ಉಚ್ಛಿಷ್ಟಪಿಂಡ) ತೃಪ್ತಿಯಾಗುವುದು.

**ಉಚ್ಛಿಷ್ಟೇನ ಚ ಪೈಶಾಚಾಃ**

6. ಪಿತೃಗಳು ಅಸುರರಾಗಿದ್ದರೆ, ಭೂರಿಭೋಜನದಿಂದ ತೃಪ್ತಿಯಾಗುವುದು.

**ಅಸುರಾ ಭೂರಿಭೋಜನಾತ್**

7. ಪಿತೃಗಳು ಮನುಷ್ಯರಾಗಿ ಜನಿಸಿದ್ದರೆ, ದಕ್ಷಿಣಾಖ್ಯ ಅನ್ನದಿಂದ (ದಕ್ಷಿಣೆಯಿಂದ) ತೃಪ್ತಿಯಾಗುವುದು.

ದಕ್ಷಿಣೇನ ಮನುಷ್ಯಾದ್ಯಾಃ

ಈ ರೀತಿ ಏಳು ವಿಧವಾದ ಅನ್ನಗಳು. ಮರಣಾನಂತರ, ನಮ್ಮ ಪಿತೃಗಳು ಯಾವ ಯೋನಿಯಲ್ಲಿ ಜನಿಸುತ್ತ ಯಾವ ಸ್ಥಾನ, ದೇಶಗಳಲ್ಲಿರುತ್ತಾರೆ, ನಮಗೆ ತಿಳಿಯದು. ಇದಕ್ಕಾಗಿ ಪಿತೃಯಜ್ಞದಲ್ಲಿ ಪೂರ್ವೋಕ್ತ ಸಪ್ತಾನ್ನ ಪ್ರಕರಣ ವಿಧಾನವನ್ನು ಹೇಳಿರುವರು. ಇದರಿಂದ ಅವರು ಎಲ್ಲಿದ್ದರೂ, ತೃಪ್ತಿಯನ್ನು ಯಜ್ಞನಾಮಕ ಶ್ರೀಹರಿಯು ಅವರಿಗೆ ಕೊಡುವನು.

ಪಿತೃಶ್ರಾದ್ಧಕರ್ಮದಲ್ಲಿ ಕೊಡುವ ಸಪ್ತಾನ್ನಗಳ ವಿವರವನ್ನು ಇನ್ನೊಂದು ರೀತಿಯಲ್ಲಿ ಹೇಳಬಹುದು.

1. ವೈಶ್ವ ದೇವ–ದೇವತೆಗಳಿಗೆ ಸ್ವಾಹಾರೂಪದಿಂದ ವೈಶ್ವದೇವ ಹೋಮದಲ್ಲಿ ಕೊಡುವ ಆಹುತಿ ರೂಪವಾದ ಅನ್ನ.

2. ಬಲಿಹರಣ–ಪಿತೃದೇವತೆಗಳಿಗೆ ಸ್ವಧಾರೂಪದಿಂದ ಕೊಡುವ ಹವಿಸ್ಸಿನ ರೂಪವಾದ ಅನ್ನ.

3. ಮನಸ್ಸು–ಜೀವರ ಮಾನಸಿಕ ವ್ಯಾಪಾರರೂಪವಾದ ಸಕಲ ಕರ್ಮಗಳು.

4. ವಾಕ್ಕು–ವಾಚನಿಕ ಕರ್ಮಗಳು.

5. ಪ್ರಾಣ–ಪ್ರಾಣಾದಿ ಪಂಚಪ್ರಾಣಗಳ ದ್ವಾರಾ ಶ್ರೀಹರಿಯು ನಡೆಯಿಸುವ ದೈಹಿಕ ವ್ಯಾಪಾರಗಳು ಇದರಿಂದ, ಕಾಯಾ–ವಾಚಾ–ಮನಸಾ ಎಂಬ ತ್ರಿಕರಣ ಪೂರ್ವಕವಾದ ಸಕಲ ಕಾರ್ಯಗಳೆಂದು ತಾತ್ಪರ್ಯ.

6. ಅನ್ನ–ಮಾನವರು ಭಕ್ಷಿಸುವ ಫಲ, ಧಾನ್ಯ, ಹಾಲು, ನೀರು ಈ ರೂಪದಲ್ಲಿರುವ ಆಹಾರವಸ್ತುಗಳು.

7. ತೃಣ–ಪಶ್ವಾದಿ ಪ್ರಾಣಿಗಳು ತಿನ್ನುವ ತೃಣರೂಪದಲ್ಲಿರುವ ಆಹಾರ.

ಭಾವದರ್ಪಣ ಟೀಕಾಕಾರರ ವ್ಯಾಖ್ಯಾನದಂತೆ–

ಸಪ್ತಾನ್ನಗಳು– (1) ಖಾದ್ಯ (2) ಪೇಯ (3) ಚೋಷ್ಯ (4) ಲೇಹ್ಯ ಎಂಬ ಚತುರ್ವಿಧವಾದ ಆಹಾರ ವಸ್ತುಗಳು ಮನುಷ್ಯರಿಗೆ, (5) ಸ್ವಾಹಾರೂಪದಿಂದ ದೇವತೆಗಳಿಗೆ, (6) ಸ್ವಧಾರೂಪದಿಂದ ಪಿತೃಗಳಿಗೆ, ಮತ್ತು (7) ತೃಣಫಲರೂಪದಿಂದ, ಪಶುಪಕ್ಷಿಗಳಿಗೆ–ಈ ರೀತಿ ಏಳು ವಿಧಾನ್ನಗಳು.

ಶ್ರಾದ್ಧೇ ಸಪ್ತ ವಿಧೀಯತೇ–ಎಂದು ಶಾಸ್ತ್ರವಚನ.

ಈ ವಿಧವಾದ ಸಪ್ತಾನ್ನ ಪ್ರಕರಣವನ್ನು, ಅರಿತ ಬ್ರಹ್ಮಜ್ಞಾನಿಗಳ ಉಪದೇಶ ದ್ವಾರಾ ತಿಳಿಯಬೇಕು. ಇದರ ರಹಸ್ಯವನ್ನು, ಸ್ಥೂಲಮತಿಗಳಾದ ಅಜ್ಞಾನಿಗಳಿಗಾಗಲೀ, ಕುಹಕಮತಿಗಳಿಗಾಗಲೀ ಪಂಡಿತಮಾನಿಗಳಿಗಾಗಲೀ ತಿಳಿಸಕೂಡದು. ಅನುಸಂಧಾನ ಕ್ರಮ ಪರಮಗೋಪ್ಯವಾಗಿರಬೇಕು.

ಸಪ್ತಾನ್ನಗಳಲ್ಲಿದ್ದು, ಅನ್ನಪ್ರದನಾದ ಶ್ರೀಪರಮಾತ್ಮನು ಅನಿರುದ್ಧಾದಿ ಪಂಚರೂಪಾತ್ಮಕನಾಗಿದ್ದು ಅನ್ನ–ಅನ್ನಾದ–ಅನ್ನದನೆಂದು ಕರೆಯಿಸುವನು.

1. ಸರ್ವರೂ ಭಕ್ಷಿಸುವ ಆಹಾರವಸ್ತುಗಳಲ್ಲಿ ಅನ್ನನಾಮಕನಾಗಿದ್ದಾನೆ. ಆವನೇ ಅನ್ನಮಯನು. ಆ ವಸ್ತುಗಳಲ್ಲಿ ಅಂತರ್ಗತನಾಗಿದ್ದು, ಸ್ವಾಭಿನ್ನವಾದ ಸ್ವಾಖ್ಯವೆಂಬ ಶುಭರಸ ಸ್ವೀಕಾರದಿಂದ, ಪ್ರಾಣಿಗಳಿಗೆ ತೃಪ್ತಿ ಪ್ರದನಾಗಿದ್ದಾನೆ.

2. ಅನ್ನದ–ಸರ್ವಪ್ರಾಣಿಗಳಿಗೆ ಅನ್ನಪ್ರದನಾಗಿರುವುದರಿಂದ. ಅನ್ನದನೆಂದು ಹೆಸರು ಅನ್ನಾಂತರ್ಗತ ಸ್ವಾಖ್ಯರಸ ಸ್ವೀಕಾರದಿಂದ. ಪ್ರಾಣಿಗಳು ಪ್ರತಿಬಿಂಬಭೂತರಾಗಿರುವುದರಿಂದ, ಅವರಿಗೆ ಬಿಂಬಕ್ರಿಯಾದ್ವಾರಾ ತೃಪ್ತಿ ನೀಡುವನು. ಪ್ರಾಣಿಗಳ ಶರೀರಕ್ಕೆ ಉಪಚಯರೂಪವಾದ ದೇಹವೃದ್ಧಿ ಮಾಡುವನು.

3. ಅನ್ನಾದ– ಮಹಾಪ್ರಳಯ ಕಾಲದಲ್ಲಿ ಸರ್ವಜಗತ್ತನ್ನೂ ಭಕ್ಷಿಸಿ, ನುಂಗುವುದರಿಂದ, ಅನ್ನಾದ ಎಂದು ಆ ವಿಶ್ವಭುಕ್‌ನಾಮಕನಾದ ಶ್ರೀಪರಮಾತ್ಮನಿಗೆ ಹೆಸರು. ॥೧೪॥

## ಪದ್ಯ—೧೫

**ಮೂಲ :–**

**ಎಂದರಿತು ಸಪ್ತಾನ್ನಗಳ ದೈ ।**
**ನಂದಿನದಿ ಮರೆಯದೆ ಸದಾ ಗೋ ।**
**ವಿಂದಗರ್ಪಿಸು ನಿರ್ಭಯದಿ ಮಹಯಜ್ಞವಿದುಯೆಂದು ॥**
**ಇಂದಿರೇಶನು ಸ್ವೀಕರಿಸಿ ದಯ ।**
**ದಿಂದೆ ಬೇಡಿಸಿಕೊಳದೆ ತವಕದಿ ।**
**ತಂದುಕೊಡುವನು ಪರಮಮಂಗಳ ತನ್ನ ದಾಸರಿಗೆ ॥೧೫॥**

**ಅವತರಣಿಕೆ :**

ಪೂರ್ವೋಕ್ತಪ್ರಕಾರ ಸಪ್ತಾನ್ನಪ್ರಕರಣದ ರಹಸ್ಯಾರ್ಥವನ್ನು ತಿಳಿದು ಇದೇ ಮಹಾಯಜ್ಞವೆಂಬ ಉತ್ತಮಾನುಸಂಧಾನದಿಂದ ಸದಾ ಗೋವಿಂದನಿಗೆ ಅರ್ಪಿಸು. ಅದರಿಂದ ಪ್ರೀತನಾಗಿ ಇಂದಿರೇಶನು ಶೀಘ್ರವಾಗಿ ನಮ್ಮ ಮನೋಭಿಲಾಷೆಗಳನ್ನು ಸಲ್ಲಿಸಿ, ಪರಮಮಂಗಳರೂಪವಾದ ಮೋಕ್ಷಾನಂದವನ್ನು ಕೊಡುವನೆಂದು ತಿಳಿಸುತ್ತಾರೆ.

## ಪ್ರತಿಪದಾರ್ಥ

**ಎಂದರಿತು**–ಪೂರ್ವೋಕ್ತ ಪ್ರಕಾರ, ಜ್ಞಾನಿಗಳ ಉಪದೇಶದ್ವಾರಾ ತಿಳಿದು. **ಸಪ್ತಾನ್ನಗಳ** ಏಳುವಿಧವಾದ ಅನ್ನಗಳ ಪ್ರಕರಣವನ್ನು. **ದೈನಂದಿನದಿ**-ಪ್ರತಿದಿವಸದಲ್ಲೂ (ಮಾನವರ ಒಂದು ವರ್ಷ, ಪಿತೃಗಳಿಗೆ ಒಂದು ದಿನ ಸಾಂಕೇತವು). **ಮರೆಯದೆ**–ಪಿತೃಕರ್ಮಾಖ್ಯಯಜ್ಞದಲ್ಲಿ ಅನುಸಂಧಾನ ವಿಧಾನ ಮರೆಯದೆ, **ಸದಾ**–ಯಾವಾಗಲೂ. **ಮಹಯಜ್ಞ ವಿದು ಎಂದು**–ಪಿತೃಶ್ರಾದ್ಧಕರ್ಮರೂಪವಾದ ಇದು ಮಹಾಯಜ್ಞವೆಂಬ ಉತ್ತಮಾನುಸಂಧಾನ ದಿಂದ, **ನಿರ್ಭಯದಿ**–ನಿಸ್ಸಂದೇಹನಾಗಿ, **ಗೋವಿಂದಗೆ ಅರ್ಪಿಸು**–ವೇದ ಪ್ರತಿಪಾದ್ಯನಾದ ಗೋವಿಂದನಾಮಕ ಶ್ರೀಹರಿಗೆ ಅರ್ಪಿಸುವವನಾಗು. **ಇಂದಿರೇಶನು**–ಲಕ್ಷ್ಮೀಪತಿಯಾದ ಶ್ರೀಪರಮಾತ್ಮನು, **ಸ್ವೀಕರಿಸಿ**–ಅದನ್ನು ತೆಗೆದುಕೊಂಡವನಾಗಿ, **ಬೇಡಿಸಿಕೊಳದೆ**–ಭಕ್ತನಿಂದ ಪ್ರಾರ್ಥನೆಯನ್ನೂ ನಿರೀಕ್ಷಿಸದೆ, **ತವಕದಿ**–ಶೀಘ್ರವಾಗಿ, **ತನ್ನ ದಾಸರಿಗೆ**–ಭಕ್ತರಾದ ತನ್ನ ಕಿಂಕರರಿಗೆ, **ಪರಮಮಂಗಳ**–ಶ್ರೇಷ್ಠವಾದ ಗತಿಯನ್ನು (ನಿತ್ಯಾನಂದ ರೂಪವಾದ ಮುಕ್ತಿ ಸುಖವನ್ನು) **ಕೊಡುವನು**–ನೀಡುವನು ॥೧೫॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಇಂಥಾ ಅನುಸಂಧಾನದಿಂದ ಪಿತೃಯಜ್ಞ ಮಾಡಿದವರಿಗೆ ಮಂಗಳ ಕೊಡುತ್ತಾನೆಂದು ಹೇಳುತಾರೆ,

ಈ ಪ್ರಕಾರ ಸಪ್ತಾನ್ನಗಳನ್ನ ಪೂರ್ವೋಕ್ತ ಪ್ರಕಾರ ಅರಿತವನಾಗಿ ಏಳುವಿಧ ಅನ್ನಗಳ, ಮಾನುಷರಿಗೆ ಒಂದು ವರುಷ ಪಿತೃಗಳಿಗೆ ಒಂದು ದಿನ ಸಾಂಕೇತವಾದ ಇಂಥಾ ಪ್ರತಿದಿನದಲ್ಲೂ ಮಾಡತಕ್ಕ ಪಿತೃಕರ್ಮಾಖ್ಯ ಯಜ್ಞದಲ್ಲಿ ಅನುಸಂಧಾನ ಕ್ರಮಗಳ ಮರೆಯದೆ, ಅವಿಯೋಗನಾಗಿ ಸರ್ವದಾ ಇರತಕ್ಕ ವೇದಪ್ರತಿಪಾದ್ಯನಾದ ಶ್ರೀನಾರಾಯಣಗೆ ಅರ್ಪಿಸೋವನಾಗು. ಇದು ದೊಡ್ಡದಾದ ಯಜ್ಞ ಎಂತ ತಿಳದು, ಲಕ್ಷ್ಮೀಪತಿಯಾದ ಪರಮಾತ್ಮನು ತೆಗೆದು ಕೊಂಡವನಾಗಿ, ಸಮರ್ಪಣೆ ಮಾಡಿದ ಅಧಿಕಾರಿ ಮ್ಯಾಲೆ ಅಂತಃಕರಣದಿಂದ ಯುಕ್ತನಾಗಿ, ಅಧಿಕಾರಿಯು ಪ್ರಾರ್ಥನಾ ಇಲ್ಲದೆ, ವಿಷಯಾದಿಗಳ ಭಯದಿಂದ ರಹಿತನ್ನಾಗಿ ಮಾಡಿ, ಅತ್ಯಂತ ಶ್ರದ್ಧಾದಿಂದ ಉತ್ತಮವಾದ ಮಂಗಳಸಾಂಕೇತ ವಾದ ಆನಂದವನ್ನು ತನ್ನ ಭಕ್ತರಿಗೆ, ಅಜ್ಞಾನಾದಿಗಳ ಪರಿಹರಿಸಿ ಜ್ಞಾನ ಅಭಿವ್ಯಕ್ತಿ ಮಾಡಿ ತಂದುಕೊಡೋವನಾಗತಾನೆಂತ ತಾತ್ಪರ್ಯ. ॥೧೫॥

## ಭಾವಪ್ರಕಾಶಿಕೆ

ಮೇಲೆ ಹೇಳಿದಂತೆ ಸಪ್ತಾನ್ನವನ್ನು ತಿಳಿದು ಮರಿಯದೇ ಪ್ರತಿದಿವಸ ದಲ್ಲೂ ಇದೇ ಮಹಾಯಜ್ಞವೆಂದು ಶ್ರೀಪರಮಾತ್ಮನಿಗೆ ಅರ್ಪಿಸಬೇಕು. ಹೀಗೆ ಅರ್ಪಿಸುವ ದಾಸರಿಗೆ ಶ್ರೀಪರಮಾತ್ಮನು ಅವರು ಕೊಟ್ಟಿದ್ದನ್ನು ಪೂಜಾತ್ವೇನ ಸ್ವೀಕರಿಸಿ ಕರುಣದಿಂದ ಇವರ ಪ್ರಾರ್ಥನೆ ಇಲ್ಲದೇನೆ ತಾನಾಗಿ ಅಭಿಮಾನ ಮಾಡಿ ಮುಕ್ತಿಯಲ್ಲಿ ಸ್ವರೂಪಾನಂದವನ್ನು ಅಭಿವ್ಯಕ್ತಿಮಾಡಿಕೊಡುವನು ॥೧೫॥

## ಭಾವದರ್ಪಣ

ಹೀಗೆ ಅರ್ಪಿಸೆಂದು ಹೇಳುತ್ತಾರೆ, ಎಂದರಿತು. ದೈನಂದಿನ ನಿರಂತರ ಎಂಬರ್ಥ ॥೧೫॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಎಂದು ಇತಿ ॥ ಮಹಾಯಜ್ಞ ಇತಿ ॥ ಸಂವತ್ಸರಂ ಗೋಪಯಸಾ ಯೇನ ಹೋಮಃ ಹರೇಃ ಕೃತಃ । ಭಗವತ್ತತ್ತ್ವವಿದುಷಾ ತಸ್ಯ ಮುಕ್ತಿಃ ನ

ಸಂಶಯಃ ॥ ಅದೃಷ್ಟ ಭಗವದ್ರೂಪಸ್ಯ ಏತತ್ ದರ್ಶನಕಾರಣಮ್ ॥ ಭಗವದ್ದೃಷ್ಟಿಪೂತಸ್ತು ವಿನಾ ಹೋಮೇನ ಮುಚ್ಯತೇ ॥ ಇತಿ ॥ ತವಕ ತವ ॥೧೫॥

**ಕನ್ನಡಾರ್ಥ :**

ಯಜ್ಞಗಳಲ್ಲಿ ಇದು ಶ್ರೇಷ್ಠವಾದುದು ಗೋಕ್ಷೀರದಿಂದ ವರ್ಷ ಪರ್ಯಂತರವಾಗಿ ಹೋಮ ಮಾಡುವ ಭಗವತ್ತತ್ವಜ್ಞಾನಿಗೆ ಮೋಕ್ಷವಾಗುವುದರಲ್ಲಿ ಸಂಶಯವಿಲ್ಲ. ಭಗವಂತನ ರೂಪವನ್ನು ಅಪರೋಕ್ಷೀಕರಿಸದವನಿಗೆ ನೋಡದವನಿಗೆ ಈ ಹೋಮದಿಂದ ಭಗವಂತನ ಸಂದರ್ಶನವಾಗುತ್ತದೆ. ಭಗವಂತನನ್ನು ನೋಡಿ ಅವನ ದೃಷ್ಟಿಯಿಂದ ಪವಿತ್ರನಾದವನು, ಅಥವಾ ಭಗವಂತನ ದರ್ಶನದಿಂದ ಪವಿತ್ರನಾದವನು ಹೋಮವಿಲ್ಲದೇ ಮುಕ್ತನಾಗುತ್ತಾನೆ. ಭಗವಂತನ ತತ್ತ್ವವನ್ನು ತಿಳಿಯುವುದರಲ್ಲಿ ವಿಶೇಷಜ್ಞಾನಿಯಾಗಿರುವುದರಿಂದ ಏಳುವಿಧ ಅನ್ನಗಳನ್ನು ಸೃಷ್ಟಿಸಿದ ಶ್ರೀಹರಿಯನ್ನು ತಿಳಿದವನು ಒಂದೇ ಹೋಮದಿಂದ ಒಂದೇ ದಿವಸದಲ್ಲಿ ಮಾಡಿದ ಪಯೋಹೋಮದಿಂದ ಮುಕ್ತನಾಗುತ್ತಾನೆ ಎಂದು ನಾರಾಯಣೀಯವೆಂಬ ಗ್ರಂಥದಲ್ಲಿ ಹೇಳಿರುತ್ತದೆ. ॥೧೫॥

**ಶ್ರೀಗುರುಹೃದಯಪ್ರಕಾಶಿಕೆ**

ದೇವ ಪಿತೃ ಮನುಷ್ಯ ಪಶುಗಳೂ ಸಹ ನಾಲ್ಕು ವಿಧ ಜಾತಿಗೆ ಮೇಲೆ ಹೇಳಿದ ನಾಲ್ಕು ವಿಧ ಅನ್ನ, ಮನೋವಾಕ್ಕಾಯವೆಂಬ ಮೂರರಿಂದಾದ ಮೂರುವಿಧ ಸರ್ವಕರ್ಮಗಳೂ ದೇವರಿಗೆ ಅನ್ನ. ಅಂತೂ ಏಳುವಿಧ ಅನ್ನಪ್ರಕಾರವನ್ನು ಹೇಳಿರುವ ಬೃಹದಾರಣ್ಯೋಪನಿಷದರ್ಥವನ್ನು, ಬಲ್ಲ ಕೋವಿದರೆಂಬ ಜ್ಞಾನಿಗಳ ಮುಖದಿಂದ ಕೇಳಿ ತಿಳಿದು, ಆಲಸ್ಯಮಾಡದೆ ಅನಿರುದ್ಧಾದಿ ಚತುರ್ಮೂರ್ತಿಗಳನ್ನು ಆಯಾಯಾ ಪ್ರಾಣಿಗಳ ಆಹಾರಕಾಲದಲ್ಲಿ ಸ್ಮರಿಸಿ ಪೂಜಿಸು ಎಂದರೆ, ಆಯಾಯಾ ಪ್ರಾಣಿಯೋಗ್ಯಾನ್ನ ಸ್ವಾಮಿ ಕಲ್ಪಿಸಿಕೊಡುತ್ತಾ ಇದ್ದಾನೆಂದು ಭಾವಿಸುವುದೇ ಪೂಜೆ ಎಂದರ್ಥ. ಹೀಗೆ ಶ್ರೀಲಕ್ಷ್ಮೀಪತಿಯೇ ಅನ್ನ ಎಂದರೆ ಉಪಜೀವ್ಯ, ಆಶ್ರಯನಾದ್ದರಿಂದ ಅನ್ನವೆಂದು ಹೆಸರುಳ್ಳವನು.

ಅನ್ನಾದ ಎಂದರೆ, ಜಠರಾಗ್ನಿಯಲ್ಲಿದ್ದು ಅನ್ನಪರಿಪಾಕಾದಿಗಳನ್ನು ಮಾಡಿ ಸ್ವರಸತೆಗೆದುಕೊಳ್ಳುವುದರಿಂದ ಅನ್ನಭೋಕ್ತೃ ಎಂದು ಹೆಸರುಳ್ಳವನು, ಎಲ್ಲರಿಗೂ ತನಗೂ ಸಹ ಮೇಲೆ ಹೇಳಿದಂತೆ ಅನ್ನ ಕಲ್ಪಿಸಿ ಕೊಡುವದ್ದರಿಂದ, ಅನ್ನದನೆಂದರೆ. ಅನ್ನಕೊಡುವಾತನು ಎಂತ ತಿಳಿದು, ಪ್ರತಿಮಾದಿಗಳಲ್ಲಿ ರಚಿಸುವ ಬಾಹ್ಯಪೂಜೆಯೇ ದೇವರ ಪೂಜೆಯೆಂದು ದೃಢಬುದ್ಧಿಯಿರುವ ಸ್ಥೂಲಮತಿಗಳೆಂಬ ಅಜ್ಞರಿಗೆ ಇದನ್ನು ಹೇಳದೆ. ಈ ಸಪ್ತಾನ್ನಗಳನ್ನು ಗೋವಿಂದನೆಂಬ ವೇದಪ್ರತಿಪಾದ್ಯಸ್ವಾಮಿ ಸ್ವೀಕರಿಸುವನೆಂದು ಭಾವನಾರೂಪ ಅರ್ಪಣೆ ಮರೆಯದೆ ಮಾಡು. ಇದರಿಂದ ಬಾಧಕವೇನೋ ಎಂಬ ಸಂಶಯು ಭಯ ಬಿಟ್ಟು, ಇದೇ ಮಹಾಯಜ್ಞವೆಂದು ತಿಳಿದ ಭಕ್ತರಿಗೆ, ಇಂದಿರಾಪತಿ ಯಾದ ಸ್ವಾಮಿ ಆ ಯಜ್ಞಫಲ ಸ್ವೀಕರಿಸಿ ಫಲವನ್ನು ಪ್ರಾರ್ಥಿಸದೇ ಇದ್ದಾಗ್ಯೂ, ದಯೆಯಿಂದ ಶೀಘ್ರವಾಗಿ ಪರಮಮಂಗಳವೆಂಬ ನಿತ್ಯಾನಂದ ವನ್ನು ತಂದುಕೊಡುವನು.

ಪ್ರಮಾಣ—

ಯತ್ಸಪ್ತಾನ್ನಾನಿ ಮೇಧಯಾ ತಪಸಾ ಜನಯತ್ಪಿತಾ ।
ಏಕಮಸ್ಯ ಸಾಧಾರಣಂ ದ್ವೇ ದೇವಾನಾಮ ಭಾಜಯತ್ ।
ತ್ರೀಣ್ಯಾತ್ಮನೇ ಕುರು ತ ಪಶುಭ್ಯ ಏಕಂ ಪ್ರಾಯಛತ್ತ ।
ಸ್ಮಿನ್ ಸರ್ವಂ ಪ್ರತಿಷ್ಟಿತಂ ಯಚ್ಚ ಪ್ರಾಣಿತಿ ಯಚ್ಚ ನ
ತಸ್ಮಾತ್ತಾನಿ ನ ಕ್ಷೀಯಂತೇಽದ್ಯಮಾನಾನಿ ಸರ್ವದಾ ।
ಯೋ ವೈ ತಾಮಕ್ಷಿತಂ ವೇದ ಸೋಽನ್ನಮತ್ತಿ ಪ್ರತೀಕೇನ ।
ಸದೇವಾನಪಿ ಗಚ್ಛತಿ ಸವೂರ್ಜಮುಪಜೀವತೀತಿ ।

ಇತಿ ಬೃಹದಾರಣ್ಯಕೋಪನಿಷತ್ ॥

ಸಪ್ತಾನ್ನಾನಿ ಯದಾ ವಿಷ್ಣುಃ ಪರಮಃ ಪುರುಷೋ ವಿಭುಃ ।
ಸಸರ್ಜ ತೇಷಾಂ ಸ್ವಾರ್ಥಾನಿ ಚಕಾರ ತ್ರೀಣಿ ಕೇಶವಃ ।
ಮನೋ ವಾಚಂ ತಥಾ ಪ್ರಾಣಂ ತಸ್ಮಾತ್ತ್ರೈಸ್ತುಷ್ಟಿಮೇತಿ ಸಃ ।
ಚತುರ್ಥಂ ಭೋಜ್ಯಮೇವಾನ್ನಂ ಸರ್ವಸಾಧಾರಣಂ ಸ್ಮೃತಂ ।
ಆತ್ಮನೋಽತಿ ಸಮೀಪತ್ವಂ ತಸ್ಯ ಯೋಽನ್ನೈಸ್ಯಮನ್ಯತೇ ।

ಅಕ್ಷಯಂ ಪಾಪಮಸ್ಯಸ್ಯಾದ್ದೇವ ಬ್ರಹ್ಮಸ್ವ ಹಾರಿಣಃ ।
ತದೇವ ಮಂತ್ರ ಯುಕ್ತತ್ವಾದ್ಬಲಿಹೋಮಾತ್ಮನಾದ್ವಯಂ ।
ದೇವಾನಾಂ ಪ್ರದದೌ ವಿಷ್ಣುಸ್ತಸ್ಮಾನ್ನೈವೇಚ್ಛಯಾ ಯಜೇತ್ ।
ಯದೀಚ್ಛಯಾ ಯಜೇತ್ತೇಷಾಮಪಹರ್ತಾ ಭವಿಷ್ಯತಿ ।
ದೇವಸ್ವಂ ತೇನ ಯೇನ್ಯೈವ ಕಾರ್ಯಾರ್ಥಂ ವಿನಿಯೋಜಿತಂ ।
ಪರಕೀಯೇನ ವಿತ್ತೇನ ತಸ್ಮಿನ್ ವಿನಿಮಯೇ ಯಥಾ ।
ಚತುಷ್ಪಾದ್ಭ್ಯೋ ದ್ವಿಪಾದ್ಭ್ಯಶ್ಚ ಪಶುಭ್ಯೋಪಯ ಆತ್ಮಕಂ ।
ಪ್ರಾಯಚ್ಛತ್ಸಪ್ತಮಾನ್ನಂ ಸಃ ಗೋಕ್ಷೀರಂ ಮುಖ್ಯಮತ್ರ ಚ ।
ಸಪ್ತಾನ್ನಂ ಸೃಜತೇ ಯಸ್ಮಾದನ್ನನಾಮಾಕ್ಷಯಸ್ತತಃ ।
ತಸ್ಮಾದಕ್ಷಿತಿ ನಾಮಾಸೌ ಭಗವಾನ್ ಪುರುಷೋತ್ತಮಃ ।
ಯ ಏವಮಕ್ಷಿತಂ ವೇದ ಭಗವಂತಂ ಸನಾತನಂ ।
ಅಪ್ರಯತ್ನೇನ ಭೋಗಾಸ್ಯುರ್ಯಥೇಷ್ಟಾಸ್ತಸ್ಯ ಸರ್ವದಾ ।
ಎಂಬ ಬೃಹದಾರಣ್ಯಕ ಭಾಷ್ಯಾರ್ಥ ಸಹ ವಿವರಿಸಲ್ಪಟ್ಟಿತು ॥೧೫॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸಪ್ತಾನ್ನ ಪ್ರಕರಣದ ಜ್ಞಾನ, ಸರ್ವಸಾರಭೋಕ್ತನಾದ ಶ್ರೀಹರಿಗೆ ಅನ್ನ–ಅನ್ನಾದ–ಅನ್ನದಾ ಎಂಬ ನಾಮಗಳಿಂದ ಆ ವೇದೋದ್ಧಾರಿಗೆ ಮಹಾ ಯಜ್ಞದ ಫಲವನ್ನು ತಿಳಿಸುತ್ತಾರೆ.

ದೇವ–ಪಿತೃ–ಮಾನವ–ಪಶುಗಳಿಗೆ ಅನ್ನಪ್ರದನಾಗಿರುವ ಶ್ರೀಹರಿಯ ರೂಪಚಿಂತನೆ–ಆ ನಾಲ್ಕು ಪ್ರಕಾರವಾದ ಅನ್ನಗಳ ವಿಚಾರ, ಮನಸ್ಸು–ವಾಕ್ಕು–ಕಾಯ ಈ ತ್ರಿಕರಣಗಳ ದ್ವಾರಾ ನಡೆಯುತ್ತಿರುವ ಸಮಸ್ತ ಕರ್ಮಗಳ ರೂಪವಾದ ಮೂರು ವಿಧವಾದ ಅನ್ನಗಳ ವಿಷಯ–ಹೀಗೆ ಸಪ್ತಾನ್ನಗಳನ್ನು ಆ ವಿಧಾನವನ್ನರಿತು, ನಿತ್ಯಾನುಷ್ಠಾನಪರರಾದ ಬ್ರಹ್ಮಜ್ಞಾನಿಗಳ ಮುಖದಿಂದ ಉಪದೇಶ ದ್ವಾರಾ ಅರಿತು, ಉತ್ತಮಜ್ಞಾನಾನುಸಂಧಾನದಿಂದ ಕರ್ಮಗಳನ್ನು ಆಚರಿಸಬೇಕೆಂದು ತಿಳಿಸುತ್ತಾರೆ.

ಈ ಕರ್ಮಗಳ ರಹಸ್ಯ, ಅನುಸಂಧಾನಪೂರ್ವಕ ಕರ್ಮಾಚರಣೆಯು ವಿಧಾನ ಇವುಗಳನ್ನು ಲೋಪ ಮಾಡದೆ ಎಸಗಬೇಕು.

ಶ್ರದ್ಧಾ ಪೂರ್ವಕವಾಗಿ ಮಾಡುವ ಪಿತೃಯಜ್ಞ ರೂಪವಾದ ಸುಕರ್ಮವನ್ನು ದೈನಂದಿನದಿ, ಮರೆಯದೆ, ಗೋವಿಂದನಿಗೆ, ಯಾವ ಲಜ್ಜೆಯೂ ಇಲ್ಲದೆ, ನಿರ್ಭೀತನಾಗಿ ಅರ್ಪಿಸೆಂದು ಹೇಳುತ್ತಾರೆ. ಇದರಿಂದ ಫಲಬರುವುದೋ ಇಲ್ಲವೋ ? ನಮಗೆ ಅಗೋಚರರಾಗಿರುವ, ಎಲ್ಲಿಯೋ ಜನಿಸಿರುವ, ಯಾವುದೋ ಸ್ಥಿತಿಯಲ್ಲಿರುವ ಪಿತೃಗಳಿಗೆ ಸೇರುತ್ತದೆಯೋ ಇಲ್ಲವೋ ಎಂಬ ಸಂದೇಹವಿರಲೇಬಾರದು. ಶ್ರೀಹರಿಯ ಪ್ರೀತ್ಯರ್ಥವಾಗಿ ಮಾಡುವ ಸರ್ವ ಸುಕರ್ಮಗಳೂ ಫಲಪ್ರದ.

ಪ್ರತಿ ಸಂವತ್ಸರದ ಶ್ರಾದ್ಧ ಹಾಗೂ ಪರ್ವಕಾಲಗಳಲ್ಲಿ ಗ್ರಹಣ ಸಮಯಗಳಲ್ಲಿ ತಿಲತರ್ಪಣ ಪೂರ್ವಕವಾಗಿ ಕೊಡುವ ತರ್ಪಣವಿಧಿ, ಈ ನೈಮಿತ್ತಿಕ ಕರ್ಮಗಳನ್ನು ಶ್ರೀಹರಿಗೆ ಪ್ರೀತಿಯಾಗಲೆಂದು ಶ್ರೀಕೃಷ್ಣಾರ್ಪಣ ಬುದ್ಧಿಯಿಂದ ಮಾಡಿದರೆ ಅದು ಮಹಾಯಜ್ಞವೆಂದೆನಿಸುವುದು. ಇಂತಹ ಪಿತೃಯಜ್ಞವು ಯಾವ ಅಶ್ವಮೇಧಯಾಗಕ್ಕೂ ಕಡಿಮೆಯಾದದ್ದಲ್ಲ. ಬಹುಫಲಪ್ರದತ್ವಶಕ್ತಿವುಳ್ಳದ್ದು.

ಶ್ರೀಲಕ್ಷ್ಮೀಪತಿಯಾದ ಇಂದಿರೇಶನು, ಆ ಮಹಾಯಜ್ಞರೂಪವಾದ ಸುಕರ್ಮಗಳನ್ನು ತಾನು ಸ್ವೀಕರಿಸಿ, ಅದರಿಂದ ಪ್ರೀತನಾಗಿ ತನ್ನ ಭಕ್ತರಿಂದ ಹೇಳಿಸಿಕೊಳ್ಳದೆ ಸ್ವಯಂ ಕಾರುಣ್ಯ ವಿಶೇಷದಿಂದ ಅದನ್ನು ಸ್ವೀಕರಿಸಿ ಶೀಘ್ರದಲ್ಲಿ ತನ್ನ ಕಿಂಕರರಾದ ದಾಸರಿಗೆ ಶ್ರೇಷ್ಠವಾದ ಶುಭರೂಪವಾದ ನಿತ್ಯಾನಂದ ಸುಖವನ್ನು ಕೊಡುವನು ಇಹದಲ್ಲಿ ಸುಖ, ಪರದಲ್ಲಿ ನಿತ್ಯಾನಂದ ರೂಪವಾದ ಮುಕ್ತಿ ಸುಖವನ್ನು ಕೊಡುವನು ॥೧೫॥

# ಪದ್ಯ—೧೬

**ಮೂಲ :–**

**ಸೂಜಿ ಕರದಲಿ ಪಿಡಿದು ಸಮರವ ।**
**ನಾ ಜಯಿಸುವೆನು ಎಂಬ ನರನಂ ।**
**ತೀ ಜಗತ್ತಿನೊಳುಳ್ಳ ಅಜ್ಞಾನಿಗಳು ನಿತ್ಯದಲಿ ॥**
**ಶ್ರೀಜಗತ್ಪತಿ ಚರಣಯುಗಳ ಸ ।**
**ರೋಜ ಭಕ್ತಿಜ್ಞಾನಪೂರ್ವಕ ।**
**ಪೂಜಿಸದೆ ಧರ್ಮಾರ್ಥಕಾಮವ ಬಯಸಿ ಬಳಲುವರು॥೧೬॥**

**ಅವತರಣಿಕೆ :–**

ಭಕ್ತಿಜ್ಞಾನಪೂರ್ವಕವಾಗಿ ಶ್ರೀಪರಮಾತ್ಮನ ಪ್ರೀತ್ಯರ್ಥವಾಗಿ ಮಾಡದೆ ಕೇವಲ ಕಾಮಿತಾರ್ಥಗಳನ್ನು ಬಯಸಿ, ಕರ್ಮಗಳನ್ನು ಆಚರಿಸುವ ಅಜ್ಞಾನಿಗಳ ಅಸಹಾಯಕಸ್ಥಿತಿಯನ್ನು ದೃಷ್ಟಾಂತಪೂರ್ವಕ ವಿವರಿಸುತ್ತಾರೆ.

**ಪ್ರತಿಪದಾರ್ಥ**

**ಸೂಜಿ**–ಬಟ್ಟೆ ಹೊಲೆಯುವ ಸೂಜಿಯನ್ನು (ಅಲ್ಪವಾದ ಸಾಧನ), **ಕರದಲಿ**–ತನ್ನ ಕೈಯ್ಯಲ್ಲಿ, **ಪಿಡಿದು**–ಹಿಡಿದುಕೊಂಡು, **ಸಮರವ**–ಯುದ್ಧವನ್ನು **ನಾ ಜಯಿಸುವೆನು**–ನಾನು ಗೆಲ್ಲುತ್ತೇನೆ, **ಎಂಬ**–ಎಂತೆಂಬ ಭಾವನೆಯುಳ್ಳ, **ನರನಂತೆ**–ಮನುಷ್ಯನೋಪಾದಿಯಲ್ಲಿ, **ಈ ಜಗತ್ತಿನೊಳು**–ಈ ಪ್ರಪಂಚದಲ್ಲಿ **ಉಳ್ಳ**–ಇರುವ, **ಅಜ್ಞಾನಿಗಳು**– ಭಗವತ್ಸಂಬಂಧವಾದ ಜ್ಞಾನರಹಿತರಾದ ಮೂಢರು, **ನಿತ್ಯದಲಿ**–ಪ್ರತಿದಿನದಲ್ಲೂ, **ಶ್ರೀಜಗತ್ಪತಿ**–ಮಂಗಳ ಸ್ವರೂಪಿಯಾದ ಜಗದೊಡೆಯನಾದ ಶ್ರೀಪರಮಾತ್ಮನ, **ಚರಣಯುಗಳಸರೋಜ**–

ಪಾದ ಕಮಲಗಳನ್ನು, **ಭಕ್ತಿ**–ಸುದೃಢವಾದ ಭಕ್ತಿ, **ಜ್ಞಾನಪೂರ್ವಕ**–ಮಹಾತ್ಮ್ಯಜ್ಞಾನಸಹಿತರಾಗಿ, **ಪೂಜಿಸದೆ**–ಅರ್ಚಿಸದೆ, **ಧರ್ಮ**–ಪರಮಾತ್ಮನ ಸ್ಮರಣರಹಿತವಾದ ಧರ್ಮಕಾರ್ಯಗಳು, **ಅರ್ಥ**–ಮನೋಗತ ಅಭಿಲಾಷೆಗಳ ಸಿದ್ಧಿಗಾಗಿ, **ಕಾಮವ**–ಅಪೇಕ್ಷಪೂರ್ತಿಗಾಗಿ, **ಬಯಸಿ**–ಆ ಕರ್ಮಗಳ ಫಲಗಳನ್ನು ಅಪೇಕ್ಷಿಸುತ್ತಾ, **ಬಳಲುವರು**–ಆಯಾಸಪಡುತ್ತಾರೆ, ಅವರ ಬಾಳು ನಿಷ್ಫಲ ಹಾಗೂ ನಿರರ್ಥಕವಾಗುವುದೆಂದು ಪದ್ಯಾಭಿಪ್ರಾಯವು. ॥೧೬॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀದೇವರ ಪೂಜಿಸದೆ ಧರ್ಮಾರ್ಥಕಾಮಗಳ ಬಯಸತಾರೆ ಎಂತ ಹೇಳತಾರೆ.

ಆಯುಧ ವಿಶೇಷವಾದ ಒಂದು ಸೂಜಿಯನ್ನು ಕೈಯಲ್ಲಿ ಹಿಡಿದುಕೊಂಡವನಾಗಿ, ಯುದ್ಧಾಪೇಕ್ಷಿಯಾಗಿ ಬಹುಸೇನಾ ಸಂಗಡ ಬಂದಿರುವ ಪ್ರತಿವಾದಿಯು, ನಾನು ಜೈಸತೇನೆ ಎಂತ ಅನತಕ್ಕ ಮನುಷ್ಯನೋಪಾದಿಯಲ್ಲಿ, ಈ ಭೂಮಿಯಲ್ಲಿ ಇರತಕ್ಕ ಭಗವದ್ವಿಷಯಕವಾದ ಜ್ಞಾನರಹಿತರಾದ ಮೂಢರು ಪ್ರತಿದಿನದಲ್ಲೂ (ಯುದ್ಧಸನ್ನದ್ಧರಾದ ಶತ್ರುಜನಗಳೋಪಾದಿಯಲ್ಲಿ ಸನ್ನದ್ಧರಾಗಿ ಇರತಕ್ಕ ಪಾಪಗಳೆಂಬೋ ಸೇನೆಗಳ ಜೈಸತಕ್ಕ ಮಹಾಯುದ್ಧ ಸದೃಶವಾದ) ಕಾಂತಿ ಸಂಪನ್ನ, ಜಗತ್ತಿಗೆ ಸ್ವಾಮಿಯಾದ ಪರಮಾತ್ಮನ ಪಾದದ್ವಯವೆಂಬ ಕಮಲವೆಂಬ ಆಯುಧವನ್ನು, ಜ್ಞಾನ ಭಕುತಿ ವೈರಾಗ್ಯಪೂರ್ವಕ ಭಜನಾ ಎನತಕ್ಕದ್ದರಿಂದ ಮಹಾ ಆಯುಧವನ್ನು, ಪೂಜಾ ಮಾಡದೆ ಎಂದರೆ, ಪೂಜಾದಿಗಳು ಮಾಡಿ ಮನವೆಂಬ ಕರದಲ್ಲಿ ಆಯುಧವನ್ನು ಧರಿಸಿದರೆ, ಪಾಪಗಳೆಂಬೋ ಸೇನೆಗಳ ಪರಾಜಯ ಐದಿಸಬಹುದು, ಅದು ಬಿಟ್ಟು ಸೂಜಿಗೆ ಸಮಾನವಾದ ಪಿತೃಯಜ್ಞವೇನು. ಇನ್ನೂ ಅನೇಕ ಯಜ್ಞಗಳೇನು, ಸತ್ಕರ್ಮಗಳೇನು ಮಾಡಿ, ಇಂಥಾ ಆಯುಧವನ್ನು ಕರದಲ್ಲಿ ಧರಿಸಿ, ಪಾಪಗಳೆಂಬೊ ಸೈನ್ಯಗಳ ಜೈಸಿ, ಸುಖ ಐದೋ ನಿಮಿತ್ತ, ಸಕಾಮರಾಗಿ, ಪರಮಾತ್ಮವಿಸ್ಮೃತಿಪೂರ್ವಕವಾದ ಧರ್ಮಗಳ

ಮಾಡಿ, ತಮ್ಮ ಮನೋಗತ ಪ್ರಯೋಜನ ಸಿದ್ಧಿ ಆಗಬೇಕೆಂದು ಅಪೇಕ್ಷಿಸಿ, ಅಪೇಕ್ಷೆ ಸಿದ್ಧಿ ಆಗದೆ ಬಲಿಷ್ಠವಾದ ಪಾಪಗಳೆಂಬೋ ಸೈನ್ಯಗಳಿಂದ ಪೆಟ್ಟುತಿಂದು ಸೂಜಿಗಳೆಂಬ ಯಜ್ಞಯಾಗಾದಿ ಸತ್ಕರ್ಮಾಖ್ಯ ಆಯುಧಗಳು ಪ್ರಯೋಜನ ರಹಿತಗಳಾಗಿ ನಾನಾವಿಧ ಕ್ಲೇಶಗಳಿಂದ ಶ್ರಮಿಸೋವರಾಗತಾರೆ. ಏವಂ ಸಮ್ಮೇಳನೇ ಪರಮಾತ್ಮನ ಅಂತರ್ಗತತತ್ವ ತಿಳಿದು, ಪರಮಾತ್ಮನ ಸ್ಮೃತಿ ಪೂರ್ವಕ ಕರ್ಮಗಳ ಮಾಡಿದವಗೆ ಇಷ್ಟಸಿದ್ಧಿ ಪಾಪಗಳ ಜಯಿಸೋಣವಾಗತದೆ. ತದ್ವ್ಯತಿರಿಕ್ತ ಅಹಂಮಮತಾದಿಗಳಿಂದ ಏನು ಸತ್ಕರ್ಮ ಮಾಡಿದರೂ ನಿಷ್ಫಲ ವಾಗಿ ಇಹದಲ್ಲಿ ಸುಖವಿಲ್ಲದೆ, ಪಾರತ್ರಿಕದಲ್ಲಿ ದುಃಖಿತನಾಗತಾನೆ ॥೧೬॥

## ಭಾವಪ್ರಕಾಶಿಕೆ

ರಣಾಂಗಣದಲ್ಲಿ ಶಸ್ತ್ರಪಾಣಿಗಳಾಗಿ, ಯುದ್ಧ ಸನ್ನದ್ಧರಾಗಿ ನಿಂತಿರುವ ಶತ್ರುಗಳನ್ನು ಒಬ್ಬ ಮನುಷ್ಯನು ಒಂದು ಸೂಜಿಯನ್ನು ಮಾತ್ರ ಕೈಯಲ್ಲಿ ಇಟ್ಟುಕೊಂಡು ಈ ಆಯುಧದಿಂದಲೇ ನಾನು ಎಲ್ಲಾ ಶತ್ರುಗಳನ್ನೂ ಜಯಿಸಿ ಬಿಡುವೆನು ಎಂದು ಪ್ರಯತ್ನ ಮಾಡಿದರೆ ಆ ಕಾರ್ಯವು ಎಷ್ಟುಮಟ್ಟಿಗೆ ಸಾಧ್ಯ ವಾಗುವುದೋ ಅಷ್ಟುಮಟ್ಟಿಗೆ ಭಗವಂತನಲ್ಲಿ ಭಕ್ತಿಜ್ಞಾನವಿಲ್ಲದೆ ಪರಮಾತ್ಮ ನನ್ನು ಪೂಜಿಸದೆ ನನಗೆ ಧರ್ಮ ಅರ್ಥ, ಕಾಮ, ಮೋಕ್ಷವೆಂಬ ಪುರುಷಾರ್ಥಗಳು ಬೇಕೆಂದು ಅಪೇಕ್ಷಿಸುವ ಅಜ್ಞಾನಿಗಳ ಕಾರ್ಯವು ಸಿದ್ಧವಾಗುವುದು. ಅಂದರೆ ಸೂಜಿಯಿಂದ ಶತ್ರುಗಳನ್ನು ಜಯಿಸುವುದೂ ಇಲ್ಲ, ಪರಮಾತ್ಮನಲ್ಲಿ ಭಕ್ತಿ ಯಿಲ್ಲದೆ ಇರುವವನಿಗೆ ಪುರುಷಾರ್ಥವೂ ದೊರೆಯುವುದಿಲ್ಲವೆಂಬ ತಾತ್ಪರ್ಯ. ॥೧೬॥

## ಭಾವದರ್ಪಣ

ವೇದೋಕ್ತ ಕರ್ಮಗಳಿಂದ ಭಗವತ್ಪ್ರೀತಿ ಬಡಿಸಿ ಮೋಕ್ಷ ಹೊಂದದೆ, ಉಪಾಯವಾದ ಕರ್ಮಮಾಡಿ ಅಜ್ಞಾನಿಗಳು ಪುರುಷಾರ್ಥ ಬಯಸುವರೆಂದು ಸದೃಷ್ಟಾಂತ ಹೇಳುತ್ತಾರೆ,ಸೂಜೀತಿ. ಸಮರವ ಯುದ್ಧವನ್ನು ಎಂಬರ್ಥ ॥೧೬॥

## ಶ್ರೀವ್ಯಾಸದಾಸಸಿಧ್ಧಾಂತಕೌಮುದೀ

ಸೂಜಿ ಇತಿ ॥ ಸಮರ ಯುದ್ಧ, ಉಳ್ಳ ಇದ್ದ. ॥೧೬॥

## ಕನ್ನಡಾರ್ಥ

ಶ್ರೀಹರಿಯ ಪ್ರೀತಿಗೆ ಸಾಧನಗಳಾದ ಜ್ಞಾನ ಭಕ್ತಿಪೂರ್ವಕ ಹರಿಯ ಚರಣಾರಾಧನೆಯನ್ನು ಬಿಟ್ಟು, ಧರ್ಮಾರ್ಥಕಾಮಗಳನ್ನು ಬಯಸುವವರು, ಶಸ್ತ್ರಧಾರಿಗಳೆದುರು ರಣಾಂಗಣದಲ್ಲಿ ಸೂಜಿಧಾರಿಗಳಾಗಿ ಹೋರಾಡಿ ಬಳಲುವ ನರರಂತೆ ಸಂಸಾರದಲ್ಲಿ ಬಳಲುವರು" ಎಂದು ಈ ಪದ್ಯದ ಭಾವ, ॥೧೬॥

## ಶ್ರೀಗುರುಹೃದಯಪ್ರಕಾಶಿಕೆ

ಜೀವರ ಕರ್ತೃತ್ವ ಭೋಕ್ತೃತ್ವಶಕ್ತಿ ಕೇವಲ ದೇವರ ಅಧೀನವೆಂದು ತಿಳಿಯದವರು ಅಜ್ಞರೆಂದು ಸದೃಷ್ಟಾಂತವಾಗಿ ಎರಡು ಪದ್ಯದಿಂದ ತಿಳಿಸುತ್ತಾರೆ. ಸೂಜಿ ಎಂದು. ಸೂಜಿಯನ್ನು ಕೈಯಲ್ಲಿ ಹಿಡಿದುಕೊಂಡು, ಯುದ್ಧದಲ್ಲಿ ಸರ್ವರನ್ನೂ ನಾನೊಬ್ಬನೇ ಜಯಿಸುತ್ತೇನೆಂಬ ಅಜ್ಞಬಾಲಕನಂತೆ ಈ ಜಗತ್ತಿನಲ್ಲಿರುವ ಅಜ್ಞಾನಿಗಳು ಸದಾ ಶ್ರೀಜಗತ್ಪತಿಯಾದ ದೇವರ ಚರಣಕಮಲವನ್ನು ಭಕ್ತಿಜ್ಞಾನಪೂರ್ವಕ ಭಜಿಸದೆ ಎಂದರೆ ಬೋಧಶಕ್ತಿಪ್ರದನು ಶ್ರೀಹರಿ ಎಂದು ಜ್ಞಾನಭಕ್ತಿಯಿಂದ ಭಾವಿಸದೆ, ಧರ್ಮಾರ್ಥಕಾಮವ ಬಯಸಿ ಬಳಲುವರು ಎಂದರೆ, ಧರ್ಮಾರ್ಥಕಾಮಜನ್ಯಸೌಖ್ಯ ನಾವೇ ಅನುಭವಿತ್ತೇವೆಂದು ಹಾರೈಸಿ. ಶಕ್ತಿಯಿಲ್ಲದೆ ಬಳಲುತ್ತಿರುವರು ಅಥವಾ ಧರ್ಮಾರ್ಥಕಾಮಭೋಗ ಸಂಪಾದನೆ ದೇವರ ಭಜ ಯಿಲ್ಲದೆ ಅಲ್ಪಶಕ್ತಜೀವರಿಗೆ ದೊರಕಲಾರದೆಂದು ಅರ್ಥ. ॥೧೬॥

# ಸರ್ವವ್ಯಾಖ್ಯಾನಸಾರಸಂಗ್ರಹ

ನಿಷ್ಕಾಮವಾದ ಕರ್ಮಾಚರಣೆಯ ಮರ್ಮವನ್ನು ತಿಳಿಸುತ್ತಾರೆ.

ಮೂಢನಾದ ಮಾನವನೊಬ್ಬನು, ಸೂಜಿಯನ್ನು ತನ್ನ ಕೈಯ್ಯಲ್ಲಿ ಹಿಡಿದುಕೊಂಡು, ಅದನ್ನೇ ಮಹಾಸ್ತ್ರವೆಂದು ಭಾವಿಸಿ, ರಣರಂಗದಲ್ಲಿ ಸುಸಜ್ಜಿತ

ವಾಗಿರುವ ಸೇನಾಸಮೂಹವನ್ನು ಗೆಲ್ಲುವೆನೆಂದು ಉದ್ಯುಕ್ತನಾದರೆ, ಅದು ಎಷ್ಟು ಹಾಸ್ಯಾಸ್ಪದವೋ ಅಷ್ಟೇ ಫಲಾಪೇಕ್ಷೆಯಿಂದ ಮಾಡುವ ಸಕಲ ಕಾಮ್ಯ ಕರ್ಮಗಳೂ ನಿರರ್ಥಕವೆಂದು, ಸೂಜಿಯ ಸುಂದರ ದೃಷ್ಟಾಂತದಿಂದ ತಿಳಿಸು ತ್ತಾರೆ.

ನಮ್ಮ ಜೀವನವೇ ಮಹಾ ಸಮರರಂಗವು. ಇಂತಹ ಜೀವನ ಸಂಗ್ರಾಮ ದಲ್ಲಿ, ನಮಗೆ ಅಡಿಗಡಿಗೆ ಬಂದು ಒದಗುತ್ತಿರುವ ವಿಪತ್ತುಗಳು, ಪ್ರತಿಬಂಧಕ ಗಳು ಇತ್ಯಾದಿ ಕ್ಲೇಶಗಳು ನಾವು ಎದುರಿಸಬೇಕಾದ ಸೇನಾಸಮೂಹವು. ಇದರ ನಿವಾರಣೆಗೆ ಏಕೈಕ ಉಪಾಯವೆಂದರೆ, ಶ್ರೀಶನ ಪಾದಾರವಿಂದಗಳಲ್ಲಿ ಅಚಲವಾದ ಭಕ್ತಿ, ನಮ್ಮ ಅಧಿಷ್ಠಾನದಲ್ಲಿ ನಡೆಯುತ್ತಿರುವ ಶುಭ–ಮಿಶ್ರ– ಅಶುಭ ಎಂಬ ಸಕಲ ಕರ್ಮಗಳ ಸಮರ್ಪಣೆ, ಈ ಕರ್ಮಗಳು ಫಲಾಪೇಕ್ಷಾ ರಹಿತವಾಗಿರಬೇಕು. ಕಾಮ್ಯಕರ್ಮಗಳೆಲ್ಲವೂ ಸೂಜಿಯನ್ನು ಕೈಯ್ಯಲ್ಲಿ ಹಿಡಿದು ಸಮರವನ್ನು ಜಯಿಸುವೆನೆಂದ ಮೂರ್ಖತನದಿಂದ ಹೊರಟ ಮೂಢನಂತೆ ನಿರರ್ಥಕ ಹಾಗೂ ವ್ಯರ್ಥ.

ಮಾನವರು ಮಾಡುವ ಸಕಲ ಸತ್ಕರ್ಮಗಳಿಗೂ ಮುಖ್ಯ ವಿಷಯನ್ನು ಮುಕುಂದನಾಮಕ ಶ್ರೀಪರಮಾತ್ಮನು. ಸಕಲವೂ ಶ್ರೀವಿಷ್ಣುಪ್ರೀತ್ಯರ್ಥವಾಗಿರ ಬೇಕು. ಆಗಲೇ ಶ್ರೀಹರಿಯ ಪರಮಾನುಗ್ರಹದಿಂದ ವಿಪತ್ತುಗಳ ಪರಿಹಾರ.

ಅಹಂಕರ್ತೃತ್ವ ಭಾವವೇ ಜೀವನ ಪ್ರಗತಿಗೆ ಪ್ರಬಲ ಪ್ರತಿಬಂಧಕವು. ಅಸ್ವತಂತ್ರನಾದ ಜೀವನ ಸ್ವರೂಪಭೂತವಾದ ಜ್ಞಾನಶಕ್ತಿ–ಇಚ್ಛಾಶಕ್ತಿ–ಕ್ರಿಯಾ ಶಕ್ತಿ ಇವು ಪರಾಧೀನವಾಗಿವೆ. ಜೀವನು ತಾನೇ ತಾನಾಗಿ, ಯಾವ ಕರ್ಮ ವನ್ನೂ ಮಾಡಲಾರ ಧರ್ಮ, ಅರ್ಥ, ಕಾಮಗಳೆಂಬ ಪುರುಷಾರ್ಥಗಳನ್ನೂ ಕನಸಿನಲ್ಲಿಯೂ ಬೇಡದೆ, ಸರ್ವ ಕರ್ಮಗಳಿಗೂ ಅವನೇ ಕರ್ತನೆಂದರಿತು ಭಕ್ತಿಭಾವದಿಂದ ಚಕ್ರಪಾಣಿಯ ಚರಣಾರವಿಂದಗಳನ್ನು ಸದಾ ಚಿತ್ತದಲ್ಲಿ ಸ್ಮರಿಸಬೇಕೆಂದು ದಾಸರಾಯರ ಅಮೃತೋಪದೇಶ. ॥೧೬॥

# ಪದ್ಯ—೧೭

ಮೂಲ :–

ಶಕಟಭಂಜನ ಸಕಲಜೀವರ ।
ನಿಕಟಗನು ತಾನಾಗಿ ಲೋಕಕೆ ।
ಪ್ರಕಟನಾಗದೆ ಸಕಲಕರ್ಮವ ಮಾಡಿ ಮಾಡಿಸುತ ॥
ಅಕುಟಿಲಾತ್ಮಕ ಭಕುತ ಜನರಿಗೆ ।
ಸುಖದನೆನಿಸುವ ಸರ್ವಕಾಲದಿ ।
ಅಕಟಕಟ ಈತನ ಮಹಾಮಹಿಮೆಗಳಿಗೇನೆಂಬೆ ॥೧೭॥

**ಅವತರಣಿಕೆ**

ಮಹಾಮಹಿಮ ಸಂಪನ್ನನಾದ ಶ್ರೀಪರಮಾತ್ಮನು ಅವರವರ ಯೋಗ್ಯತಾನುಸಾರ ಸಕಲತ್ರಿವಿಧ ಜೀವರ ಕರ್ಮಗಳನ್ನು ತಾನೇ ಮಾಡಿ ಮಾಡಿಸುತ್ತಾ, ಪ್ರಕಟನಾಗದೇ, ತನ್ನ ಭಕ್ತವರ್ಗಕ್ಕೆ ಸರ್ವಕಾಲದಲ್ಲೂ ಸುಖಪ್ರದನಾಗಿದ್ದಾನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಶಕಟಭಂಜನ**–ಶಕಟಾಸುರನನ್ನು ಸಂಹಾರಮಾಡಿದ ಶ್ರೀಕೃಷ್ಣನು, **ಸಕಲಜೀವರ**–ಸಮಸ್ತ ತ್ರಿವಿಧ ಜೀವರ, **ನಿಕಟಗನು**–ಅತ್ಯಂತಸಮೀಪವರ್ತಿಯಾಗಿ ಜೀವಾಂತರ್ಗತನಾಗಿ ಬಿಂಬರೂಪದಿಂದಿದ್ದು, **ತಾನಾಗಿ**–ಸ್ವಯಂಬಿಂಬನಾಗಿ, **ಲೋಕಕೆ**–ಆತ್ರಿವಿಧಜೀವರಿಗೆ, **ಪ್ರಕಟನಾಗದೆ**–ಅಪಕ್ವಾದಶೆಯಲ್ಲಿ ತಾನು ಗೋಚರನಾಗದೆ, **ಸಕಲಕರ್ಮವ**-ಶುಭ-ಮಿಶ್ರ-ಅಶುಭಗಳೆಂಬ ಸಮಸ್ತವಾದ ವ್ಯಾಪಾರಗಳನ್ನು, **ಮಾಡಿ**–ಬಿಂಬಕ್ರಿಯಾ ದ್ವಾರಾ ತಾನೇ ಮಾಡಿ, **ಮಾಡಿಸುತ**–ಇಂದ್ರಿಯಾಭಿಮಾನಿ ದೇವತೆ–ದೈತ್ಯರ ದ್ವಾರಾಮಾಡಿಸುತ್ತಾ,

**ಅಕುಟಿಲಾತ್ಮಕ**–ಸಮಸ್ತದೋಷವಿದೂರನಾದ ಹರಿಯು, **ಭಕುತ ಜನರಿಗೆ**– ತನ್ನ ಭಕ್ತವರ್ಗಕ್ಕೆ. **ಸುಖದನೆನಿಸುವ**–ಸುಖವನ್ನು ಕೊಡುವವನು (ಇಹದಲ್ಲಿ ಪ್ರಾಪಂಚಿಕ ಸುಖ. ಪರದಲ್ಲಿ ನಿತ್ಯಾನಂದ ರೂಪವಾದ ಮೋಕ್ಷಸುಖ) ಎನಿಸುತ್ತಾನೆ. **ಸರ್ವಕಾಲದಿ**–ಸರ್ವದೇಶ, ಕಾಲಾದಿಗಳಲ್ಲಿ ಅಪರಿಚ್ಛಿನ್ನ ವ್ಯಾಪ್ತನಾದ, ಪರಿಪೂರ್ಣನಾದ. **ಈತನ**–ಗುಣಪೂರ್ಣನಾದ ಶ್ರೀಪರಮಾತ್ಮನ. **ಅಕಟಕಟ**– ಅತ್ಯಂತ ಆಶ್ಚರ್ಯಕರವಾದ, **ಮಹಾಮಹಿಮೆಗಳಿಗೆ**–ಉತ್ಕೃಷ್ಟವಾದ ಮಹಿಮೆಗಳಿಗೆ, **ಏನೆಂಬೆ**–ಏನಂತ ಹೇಳಲಿ ? ॥೧೭॥

## ವ್ಯಾಖ್ಯಾನಗಳು

### ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಸಕಲ ಕರ್ಮಗಳೂ ಬಿಂಬಕ್ರಿಯಾ ದ್ವಾರಾ ಆಗತವೆ ಎಂದು ಹೇಳತಾರೆ.

ಶಕಟಾಸುರನ ಸಂಹಾರ ಮಾಡಿದ ಶ್ರೀಕೃಷ್ಣ, ಸಮಸ್ತ ತ್ರಿವಿಧ ಪ್ರಾಣಿಗಳ ಜೀವಾಂತರ್ಗತ, ದೇಹಾಂತರ್ಗತನಾಗಿ ಜೀವ ದೇಹಗಳಿಗೆ ಅತ್ಯಂತ ಸಮೀಪನು ಆದವನಾಗಿ, ತ್ರಿವಿದ ಜೀವರಿಗೆ ಅಪಕ್ವದಶಾದಲ್ಲಿ ಪ್ರತ್ಯಕ್ಷನಾಗದೆ ಇರೋಣ ಎಂಬುದು ತ್ರಿವಿಧರಿಗೂ ಸಮ. ಪಕ್ವದಶಾದಲ್ಲಿ ಮುಕ್ತಿಯೋಗ್ಯರಿಗೆ ಪ್ರತ್ಯಕ್ಷನಾಗತಾನೆ. ಭಗವದ್ದ್ವೇಷಿಗಳಾದ ತದನ್ಯ ಉಭಯರಿಗೆ ಪ್ರತ್ಯಕ್ಷನಾಗೋದಿಲ್ಲ. ಇವರಿಗೆ ದಾವಾಗ್ಯೂ ಪ್ರತ್ಯಕ್ಷನಲ್ಲ. ತ್ರಿವಿಧರಿಗೆ ಅಪಕ್ವದೆಶೆಯಲ್ಲಿ ಪ್ರಕಟನಾಗದೆ ಇದ್ದು, ಪರಮಾತ್ಮನಾದ ತಾನು ಕರ್ಮ ಮಾಡೋದಕ್ಕೆ ನಿಮಿತ್ತ ಕಾರಣವಾದ ಸ್ಥೂಲದೇಹದಲ್ಲಿ ದೇಹಾಕಾರನಾಗಿ, ಜೀವಗೆ ಬಿಂಬನಾಗಿ ಇದ್ದು ಎಂದರೆ, ಅತ್ಯಣುವಾದ ಜೀವ ಅಂಗಾರೇ ವಹ್ನಿಮಿವ ಜೀವಂ ನಿವೇಶ್ಯ ಎಂಬ ಪ್ರಮಾಣಾನುಸಾರ ಬೊಗ್ಗಿನಲ್ಲಿ (ಇದ್ದಲು) ಅಗ್ನಿ ಪ್ರವೇಶವಾಗಿ ತದಾಕಾರದಿಂದ ಇದ್ದಂತೆ, ತದ್ವತ್ ಸ್ಥೂಲದೇಹದಲ್ಲಿ ಜೀವ ತದಾಕಾರದಿಂದ ಸ್ಥೂಲಾತ್ಮನಾ ಪ್ರಕಾಶತೋ ವ್ಯಾಪ್ತನಾಗಿದ್ದಾನೆ. ಈ ದೇಹಾಕಾರನಾದ

ಜೀವನಲ್ಲಿ ತದಾಕಾರದಿಂದ ಜೀವಾಂತರ್ಗತನಾದ, ಅವಿಯೋಗನಾದ ಬಿಂಬ ತಾನೂನು ಜೀವನ ಸಂಗಡ ಅಂಶದಿಂದ ಹೊರಟು ದೇಹಾಕಾರನಾದ ಜೀವನಲ್ಲಿ ತದಾಕಾರನಾಗಿ ಬಿಂಬನಾಗಿ ಇದ್ದಾನೆ. ಸ್ಥೂಲದೇಹಕ್ಕೆ ಜೀವ ಬಿಂಬ. ಜೀವಗೆ, ಪರಮಾತ್ಮ ಬಿಂಬ. ಈ ಪ್ರಕಾರ ಸ್ಥೂಲದೇಹಗತನಾದ ವ್ಯಾಪ್ತ ಜೀವಗೆ ಬಿಂಬನಾಗಿ, ದೇಹೇಂದ್ರಿಯಾದಿಗಳಿಂದ ಸಕಲ ಕರ್ಮ ಪ್ರಾಣಿಗಳು ಮಾಡಬೇಕಾದರೆ (ಕರ್ಮಗಳ) ಬಿಂಬರೂಪವಾದ ಜೀವಾಂತರ್ಗತವಾದ ತನ್ನ ಅವಯವಗಳ ಚಲನ ಮಾಡಿ, ಇಂಥಾ ತನ್ನ ಕ್ರಿಯಾ ದ್ವಾರಾ, ತನಗೆ ಪ್ರತಿಬಿಂಬನಾದ, ವ್ಯಾಪ್ತನಾದ ಜೀವನ ಕ್ರಿಯಾ. ತದ್ದ್ವಾರಾ ಜೀವಗೆ ಪ್ರತಿಬಿಂಬವಾದ ಸ್ಥೂಲದೇಹ ದ್ವಾರಾ ಈ ರೀತ್ಯಾ ಸಕಲಕರ್ಮಗಳ ಮಾಡಿಸುತ್ತಾ, ಸ್ವರೂಪಸ್ವಭಾವದಲ್ಲಿ ಅನಾದಿಯಿಂದ ಮಿಶ್ರಜ್ಞಾನ, ಮಿಥ್ಯಾಜ್ಞಾನರೂಪವಾದ ಕುಟಿಲರಹಿತರಾಗಿ ತಾರತಮ್ಯ ಪಂಚಭೇದ ಹರಿಸರ್ವೋತ್ತಮನೆಂಬ ನಿಶ್ಚಯ ಜ್ಞಾನದಿಂದ, ಪ್ರಚುರಸ್ವಭಾವರಾದ, ತನ್ನಲ್ಲಿ ಸರ್ವೋತ್ತಮತ್ವೇನ ಭಕ್ತಿ ಮಾಡತಕ್ಕ ಭಕ್ತಜನರಿಗೆ ಸ್ವರೂಪಸುಖ ವ್ಯಕ್ತಮಾಡಿ ಕೊಡತಕ್ಕವನು ಎಂದು ಅನಿಸೋವನಾಗುತ್ತಾನೆ. ತದನ್ಯರಿಗೆ ಇದೇ ಪರಮಾತ್ಮನೇ ಬಿಂಬನಾದರೂ, ಇವರು ದುಃಖಸ್ವರೂಪಿಗಳಾದ್ದರಿಂದ ದುಃಖ ಕೊಡೋವನಾಗತಾನೆ (ಲಿಂಗಭಂಗಾನಂತರ) ಎಂತ ತಾತ್ಪರ್ಯ. ತತ್ಪೂರ್ವದಲ್ಲಿ ಕರ್ಮವಶಾತ್ ತ್ರಿವಿಧರಿಗೆ ಸುಖದುಃಖಗಳ ಕೊಡತಾ ಇರತಾನೆ. ಸರ್ವದೇಶಕಾಲಗಳಲ್ಲೂ ಅಪರಿಚ್ಛಿನ್ನ ವ್ಯಾಪ್ತನಾದ, ಈ ಗುಣಪೂರ್ಣನಾದ ಶ್ರೀಪರಮಾತ್ಮನ ಆಶ್ಚರ್ಯ ಆಶ್ಚರ್ಯಕರವಾದ, ಉತ್ಕೃಷ್ಟವಾದ ಮಹಾತ್ಮೆಗಳಿಗೆ ಏನಂತ ಹೇಳಲಿ.

**ತಾತ್ಪರ್ಯ**

ಅಂದರೆ ರಮಾಬ್ರಹ್ಮಾದಿಗಳಿಗೆ ಆಶ್ಚರ್ಯಗೊಳಿಸತಕ್ಕ ಮಹಾಮಹಿಮ ಎಂತ ಅರ್ಥ. ಈ ಪ್ರಕಾರ ದೇಹೇಂದ್ರಿಯಾದಿಗಳಿಂದ ಮಾಡಿಸುವ ಕರ್ಮಗಳಲ್ಲಿ ವಿಧಿ ದಾವದು, ನಿಷೇಧ ದಾವದು, ವಿಧಿಕರ್ಮಗಳೇ ಮಾಡಿಸು, ನಿಷೇಧಕರ್ಮ ಮಾಡಿಸಬ್ಯಾಡ ಎಂತ (ತತ್ತ್ವಾಭಿಮಾನಿ ದೇವತೆಗಳಿಗೆ) ಆಜ್ಞಾ ಮಾಡತಕ್ಕ, ಪರಮಾತ್ಮನಿಗಿಂತಲೂ ಉತ್ತಮರಾದ ಪ್ರಭುಗಳು ದಾರೂ ಇಲ್ಲವಾದ ಪ್ರಯುಕ್ತ, ಉಭಯಕರ್ಮಗಳೂ ಆಚರಿಸಬೇಕು. ದಾವಾಗಾದರೆ ತನ್ನ ಕ್ರಿಯಾ

ದ್ವಾರಾ ಪ್ರತಿಬಿಂಬಕ್ರಿಯಾ ಅನುಸಂಧಾನವನ್ನು ತಂದು ಕೊಟ್ಟು, ಅಹಂ ಮಮತಾದಿಗಳ ಬಿಡಸತಾನೋ ಆಗ್ಗೆ ಇವನ್ನ ನಿರ್ಲಿಪ್ತನ್ನ ಮಾಡಿ, ಎಲ್ಲಾ ಪುಣ್ಯಗಳಾಗಿ ಮಾಡತಾನೆ ಎಂತ ತಾತ್ಪರ್ಯ ॥೧೭॥

## ಭಾವಪ್ರಕಾಶಿಕೆ

ಶ್ರೀಕೃಷ್ಣಾವತಾರದಲ್ಲಿ ಮೂರು ತಿಂಗಳು ಮಗುವಾಗಿದ್ದಾಗ ಯಶೋದೆಯು ಹೊಳೆಮೆಟ್ಟುವ ದಿವಸ ಉತ್ಸವದ ಸಂಭ್ರಮದಲ್ಲಿ ಶ್ರೀಕೃಷ್ಣನನ್ನು ಒಂದು ಬಂಡಿಯು ಬಾಡದಲ್ಲಿ ಮಲಗಿಸಿ ತಾನು ಬಂದವರಿಗೆ ಉಪಚಾರವನ್ನು ಮಾಡುತ್ತಿರುವಾಗ ಶಕಟಾಕ್ಷನೆಂಬ ಒಬ್ಬ ಅಸುರನು ಅದೇ ಬಂಡಿಯರೂಪವಾಗಿ ಅದೇ ಬಂಡಿಯಲ್ಲಿ ಪ್ರವೇಶಮಾಡಿ ಕೃಷ್ಣನನ್ನು ಕೊಲ್ಲಲು ಬಂದಿರುವುದನ್ನು ಶ್ರೀಕೃಷ್ಣನು ತಿಳಿದು ತಾಯಿಯು ತನ್ನನ್ನು ಎತ್ತಿಕೊಳ್ಳಲಿಲ್ಲವೆಂದು ಹಠಮಾಡಿ ಅಳುವ ನೆಪದಿಂದ ಬಂಡಿಯ ಚಕ್ರವನ್ನು ಕಾಲಿನಿಂದೊದೆಯಲು ಬಂಡಿಯು ಪುಡಿಪುಡಿಯಾಗಿ ದೈತ್ಯನು ಮೃತನಾದನೆಂದು ಭಾಗವತ ದಶಮಸ್ಕಂಧದಲ್ಲಿ ಹೇಳಿರುವರು. ಆದ್ದರಿಂದ ದಾಸರಾಯರು ಶಕಟಭಂಜನನೆಂದರು. ಅಂದರೆ ಬಂಡಿಯನ್ನು ಒದೆದವನೆಂದರ್ಥ. ಇಂತಹ ಶ್ರೀಪರಮಾತ್ಮನು ಸಕಲ ಪ್ರಾಣಿಗಳ ಸಮೀಪಗತನಾಗಿದ್ದು ಜನಗಳಿಗೆ ಗೋಚರನಾಗದೆ, ಸಕಲ ಕರ್ಮಗಳನ್ನು ತಾನು ಮಾಡಿ ಜನಗಳಿಂದಲೂ ಮಾಡಿಸಿ ನಿಷ್ಕಪಟ ಸ್ವಭಾವನಾದ ಶ್ರೀಹರಿಯು ಸರ್ವಕಾಲದಲ್ಲೂ ಭಕ್ತರಿಗೆ ಸುಖವನ್ನು ಕೊಡುತ್ತಿರುವನು. ಆಹಾ ! ಈತನ ಕಾರುಣ್ಯವನ್ನು ಮಹಾಮಹಿಮೆಯನ್ನು ಎಷ್ಟೆಂದು ಕೊಂಡಾಡಬಹುದು ! ಹೇಳಲು ಸಾಧ್ಯವಿಲ್ಲ ಎಂಬುದನ್ನು ಅಕಟಕಟ ಎಂಬ ಪದವು ಸೂಚಿಸುವುದು. ॥೧೭॥

## ಭಾವದರ್ಪಣ

ಶಕಟೇತಿ. ಶಕಟಾಸುರ ಮರ್ದನ ಶ್ರೀಕೃಷ್ಣ, ನಿಕಟ–ಸಮೀಪ ಎಂಬರ್ಥ. ಅಕುಟಿಲ–ಕುಟಿಲ ರಹಿತ. ಅಕಟಕಟ–ಕಷ್ಟವೆಂತಲೂ, ಆಶ್ಚರ್ಯವೆಂತಲೂ ಅರ್ಥ. ॥೧೭॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಶಕಟ ಇತಿ ॥ ಶಕಟಃ ದೈತ್ಯಃ ॥ ನಿಕಟ–ಸಮೀಪ ॥ ಅಕಟಕಟ ಅನನ್ವಿತಂ ತೇ ಭಗವದ್ವಿಚೇಷ್ಟಿತಮ್ ॥ ಇತಿ ಭಾಗವತೇ । ಅಚಿಂತ್ಯಃ ॥ ॥೧೭॥

## ಕನ್ನಡಾರ್ಥ

ಪರಮಾತ್ಮನ ಮಹಿಮೆಯು ಮನೋವಚನಗಳಿಗೆ ಗೋಚರವಾಗುವದು, ಅದ್ಭುತವು" ಎಂದು ನಿರೂಪಿಸುತ್ತಾರೆ, ಶಕಟ ಎಂಬ ಈ ಪದ್ಯದಿಂದ. ಶಕಟನೆಂಬುದು ದೈತ್ಯನ ಹೆಸರು. ನಿಕಟ–ಸಮೀಪ, ಹತ್ತಿರ. ಭಾಗವತದಲ್ಲಿ ಪರಮಾತ್ಮನ ವಿವಿಧ ವ್ಯಾಪಾರಗಳು ಮನುಷ್ಯರ ಅಲ್ಪಮತಿಗಳಿಗೆ ಸರಿಯಾಗಿ ಸಾಕಲ್ಯದಿಂದ ತಿಳಿಯಲ್ಪಡುವುದಿಲ್ಲ ಎಂದು ಹೇಳಿರುವುದರಿಂದ ಅಚಿಂತ್ಯ ಮಹಿಮೆಗಳು ಎಂದು ತಿಳಿಯಬೇಕು. ॥೧೭॥

## ಶ್ರೀಗುರುಹೃದಯಪ್ರಕಾಶಿಕೆ

ಶಕಟಾಸುರಭಂಜನನಾದ ಶ್ರೀಕೃಷ್ಣನು ಸಕಲಜೀವರ ನಿಕಟವೆಂಬ ಮನಸ್ಸಮೀಪದಲ್ಲೇ ಇದ್ದು, ಅಜ್ಞಲೋಕಕ್ಕೆ ಪ್ರಕಾಶವಾಗಿ ಕಾಣಿಸದೆ ಸಕಲರ ಕ್ರಿಯೆ ವ್ಯಕ್ತಮಾಡಿ ಮಾಡಿಸುವನು. ನಿಷ್ಕಪಟನಾದಾಗ್ಯೂ ಸದಾ ಭಕ್ತಜನರಿಗೆ ಸುಖವನ್ನು ಕೊಡುವವನೆನಿಸುವನು. ಅನ್ಯಜನರಿಗೆ ಅವರ ಸ್ವಭಾವ ಕಪಟ ನಿಮಿತ್ತ, ಸುಖ ಕೊಡುವುದಿಲ್ಲವೆಂದಭಿಪ್ರಾಯ. ಅಕಟಕಟಾ ಎಂದರೆ (ಆಶ್ಚರ್ಯ ವಾಚಕ ಅವ್ಯಯಶಬ್ದ), ಈ ಸ್ವಾಮಿ ಮಹಾಮಹಿಮೆಗೆ ಏನೆಂಬೆ ಎಂದರೆ ವರ್ಣಿಸುವುದಕ್ಕೆ ಅಸಾಧ್ಯವೆಂದರ್ಥ. ॥೧೭॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರತ್ಯಕ್ಷ ಗೋಚರನಾಗದೇ ಸರ್ವ ಕರ್ಮ ಪ್ರವರ್ತಕನಾದ ಆ ಸರ್ವೇಶನ ಮಹಾಮಹಿಮೆಗಳನ್ನು ತಿಳಿಸುತ್ತಾರೆ.

ಶ್ರೀಕೃಷ್ಣನು ಮೂರು ತಿಂಗಳು ಶಿಶುವಾಗಿದ್ದಾಗ ಒಮ್ಮೆ ಯಶೋದೆಯು ಹೊಳೆಮುಟ್ಟುವ ಉತ್ಸವದ ಸಂಭ್ರಮದಲ್ಲಿ ಆ ಮಗುವನ್ನು ಒಂದು ಬಂಡಿಯ ಬುಡದಲ್ಲಿ ಮಲಗಿಸಿ ತಾನು ಉತ್ಸವದಲ್ಲಿ ಭಾಗಿಯಾದಳು. ಕಂಸನಿಂದ ಪ್ರೇರಿತನಾಗಿ ಕಳುಹಿಸಲ್ಪಟ್ಟ ಶಕಟಾಕ್ಷನಿಂದ ಅಸುರನು ಆ ಬಂಡಿಯ ರೂಪದಲ್ಲಿ ಮಗುವನ್ನು ಕೊಲ್ಲುವ ದುರುದ್ದೇಶದಿಂದ ಬಂದಿದ್ದನು. ಸರ್ವಜ್ಞನಾದ ಶ್ರೀಕೃಷ್ಣನು ಬಂಡಿಯ ಚಕ್ರವನ್ನು ಲೀಲಾಜಾಲವಾಗಿ ಒದೆಯಲು ಆ ಶಕಟವು ಪುಡಿಪುಡಿಯಾಗಿ ಅಸುರನು ಮೃತನಾದನು ಇದರಿಂದ ಶ್ರೀಕೃಷ್ಣನನ್ನು ಶಕಟಭಂಜನ ಎಂದಿದ್ದಾರೆ.

ಶ್ರೀಕೃಷ್ಣನು ಸಮಸ್ತ ತ್ರಿವಿಧಜೀವರ ಬಿಂಬನಾಗಿ ಅವರ ಸಮೀಪವರ್ತಿಯಾಗಿದ್ದಾನೆ.

ಅಂಬರಮಣನು ಸಕಲ ಕರ್ಮಗಳಿಗೂ ತಾನೇ ಪ್ರವರ್ತಕನಾಗಿದ್ದರೂ, ಜೀವರಿಗೆ ತಾನೇ ಆ ಕರ್ಮಗಳನ್ನು ಮಾಡುತ್ತಿರುವೆನೆಂಬ ಅಹಂಮಮತಾದಿ ಭಾವವನ್ನು ಕೊಡುವನು, ಇದು ಜೀವರ ಅಪಕ್ವ ದೆಶೆಯಲ್ಲಿ. ಸಜ್ಜೀವನರ ಪಕ್ವ ಸ್ಥಿತಿಯಲ್ಲಿ ಪ್ರಕಟನಾಗುವನು.

ಇದ್ದಿಲಿನಲ್ಲಿ ಅಗ್ನಿಯು ಪ್ರವೇಶಿಸಿ, ತದಾಕಾರವಾಗಿ ಪ್ರಜ್ವಲಿಸುವಂತೆ, ದೇಹದ ಸಕಲೇಂದ್ರಿಯಗಳಲ್ಲಿಯೂ ಜೀವನು ಪ್ರಕಾಶತೋವ್ಯಾಪ್ತನಾಗಿದ್ದಾನೆ.

ಸಕಲಕರ್ಮಗಳನ್ನು ಮಾಡಿ ಮಾಡಿಸುವ ಆ ಸರ್ವಪ್ರೇರಕನು ಇದರಿಂದ ಅಕುಟಲಾತ್ಮನು. ಕುಟೀ—ಎಂದರೆ ವಿಕೃತಿ (ನ್ಯೂನತೆ) ಅಕುಟಿಲನೆಂದರೆ, ನ್ಯೂನಾತಿರೇಕರಹಿತನೆಂದರ್ಥ.

ಶ್ರೀಹರಿಯು ತನ್ನ ಭಕ್ತಜನರಿಗೆ ಇಹದಲ್ಲಿ ಆನಂದಪ್ರದನು ಪರದಲ್ಲಿ ನಿತ್ಯಾನಂದರೂಪವಾದ ಮುಕ್ತಿಸುಖವನ್ನು ಕೊಡುವನು. ಇದರಿಂದ ಆ ಪರಮಾತ್ಮನ ಅಚಿಂತ್ಯ ಮಹಿಮಾತಿಶಯಗಳನ್ನು ರಮಾಬ್ರಹ್ಮಾದಿಗಳೂ ಸಾಕಲ್ಯೇನ ಅರಿಯರು. ಅವನೆಂತಹ ಪರಮಾಶ್ಚರ್ಯ ಮಹಿಮಾಸಂಪನ್ನನು ಎಂದು ಆಶ್ಚರ್ಯದ ಉದ್ಗಾರ ಮಾಡಿದ್ದಾರೆ ದಾಸರಾಯರು. ॥೧೭॥

## ಪದ್ಯ - ೧೮

**ಮೂಲ :–**

> **ಶ್ರೀಲಕುಮಿವಲ್ಲಭನು ವೈಕುಂ ।**
> **ಠಾಲಯದಿ ಪ್ರಣವ ಪ್ರಕೃತಿ ಕಿ ॥**
> **ಲಾಲಜಾಸನ ಮುಖ್ಯ ಚೇತನರೊಳಗೆ ನೆಲೆಸಿದ್ದು ॥**
> **ಮೂಲಕಾರಣ ಅಂಶನಾಮದಿ ।**
> **ಲೀಲೆಗೈಸುತ ತೋರಿಕೊಳ್ಳದೆ ।**
> **ಪಾಲಿನೊಳು ಘೃತವಿದ್ದ ತೆರದಂತಿಪ್ಪ ತ್ರಿಸ್ಥಳದಿ ॥೧೮॥**

**ಅವತರಣಿಕೆ**

ಮೂಲರೂಪೀ ಶ್ರೀಮನ್ನಾರಾಯಣನು ರಮಾ ಬ್ರಹ್ಮಾದಿ ಸಕಲ ಚೇತನ ವರ್ಗದಲ್ಲಿ ಬಿಂಬನಾಗಿದ್ದು, ಗೋಚರನಾಗದೇ ಹಾಲಿನಲ್ಲಿರುವ ತುಪ್ಪದಂತೆ, ವಿಹಾರ ಮಾಡುತ್ತಿರುವನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಶ್ರೀಲಕುಮಿವಲ್ಲಭನು**–ಶ್ರೀಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು, **ವೈಕುಂಠಾಲಯದಿ**–ಲಕ್ಷ್ಮ್ಯಾತ್ಮಕವಾದ ವೈಕುಂಠವೆಂಬ ಮುಕ್ತಿಮಂದಿರದಲ್ಲಿ **ಪ್ರಣವ**–ಸರ್ವವೇದಗಳಿಗೂ ಬೀಜಭೂತವಾದ ಓಂಕಾರದಲ್ಲಿ ಪ್ರತಿಪಾದ್ಯ ನಾಗಿದ್ದು, **ಪ್ರಕೃತಿ**–ಜಗತ್ಸೃಷ್ಟಿಗೆ ಉಪಾದಾನಕಾರಣವಾದ ಜಡಪ್ರಕೃತಿಯಲ್ಲಿ, ಹಾಗೂ ಪ್ರಕೃತಿಗೆ ಅಭಿಮಾನಿಯಾದ ಚಿತ್ಪ್ರಕೃತಿನಾಮಕಳಾದ ಶ್ರೀಲಕ್ಷ್ಮೀದೇವಿ ಯಲ್ಲಿ, **ಕೀಲಾಲಜಾಸನ**–ಕಮಲೋದ್ಭವರಾದ ಬ್ರಹ್ಮದೇವರು (ಕೀಲಾಲ– ನೀರು. ಕೀಲಾಲಜ–ನೀರಿನಲ್ಲಿ ಹುಟ್ಟಿದಕಮಲ, ಕೀಲಾಲಜಾಸನ–ಕಮಲಾಸನ ರಾದ ಬ್ರಹ್ಮದೇವರು) **ಮುಖ್ಯಚೇತನರೊಳಗೆ**–ಮೊದಲಾದ ಚೇತನರಲ್ಲಿ,

**ನೆಲೆಸಿದ್ದು**–ಜೀವಾಂತರ್ಯಾಮಿಯಾಗಿ ಬಿಂಬರೂಪದಿಂದ ನಿವಾಸಿಸುತ್ತಿದ್ದು, **ಮೂಲಕಾರಣ**–ಜಗತ್ತಿನ ಸಕಲ ವ್ಯಾಪಾರಗಳಿಗೂ ಪ್ರಧಾನಕಾರಣನಾದ, ಆದಿಮೂಲನಾಮಕನಾದ ಶ್ರೀಪರಮಾತ್ಮನು, **ಅಂಶನಾಮದಿ**–ತನ್ನ ಮೂಲ ರೂಪದಿಂದ ಹೊರಟ ಸ್ವಾಭಿನ್ನಗಳಾದ ಅನಿರುದ್ಧಾದಿ ಪ್ರಾದುರ್ಭಾವ ರೂಪಗಳಿಂದಲೂ, ರಾಮಕೃಷ್ಣಾದಿ ಅವತಾರರೂಪಗಳಿಂದಲೂ, **ತೋರಿಕೊಳ್ಳದೆ**–ತಾನು ಮಾತ್ರ ಗೋಚರನಾಗದೆ, **ಲೀಲೆಗೈಸುವ**–ಲೀಲಾರೂಪವಾದ ವ್ಯಾಪಾರಗಳಿಂದ ವಿಹರಿಸುತ್ತಾ, **ಪಾಲಿನೊಳು**–ಹಾಲಿನಲ್ಲಿ **ಘೃತವಿದ್ದ ತೆರೆದಂತೆ**–ತುಪ್ಪವು ಗೋಚರಿಸದೇ ಅವ್ಯಕ್ತವಾಗಿರುವಂತೆ, **ತ್ರಿಸ್ಥಳದಿ**–ವೈಕುಂಠ–ಅನಂತಾಸನ–ಶ್ವೇತದ್ವೀಪ ಎಂಬ ಮೂರು ಸ್ಥಾನಗಳಲ್ಲಿ, **ಇಪ್ಪ**–ವಿದ್ಯಮಾನನಾಗಿದ್ದಾನೆ. ॥೧೮॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವಾಂತರ್ಗತ, ದೇಹಾಂತರ್ಗತ ಪರಮಾತ್ಮವಿಚಾರ ಹೇಳುತ್ತಾರೆ.

ಕಾಲತ್ರಯದಲ್ಲೂ, ಅನಾದ್ಯನಂತಕಾಲದಲ್ಲೂ, ನಿತ್ಯವಾದ ನಾಶರಹಿತವಾದ, ಲಕ್ಷ್ಮ್ಯಾತ್ಮಕವಾದ, ಲಕ್ಷ್ಮೀಸ್ವರೂಪಭೂತಗಳಾದ, ಲಕ್ಷ್ಮ್ಯಾತ್ಮಕ ಪ್ರದೇಶಗತ ಆಲಯದಲ್ಲಿ ಲಕ್ಷ್ಮೀಸಮೇತನಾಗಿ ಶ್ರೀನಾರಾಯಣದೇವರು ಇರೋವನಾಗಿ ಇದ್ದಾನೆ. ಇಲ್ಲಿ ಬ್ರಹ್ಮಾದಿಗಳ ಪ್ರವೇಶವಿಲ್ಲದ್ದು ಶಾಸ್ತ್ರಸಿದ್ಧವು. ಇದರಂತೆ ಸರ್ವವೇದಗಳ, ಮಂತ್ರಗಳ ಅಭಿವ್ಯಕ್ತಿಗೆ ಕಾರಣವಾದ, ಮೂಲಭೂತವಾದ ಓಂಕಾರದಲ್ಲಿ, ಸ್ಥೂಲಸೃಷ್ಟಿಗೆ ಕಾರಣವಾದ ಮೂಲಭೂತ ಅನಾದಿಲಿಂಗದೇಹಾಖ್ಯ ಪ್ರಕೃತಿಯಲ್ಲಿ, ಜೀವೋತ್ತಮರಾದ, ಉದರದಲ್ಲಿ ಉತ್ಪನ್ನವಾದ ಕಮಲವೇ ಆಸನವಾಗಿವುಳ್ಳ ಬ್ರಹ್ಮದೇವರು ಮೊದಲಾದ ಚರಾಚರಾತ್ಮಕ ತ್ರಿವಿಧ ಜೀವರ ಸ್ವರೂಪದೇಹದ ಒಳಗೆ ರಮಾಸಹಿತ, ತಾನು ಮಾತ್ರ ಪೂರ್ವೋಕ್ತ ನಾಲ್ಕು ಸ್ಥಳಗಳಲ್ಲಿ ವಾಸವಾಗಿದ್ದು, ಚರಾಚರ ಸೃಷ್ಟಿಗೆ

ಮೂಲಕಾರಣನಾದ ಪರಮಾತ್ಮ ನಾಲ್ಕು ಸ್ಥಾನಗಳಲ್ಲಿ, ಹಾಂಗೆ ಲಿಂಗದೇಹಾಖ್ಯ ಐದನೇ ಸ್ಥಾನದಲ್ಲಿ ರಮಾಸಹಿತನಾಗಿ ಇದ್ದಾನೆ. ಬ್ರಹ್ಮವಾಯ್ವಾದಿಗಳ ಪ್ರವೇಶ ವಿಲ್ಲ. ಇದರಲ್ಲಿ ಜೀವಾಂತರ್ಗತನಾದ ಮೂಲಕಾರಣನಾದ ಬಿಂಬ, ಜೀವನ ಪ್ರಕಾಶರೂಪವಾದ ಅಂಶ, ಸ್ಥೂಲದೇಹೇಂದ್ರಿಯಾದಿಗಳಲ್ಲಿ ತದಾಕಾರದಿಂದ ಪ್ರವೇಶವಾದದ್ದರಲ್ಲಿ ತಾನೂನೂ ಅಂಶದಿಂದ ಹೊರಟು, ಅಂಶ ಎಂತ ನಾಮ ದಿಂದ ಕರಸಿ, ಸ್ಥೂಲದೇಹಗತ ವ್ಯಾಪ್ತನಾದ ಜೀವನಲ್ಲಿ ಇದ್ದಾನೆ. ಹ್ಯಾಂಗೆ ಇದ್ದಾನೆ ಎಂದರೆ ದೃಷ್ಟಾಂತ, ಕ್ಷೀರದಲ್ಲಿ ತುಪ್ಪವು ಇದ್ದ ದೃಷ್ಟಾಂತದೋಪಾದಿ ಯಲ್ಲಿ, ತ್ರಿವಿಧ ಜೀವರ ಸ್ಥೂಲ ದೇಹದಲ್ಲಿ ವ್ಯಾಪ್ತರಾದ ಜೀವರಲ್ಲಿ ಇರೋವ ನಾಗಿ ಇದ್ದಾನೆ. ಇದ್ದು ದೇಹದ ದ್ವಾರಾ ಜೀವರಕಡಿಯಿಂದ ಕರ್ಮರೂಪವಾದ ಆಟಗಳ ಆಡಿಸುತ್ತ, ಪ್ರಾಣಿಗಳಿಗೆ ಕಾಣಿಸಿಕೊಳ್ಳದೆ ಹಾಲಿನಲ್ಲಿ ತುಪ್ಪ ಇದ್ದಂತೆ ಇರೋವನಾಗಿದ್ದಾನೆ ಎಂತ ಭಾವವು. ॥೧೮॥

## ಭಾವಪ್ರಕಾಶಿಕೆ

ಶ್ರೀಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು ಮೂಲರೂಪದಿಂದ ಸರ್ವವೇದಾತ್ಮಕವಾದ ಪ್ರಣವ ಅಂದರೆ ಓಂಕಾರ ಪ್ರತಿಪಾದ್ಯನಾಗಿ ವಾಸ ಮಾಡುವನು. ಪ್ರಕೃತಿಯೆಂದು ಲಕ್ಷ್ಮೀದೇವಿಯರಿಗೆ ಹೆಸರು. ಇವರಿಗೆ ಶ್ರೀದೇವಿ, ಭೂದೇವಿ, ದುರ್ಗಾದೇವಿ ಎಂಬ ಮೂರು ರೂಪಗಳುಂಟು. ಭಾಗವತ ಶೃತಿಗೀತಾ ವ್ಯಾಖ್ಯಾನದಲ್ಲಿ "ಶ್ರೀರ್ಭೂಮಿರಿತಿರೂಪಾಭ್ಯಾಂ ಪ್ರಕೃತಿ ರ್ವಿಷ್ಣುನಾ ಸಹ ॥ ಶೇತೇ ಶೃತಿಶ್ಚ ರೂಪೇಣ ಸ್ತೌತಿ ಬ್ರಹ್ಮಲಯೇ ಹರಿಂ ॥" ಎಂಬ ವಾಕ್ಯದಲ್ಲಿ ಪ್ರಕೃತಿಯು, ಶ್ರೀ ಭೂ ಎಂಬೆರಡು ರೂಪಗಳಿಂದ ಪರ ಮಾತ್ಮನೊಂದಿಗೆ ಪ್ರಳಯಕಾಲದಲ್ಲಿ ಶಯನಮಾಡಿರುವಳು. ದುರ್ಗಾನಾಮಕ ಪ್ರಕೃತಿಯು ವೇದಸ್ವರೂಪಗಳಾಗಿ ಪರಮಾತ್ಮನನ್ನು ಸ್ತುತಿಸುತ್ತಿರುವಳು ಎಂದು ಹೇಳಿರುವರು. ಈ ಪ್ರಕೃತಿಯಲ್ಲಿ ಚೇತನಪ್ರಕೃತಿ ಎಂತಲೂ, ಜಡ ಪ್ರಕೃತಿಯೆಂತಲೂ ಎರಡು ಪ್ರಕಾರ. ಜಡಸೃಷ್ಟಿಗೆ ಜಡಪ್ರಕೃತಿಯು ಚೇತನ ರಾದ ಬ್ರಹ್ಮಾದಿಗಳ ಸೃಷ್ಟಿಗೆ ಚೇತನಪ್ರಕೃತಿಯು ಕಾರಣರಾಗಿರುವರು. ಈ ಜಡಚೇತನ ಪ್ರಕೃತಿಗಳಲ್ಲಿ ಕಾರಣರೂಪದಿಂದ ಪರಮಾತ್ಮನಿರುವನು.

ಪ್ರಪಂಚದ ಸೃಷ್ಟಿಗೆ ಕಾರಣವು ಪ್ರಕೃತಿಯಾದುದರಿಂದ ಅಲ್ಲಿ ಕಾರಣರೂಪದಿಂದ ಪ್ರಕೃತಿನಾಮಕನಾಗಿ ಇರುವನು. ಬ್ರಹ್ಮಾದಿಸಕಲಪ್ರಾಣಿಗಳಲ್ಲೂ, ಭಿನ್ನಾಂಶರೂಪನಾಗಿ ವಾಸಮಾಡುವನು. ಅಂಶರೂಪಗಳು ಎರಡು ಪ್ರಕಾರ – ಸ್ವಾಂಶ, ಭಿನ್ನಾಂಶವೆಂದು. ಸ್ವಾಂಶವೆಂದರೆ ಪರಮಾತ್ಮನೇ ರೂಪಾಂತರದಿಂದ ಅವತಾರ ಮಾಡಿರುವ ರಾಮಕೃಷ್ಣಾದಿ ರೂಪಗಳು. ಭಿನ್ನಾಂಶವೆಂದರೆ ಇತರ ಜೀವರಲ್ಲಿ ಪ್ರವಿಷ್ಟನಾಗಿ ಜೀವಭಿನ್ನನಾಗಿ ದೇಹದೊಳಗಿದ್ದು ಕಾರ್ಯಗಳನ್ನು ಮಾಡಿಸುವ ರೂಪವು. ಈ ಅಂಶಕ್ಕೆ ವ್ಯಾಪ್ತಿರೂಪವೆಂದು ಹೇಳಬಹುದು. ಹೀಗೆ ಪರಮಾತ್ಮನು ಮೂರು ಸ್ಥಳಗಳಲ್ಲಿ ಅಂದರೆ ವೈಕುಂಠದಲ್ಲಿ ಓಂಕಾರಪ್ರತಿಪಾದ್ಯವಾದ ಮೂಲರೂಪ ೧, ಪ್ರಕೃತಿಕಾರಣ ರೂಪ ೧, ಬ್ರಹ್ಮಾದಿ ಸಕಲಜೀವರಲ್ಲಿ ಅಂಶರೂಪ ೧, ಹೀಗೆ ಮೂರುವಿಧ ರೂಪಗಳಿಂದ ಮೂರು ಸ್ಥಾನಗಳಲ್ಲಿ ವಾಸಮಾಡುವನು. ಈ ಸ್ಥಳಗಳಲ್ಲಿ ಪರಮಾತ್ಮನಿದ್ದರೂ ಎಲ್ಲರಿಗೂ ಗೋಚರಿಸದೆ ಹಾಲಿನೊಳಗೆ ತುಪ್ಪವಿರುವಂತೆ ಇರುವನು. ಹಾಲನ್ನು ನೋಡಿದರೆ ತುಪ್ಪ ಕಾಣುವುದೆ ? ಇಲ್ಲ. ಅದಕ್ಕೆ ಹೆಪ್ಪು ಕೊಟ್ಟು ಮೊಸರು ಮಾಡಬೇಕು. ತದನಂತರ ಆ ಮೊಸರನ್ನು ಮಥನ ಮಾಡಬೇಕು (ಕಡೆಯಬೇಕು). ಅಲ್ಲಿ ಬೆಣ್ಣೆ ಕಾಣುವದು. ಅದನ್ನು ಕಾಯಿಸಿದರೆ ತುಪ್ಪವು ದೊರಕುವದು. ಇಲ್ಲಿ ಹೇಗೆ ಹಾಲು, ಹಾಲಿನಿಂದ ಮೊಸರು, ಮೊಸರಿನಿಂದ ಬೆಣ್ಣೆ, ಹೀಗೆ ಮೂರು ವಸ್ತುಗಳು ಕಂಡ ಮೇಲೆ ಅದರಿಂದ ತುಪ್ಪವನ್ನು ಕಾಣುವರೋ ಹಾಗೆಯೇ ಭಗವದ್ರೂಪಗಳನ್ನು ಮೇಲೆ ಹೇಳಿದ ಮೂರು ಸ್ಥಳಗಳಲ್ಲಿ ಕಾಣಬೇಕಾದರೂ ಹಾಲಿನೊಳಗೆ ತುಪ್ಪವನ್ನು ಕಂಡಂತೆಯೇ ಕಾಣಬೇಕು. ಮೊದಲು ವೇದವು ಹಾಲಿನಂತೆ ಇರುವುದು. ಆದರೇನು ? ಅದರಲ್ಲಿ ತುಪ್ಪದಂತಿರುವ ಭಗವತ್ಸ್ವರೂಪವನ್ನು ಕಾಣುವುದೆಂತು ? ಹಾಲನ್ನು ಕಾಯಿಸಿ ಹೆಪ್ಪು ಹಾಕಿದರೆ ಮೊಸರಾಗುವುದೆಂಬ ಜ್ಞಾನವು ನಮಗೆ ಬೇಕಲ್ಲವೆ ? ಚತುರ್ವೇದ್ಯಪಿಯೋ ವಿಪ್ರೋ ವಾಸುದೇವಂ ನ ವಿಂದತಿ। ವೇದಭಾರಭರಾಕ್ರಾಂತಃ ಸ ವೈ ಬ್ರಾಹ್ಮಣ ಗಾರ್ದಭಃ ॥" ಎಂಬ ಪ್ರಮಾಣಾನುಸಾರ ಚತುರ್ವೇದಗಳನ್ನು ಅಧ್ಯಯನ ಮಾಡಿದ್ದರೂ ವೇದಪ್ರತಿಪಾದ್ಯನು ಪರಮಾತ್ಮನೆಂದು ಜ್ಞಾನವಿಲ್ಲದವನು ವೇದವೆಂಬ ಭಾರವನ್ನು ಹೊತ್ತಿರುವ ಬ್ರಾಹ್ಮಣರೂಪವಾದ ಕತ್ತೆಯೆಂದು ಹೇಳಿರುವರು. ವೇದವೆಂಬ

ಕ್ಷೀರವನ್ನು ಮೊಸರುಮಾಡಬೇಕಾದ ಯುಕ್ತಿಯನ್ನು ಗುರುಗಳ ಮುಖದಿಂದ ತಿಳಿದು ಜ್ಞಾನಾಗ್ನಿಯಿಂದ ಈ ಹಾಲನ್ನು ಕಾಯಿಸಿ ಓಂಕಾರವೆಂಬ ಹೆಪ್ಪನ್ನು ಹಾಕಿದರೆ ಎಲ್ಲಾ ವೇದಾರ್ಥವು ಆ ಓಂಕಾರದಲ್ಲಿ ಅಡಗಿ, ಹಾಲಿಗೆ ಸ್ವಲ್ಪ ಮೊಸರನ್ನು ಹೆಪ್ಪು ಕೊಡಲು ಹಾಲೆಲ್ಲವೂ ಹೇಗೆ ಮೊಸರಾಗಿ ಪರಿಣಮಿಸು ವುದೋ ಹಾಗೆ ವೇದವೆಲ್ಲವೂ ಓಂಕಾರಸ್ವರೂಪವಾಗಿ ಮೊಸರಾಗುವುದು. ಇದನ್ನು ಕಡೆಯಬೇಕು. ಅಕಾರ. ಉಕಾರ, ಮಕಾರಾತ್ಮಕ ಓಂ ಎಂಬ ಅಕ್ಷರ ವನ್ನು ಮನಸಾ ಚಿಂತಿಸಿ ಶ್ವಾಸನಿರೋಧ ಮಾಡಿ ಯೋಗಾಭ್ಯಾಸ ಮಾಡಿ ಅಪರೋಕ್ಷದಲ್ಲಿ ಪರಮಾತ್ಮನನ್ನು ಕಾಣಬೇಕು ಎಂದು ಭಾಗವತ ದ್ವಿತೀಯ ಸ್ಕಂಧದಲ್ಲಿ "ಅಭ್ಯಸೇನ್ಮನಸಾ ಶುದ್ಧಂ ತ್ರಿವೃದ್ಬ್ರಹ್ಮಾಕ್ಷರಂ ಪರಂ । ಮನೋ ಯಚ್ಛೇಜ್ಜಿತಶ್ವಾಸೋ ಬ್ರಹ್ಮಬೀಜ ಮನುಸ್ಮರ್ರ ನಿಯಚ್ಛೇದ್ವಿಷಯೇಭ್ಯೋ ಅಕ್ಷಾನ್ಮನಸಾ ಬುದ್ಧಿ ಸಾರಥಿಃ ॥" ಯೋಗಿಯು ಮೊದಲು ಒಂದು ಆಸನವನ್ನು ಕ್ಲಿಪ್ತಮಾಡಿಕೊಂಡು ಅದರಮೇಲೆ ಚಲಿಸದೆ ಕುಳಿತುಕೊಳ್ಳಬೇಕು. ತದನಂತರ ಶ್ವಾಸನಿರೋಧ ಮಾಡಿ ಮನಸ್ಸನ್ನು ಸ್ಥಿರವಾಗಿ ನಿಲ್ಲಿಸಿಕೊಂಡು ತ್ರಿವೃತ್ ಅಂದರೆ ಅ, ಉ, ಮ ಗಳೆಂಬ ಮೂರರಿಂದ ಕೂಡಿದ ಬ್ರಹ್ಮದರ್ಶನಕ್ಕೆ ಬೀಜಭೂತ ವಾದ ಪರಮಶುದ್ಧವಾದ ಬ್ರಹ್ಮಾಕ್ಷರವೆಂಬ ಓಂಕಾರವನ್ನು ಅಭ್ಯಾಸಮಾಡ ಬೇಕು. ಅಂದರೆ ಜಪಿಸಬೇಕು ಎಂದರ್ಥ. ತದನಂತರ ಧ್ಯಾನ ಮಾಡಬೇಕು. ಧ್ಯಾನಮಾಡಬೇಕಾದರೆ ಇಂದ್ರಿಯಗಳೆಂಬ ಕುದುರೆಗಳು ಮನಬಂದಂತೆ ಹೋಗದ ಹಾಗೆ ಮನಸ್ಸೆಂಬ ಲಗಾಮು ಹಾಕಿ ಬುದ್ಧಿಯೆಂಬ ಸಾರಥಿಯಿಂದ ಇಂದ್ರಿಯಗಳೆಂಬ ಕುದುರೆಗಳನ್ನು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳಬೇಕು. ತದ ನಂತರ ಭಗವದ್ರೂಪವನ್ನು ಧ್ಯಾನಮಾಡಬೇಕು. ಎಂಬಿವೇ ಮೊದಲಾದ ವಿಷಯಗಳನ್ನು ಹೇಳಿರುವರು. ಆದ್ದರಿಂದ ಬ್ರಹ್ಮಬೀಜವಾದ ಓಂಕಾರವೆಂಬ ಮೊಸರನ್ನು ಯೋಗಾಭ್ಯಾಸದಿಂದ ಕಡೆದು ಬೆಣ್ಣೆ ಕಾಣಬೇಕು. ಬೆಣ್ಣೆಯಂತಿ ರುವುದು ವಾಸನಾಮಯವಾದ ಸಾಧಾರಣ ಅಪರೋಕ್ಷ. ಈ ಅಪರೋಕ್ಷವು ಸಾಧಾರಣವಾಗಿ ಪ್ರತಿಮೆಯನ್ನು ಪೂಜಿಸುತ್ತಾ ಪುಷ್ಪ, ತುಲಸೀ, ನೈವೇದ್ಯಾದಿ ಗಳನ್ನು ಮನಸ್ಸಿನಲ್ಲಿ ಕಲ್ಪಿಸಿ ಚಿಂತಿಸುತ್ತೇವೋ ಅವುಗಳೇ ಆ ಆಕಾರವಾಗಿ ಕಣ್ಣು ಮುಚ್ಚಿದ ಕೂಡಲೇ ಅಪರೋಕ್ಷದಲ್ಲಿ ಕಾಣುವುವು. ಇದಕ್ಕೆ ವಾಸನಾ ಪರೋಕ್ಷವೆಂದು ಹೆಸರು. ಇದು ಬೆಣ್ಣೆಯಂತೆ ಇರುವುದು. ಹೀಗೆ ನಿರಂತರ

ದಲ್ಲೂ ಭಗವತ್ಸ್ವರೂಪವನ್ನು ಧ್ಯಾನ ಮಾಡುತ್ತಾ ಮಾಡುತ್ತಾ ಜ್ಞಾನಾಗ್ನಿಯಿಂದ ಬೆಣ್ಣೆಯು ಕರಗಿ ತುಪ್ಪವಾದಂತೆ ಭಗವದಪರೋಕ್ಷವಾಗುವದು. ಈ ಅಪರೋಕ್ಷದಲ್ಲಿ ನಮ್ಮ ಯೋಗ್ಯತಾನುಸಾರವಾಗಿ ಮಿಂಚಿನಂತೆಯೋ, ಚಂದ್ರನಂತೆಯೋ, ಸೂರ್ಯನಂತೆಯೋ ಪ್ರಕಾಶಮಾನವಾದ ಭಗವದ್ರೂಪವನ್ನು ಕಾಣಬಹುದು. ಹೀಗೆ ಮೂಲರೂಪವನ್ನು ಕಾಣಬೇಕಾದರೂ ಕಾರಣರೂಪಗಳನ್ನು ಕಾಣಬೇಕಾದರೂ, ಅಂಶರೂಪಗಳನ್ನು ಕಾಣಬೇಕಾದರೂ ಈ ರೀತಿಯಾದ ಅಪರೋಕ್ಷದಿಂದಲೇ ಕಾಣಬೇಕು. ಈ ಅಪರೋಕ್ಷವಿಲ್ಲದವರು ಹಾಲಿನೊಳಗೆ ತುಪ್ಪವಿದ್ದರೂ ಹೇಗೆ ಕಾಣುವುದಿಲ್ಲವೋ ಹಾಗೇ ವ್ಯಾಪ್ತನಾದ ಪರಮಾತ್ಮನನ್ನು ಕಾಣರು. ॥೧೮॥

## ಭಾವದರ್ಪಣ

ಶ್ವೇತದ್ವೀಪ, ಅನಂತಾಸನ, ವೈಕುಂಠ ಈ ತ್ರಿಸ್ಥಳದಲ್ಲಿ ಶಾಶ್ವತನಾಗಿ ಇರುತ್ತಾನೆಂದು ಘೃತದೃಷ್ಟಾಂತ ಕೊಡುತ್ತಾರೆ, ಶ್ರೀಲಕುಮಿವಲ್ಲಭೇತಿ. ಕೀಲಾಲಜಾಸನ–ಬ್ರಹ್ಮ. ॥೧೮॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಶ್ರೀ ಇತಿ ॥ ಆಲಯೋ, ಪ್ರಕೃತಿ–ಜಡ ॥ ಕೀಲಾಲಜ-ಪದ್ಮ. ॥೧೮॥

## ಕನ್ನಡಾರ್ಥ

ಮೂಲಕಾರಣ ಅಂಶಗಳೆಂಬ ಮೂರು ರೂಪಗಳನ್ನು ನಿರೂಪಿಸಲು ಉಪಕ್ರಮಿಸುತ್ತಾರೆ ಶ್ರೀಲಕುಮಿ ಎಂಬ ಪದ್ಯದಿಂದ. ವೈಕುಂಠ ಎಂಬ ತನ್ನ ನಿಜಗೃಹದಲ್ಲಿ ಒಂದು ರೂಪ, ಪ್ರಕೃತಿ–ಜಡಪ್ರಕೃತಿ ಕೀಲಾಲಜವೆಂದರೆ ಕಮಲ, ಪದ್ಮವೆಂದು ಅರ್ಥ. ॥೧೮॥

## ಶ್ರೀಗುರುಹೃದಯಪ್ರಕಾಶಿಕೆ

ಅಂಶಿ ಅಂಶಾದಿ ದೇವರ ರೂಪ, ಚರ್ಯಸ್ಮರಣೋಪಾಸನೆ ನಾಲ್ಕು ಪದ್ಯ

ದಿಂದ ತಿಳಿಸುತ್ತಾರೆ, ಶ್ರೀಲಕುಮಿ ಎಂದು ಮೊದಲು. ಶ್ರೀಲಕ್ಷ್ಮೀಪತಿಯಾದ ದೇವರು ವೈಕುಂಠಲೋಕದಲ್ಲೂ, ಪ್ರಣವವೆಂಬ ಓಂಕಾರ ಅಕ್ಷರದಲ್ಲೂ, ಪ್ರಕೃತಿ ಎಂಬ ಜಡದಲ್ಲೂ, ಕೀಲಾಲಜಾಸನ ಎಂಬ ಕಮಲಪೀಠನಾದ ಬ್ರಹ್ಮ ಮೊದಲಾದ ಸರ್ವಜೀವರಲ್ಲೂ, ಅಂಶಿ ಎಂಬ ಮೂಲರೂಪದಿಂದ ವಿನೋದಿಸುತ್ತಾ ಹಾಲಿನಲ್ಲಿರುವ ತುಪ್ಪದಂತೆ ಸ್ಪಷ್ಟವಾಗಿ ಕಾಣಿಸಿಕೊಳ್ಳದೆ, ಮೇಲೆ ಹೇಳಿದ ವೈಕುಂಠ ಒಂದು, ಪ್ರಣವ ಪ್ರಕೃತಿ ಸಹ ಒಂದು, ಸರ್ವಜೀವರು ಒಂದು ಸಹ ಮೂರು ಸ್ಥಳದಲ್ಲಿರುವನು. ॥೧೮॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಲಕುಮೀವಲ್ಲಭನು ಸರ್ವಚೇತನರಲ್ಲಿ ಅಂತಸ್ಥಿತನಾಗಿದ್ದು, ತಾನು ಗೋಚರಿಸದೆ. ಲೀಲೆಗೈಯ್ಯುತಿರುವನೆಂದು ದೃಷ್ಟಾಂತಪೂರ್ವಕ ತಿಳಿಸುತ್ತಾರೆ.

ಸರ್ವ ಮುಕ್ತಿಯೋಗ್ಯಚೇತನರು ಕರ್ಮವಿಮೋಚನಾದ್ವಾರಾ ಆ ಮುಕುಂದನ ಪರಮಾನುಗ್ರಹದಿಂದ ಮುಕ್ತಿ ಹೊಂದಿ, ವಾಸಿಸುವ ಮುಕ್ತಧಾಮವೇ ವೈಕುಂಠಾಲಯವು.

ಕೀಲಾಲ ಎಂದರೆ ನೀರು ಕೀಲಾಲಜ–ಎಂದರೆ ನೀರಿನಲ್ಲಿ ಹುಟ್ಟುವ ಕಮಲಪುಷ್ಪವು ಶ್ರೀಪರಮಾತ್ಮನ ನಾಭೀಕಮಲದಲ್ಲಿ ಉದ್ಭವರಾದ ಚತುರ್ಮುಖ ಬ್ರಹ್ಮದೇವರು ಕೀಲಾಲಜಾಸನರು. ಶ್ರೀಲಕುಮಿವಲ್ಲಭನು ಕೀಲಾಲಜಾಸನ ಮೊದಲಾದ ಸರ್ವ ತ್ರಿವಿಧ ಜೀವರಾಶಿಗಳಲ್ಲಿ ತಾನು ಬಿಂಬರೂಪನಾಗಿ, ಅಂತರ್ಯಾಮಿಯಾಗಿ ನೆಲೆಸಿದ್ದಾನೆ.

ಶ್ರೀಮನ್ನಾರಾಯಣನೇ ಸಮಸ್ತ ಜಗತ್ತಿನ ಸೃಷ್ಟಿಗೆ ಮೂಲಕಾರಣನು. ಮೂಲಕಾರಣನಾದ ಶ್ರೀಮನ್ನಾರಾಯಣನು, ಜಗತ್ತಿನ ಸೃಷ್ಟ್ಯಾದಿ ವ್ಯಾಪಾರಗಳಿಗಾಗಿ, ವಾಸುದೇವ–ಸಂಕರ್ಷಣ–ಪ್ರದ್ಯುಮ್ನ–ಅನಿರುದ್ಧ ಎಂಬ ರೂಪಚತುಷ್ಟಯಗಳಿಂದ ಪ್ರಕಟನಾದನು. ಇವೇ ಜಗತ್ತಿನ ಕಾರ್ಯಕಾರಣ ರೂಪಗಳು. ಹಾಗೆಯೇ ಧರ್ಮಸಂಸ್ಥಾಪನೆಗಾಗಿ, ದುಷ್ಟದಮನ, ಶಿಷ್ಟರಕ್ಷಣ

ಕ್ಕಾಗಿ ಮತ್ಸ್ಯಾದಿ ದಶಾವತಾರಗಳನ್ನು ತಾಳಿದನು. ಜ್ಞಾನೋಪದೇಶಕ್ಕಾಗಿ ಕಪಿಲ, ಮಹಿದಾಸ, ವೇದವ್ಯಾಸಾದಿ ರೂಪಗಳಿಂದ ಪ್ರಕಟನಾದನು, ಇವೆಲ್ಲವೂ ಮೂಲರೂಪದಿಂದ ಹೊರಟ ಸ್ವಾಭಿನ್ನವಾದ ಅಂಶರೂಪಗಳು. ಶ್ರೀಪರಮಾತ್ಮನ ಮೂಲರೂಪಕ್ಕೂ ಅಂಶರೂಪಗಳಿಗೂ ಅಭೇದ. ಅಂತೆಯೇ ಖಂಡಾಖಂಡರೂಪಗಳಿಂದ ಜಡವಸ್ತುಗಳ ಕಣಕಣಗಳಲ್ಲಿ ವ್ಯಾಪ್ತರೂಪನಾಗಿಯೂ, ಸಮಸ್ತ ತ್ರಿವಿಧಜೀವರಲ್ಲಿ ಅಂತರ್ಯಾಮಿಯಾಗಿ ಬಿಂಬರೂಪನಾಗಿಯೂ ಇರುವನು.

ಹಾಲಿನ ಸಾರದಲ್ಲಿ ತುಪ್ಪವಿದೆ, ಆದರೆ ಕ್ಷೀರಗತ ತುಪ್ಪವು ಅಗೋಚರ. ಹಾಲಿಗೆ ಹೆಪ್ಪುಕೊಟ್ಟು, ಮಜ್ಜಿಗೆಯನ್ನು ಕಡೆದು ಬೆಣ್ಣೆತೆಗೆದು, ಅದನ್ನು ಹದವಾಗಿ ಕಾಯಿಸಿದಾಗ ನವನೀತಗತ ತುಪ್ಪವು ಗೋಚರವಾಗುವುದು. ಅಂತೆಯೇ ಮೂಲಕಾರಣನಾದ ಶ್ರೀಪರಮಾತ್ಮನು ಚರಾಚರಾತ್ಮಕವಾದ ಈ ಸಮಗ್ರಜಗತ್ತಿನಲ್ಲಿ ಅಂಶದಿಂದ ಇದ್ದರೂ, ಕ್ಷೀರಗತ ಘೃತದಂತೆ ಅಗೋಚರನಾಗಿದ್ದಾನೆ.

ಅನಂತಾಸನ–ಶ್ವೇತದ್ವೀಪ–ವೈಕುಂಠ ಎಂಬ ಮುಕ್ತಿಧಾಮತ್ರಯಗಳು ತ್ರಿಸ್ಥಳಗಳು. ಅಂತೆಯೇ ಪ್ರಣವ ಪ್ರಕೃತಿ ಬ್ರಹ್ಮಾದಿ ಸಕಲ ಚೇತನ ಈ ಮೂರು ಅಧಿಷ್ಠಾನಗಳೂ ತ್ರಿಸ್ಥಳಗಳು. ॥೧೮॥

## ಪದ್ಯ—೧೯

**ಮೂಲ :–**

**ಮೂರು ಯುಗದಲಿ ಮೂಲರೂಪನು ।**
**ಸೂರಿಗಳ ಸಂತೈಸಿ ದಿತಿಯು ಕು ।**
**ಮಾರಕರ ಸಂಹರಿಸಿ ಧರ್ಮವನುಳುಹಬೇಕೆಂದು ॥**
**ಕಾರುಣಿಕ ಭೂಮಿಯೊಳು ನಿಜಪರಿ ।**
**ವಾರಸಹಿತವರಿಸಿ ಬಹುವಿಧ ।**
**ತೋರಿದನು ನರತ್ವವೃತ್ತಿಯ ಸಕಲಚೇತನಕೆ ॥ ॥೧೯॥**

**ಅವತರಣಿಕೆ**

ಶ್ರೀ ಪರಮಾತ್ಮನು, ಧರ್ಮಸಂಸ್ಥಾಪನೆಗಾಗಿ, ದುಷ್ಟ ದಮನ ಮತ್ತು ಶಿಷ್ಟಜನರ ರಕ್ಷಣಾರ್ಥವಾಗಿ ಪರಿವಾರಸಹಿತನಾಗಿ ಅವತರಿಸಿ, ಸಜ್ಜನರನ್ನು ಸಲಹುತ್ತಾನೆಂದು ಹೇಳುತ್ತಾರೆ.

**ಪ್ರತಿಪದಾರ್ಥ**

**ಮೂರುಯುಗದಲಿ**–ಕೃತ–ತ್ರೇತಾ ದ್ವಾಪರ ಎಂಬ ಮೊದಲನೆಯ ಮೂರು ಯುಗಗಳಲ್ಲಿ, **ಮೂಲರೂಪನು**–ಮೂಲರೂಪಿಯಾದ ಶ್ರೀಮನ್ನಾರಾಯಣನು, **ಸೂರಿಗಳ**–ಆಯಾಯಾ ಯುಗಗತ ಜ್ಞಾನಿಗಳಿಂದ ಪ್ರಾರ್ಥ್ಯಮಾನನಾಗಿ, ಅವರನ್ನು **ಸಂತೈಸಿ**–ರಕ್ಷಿಸಲೋಸುಗ, **ದಿತಿಯಕುಮಾರಕರ**–ದಿತಿಯ ಪುತ್ರರಾದ ದುಷ್ಟ ದೈತ್ಯರನ್ನು, **ಸಂಹರಿಸಿ**–ನಾಶಗೈಸಿ, **ಧರ್ಮವನು ಳುಹಬೇಕೆಂದು**–ಧರ್ಮಸಂಸ್ಥಾಪನೆ ಮಾಡಬೇಕೆಂದು, **ಕಾರುಣಿಕ**–ಕರುಣಾಳುವಾದ ಶ್ರೀಪರಮಾತ್ಮನು; **ಭೂಮಿಯೊಳು**–ಭರತಖಂಡದಲ್ಲಿ **ನಿಜಪರಿವಾರಸಹಿತ**–ತನ್ನ ಭಕ್ತರಾದ ದೇವತಾ ಪರಿವಾರಸಮೇತನಾಗಿ, **ಅವತರಿಸಿ**–ಪ್ರಕಟನಾಗಿ, **ನರವತ್ಪ್ರವೃತ್ತಿಯು**–ಕೇವಲ ಮಾನವನಂತೆ (ಲೀಲಾಮಾನುಷ ವಿಗ್ರಹನಾಗಿ) **ಸಕಲಚೇತನಕೆ**–ಸಮಸ್ತರಾದ ತ್ರಿವಿಧಜೀವರಿಗೆ (ದೇವತೆಗಳು, ಅವನನ್ನು ಪರಾತ್ಪರನೆಂತಲೂ, ಮಾನವರು, ಅವನು ಕೇವಲ ನರನೆಂತಲೂ, ಅಸುರರು ಅವನನ್ನು ಸಾಮಾನ್ಯನಂತೆ ತಿಳಿಯುವರು) **ಬಹುವಿಧತೋರಿದನು**–ನಾನಾ ಪ್ರಕಾರವಾಗಿ ತನ್ನ ಮಹಿಮೆಯನ್ನು ಪ್ರದರ್ಶಿಸಿದನು. ॥೧೯॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನು ತನ್ನ ಅವತಾರಗಳಲ್ಲಿ ಮಾನುಷರಂತೆ ವರ್ತಿಸಿದನೆಂದ್ಕು ಹೇಳತಾರೆ.

ಕೃತ ತ್ರೇತಾ ದ್ವಾಪರ ಈ ಮೂರು ಯುಗಗಳಲ್ಲಿ, ಶ್ವೇತದ್ವೀಪಗತ ವಾಸುದೇವನಾದ ಮೂಲರೂಪಿ ಪರಮಾತ್ಮನು, ಕರುಣಾಳುವಾದ, ಧರ್ಮ ಸಂಸ್ಥಾಪನೆ ಮಾಡೋದಕ್ಕೆ ಕಾರಣನಾದ ಶ್ರೀಪರಮಾತ್ಮ, ಆಯಾ ಯುಗಗತ ಜ್ಞಾನಿಗಳ ಮೊರೆ ಕೇಳಿದವನಾಗಿ, ಧರ್ಮಕಾರ್ಯಗಳಿಗೆ ಪ್ರತಿಬಂಧಕರಾದ, ದಿತಿ ದೇವಿಯ ಪುತ್ರರಾದ, ಭಗವದ್ದ್ವೇಷಿಗಳಾದ ಅಸುರರನ್ನ ಸಂಹಾರ ಮಾಡಿ, ಧರ್ಮಸ್ಥಾಪನ ಮಾಡಬೇಕೆಂದು, ಭರತಖಂಡವಾದ ಈ ಭೂಮಿಯಲ್ಲಿ, ತನ್ನ ಭಕ್ತರಾದ ದೇವತೆಗಳಿಂದ ಸಹಿತನಾಗಿ, ಮನುಷ್ಯನೋಪಾದಿಯಲ್ಲಿ ಅವತಾರ ಮಾಡಿ, ತನ್ನ ಸಚ್ಚಿದಾನಂದಾತ್ಮಕವಾದ ಶರೀರವನ್ನ ಪ್ರದರ್ಶನ ಮಾಡದೆ ಮನುಷ್ಯನ ಹಾಂಗೆ ತೋರಿ, ನಾನಾ ಪ್ರಕಾರವಾಗಿ ಪ್ರದರ್ಶನ ಮಾಡಿ, ಶರೀರಕ್ಕೆ ಸಾಮರ್ಥ್ಯ ಎಷ್ಟೋ ಅಷ್ಟೇ ಪ್ರದರ್ಶನವಾಗುವಂತೆ ಮಾನುಷವತ್ ತಾನು ವ್ಯಾಪಾರಗಳಿಂದ ಪ್ರವರ್ತಿಸಿ, ಅಂಥ ಪ್ರವೃತ್ತಿಯೇ ಸಮಸ್ತ ಪ್ರಾಣಿಗಳಿಗೆ ತೋರಿಸೋವನಾದನು. ಅಸುರರು ಹ್ಯಾಂಗೆ ಜ್ಞಾನಹೀತರೆಂದರೆ, ದೇವರನ್ನ ಮಾನುಷರಂತೆ ತಿಳದದ್ದರಿಂದ, ಆದರೆ ಜ್ಞಾನಿಗಳು ಮತ್ತು ದೇವತೆಗಳು ಸಾಕ್ಷಾತ್ ಪರಮಾತ್ಮನೆಂದು ತಿಳದರು.

## ಯುಗಕಾಲಗಳಲ್ಲಿ ಪರಮಾತ್ಮನ ಅವತಾರಗಳು

| ಕೃತಯುಗ | ತ್ರೇತಾಯುಗ | ದ್ವಾಪರಯುಗ | ಕಲಿಯುಗ |
|---|---|---|---|
| ೧. ಮತ್ಸ್ಯ | ೫. ವಾಮನ | ೮. ಶ್ರೀಕೃಷ್ಣಾವತಾರ | ೧೦. ಕಲ್ಕಿ |
| ೨. ಕೂರ್ಮ | ೬. ಪರಶುರಾಮ | ೯. ಬೌದ್ಧಾವತಾರ | ಈ ಕಲಿ |
| ೩. ವರಾಹ | ೭. ದಶರಥರಾಮ | (ದ್ವಾಪರ ಮತ್ತು | ಯುಗದ |
| ೪. ನಾರಸಿಂಹ | | ಕಲಿ ಸಂಧಿಯಲ್ಲಿ) | ಅಂತ್ಯದಲ್ಲಿ |

ಅಂತು ಹತ್ತು ಅವತಾರಗಳು. ಈ ಪ್ರಕಾರ ಪರಮಾತ್ಮನ ಅವತಾರಗಳು. ಈ ಅವತಾರಗಳು ದುಷ್ಟನಿಗ್ರಹ ಅವತಾರಗಳು, ಇನ್ನೂ ಜ್ಞಾನೋಪದೇಶ ರೂಪವಾದ ಅವತಾರಗಳು ಬೇರ ಅವೆ. ॥೧೯॥

## ಭಾವಪ್ರಕಾಶಿಕೆ

ಮೂಲರೂಪವೆಂದರೆ "ಏತನ್ನಾನಾವತಾರಾಣಾಂ ನಿಧಾನಂ ಬೀಜಮವ್ಯಯಂ। ಯಸ್ಯಾಂಶಾಂಶೇನ ಸೃಜ್ಯಂತೇ ದೇವತಿರ್ಯಙ್ನರಾದಯಃ ॥" ಎಂಬ ಪ್ರಥಮಸ್ಕಂಧದ ವಾಕ್ಯದಿಂದ ಪದ್ಮನಾಭ ರೂಪವೇ ಮೂಲರೂಪವೆಂತಲೂ, ಆ ಮೂಲರೂಪದಿಂದಲೇ ಸ್ವಾಂಶ ಭಿನ್ನಾಂಶಗಳೆಲ್ಲವೂ ಹೊರಡುವವೆಂತಲೂ ಹೇಳಿರುವರು. ಇಂತಹ ಪರಮಾತ್ಮನು "ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ॥ ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ॥ ಎಂಬ ಗೀತಾವಾಕ್ಯ ಪ್ರಕಾರ ಪಾಪವೃದ್ಧಿಯೂ, ಪುಣ್ಯಕ್ಷೀಣವೂ ಯಾವ ಯಾವ ಕಾಲದಲ್ಲಿ ಆಗ ವದೋ ಆಯಾ ಕಾಲದಲ್ಲಿ ಪರಮಾತ್ಮನವತರಿಸುವನು. ಕಲಿಯುಗವು ಕೇವಲ ಪಾಪಯುಗವಾದುದರಿಂದ ಈ ಯುಗದಲ್ಲಿ ಪರಮಾತ್ಮನ ಅವತಾರವಿಲ್ಲ. ಆದ್ದರಿಂದ ಮೂರು ಯುಗದಲ್ಲಿ ಎಂದು ಹೇಳಿರುವರು, ಕೃತಯುಗದಲ್ಲಿ ೪ ಅವತಾರಗಳು. ತ್ರೇತಾಯುಗದಲ್ಲಿ ಮೂರು ಅವತಾರಗಳು. ದ್ವಾಪರಯುಗದಲ್ಲಿ ಎರಡು. ಕಲಿಯುಗದ ಕಡೆಯಲ್ಲಿ ಕೃತಯುಗ ಕಲಿಯುಗ ಸಂಧಿಯಲ್ಲಿ ೧ ಅವತಾರ ; ಅಂತು ೧೦ ಅವತಾರಗಳು, ಈ ಒಂದೊಂದು ಅವತಾರವೂ ಧರ್ಮವೃದ್ಧಿಗೋಸುಗ ದೇವತೆಗಳ ಪ್ರಾರ್ಥನಾನುಸಾರ ದೈತ್ಯನಿಗ್ರಹಕ್ಕಾಗಿಯೇ ಮಾಡಿರುವ ಅವತಾರಗಳು. ಬ್ರಹ್ಮದೇವರು ದೈನಂದಿನ ಪ್ರಳಯದಲ್ಲಿ ರಾತ್ರಿ ಮಲಗಿರುವಾಗ ಬ್ರಹ್ಮದೇವರ ಮುಖದಿಂದ ಹೊರಡುತ್ತಿರುವ ವೇದವನ್ನು ಅಂದರೆ ವೇದಪುರುಷನನ್ನು ಹಯಗ್ರೀವನೆಂಬ ದೈತ್ಯನು ಅಪಹಾರ ಮಾಡಲು, ಬ್ರಹ್ಮದೇವರಿಂದ ಪ್ರಾರ್ಥಿತನಾಗಿ ಮತ್ಸ್ಯಾವತಾರ ಮಾಡಿ ಹಯಗ್ರೀವನೆಂಬ ದೈತ್ಯನನ್ನು ಕೊಂದು ಬ್ರಹ್ಮದೇವರಿಗೆ ವೇದವನ್ನಿತ್ತನು. ದೈತ್ಯರು ದೇವತಾರಾಜ್ಯವನ್ನು ಅಪಹರಿಸಲು ದೇವತೆಗಳಿಂದ ಪರಮಾತ್ಮನು ಪ್ರಾರ್ಥಿತನಾಗಿ ದೇವತೆಗಳಿಗೆ ಸಹಾಯಕನಾಗಿದ್ದು ಸಮುದ್ರ ಮಥನ ಮಾಡಿದಾಗ ಮಂದರಾಚಲವು ನೀರಿನೊಳಗೆ ಮುಣುಗಲು ದೇವತೆಗಳಿಂದ ಪ್ರಾರ್ಥಿತನಾಗಿ ಕೂರ್ಮಾವತಾರ ಮಾಡಿ ಬೆಟ್ಟವನ್ನು ಹೊತ್ತನು. ಹಿರಣ್ಯಾಕ್ಷನೆಂಬ ದೈತ್ಯನು ಭೂಮಿಯನ್ನು ಪಾತಾಳಕ್ಕೆ ತೆಗೆದುಕೊಂಡು ಹೋಗಲು ದೇವತೆಗಳಿಂದ ಪ್ರಾರ್ಥಿತನಾಗಿ ವರಾಹಾವತಾರ ಮಾಡಿ ಹಿರಣ್ಯಾ.

ನನ್ನು ಸಂಹರಿಸಿ ಭೂಮಿಯನ್ನು ಮೇಲೆ ಸ್ಥಾಪಿಸಿದನು. ಹಿರಣ್ಯಕಶ್ಯಪನು ಬ್ರಹ್ಮದೇವರ ವರದಿಂದ ಅವಧ್ಯನಾಗಿ ಲೋಕಕಂಟಕನಾಗಿ ಸಕಲರಾದ ದೇವತೆ ಮೊದಲಾದವರನ್ನೂ ಸಹ ಪೀಡಿಸುತ್ತ ತನ್ನ ಮಗನಾದ ಮಹಾ ಭಗವದ್ಭಕ್ತ ನಾದ ಪ್ರಹ್ಲಾದನನ್ನು ಸಂಹರಿಸಲು ಪ್ರಯತ್ನಮಾಡಲು ಸಕಲದೇವತೆಗಳಿಂದ ಪ್ರಾರ್ಥಿತನಾಗಿ ಶ್ರೀಹರಿಯು ನರಸಿಂಹರೂಪದಿಂದ ಸ್ತಂಭದಿಂದ ಅವತರಿಸಿ ಆ ಹಿರಣ್ಯಕಶ್ಯಪನನ್ನು ಕೊಂದು ಪ್ರಹ್ಲಾದನನ್ನೂ, ಸಕಲ ದೇವತೆಗಳನ್ನೂ, ಸಕಲ ಲೋಕಗಳನ್ನೂ ಉದ್ಧರಿಸಿದನು. ಹೀಗೆ ಕೃತಯುಗದಲ್ಲಿ ನಾಲ್ಕು ಅವತಾರ ಗಳಾದವು. ಬಲಿಚಕ್ರವರ್ತಿಯು ದೇವೇಂದ್ರನ ರಾಜ್ಯವನ್ನು ಅಪಹರಿಸಿರಲು ಅದಿತಿಯಿಂದ ಪ್ರಾರ್ಥಿತನಾಗಿ ಶ್ರೀಹರಿಯು ವಾಮನಾವತಾರ ಮಾಡಿ ಬಲಿ ಯನ್ನು ಮೂರಡಿ ಭೂಮಿಯನ್ನು ಬೇಡಿ ಎರಡಡಿಯೊಳಗೆ ಬ್ರಹ್ಮಾಂಡವನ್ನೇ ಅಳೆದು ರಾಜ್ಯವನ್ನು ಇಂದ್ರನಿಗಿತ್ತನು. ಕಾರ್ತವೀರ್ಯಾರ್ಜುನನು ಸಹಸ್ರಬಾಹು ಗಳಿಂದ ಕೂಡಿ ದರ್ಪದಿಂದ ಜಮದಗ್ನಿ ಋಷಿಗಳ ಕಾಮಧೇನುವನ್ನಪಹರಿಸಲು ಪರಶುರಾಮಾವತಾರದಿಂದ ಅವನನ್ನು ಸಂಹರಿಸಿದನು. ಅದಕ್ಕೆ ಪ್ರತಿಯಾಗಿ ಕಾರ್ತವೀರ್ಯನ ಮಕ್ಕಳು ಜಮದಗ್ನಿಋಷಿಗಳನ್ನು ಸಂಹರಿಸಿದರು. ಅದೇ ಕೋಪದಿಂದ ಶ್ರೀಪರಶುರಾಮನು ೨೧ ಸಲ ದುಷ್ಟಕ್ಷತ್ರಿಯರನ್ನು ಸಂಹರಿಸಿ ಕುರುಕ್ಷೇತ್ರದಲ್ಲಿ ಸಮಂತಪಂಚಕವೆಂಬ ಕ್ಷೇತ್ರವನ್ನು ರಚಿಸಿದನು. ರಾವಣಾದಿ ರಾಕ್ಷಸರ ಬಾಧೆಯನ್ನು ತಾಳಲಾರದೆ ದೇವತೆಗಳು ಪರಮಾತ್ಮನನ್ನು ಪ್ರಾರ್ಥಿ ಸಲು ದಶರಥರಾಜನಲ್ಲಿ ರಾಮತ್ವೇನ ಅವತರಿಸಿ ತನ್ನ ಭಕ್ತರಾದ ದೇವತೆ ಗಳೆಲ್ಲರೂ ಕಪಿಗಳಾಗಿಯೂ, ಕರಡಿಗಳಾಗಿಯೂ ಜನಿಸಿರಲು ಅವರಿಂದೊಡ ಗೂಡಿ ರಾವಣಾದಿ ರಾಕ್ಷಸರನ್ನು ಸಂಹರಿಸಿದನು. ಇವು ಮೂರು ತ್ರೇತಾಯುಗದ ಅವತಾರಗಳು. ಭೂದೇವಿಯು ದೈತ್ಯರಾಜರ ಬಾಧೆಯಿಂದ ಪೀಡಿತಳಾಗಿ ಪರಮಾತ್ಮನನ್ನು ಶರಣು ಹೊಂದಲು ಪರಮಾತ್ಮನು ಕೃಷ್ಣಾವತಾರವನ್ನು ಮಾಡಿದನು. ಆಗ ವಾಯುದೇವರು ಶೇಷದೇವರು ಮೊದಲಾದ ಪರಿವಾರವು ಭೀಮಸೇನ, ಬಲರಾಮರೂಪಗಳಿಂದ ಜನಿಸಿದರು. ಆ ಪರಿವಾರದೊಂದಿಗೆ ಜರಾಸಂಧ, ದುರ್ಯೋಧನ, ಕಂಸಪ್ರಭೃತಿಗಳಾದ ದೈತ್ಯರಾಜರನ್ನು ಸಂಹರಿಸಿ ಭೂಭಾರವನ್ನು ಪರಿಹರಿಸಿದನು. ದೈತ್ಯರು ಬಲಹೀನರಾಗಿ ನಾಗಾಂತರ

ವಿಲ್ಲದೆ ಪರಮಾತ್ಮನೇ ಗತಿಯೆಂದು ನಂಬಬೇಕಾದ ಕಾಲ ಒದಗಲು ಅಯೋಗ್ಯ ರಾದ ದೈತ್ಯರು ಇದು ತಮಗೆ ಯೋಗ್ಯವಲ್ಲವೆಂದು ಯೋಚಿಸಿರಲು ದ್ವಾಪರ ಕಲಿಯುಗ ಸಂಧಿಯಲ್ಲಿ ಶ್ರೀಪರಮಾತ್ಮನು ಬುದ್ಧಾವತಾರ ಮಾಡಿ ದೈತ್ಯರನ್ನು ವಂಚಿಸಿ ಅವರ ಯೋಗ್ಯತಾನುಸಾರವಾಗಿ ಅವರಿಗೆ ತಮಸ್ಸಾಧನವಾದ ಮತ ವನ್ನು ಕಲ್ಪಿಸಿದನು. ಕಲಿಯುಗಾವಸಾನ ಕಾಲದಲ್ಲಿ, ಕಲಿಯುಗ ಕೃತಯುಗ ಸಂಧಿಯಲ್ಲಿ ಪರಮಾತ್ಮನು ಕಲ್ಕ್ಯವತಾರ ಮಾಡಿ ದುಷ್ಟರಾಜರನ್ನು ಸಂಹರಿಸಿ ಕೃತಯುಗದ ಧರ್ಮವನ್ನು ಸ್ಥಾಪಿಸಿದನು. ಇವಲ್ಲದೆ ದತ್ತ, ಕಪಿಲ, ವ್ಯಾಸಾದ್ಯವ ತಾರಗಳಿಂದ ಜನಗಳಿಗೆ ಜ್ಞಾನೋದಯವನ್ನು ಮಾಡಿಸಿ ಧರ್ಮಸ್ಥಾಪನವನ್ನು ಮಾಡಿರುವನು. ಒಂದೊಂದು ಅವತಾರದಲ್ಲೂ ದೇಶಕಾಲಾನುಸಾರವಾಗಿ ಮನುಷ್ಯಾದಿಗಳು ಭೂಮಿಯಲ್ಲಿ ಹೇಗೆ ಇರುವರೋ ಹಾಗೆಯೇ ತಾನೂ ಮನುಷ್ಯನಂತೆ ವಿಡಂಬನ ಮಾಡುತ್ತ "ವಿದ್ಧವನ್ಮುಗ್ಧವಚ್ಚೈವ ಕೇಶವೋ ವೇದ ನಾರ್ತವತ್" ಇತ್ಯಾದಿ ನಿರ್ಣಯವಾಕ್ಯದಿಂದ ಅಜ್ಞಾನಿಯಂತೆಯೂ, ಏಟು ತಿಂದವನಂತೆಯೂ, ವೇದನೆಯಿಂದ ಆರ್ತನಾದವನಂತೆಯೂ ಅಜ್ಞಜನರ ಮೋಹಕ್ಕಾಗಿ ತೋರಿಸಿರುವನು. ಈ ಅಭಿಪ್ರಾಯವನ್ನೇ ದಾಸರಾಯರು ಸಂಕೋಚದಿಂದ ಒಂದೇ ಪದ್ಯದಲ್ಲಿ ಹೇಳಿರುವರು. ॥೧೯॥

### ಭಾವದರ್ಪಣ

ಮೂರು ಯುಗೇತಿ ॥೧೯॥

### ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ನರ ಇತಿ ॥ ನರವತ್ ಇತಿ ॥ "ಪ್ರಾಪ್ತೇ ನರೇಷು ಜನನೇ ನರವತ್ ಪ್ರವೃತ್ತಿಃ ॥ ಇತಿ ॥೧೯॥

### ಕನ್ನಡಾರ್ಥ

ಮೂಲರೂಪೀ ಹರಿಯ ಅವತಾರಗಳನ್ನು ತಿಳಿಸುತ್ತಾರೆ—ಮೂರು ಎಂಬ ಪದ್ಯದಿಂದ.

ನರವತ್ ಪ್ರವೃತ್ತಿಯ ತೋರಿದನು ಎಂಬುದು ಮನುಷ್ಯರಲ್ಲಿ ತನ್ನ ಪ್ರಾದುರ್ಭಾವವು ಆಗುವ ಕಾಲದಲ್ಲಿ ನರರಂತೆ ಪ್ರವರ್ತಿಸುತ್ತಾನೆ ಎಂಬ ಶ್ಲೋಕದ ಅನುಕರಣವಾಗಿರುತ್ತದೆ. ॥೧೯॥

## ಶ್ರೀಗುರುಹೃದಯಪ್ರಕಾಶಿಕೆ

ವೈಕುಂಠದಲ್ಲಿದ್ದ ಮೂಲರೂಪನು ಸೂರಿಗಳೆಂಬ ಸದ್ಜ್ಞಾನಿಗಳನ್ನು ರಕ್ಷಿಸಿ, ದಿತಿಜಕುಮಾರಕರೆಂಬ ಅಸಜ್ಜನರನ್ನು ಸಂಹರಿಸಿ ಧರ್ಮಸ್ಥಾಪಿಸ ಬೇಕೆಂದು ಕೃತಾದಿ ಮೂರು ಯುಗದಲ್ಲಿ ನಿಜಪರಿವಾರವೆಂಬ ದೇವತೆಗಳಂಶಾವ ತಾರೆ ಸಹ ತಾನು ಪ್ರತ್ಯಕ್ಷನಾಗಿ ಭೂಮಿಯಲ್ಲಿ ಕಾಣಿಸಿಕೊಂಡು ಬಹುವಿಧವಾಗಿ ನರವತ್ಪ್ರವೃತ್ತಿ ಎಂಬ ಮನುಷ್ಯನ ನಡತೆವಿಡಂಬನೆಯನ್ನು ತೋರಿಸಿದನು, ಆದ್ದರಿಂದ ಕರುಣಾಳು. ಬುದ್ಧ ಕಲ್ಕಿ ಅವತಾರಗಳು ಯುಗಸಂಧಿಯಲ್ಲಿ ಆದ್ದ ರಿಂದ ಕಲಿಯುಗದಲ್ಲಿ ಅವತಾರವಿಲ್ಲೆಂದು ಅಭಿಪ್ರಾಯ ॥೧೯॥

# ಸರ್ವವ್ಯಾಖ್ಯಾನಸಾರಸಂಗ್ರಹ

ಯುಗಪ್ರವರ್ತಕನಾದ ಶ್ರೀಪರಮಾತ್ಮನು ಮೊದಲನೆಯ ಮೂರು ಯುಗಗಳಲ್ಲಿ ಅವತರಿಸಿ, ಧರ್ಮಸಂಸ್ಥಾಪನೆ ಮಾಡಿದನು ಎಂದು ತಿಳಿಸುತ್ತಾರೆ,

ಕೃತ, ತ್ರೇತಾ ಮತ್ತು ದ್ವಾಪರ ಎಂಬ ಮೊದಲನೆಯ ಮೂರು ಯುಗ ಗಳಲ್ಲಿ ಶ್ರೀಹರಿಯ ಅವತಾರವಿಶೇಷಗಳು. ಶ್ರೀಹರಿಯು ಮೊದಲನೆಯ ಯುಗ ತ್ರಯಗಳಲ್ಲಿ ಮಾತ್ರ ಅವತರಿಸುತ್ತೇನೆಂಬ ಸಂಕಲ್ಪವುಳ್ಳವನು. ಕಲಿಯುಗವು ಕೇವಲ ಪಾಪಭೂಯಿಷ್ಠವಾದ ಯುಗವು. ಪರಮನೀಚನಾದ ಕಲಿಯೇ ಈ ಈ ಯುಗಕ್ಕೆ ಅಧಿಪತಿ. ಈ ಯುಗದಲ್ಲಿ ಶ್ರೀವಾಯುದೇವರೇ ಮೊದಲಾದ ದೇವತೆಗಳು ಶ್ರೀಹರಿಯ ಆಜ್ಞಾಧಾರಕರಾಗಿ ಅವತರಿಸಿ, ಧರ್ಮವನ್ನು ಪುನರು ಜ್ಜೀವನಗೊಳಿಸಿ, ಸಂತರನ್ನು ಉದ್ಧರಿಸುವರು. ದೇವತೆಗಳ ಅವತಾರಕ್ಕಾಗಿ ಕಲಿಯುಗವನ್ನು ಮೀಸಲಾಗಿಟ್ಟಿದ್ದಾನೆ. ಅವರಲ್ಲಿ ವಿಶೇಷಸನ್ನಿಧಾನಯುಕ್ತ ನಾಗಿದ್ದು, ಅವರ ದ್ವಾರಾ, ತಾನೇ ಧರ್ಮಸಂಸ್ಥಾಪನಾಕಾರ್ಯಮಾಡುತ್ತಾನೆ. ಈ ಯುಗದ ಅಂತ್ಯದಲ್ಲಿ ತಾನೇ ಕಲ್ಕಿಯಾಗಿ ಅವತರಿಸುತ್ತಾನೆ.

ಕ್ಷೀರಸಮುದ್ರಶಾಯಿಯಾದ ಶ್ರೀಪದ್ಮನಾಭರೂಪೀ ಶ್ರೀಮನ್ನಾರಾಯಣನು ಆ ಮೂಲರೂಪದಿಂದಲೇ ಮತ್ಸ್ಯಾದಿ ದಶರೂಪಗಳು, ಮಹಿದಾಸಾದಿ ಜ್ಞಾನೋಪದೇಶಕ ರೂಪಗಳು ಹೊರಟು ಪ್ರಕಟವಾದವು.

ಭಗವತ್ಸಂಬಂಧವಾದ ಜ್ಞಾನವುಳ್ಳವರು ಸೂರಿಗಳೆನಿಸುವರು. ಯುಗತ್ರಯುಗಳಲ್ಲಿ ಮೂಲರೂಪೀ ಶ್ರೀಮನ್ನಾರಾಯಣನು ಸೂರಿಗಳಿಂದ ಪ್ರಾರ್ಥ್ಯಮಾನನಾಗಿ ದುಷ್ಟರಾದ ಅಸುರರ ದಮನದ್ವಾರಾ ವಿಪತ್ತನ್ನು ಪರಿಹರಿಸಿ ಸಂರಕ್ಷಿಸಿದನು. ಶ್ರೀಹರಿಯ ಅವತಾರಗಳ ಉದ್ದೇಶ—ದುಷ್ಟಶಿಕ್ಷಣ ಶಿಷ್ಟಪರಿಪಾಲನಾದ್ವಾರಾ ಧರ್ಮಸಂಸ್ಥಾಪನೆ.

ದಿತೀದೇವಿಯು ಕಶ್ಯಪ ಮಹಾಮುನಿಗಳ ಪತ್ನಿ. ದಿತಿಯ ಮಕ್ಕಳಾದ್ದರಿಂದ, ಅಸುರರಿಗೆ ದೈತ್ಯರೆಂದು ಹೆಸರು. ದೈತ್ಯರು ಅದಿತಿಯ ಪುತ್ರರಾದ ದೇವತೆಗಳಿಗಿಂತ (ಆದಿತೇಯರಿಗಿಂತ) ಮುಂಚೆ ಹುಟ್ಟಿದವರು.

ಲೋಕಕಂಟಕರೂ, ಸಜ್ಜನಪೀಡಕರೂ ಆದ ದೈತ್ಯರನ್ನು ನಾಶಗೈದು, ಅವರ ಹಾವಳಿಯಿಂದ ಯುಗಯುಗಗಳಲ್ಲಿ ಉಂಟಾಗುತ್ತಿದ್ದ ಧರ್ಮಹಾನಿಯನ್ನು ತಪ್ಪಿಸಿ, ಆಯಾಯಾ ಯುಗಧರ್ಮವನ್ನು ಎತ್ತಿಹಿಡಿಯುವುದೇ ಶ್ರೀಪರಮಾತ್ಮನ ಅವತಾರಗಳ ಉದ್ದೇಶ.

ತನ್ನ ಭಕ್ತರಲ್ಲಿ ಅಂತಃಕರಣವುಳ್ಳವನಾದ್ದರಿಂದ, ಆ ಕರುಣಾಮಯನು ಸಜ್ಜೀವರ ಉದ್ಧಾರಕ್ಕಾಗಿ ಎತ್ತಿದ ಅವತಾರಗಳೇ ಅವನ ಕಾರುಣ್ಯಕ್ಕೆ ದೃಷ್ಟಾಂತಗಳು. ದಿತಿಕುಮಾರರ ದಮನವಾದ ಹೊರತು, ಸೂರಿಗಳ ರಕ್ಷಣೆ ಸಾಧ್ಯವಿಲ್ಲ.

ಈ ಭರತಖಂಡದಲ್ಲಿಯೇ ಶ್ರೀಹರಿಯು ಅವತಾರವೆತ್ತಿದ್ದು. ಭೂಮಿ ಎಂಬ ಶಬ್ದವು ವ್ಯಾಪಕಾರ್ಥದಲ್ಲಿದ್ದರೂ, ಶ್ರೀಶನ ಅವತಾರಗಳ ವಿವಕ್ಷಯಾ, ಭರತಖಂಡವೆಂದೇ ಪರಿಗಣಿಸಬೇಕು. ಸತ್ಯಸಂಕಲ್ಪನಾದ ಸರ್ವೇಶನು ಅವತರಿಸುವಾಗ, ವಾಯ್ವಾದಿ ದೇವತಾವರ್ಗವೂ ಸಹ ಅವನ

ಕಾರ್ಯಕ್ಕೆ ಅನುಕೂಲರಾಗಿ ಅವತರಿಸುವರು. ಶ್ರೀರಾಮಾವತಾರದಲ್ಲಿ ಶ್ರೀವಾಯುದೇವರು ಹನುಮಂತನಾಗಿ, ಸೂರ್ಯನು ಸುಗ್ರೀವನಾಗಿ. ಶೇಷ ದೇವರು ಲಕ್ಷ್ಮಣನಾಗಿ ಅವತರಿಸಿದರು. ಹಾಗೆಯೇ ಸಕಲ ದೇವತಾಗಣ ವಾನರರಾಗಿ ಭಲ್ಲೂಕಗಳಾಗಿ ಶ್ರೀರಾಮನ ಸೇವೆಗೈದರು. ಶ್ರೀಕೃಷ್ಣಾವತಾರದಲ್ಲಿ ಶ್ರೀವಾಯುದೇವರು ಭೀಮಸೇನನಾಗಿಯೂ, ಯಮಧರ್ಮರಾಯನು ಯುಧಿಷ್ಠಿರನಾಗಿಯೂ. ಇಂದ್ರನು ಅರ್ಜುನನಾಗಿಯೂ, ನಕುಲಸಹದೇವರು ಅಶ್ವಿನೀ ದೇವತಾಂಶಸಂಭೂತರಾಗಿ ಪಂಚಪಾಂಡವರೆಂದು ಅವತರಿಸಿದರು. ಅಂತೆಯೇ ಇತರ ದೇವತೆಗಳು ಯಾದವರಾಗಿ ಅವತರಿಸಿದರು.

ಶ್ರೀಪರಮಾತ್ಮನು ಲೀಲಾಮಾನುಷವಿಗ್ರಹನು. ಮಾನವರಂತೆ ಅವತರಿಸಿದಾಗ ನರವತ್ ಅಂದರೆ. ಮಾನವರಂತೆಯೇ ನಟಿಸುವನು. ಕೋಪ, ಆಶ್ಚರ್ಯ, ವ್ಯಸನ, ವಿರಹವ್ಯಥೆ, ಚಿಂತೆ ಇತ್ಯಾದಿ ಮಾನವರ ಸಹಜ ವಾದ ಗುಣಸ್ವಭಾವಗಳನ್ನು ಪ್ರದರ್ಶಿಸಿದನು. ಇದು ಕೇವಲ ವಿಡಂಬನೆಯು, ಅಸುರಮೋಹಕವು.

ನಾರಾಯಣನ ಈ ನರನಟನಾಕೌಶಲ್ಯ ತ್ರಿವಿಧಜೀವರಿಗೆ ಅವರವರ ಯೋಗ್ಯತಾನುಸಾರ ತಿಳಿಯುವುದು. ಸಾತ್ವಿಕರಾದ ದೇವತೆಗಳು, ಅವನು ಕೇವಲ ಮಾನವನಲ್ಲ, ನಿರ್ದೋಷನು, ಅನಂತಕಲ್ಯಾಣಗುಣಭರಿತನು ಎಂದು ತಿಳಿಯುವರು. ರಾಜಸರು ಮಾನವನಂತೆ ತಿಳಿಯುವರು. ತಮೋಯೋಗ್ಯರು ಅವನಲ್ಲಿ ದೋಷವನ್ನು ಆರೋಪಿಸುವರು. ‖೧೯‖

# ಪದ್ಯ—೨೦

**ಮೂಲ:-**

ಕಾರಣಾಹ್ವಯ ಪ್ರಕೃತಿಯೊಳಗಿ ।
ದ್ದಾರಧಿಕ ಹದಿನೆಂಟು ತತ್ತ್ವವ ।
ತಾ ರಚಿಸಿ ತದ್ರೂಪ ತನ್ನಾಮಂಗಳನೆ ಧರಿಸಿ ॥
ನೀರಜಭವಾಂಡವನು ನಿರ್ಮಿಸಿ ।
ಕಾರುಣಿಕ ಕಾರ್ಯಾಖ್ಯರೂಪದಿ ।
ತೋರುವನು ಸಹಜಾಹಿತಾಚಲಗಳಲಿ ಪ್ರತಿದಿನದಿ ॥೨೦॥

**ಅವತರಣಿಕೆ :–**

ಬ್ರಹ್ಮಾಂಡವನ್ನು ನಿರ್ಮಿಸಿ, ಕಾರ್ಯರೂಪದಿಂದ ಬ್ರಹ್ಮಾಂಡಗತ ಸಂಸೃಷ್ಟ ಪ್ರಕೃತಿಯೊಳಗೆ ಇದ್ದು, ಪ್ರವರ್ತಕನಾಗಿದ್ದಾನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಕಾರಣಾಹ್ವಯ**–ಕಾರಣನಾಮಕನಾದ ಮೂಲರೂಪೀ ಶ್ರೀಮನ್ನಾರಾಯಣನು, **ಪ್ರಕೃತಿಯೊಳಗಿದ್ದು**–ಜಗತ್ಸೃಷ್ಟಿಗೆ ಉಪಾದಾನಕಾರಣವಾದ ಜಡಪ್ರಕೃತಿಯಲ್ಲಿ ಪ್ರವೇಶಿಸಿ, ಅಂತಸ್ಥಿತನಾಗಿದ್ದು, **ಆರಧಿಕ ಹದಿನೆಂಟು ತತ್ತ್ವವ**–೨೪ ತತ್ತ್ವಗಳನ್ನು (ಆರಧಿಕ–ಆರು ಹೆಚ್ಚಾಗ, ಹದಿನೆಂಟು–೧೮. ಅಂದರೆ ೧೮+೬=೨೪. ಚತುರ್ವಿಂಶತಿ ತತ್ತ್ವಗಳು) **ತಾ ರಚಿಸಿ**–ಬ್ರಹ್ಮಾಂಡಕ್ಕೆ ಆವರಣತ್ವೇನ ಸೃಷ್ಟಿಮಾಡಿ, **ತದ್ರೂಪ**–ಆಯಾಯಾ ತತ್ತ್ವ ರೂಪಗಳನ್ನು, **ತನ್ನಾಮಂಗಳನೆ**–ಆಯಾಯಾ ತತ್ತ್ವಗಳ ಹೆಸರುಗಳನ್ನೇ, **ಧರಿಸಿ**–ತೆಗೆದುಕೊಂಡವನಾಗಿ (ತತ್ತ್ವರೂಪ, ತತ್ತ್ವನಾಮಗಳಿಂದಲೇ)

**ನೀರಜಭವಾಂಡವನು**–ಬ್ರಹ್ಮಾಂಡವನ್ನು (ನೀರಜ–ನೀರನಲ್ಲಿ ಉತ್ಪನ್ನವಾದ ಕಮಲ. ನೀರಜಭವ– ಶ್ರೀಪರಮಾತ್ಮನ ನಾಭೀಕಮಲೋದ್ಭವರಾದ ಬ್ರಹ್ಮದೇವರು. ನೀರಜಭವಾಂಡ–ಬ್ರಹ್ಮಾಂಡ) **ನಿರ್ಮಿಸಿ**–ಸೃಷ್ಟಿಮಾಡಿ, **ಕಾರುಣಿಕ**–ಕರುಣಾಳುವಾದ ಅನಿರುದ್ಧನಾಮಕ ಶ್ರೀಪರಮಾತ್ಮನು **ಕಾರ್ಯಾಖ್ಯರೂಪದಿ**–ಕಾರ್ಯಸಾಂಕೇತವಾದ ಈ ಬ್ರಹ್ಮಾಂಡದಲ್ಲಿ ತದ್ರೂಪ ತನ್ನಾಮಗಳಿಂದ ಪ್ರವೇಶಿಸಿ. **ಸಹಜ**–ಭಗವಂತನ ಸನ್ನಿಧಾನ ವಿಶಿಷ್ಟಗಳಾದ ಸಾಲಿಗ್ರಾಮಾದಿಗಳು, ಗಂಗಾದಿತೀರ್ಥಗಳಲ್ಲಿ. **ಅಹಿತ**–ಕರಚರಣಾದಿ ಅವಯುವ ವಿಶಿಷ್ಟಪ್ರತಿಮಾಗಳಲ್ಲಿ, **ಅಚಲಗಳಲಿ**–ಪರ್ವತಾದಿ ಅಚಲ ವಸ್ತುಗಳಲ್ಲಿ **ಪ್ರತಿದಿನದಿ**–ಸರ್ವಕಾಲಗಳಲ್ಲಿ, **ತೋರುವನು**–ತದ್ರೂಪ, ತನ್ನಾಮಗಳಿಂದ ತತ್ತದ್ವಾಚ್ಯನಾಗಿ ಪ್ರಕಟನಾಗಿದ್ದಾನೆ. ॥೨೦॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಬ್ರಹ್ಮಾಂಡವನ್ನು ಸೃಷ್ಟಿ ಮಾಡಿದವ ಪರಮಾತ್ಮ. ಇಂಥಾ ಸಾಮರ್ಥ್ಯದವನೇ ಅವತಾರ ಮಾಡಿದ ಪರಮಾತ್ಮ ಎಂತ ಹೇಳತಾರೆ.

ಕಾರಣಸಾಂಕೇತನಾದ ಶ್ರೀನಾರಾಯಣದೇವರು ವಾಸುದೇವಾದಿ ಅನಿರುದ್ಧಾಂತ ನಾಲ್ಕುರೂಪಗಳ ಧರಿಸಿ, ಅದರಲ್ಲಿ ಮೂರುರೂಪಗಳಿಂದ ಲಿಂಗೋಪಾದಾನದಿಂದ ಅನಿರುದ್ಧಶರೀರದವರೆಗೂ ಸೂಕ್ಷ್ಮಸೃಷ್ಟಿ ಮಾಡಿ ನಂತರ ಅನಿರುದ್ಧರೂಪದಿಂದ ತನ್ನ ಪತ್ನಿಯಾದ ಶಾಂತೀದೇವಿಯರ ಅಭಿಮನ್ಯಮಾನವಾದ ಸ್ಥೂಲಸೃಷ್ಟಿಗೆ ಕಾರಣವಾದ, ಅನ್ಯವಾದ ಮೂಲ ಜಡಪ್ರಕೃತಿಯನ್ನು ತೆಗೆದುಕೊಂಡು ತದ್ದ್ವಾರಾ, ಅಸಂಸೃಷ್ಟ ಚತುರ್ವಿಂಶತಿತತ್ತ್ವಗಳ ಬ್ರಹ್ಮಾಂಡಕ್ಕೆ ಆವರಣತ್ವೇನ ಸೃಷ್ಟಿಮಾಡಿ, ಈ ಚತುರ್ವಿಂಶತಿ ಅಸಂಸೃಷ್ಟ ತತ್ತ್ವದೊಳು ವಿದ್ಯಮಾನವಾದ ಸ್ವಲ್ಪ ಭಾಗವನ್ನು ತೆಗೆದುಕೊಂಡು, ಅಸಂಸೃಷ್ಟಗಳ ಪರಸ್ಪರ ಮೇಳನದಿಂದ ಸಂಸೃಷ್ಟಗಳ ಮಾಡಿ ಸಂಸೃಷ್ಟಾಖ್ಯ, ಆರಧಿಕ

ಹದಿನೆಂಟೂ ಎಂದರೆ, ಆರನ್ನೂ ಹದಿನೆಂಟನ್ನೂ ಸೇರಿಸಿದರೆ ಇಪ್ಪತ್ನಾಲ್ಕು. ಈ ಸಂಸೃಷ್ಟತತ್ತ್ವವ ಅನಿರುದ್ಧನಾದ ತಾನು ರಚಿಸಿ, ಆಯಾ ತತ್ತ್ವರೂಪ ಆಯಾ ತತ್ತ್ವನಾಮಂಗಳ ಧರಿಸಿ, ಆಯಾ ತತ್ತ್ವಗಳಲ್ಲಿ ಪ್ರವೇಶ ಮಾಡಿ, ಎಲ್ಲಾನೂ ಏಕಾಕಾರ ಮಾಡಿ ಸಂಸೃಷ್ಟಾತ್ಮಕ ಬ್ರಹ್ಮಾಂಡವನ್ನೂ ನಿರ್ಮಿಸಿ, ಬ್ರಹ್ಮಾಂಡ ಸೃಷ್ಟಿಗೆ ಕಾರಣನಾದ ಅನಿರುದ್ಧ, ಕಾರ್ಯಸಾಂಕೇತದಿಂದ ಪ್ರಸಿದ್ಧವಾದ ಬ್ರಹ್ಮಾಂಡ ದಲ್ಲಿ ತದಾಕಾರ ತದ್ರೂಪದಿಂದ ಪ್ರವೇಶಮಾಡಿ, ಅದರಂತೆ ತನ್ನ ರೂಪವ ಆ ಬ್ರಹ್ಮಾಂಡದಲ್ಲಿ ಪ್ರದರ್ಶನ ಮಾಡೋವನಾಗಿ, ಅದಕ್ಕೆ ಆಧಾರನಾಗಿ ಇದ್ದಾನೆ. ಅಂಡದ ಒಳಗಿನ ಜಡದ್ರವ್ಯಗಳು ಯಾವತ್ತೂ ಸಂಸೃಷ್ಟಗಳೇ. ಅಂಡಗತ ಸಂಸೃಷ್ಟಪ್ರಕೃತಿ ಒಳಗೆ ಮೂರು ಪ್ರಕಾರ, ಸಹಜ ಅಚಲ ಆಹಿತ ಎಂತಲೂ ಮೂರು ಪ್ರಕಾರ. ವಿವರ—

೧. **ಸಹಜಗಳು** ಎಂದರೆ ಸಾಲಿಗ್ರಾಮಾದಿಗಳು, ಗಂಗಾದಿ ತೀರ್ಥ ಗಳು. ಇವುಗಳು ಉತ್ಪತ್ತಿಕಾಲಕ್ಕೆ ಸಂಗಾತ ಭಗವಂತನ ವಿಭೂತಿ ಸನ್ನಿಧಾನ ಗಳಿಂದ ಉತ್ಪತ್ತಿಗಳಾದವು.

೨. **ಆಹಿತ** ಎಂದರೆ, ಕರಚರಣಾದಿ ವಿಶಿಷ್ಟಗಳಾದ ಅವಯವ ಸಹಿತ ಪ್ರತಿಮೆಗಳು. ಪ್ರಥಮತಃ ಪ್ರತಿಮಾ ದೇವತೆಗಳಿಂದ ನಿರ್ಮಿತವಾಗಿ ನಂತರ ಅದರಲ್ಲಿ ತಮ್ಮ ಬಿಂಬವನ್ನ ಆವಾಹನೆ ಮಾಡಿದ ಅರ್ಚಿರಾದಿ ರೂಪಗಳು ಕೆಲವು.

೩. **ಅಚಲ** ಎಂದರೆ, ಈ ಉಭಯವಿಧವಾದದ್ದಕ್ಕೆ ಅನ್ಯವಾದ ಅಚಲಗಳು ಕೆಲವು. ಈ ಮೂರುವಿಧ ಅಚಲಗಳಲ್ಲಿ ಅನಿರುದ್ಧ ದೇವರು ಪ್ರತಿ ದಿನದಲ್ಲೂ ಕಾರುಣಿಕನಾದ ಅನಿರುದ್ಧ, ಕಾರ್ಯಾಖ್ಯರೂಪದಿಂದ ತೋರುತ್ತಾ ಇರುತ್ತಾನೆ. ನರವತ್‌ಪ್ರವರ್ತಿಸತಕ್ಕ ರೂಪ ಇಂಥಾದ್ದೆಂತಲೂ, ಮೂಲಾವ ತಾರಗಳಿಗೆ ಭೇದವಿಲ್ಲ ಎಂತಲೂ ತಾತ್ಪರ್ಯ ॥೨೦॥

## ಭಾವಪ್ರಕಾಶಿಕೆ

ಕಾರಣ ರೂಪಳಾದ ಪ್ರಕೃತಿಯಲ್ಲಿ ಪರಮಾತ್ಮನು ಕಾರಣರೂಪನಾಗಿದ್ದು ಅವ್ಯಕ್ತ, ಅಹಂಕಾರ, ಬುದ್ಧಿ, ಮನಸ್ಸು, ಜ್ಞಾನೇಂದ್ರಿಯಗಳು ೫, ಕರ್ಮೇಂದ್ರಿ

ಯಂಗಳು ೫, ತನ್ಮಾತ್ರಾಗುಣಗಳು ೫, ಹೀಗೆ ೨೪ ತತ್ತ್ವಗಳನ್ನು ಸೃಷ್ಟಿಸಿ, ತದಾಕಾರನಾಗಿ, ತನ್ನಾಮಧೇಯದಿಂದ ಅವುಗಳಲ್ಲಿದ್ದು ಕಾರ್ಯರೂಪವಾದ ಬ್ರಹ್ಮಾಂಡದೊಳಗೂ ಸಾಲಿಗ್ರಾಮ ರೂಪದಿಂದಲೂ, ಪ್ರತಿಮಾರೂಪದಿಂದಲೂ ಪರ್ವತಗಳಲ್ಲಿ ಪರ್ವತರೂಪಗಳಿಂದಲೂ ಜನರಿಗೆ ಕಾಣಿಸಿಕೊಳ್ಳುವನು. ಒಂದೊಂದು ಪದಾರ್ಥಕ್ಕೂ ಕಾರಣ, ಕಾರ್ಯ, ಕರ್ತಾಯೆಂದು ಮೂರುಂಟು. ಘಟವು ಕಾರ್ಯವು. ಇದಕ್ಕೆ ಕಾರಣವು ಮಣ್ಣು. ಕರ್ತಾ ಕುಂಬಾರನು. ಇದರಂತೆ ಜಗತ್ಕರ್ತಾ ಶ್ರೀಪರಮಾತ್ಮನು. ಕಾರಣವು ಪ್ರಕೃತಿ, ಕಾರ್ಯವು ಜಗತ್ತು. ಹೀಗೆ ಕರ್ತ ಕಾರ್ಯ ಕಾರಣ ಸಹ ತಾನೇ ಆದರೂ ಕಾರ್ಯಕಾರಣಗಳಲ್ಲೂ ಸಹ ತಾನೇ ಆದರೂ ಕಾರ್ಯಕಾರಣಗಳಲ್ಲೂ ಸಹ ತಾನೇ ಕಾರ್ಯರೂಪನಾಗಿಯೂ ಕಾರಣರೂಪನಾಗಿಯೂ ಇರುತ್ತಾನೆಂದು ತಾತ್ಪರ್ಯ.

ಈ ಪದ್ಯದಲ್ಲಿ ಕಾರಣರೂಪಿಯಾದ ಶ್ರೀಪರಮಾತ್ಮನು ಕಾರಣಪ್ರಕೃತಿಯಲ್ಲಿದ್ದು ೨೪ ತತ್ತ್ವಗಳನ್ನು ಸೃಷ್ಟಿಸಿ ಅವುಗಳಲ್ಲಿ ಪ್ರವಿಷ್ಟನಾಗಿ ಬ್ರಹ್ಮಾಂಡವನ್ನು ಸೃಷ್ಟಿಸಿದನೆಂದು ಹೇಳಿರುವರು. ಇದರ ಪ್ರಕಾರ ಹೇಗೆಂದರೆ, ಭಾಗವತ ದ್ವಿತೀಯ ಸ್ಕಂದ ೫ನೆಯ ಅಧ್ಯಾಯದಲ್ಲಿ "ಸತ್ತ್ವಂರಜಸ್ತಮ ಇತಿ ನಿರ್ಗುಣಸ್ಯ ಗುಣತ್ರಯಃ" ಎಂಬ ೧೮ನೆಯ ಶ್ಲೋಕದ ಮೊದಲು ಈ ಪ್ರಕರಣವನ್ನು ವಿಸ್ತಾರವಾಗಿ ಹೇಳಿರುವರು. ಮತ್ತು ೩ನೆಯ ಸ್ಕಂದದ ೬ನೆಯ ಅಧ್ಯಾಯದಲ್ಲಿಯೂ, ಇದೇ ವಿಷಯವನ್ನು ಹೇಳಿರುವರು. ಅದರ ತಾತ್ಪರ್ಯವನ್ನು ಇಲ್ಲಿ ಸಂಕೋಚವಾಗಿ ಸೂಚಿಸುತ್ತೇವೆ. ಕಾರಣಾತ್ಮಕಳಾದ ಪ್ರಕೃತಿಯಿಂದ ಮೊದಲು ಮಹತತ್ತ್ವವನ್ನು ಸೃಷ್ಟಿಸಿದನು. ಅದರ ದೆಶೆಯಿಂದ ಅಹಂಕಾರ ತತ್ತ್ವವು ಹುಟ್ಟಿತು. ಆ ಅಹಂಕಾರವೇ ವೈಕಾರಿಕ, ತೈಜಸ, ತಾಮಸವೆಂದು ಮೂರು ಪ್ರಕಾರವಿರುವುದು. ತಾಮಸಾಹಂಕಾರದ ದೆಶೆಯಿಂದ ಶಬ್ದಗುಣವಿಶಿಷ್ಟವಾದ ಆಕಾಶತತ್ತ್ವವನ್ನು ಸೃಷ್ಟಿಸಿದನು. ಆಕಾಶತತ್ತ್ವದ ದೆಶೆಯಿಂದ ಸ್ಪರ್ಶ ಗುಣಾವಶಿಷ್ಟವಾದ ವಾಯುತತ್ತ್ವವನ್ನು ಸೃಷ್ಟಿಸಿದನು. ಆ ವಾಯುತತ್ತ್ವದಿಂದ ರೂಪಗುಣ ವಿಶಿಷ್ಟವಾದ ತೇಜಸ್ತತ್ತ್ವವನ್ನು. ಅದರ ದೆಶೆಯಿಂದ ರಸ ಗುಣವಿಶಿಷ್ಟವಾದ ಉದಕತತ್ತ್ವವನ್ನು, ಅದರ ದೆಶೆಯಿಂದ ಗಂಧಗುಣದಿಂದ ಕೂಡಿದ ಪೃಥ್ವೀತತ್ತ್ವವನ್ನು ಸೃಷ್ಟಿಸಿದನು. ಹೀಗೆ ತಾಮಸಾಹಂಕಾರದಿಂದ

೫ ಮಹಾಭೂತತತ್ತ್ವಗಳು ಪಂಚತನ್ಮಾತ್ರಾ ಗುಣಗಳು ಹುಟ್ಟಿದವು. ತೇಜ ಸಾಹಂಕಾರದ ದೆಶೆಯಿಂದ ಜ್ಞಾನೇಂದ್ರಿಯ ೫ ಕರ್ಮೇಂದ್ರಿಯ ೫. ಹೀಗೆ ಕಣ್ಣು, ಕಿವಿ ಮೊದಲಾದ ೧೦ ಇಂದ್ರಿಯಗಳನ್ನು ಸೃಷ್ಟಿಸಿದನು. ವೈಕಾರಿಕಾ ಹಂಕಾರದ ದೆಶೆಯಿಂದ ಮನಸ್ಸನ್ನೂ ತತ್ತ್ವಾಭಿಮಾನಿ ದೇವತೆಗಳನ್ನೂ ಸೃಷ್ಟಿ ಸಿದನು. ಭಾಗವತ ೩ನೆಯ ಸ್ಕಂದ ೭ನೆಯ ಅಧ್ಯಾಯದಲ್ಲಿ ಹೇಳಿರುವಂತೆ, ಮಹತ್ತತ್ವ ೧, ಅಹಂಕಾರ ತತ್ವ ೧, ಪಂಚಭೂತಗಳು ೫, ತನ್ಮಾತ್ರಾಗುಣ ೫ ಮನಸ್ಸು ೧, ಜ್ಞಾನೇಂದ್ರಿಯ ೫, ಕರ್ಮೇಂದ್ರಿಯ ೫, ಅಂತು ೨೩ ಸೇರಿ ಒಂದು ತತ್ತ್ವಗಣ ಎಂದೆನಿಸುವದು. ಅವ್ಯಕ್ತ ತತ್ತ್ವವು ಲಕ್ಷ್ಮೀಸ್ವರೂಪವೇ ಆದುದರಿಂದ ಇಲ್ಲಿ ಸೇರಲಿಲ್ಲ. ೬ನೆಯ ಅಧ್ಯಾಯದಲ್ಲಿ ಈ ತತ್ತ್ವಗಣವು ಬ್ರಹ್ಮಾಂಡವನ್ನು ಸೃಷ್ಟಿಸಲು ತಮ್ಮಿಂದ ಸಾಧ್ಯವಿಲ್ಲದೆ ಪರಮಾತ್ಮನನ್ನು ಸ್ತೋತ್ರಮಾಡಿದ ವಿಷಯವನ್ನು ಹೇಳಿರುವರು. ಈ ಶ್ಲೋಕದ ಅರ್ಥ ವೇನೆಂದರೆ, ತನ್ನ ಸ್ವಾಧೀನದಲ್ಲಿರುವುದರಿಂದ ಶಕ್ತಿಶಬ್ದವಾಚ್ಯರಾದ ಈ ೨೩ ತತ್ತ್ವಗಳ ಗಣವು ಒಂದಕ್ಕೊಂದು ಸಂಬಂಧಿಸದೆ ಲೋಕತಂತ್ರವನ್ನು ನಡಿಸಲು ಸಾಧ್ಯವಿಲ್ಲದೆ ತನ್ನನ್ನು ಪ್ರಾರ್ಥಿಸುವುದನ್ನು ತಿಳಿದು ಸ್ವತಂತ್ರನಾದ ಶ್ರೀಪರ ಮಾತ್ಮನು ತನ್ನ ಶಕ್ತಿಯನ್ನು ಧರಿಸಿದ್ದ ಕಾಲನಾಮಕಳಾದ ಲಕ್ಷ್ಮೀದೇವಿ ಯಿಂದೊಡಗೂಡಿ ಒಂದೇ ಕಾಲದಲ್ಲಿ ೨೩ ತತ್ತ್ವಗಳ ಗಣವನ್ನು ಪ್ರವೇಶ ಮಾಡಿದನು. ಶ್ರೀಪರಮಾತ್ಮನು ಆ ಗಣವನ್ನು ಪ್ರವೇಶಮಾಡಿ ಚೇಷ್ಟಾರೂಪ ದಿಂದ ಒಬ್ಬರಿಗೊಬ್ಬರಿಗೆ ಸಂಬಂಧವಿಲ್ಲದೆ ಭಿನ್ನಕರ್ಮಗಳುಳ್ಳ ಎಲ್ಲರನ್ನೂ ಒಂದು ಗೂಡಿಸಿ ಒಂದೇ ಕರ್ಮ ಉಳ್ಳವರನ್ನಾಗಿ ಮಾಡಿದನು. ಅಂದರೆ ೧೦ ಜನರು ಸೇರಿ ಒಂದು ಕಾರ್ಯ ಮಾಡಬೇಕಾದರೆ ಎಲ್ಲರೂ ಒಂದೇ ಮನಸ್ಕರಾಗಿ ಆ ಕಾರ್ಯ ವನ್ನು ಮಾಡಿದರೆ ಮಾತ್ರ ಆದೀತು. ಹಾಗಿಲ್ಲದೆ ಹತ್ತು ಜನರು ಹತ್ತು ಮಾರ್ಗವಾಗಿ ಸೆಳೆದರೆ ಕಾರ್ಯವಾಗುವುದೆಂತು ? ಹೀಗೆ ೨೩ ತತ್ತ್ವಗಳ ಕಾರ್ಯವು ೨೩ ಬಗೆಯಾಗಿದ್ದಿತು. ಒಂದು ಮುಖವಾಗಿರಲಿಲ್ಲ. ತದನಂತರ ಪರ ಮಾತ್ಮನು ಒಳಹೊಕ್ಕು ಇವರೆಲ್ಲರ ಕಾರ್ಯವನ್ನು ಒಂದು ಮುಖವಾಗುವಂತೆ ಮಾಡಿದನು. ಆಗ ಅವರೆಲ್ಲರೂ ಸೇರಿ ಕಾರ್ಯವನ್ನು ಮಾಡಲು ಉದ್ಯುಕ್ತ ರಾದರು. ತದನಂತರ ೨೩ ತತ್ತ್ವಗಳ ಗಣವು ತಮ್ಮೊಳಗೆ ಪ್ರವಿಷ್ಟನಾದ ಭಗವಂತನ ಪ್ರೇರಣೆಯಿಂದ ತಮ್ಮ ಅಂಶದಿಂದ ಪುರುಷಶಬ್ದವಾಚ್ಯರಾದ

ಬ್ರಹ್ಮದೇವರಿಗೆ ಶರೀರವಾಗಿ ಪುರುಷನೆಂಬ ಹೆಸರುಳ್ಳ ಬ್ರಹ್ಮಾಂಡವನ್ನು ಸೃಷ್ಟಿ ಮಾಡಿದರು. ಇದೇ ಅಭಿಪ್ರಾಯವನ್ನೇ ದಾಸರಾಯರು 'ಪ್ರಕೃತಿಯೊಳಗಿದ್ದು ಆರಧಿಕ ಹದಿನೆಂಟು ತತ್ತ್ವವ ತಾ ರಚಿಸಿ ತದ್ರೂಪ ತನ್ನಾಮಗಳನೆ ಧರಿಸಿ ನೀರಜಭವಾಂಡನು ನಿರ್ಮಿಸಿ' ಎಂದು ಹೇಳಿರುವರು. ॥೨೦॥

## ಭಾವದರ್ಪಣ

ಇಪ್ಪತ್ತುನಾಲಕುತತ್ತ್ವ ನಿರ್ಮಾಣಮಾಡಿ ಕಾರ್ಯರೂಪದಿಂದ ಶಾಲಗ್ರಾಮಗಳಲ್ಲಿ ಪ್ರತಿಮೆಗಳಲ್ಲಿ ತೋರುವನೆಂದು ಹೇಳುತ್ತಾರೆ, ಕಾರಣೇತಿ. ಆಹ್ವಯ= ಹೆಸರು ॥೨೦॥

## ಶ್ರೀವ್ಯಾಸದಾಸಸಿಧ್ಧಾಂತಕೌಮುದೀ

ಕಾರಣ ಇತಿ ॥೨೦॥

## ಕನ್ನಡಾರ್ಥ

ಪರಮಾತ್ಮನು ಪ್ರಕೃತಿಯಲ್ಲಿ ಕಾರಣರೂಪದಿಂದ ತನ್ನಾಮಕನಾಗಿದ್ದು ೨೪ ತತ್ತ್ವಗಳನ್ನು ನಿರ್ಮಿಸಿ, ಅವುಗಳಲ್ಲಿ ಆ ಆ ನಾಮರೂಪಗಳಿಂದಿದ್ದು ಬ್ರಹ್ಮಾಂಡವನ್ನು ನಿರ್ಮಿಸಿ, ಕಾರ್ಯರೂಪದಿಂದ, ಸಹಜಾಹಿತಾಚಲಪ್ರತಿಮೆಗಳಲ್ಲಿರುವನು ಎಂದು ಈ ಪದ್ಯದ ಭಾವ ॥೨೦॥

## ಶ್ರೀಗುರುಹೃದಯಪ್ರಕಾಶಿಕೆ

ಜಡಸ್ವರೂಪಪ್ರಕೃತಿಯಲ್ಲಿದ್ದ ಕಾರಣರೂಪ ಶ್ರೀಹರಿಯು, ಆರಧಿಕ ಹದಿನೆಂಟು ತತ್ತ್ವವೆಂಬ ಮಹತ್ತು, ಅಹಂತತ್ತ್ವ, ಮನಸ್ಸು, ಬುದ್ಧಿ, ಪಂಚಭೂತ ತನ್ಮಾತ್ರಾ ಸಹ ಹತ್ತು, ಅಂತು ಇಪ್ಪತ್ನಾಲ್ಕು ತತ್ತ್ವವನ್ನು ನಿರ್ಮಿಸಿ, ಆ ತತ್ತ್ವಗಳಲ್ಲಿ ಆಯಾಯಾ ನಾಮರೂಪಗಳನ್ನು ಧರಿಸಿ, ನೀರಜಭವಾಂಡ

ವೆಂಬ ಬ್ರಹ್ಮಾಂಡವನ್ನು ಆ ತತ್ತ್ವಾಂಶಗಳಿಂದ ನಿರ್ಮಿಸಿ. ಅದರಲ್ಲಿ ಕಾರ್ಯ ವೆಂಬ ರೂಪದಿಂದಿರುತ್ತಾ, ಸಹಜಾಚಲಗಳೆಂಬ ಬೆಟ್ಟಗಳಲ್ಲೂ, ಆಹಿತಾಚಲ ವೆಂಬ ಪ್ರತಿಮಾದಿಗಳಲ್ಲೂ, ತದ್ರೂಪ ತನ್ನಾಮಕ ಕಾರ್ಯರೂಪನೆಂದು ಸಹ ಸದಾ ತೋರುವನು ॥೨೦॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಪರಮಾತ್ಮನ ಕಾರ್ಯಕಾರಣರೂಪಗಳ ವಿವರಣೆಯನ್ನು ತಿಳಿಸು ತ್ತಾರೆ.

ಜಗತ್ತಿನಲ್ಲಿ ನಡೆಯುತ್ತಿರುವ ಪ್ರತಿವ್ಯಾಪಾರಕ್ಕೂ ಮೂರು ಪ್ರಧಾನ ಅಂಶಗಳಿವೆ. (೧) ಕಾರಣ. (೨) ಕಾರ್ಯ. (೩) ಫಲ. ಒಂದು ವಸ್ತುವಿನ ಉತ್ಪತ್ತಿಗೆ ಹೇತುವೇ ಕಾರಣವೆನಿಸುವುದು. ಆ ಕಾರಣದಿಂದ ಕಾರ್ಯ ನಡೆ ಯುವುದು. ಕಾರ್ಯ–ಕಾರಣಗಳಿಂದ ಉಂಟಾಗುವುದೇ ಫಲವೆನಿಸುವುದು. ಪ್ರತಿವಸ್ತುವಿನ ನಿರ್ಮಾಣದ ಹಿನ್ನೆಲೆಯಲ್ಲಿ ಈ ಅಂಶಗಳ ತ್ರಿಕೋಣ ಸೂತ್ರವಿದೆ. ಅಂತಹ ಶ್ರೀಪರಮಾತ್ಮನು ನಮ್ಮ ಕಣ್ಣಿಗೆ ಪ್ರತ್ಯಕ್ಷ ಗೋಚರ ವಾಗಿರುವ ಈ ಬ್ರಹ್ಮಾಂಡದ ಸೃಷ್ಟಿಗೆ ಪ್ರಧಾನಕಾರಣನಾಗಿದ್ದಾನೆ.

ಮೂಲಪಕೃತಿಯು ಜಗತ್ಸೃಷ್ಟಿಕಾರ್ಯಕ್ಕೆ ಉಪಾದಾನ ಕಾರಣವು. ಈ ಜಡಪ್ರಕೃತಿಗೆ ಅಭಿಮಾನಿಯಾದ ಶ್ರೀರಮಾದೇವಿಯು ಚಿತ್ಪ್ರಕೃತಿ ಸ್ವರೂಪಳು. ಶ್ರೀ ಭೂ ದುರ್ಗಾ ಎಂಬ ಲಕ್ಷ್ಮಿಯ ರೂಪತ್ರಯಂಗಳಲ್ಲಿ ಶ್ರೀಇಂದಿರಾ ಧವನು ಪ್ರವೇಶಿಸಿ. ಮೂಲಪ್ರಕೃತಿಯಲ್ಲಿ ಅಂತಸ್ಥಿತನಾಗಿದ್ದು, ರಮಾದ್ವಾರಾ, ಪ್ರಕೃತಿಯನ್ನು ಉಪಾದಾನಕಾರಣವನ್ನಾಗಿ ಮಾಡಿಕೊಂಡು, ಜಗತ್ಸೃಷ್ಟಿ ಕಾರ್ಯ ವನ್ನು ಮಾಡುವನು.

ಮೂಲಪ್ರಕೃತಿಯು ಸಹಜಧರ್ಮಗಳಾದ ಸತ್ತ್ವ ರಜ ತಮ ಎಂಬ ಪ್ರಾಕೃತಗುಣತ್ರಯಗಳ ವೈಷಮ್ಯದಿಂದ (ಗುಣಸಮ್ಮೇಳನದಿಂದ) ಅವ್ಯಕ್ತಾದಿ ಪೃಥ್ವೀ ತತ್ತ್ವಪರ್ಯಂತ ೨೪ ತತ್ತ್ವಗಳನ್ನು ತಾನೇ ನಿರ್ಮಿಸಿದನು. ಈ ಸಂಖ್ಯೆಯನ್ನು ದಾಸರಾಯರು ಆರಧಿಕ ಹದಿನೆಂಟು ಎಂದಿದ್ದಾರೆ. ಅಂದರೆ, ಆರಧಿಕ –ಆರುಹೆಚ್ಚಾದ, ಹದಿನೆಂಟು–೧೮. ೧೮+೬= ತತ್ತ್ವಗಳ ಸೃಷ್ಟಿ. ಶಾಂತೀಪತಿಯಾದ ಅನಿರುದ್ಧನಾಮಕ ಶ್ರೀಪರಮಾತ್ಮನು ಸೂಕ್ಷ್ಮಸೃಷ್ಟಿಗೆ ಕಾರಣನು. ಅನಿರುದ್ಧನು ಶಾಂತೀದೇವಿಯಿಂದ ಅಭಿಮನ್ಯಮಾನವಾದ ಸ್ಥೂಲಸೃಷ್ಟಿಗೆ ಕಾರಣವಾದ, ಅನ್ಯವಾದ ಮೂಲ ಜಡಪ್ರಕೃತಿಯನ್ನು ತೆಗೆದು ಕೊಂಡು, ತದ್ದ್ವಾರಾ ಚತುರ್ವಿಂಶತಿ ತತ್ತ್ವಗಳುಳ್ಳ ಬ್ರಹ್ಮಾಂಡಕ್ಕೆ ಆವರಣ ತ್ರಯ ಸೃಷ್ಟಿಮಾಡಿದನು.

ಆಯಾಯಾ ತತ್ತ್ವಗಳ ರೂಪಗಳಲ್ಲಿ, ಆಯಾಯಾ ತತ್ತ್ವಗಳ ಹೆಸರಿ ನಿಂದಲೇ, ವಿದ್ಯಮಾನನಾಗಿ, ಆ ತತ್ತ್ವಗಳಲ್ಲಿ ಪ್ರವೇಶಿಸಿ, ಕೇಶವಾದಿ ಕೃಷ್ಣ ಪರ್ಯಂತ ಚತುರ್ವಿಂಶತಿ ರೂಪನಾಮಧರನಾಗಿದ್ದಾನೆ.

ಚತುರ್ವಿಂಶತಿತತ್ತ್ವಾತ್ಮಕವಾದ ಈ ಬ್ರಹ್ಮಾಂಡದ ಸೃಷ್ಟಿಗೆ ತಾನೇ ಪ್ರಧಾನಕಾರಣನಾಗಿದ್ದಾನೆ.

ಅಸೃಜ್ಯರಾಶಿಯಲ್ಲಿದ್ದ ಜೀವರನ್ನು ಸೃಷ್ಟಿಗೆ ತಂದು, ಕರ್ಮಫಲಭೋಗ ವನ್ನಿತ್ತು, ಅಂತ್ಯದಲ್ಲಿ ಲಿಂಗದೇಹವನ್ನು ಭಂಗಗೈಸಿ, ಸಜ್ಜೀವರಿಗೆ ಸ್ವಸ್ವರೂಪಾ ನಂದಾವಿರ್ಭಾವರೂಪವಾದ ನಿತ್ಯಾನಂದವನ್ನು ಅನುಗ್ರಹಿಸುವುದರಿಂದ ಶ್ರೀಪರಮಾತ್ಮನು ಕರುಣಾಳುವು.

ಮೂಲಪ್ರಕೃತಿಯಲ್ಲಿ ಕಾರಣ ನಾಮಕನಾಗಿದ್ದು, ಜಗತ್ತಿನ ಸೃಷ್ಟಿ ಕಾರ್ಯ ವನ್ನು ಮಾಡುವುದರಿಂದ ಕಾರ್ಯಶಬ್ದವಾಚ್ಯನು.

ಶ್ರೀಹರಿಯು ನಿತ್ಯಸನ್ನಿಧಾನೋಪೇತವಾದ ಸಾಲಿಗ್ರಾಮ, ಭಗವತ್ಸನ್ನಿ ಧಾನವಿಶಿಷ್ಟವಾದ ಗಂಗಾದಿ ಪವಿತ್ರ ತೀರ್ಥಗಳು ಇತ್ಯಾದಿ ಅಧಿಷ್ಠಾನಗಳಿಗೆ

ಸಹಜ ಎಂದು ಹೆಸರು. ಇವು ಪ್ರಕೃತಿಯಲ್ಲಿ ಸ್ವಾಭಾವಿಕರೂಪದಲ್ಲಿರುವ ವಸ್ತು ವಿಶೇಷಗಳು.

ಕರಚರಣಾದಿ ಅವಯವಗಳಿಂದ ಕೂಡಿ, ಶಿಲ್ಪಿಗಳಿಂದ ನಿರ್ಮಿತ ಪ್ರತಿಮಾದಿಗಳು ಆಹಿತವೆಂದೆನಿಸುವುವು. ಇವುಗಳಲ್ಲಿ ದಶವಿಧಪ್ರತಿಮೆ ಗಳಿವೆ. ಇವುಗಳ ವಿವರಣೆಯನ್ನು ವಿಭೂತಿಸಂಧಿಯಲ್ಲಿ (ಸಂಧಿ ೫) ಕೊಟ್ಟಿದೆ. ಇಂತಹ ಪ್ರತಿಮೆಗಳಲ್ಲಿ ಬಿಂಬಾವಾಹನೆಗೈದು ಪೂಜಿಸಬೇಕು. ಆಗ ಪ್ರತಿಮೆ ಗಳು ಭಗವದ್ವಿಭೂತಿರೂಪಗಳಾದ ಅಧಿಷ್ಠಾನಗಳೆನಿಸುವುವು.

ಪೂರ್ವೋಕ್ತ ಉಭಯಗಳಿಗೆ ಅನ್ಯವಾದ ಸನ್ನಿಧಾನ ವಿಶೇಷಗಳು ಅಚಲ ವೆನಿಸುವುವು.

ಈ ಮೂರುವಿಧವಾದ ಅಧಿಷ್ಠಾನಗಳಲ್ಲಿ ಅನಿರುದ್ಧದೇವನು ಕಾರ್ಯಾಖ್ಯ ರೂಪದಿಂದ ವಿದ್ಯಮಾನನಾಗಿದ್ದಾನೆ. ॥೨೦॥

## ಪದ್ಯ—೨೧

**ಮೂಲ :–**

**ಜೀವರಂತರ್ಯಾಮಿ ಅಂಶಿ ಕ ।**
**ಳೇವರಗಳೊಳಗಿಂದ್ರಿಯಗಳಲಿ ।**
**ತಾ ವಿಹಾರ ಗೈವುತನುದಿನ ಅಂಶನಾಮದಲಿ ॥**
**ಈ ವಿಷಯಗಳನುಂಡು ಸುಖಮಯ ।**
**ಈವ ಸುಖ ಸಂಸಾರ ದುಃಖವ**
**ದೇವ ಮಾನವ ದಾನವರಿಗವಿರತ ಸುಧಾಮುಸಖ ॥೨೧॥**

**ಅವತರಣಿಕೆ :–**

ಶ್ರೀಹರಿಯು ದೇವ ಮಾನವ ದಾನವರೆಂಬ ತ್ರಿವಿಧಜೀವರಿಗೆ ಕ್ರಮ ವಾಗಿ ನಿತ್ಯಸುಖ ಸುಖ, ದುಃಖಮಿಶ್ರ, ನಿತ್ಯದುಃಖಗಳೆಂಬ ತ್ರಿವಿಧಗತಿಗಳನ್ನು ಕೊಡುವನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಜೀವರಂತರ್ಯಾಮಿ**–ಪರಮಾಣು ಸ್ವರೂಪನಾದ ಜೀವನ ಸ್ವರೂಪ ದೇಹಾಂತರ್ಗತನಾಗಿ, **ಅಂಶಿ**–ಜೀವರಿಂದ ಅವಿಯೋಗನಾದ ಪರಮಾತ್ಮನು ಬಿಂಬರೂಪದಿಂದ ಅಂಶನಾಮಕನಾಗಿ, **ಕಳೇವರಗಳೊಳಗೆ**–ಅಂಶಿ ಎಂಬ ಸ್ವಮೂಲರೂಪದಿಂದ ಹೊರಟ ಅಂಶರೂಪಗಳಿಂದ ಲಿಂಗ ಅನಿರುದ್ಧ ಸ್ಥೂಲ ಶರೀರಗಳಲ್ಲಿ, **ಇಂದ್ರಿಯಗಳಲಿ**–ಆಯಾಯ ದೇಹಗತ ಇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನ ಇಂದ್ರಿಯಗಳಲ್ಲಿ, **ಅಂಶನಾಮದಲಿ**–ಅಂಶನಾಮಕನಾಗಿ, **ಅನುದಿನ**–ಪ್ರತಿದಿನದಲ್ಲೂ, **ತಾ ವಿಹಾರಗೈವುತ**–ಸ್ವಯಂ ವಿಹಾರಮಾಡುತ್ತಾ (ಲೀಲೆಯಿಂದ ಸಂಚರಿಸುತ್ತಾ), **ಈ**–ಪ್ರಕೃತಿ ಸಂಬಂಧವಾದ, **ವಿಷಯಗಳನುಂಡು**–ವಿಷಯಾಂತರ್ಗತ ಸ್ವಾಖ್ಯರಸರೂಪ ವಾದ ವಿಷಯಗಳನ್ನು ಸ್ವೀಕರಿಸಿ, (ವಿಷಯಾಂತರ್ಗತ ತನ್ನ ರೂಪಗಳಲ್ಲಿಯೇ ರಮಿಸುತ್ತಾ–ಸ್ವರಮಣ) **ಸುಖಮಯ**–ಆನಂದಪರಿಪೂರ್ಣನಾದ ಶ್ರೀಪರ ಮಾತ್ಮನು, **ಸುಧಾಮಸಖ**–ಕುಚೇಲನ ಮಿತ್ರನಾದ ಕೃಷ್ಣನು, **ದೇವ**–ಸಾತ್ವಿಕ ರಾದ ದೇವತೆಗಳಿಗೆ, **ಸುಖ**–ನಿತ್ಯಸುಖರೂಪವಾದ ಗತಿಯನ್ನೂ, **ಮಾನವ**–ಮಧ್ಯಮಜೀವರಾದ ನಿತ್ಯಸಂಸಾರಿಗಳಿಗೆ (ರಾಜಸರಿಗೆ) **ಸಂಸಾರ**–ಸುಖದುಃಖ ಮಿಶ್ರವಾದ ಗತಿಯನ್ನೂ, **ದಾನವ**–ತಮೋಯೋಗ್ಯರಾದ ದೈತ್ಯರಿಗೆ, **ದುಃಖವ**–ನಿತ್ಯದುಃಖ ರೂಪವಾದ ಅಂಧಂತಮಸ್ಸನ್ನೂ, **ಅವಿರತ**–ಎಡಬಿಡದೆ, **ಈವ**–ಕೊಡುವನು. ॥೨೧॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವನದಲ್ಲಿ ಸ್ಥೂಲದೇಹದಲ್ಲಿ ವಿದ್ಯಮಾನ ಭಗವದ್ರೂಪಗಳ ಅಂಶಾಂಶಿ ವಿಚಾರ ಹೇಳುತಾರೆ.

ಪರಮಾಣು ಸ್ವರೂಪನಾದ ಅಂಶಗತ ಜೀವಾಂತರ್ಯಾಮಿ ಅವಿಯೋಗಿನಾದ ಜೀವಬಿಂಬ ಅಂಶಿ ಎಂತ ಕರಸೋವನಾಗೆತಾನೆ. ಇದಲ್ಲದೆ ಜೀವರಲ್ಲಿ ಅನಿರುದ್ಧನಾಮಕ ಪರಮಾತ್ಮ ಎಂತ ಸಂಧ್ಯಂತರದಲ್ಲಿ ವಿದಿತವಾಗಿ ಅದೆ. ಆದ್ದರಿಂದ ಅನಾದಿಬಿಂಬನ ಕೂಡ, ಸೃಷ್ಟಿಕಾಲದಲ್ಲಿ ಅಂಶವಿಶೇಷದಿಂದ ಪ್ರವಿಷ್ಟವಾದ ಅನಿರುದ್ಧರೂಪವು ಇರೋದಾಗಿ ಅದೆ. ಎರಡೂ ಸೇರಿ ಜೀವಾಂತರ್ಗತನಲ್ಲಿ ಇದ್ದು ಅಂಶಿ ಎಂತ ಕರಸೋದಾಗತದೆ. ಈ ಅಂಶಿಯೋ ಅಂಶದಿಂದ ಹೊರಟು ತನ್ನಾಮದಿಂದ ಯುಕ್ತವಾಗಿ. ಆಯಾ ಪ್ರಾಣಿಗತ ಅಂಶಿ ಅಂಶದಿಂದ ಆಯಾ ಜೀವರ ಸ್ಥೂಲದೇಹದೊಳಗೆ. ಆಯಾ ಸ್ಥೂಲದೇಹಗತ ಇಂದ್ರಿಯಗಳಲ್ಲಿ ಪ್ರವಿಷ್ಟಗಳಾಗಿ ಇರತಕ್ಕ ಪ್ರಕಾಶತೋವ್ಯಾಪ್ತನಾದ ಜೀವನೇಂದ್ರಿಯಗಳಲ್ಲಿ ಪ್ರವಿಷ್ಟನಾಗಿ. ಪ್ರತಿದಿನದಲ್ಲೂ ತಾನು ಆಯಾ ಇಂದ್ರಿಯಗಳಲ್ಲಿ ವಿಹಾರಮಾಡುತ್ತಾ, ಸುಖಮಯಗಳಾದ ಈ ಪ್ರಾಕೃತವಿಷಯಾಂತರ್ಗತ ತನ್ನ ಸ್ವಾಖ್ಯವಿಷಯಗಳ ಉಂಡು, ಸಮೀಚಿನವಾದ ಭಕ್ತಿಪಾಶದಿಂದ ತನ್ನ ಯಾರು ಕಟ್ಟುತಾರೋ ಅವರಿಗೆ ಸಖನಾದವ, ವಿಶೇಷಾಕಾರವಾಗಿ ತನ್ನಲ್ಲಿ ಆಸಕ್ತಿಯಿಂದ ರತರಲ್ಲದ, ದ್ವೇಷಗಳ ಮಾಡತಕ್ಕ ನಿತ್ಯ ಸಂಸಾರಿ, ತಮೋಯೋಗ್ಯರಿಗೆ ಸಖನಲ್ಲದವ. ಇಂಥಾ ಪರಮಾತ್ಮ, ದೇವಶಬ್ದದಿಂದ ಬ್ರಹ್ಮಾರಭ್ಯ ತೃಣಾಂತ ತನ್ನ ಭಕ್ತರಾದವರಿಗೆ ಲಿಂಗಭಂಗಾನಂತರ ಸುಖ, ನಿತ್ಯಸಂಸಾರಿಗಳಿಗೆ ಲಿಂಗಭಂಗಾನಂತರ ಸಂಸಾರ, ದುಃಖವನು ಲಿಂಗಭಂಗಾನಂತರ ತಮೋಯೋಗ್ಯರಿಗೆ ಕೊಡೋವನಾಗತಾನೆ. ॥೨೦॥

## ಭಾವಪ್ರಕಾಶಿಕೆ

ಸಕಲ ಚೇತನಗಳಂತರ್ಯಾಮಿಯಾಗಿದ್ದು ಅಂಶರೂಪಿಯೆಂದೆನಿಸುವ ಶ್ರೀಪರಮಾತ್ಮನು ಸರ್ವ ಪ್ರಾಣಿಗಳ ದೇಹಗಳಲ್ಲೂ, ಆ ದೇಹಗತ ಇಂದ್ರಿಯಗಳಲ್ಲೂ, ಅಂಶನಾಮಕನಾಗಿದ್ದು, ಇಂದ್ರಿಯಕಾರ್ಯಗಳನ್ನು ಮಾಡಿ ಮಾಡಿಸಿ ಸ್ವೇಚ್ಛೆಯಿಂದ ಜೀವೇಂದ್ರಿಯಗಳಲ್ಲಿ ವಿಹರಿಸುತ್ತ ಈ ದೇಹಸಂಬಂಧವಾದ ವಿಷಯಸುಖದ ಸಾರವನ್ನು ತಾನು ಸ್ವೀಕರಿಸುವನು. ಆದರೆ ಈ ಸುಖದಿಂದ ಪರಮಾತ್ಮನಿಗೆ ಆಗಬೇಕಾದುದೇನೂ ಇಲ್ಲ. ತಾನು ಸುಖಮಯನು. ಸರ್ವದಾ ಸುಖಸ್ವರೂಪನು, ಸ್ವರಮಣನು. ಹೀಗಿರಲು ಪ್ರಾಣಿಗಳ ದೇಹಸಂಬಂಧವಾದ

ವಿಷಯ ಸುಖದಿಂದ ಪರಮಾತ್ಮನಿಗೆ ಆಗುವುದೇನು ? ಹಾಗಾದರೆ ಅವುಗಳನ್ನೇಕೆ ಸ್ವೀಕರಿಸುವನೆಂದರೆ ಜೀವರಿಗೆ ಸುಖವನ್ನು ಕೊಡುವುದಕ್ಕಾಗಿ ತಾನು ಸ್ವೀಕರಿಸಿ ಜೀವರಿಗೆ ಯತ್ಕಿಂಚಿತ್ತನ್ನು ಕೊಡುವನು. ಮತ್ತು ಕುಚೇಲಸಖ ಎಂಬುವದರಿಂದ ಈ ವಿಷಯಸುಖೇಚ್ಛೆಯು ಪರಮಾತ್ಮನಿಗೆ ಇದ್ದುದೇ–ಆದರೆ ಪರಮದರಿದ್ರನಾದ ಕುಚೇಲನಿಗೆ ಸಖನಾಗುವನೆ ? ಮಹಾರಾಜರ ದೇಹದೊಳಗಿದ್ದು ಅವರಿಗೆ ಸಖನಾದರೆ ಭಕ್ಷ್ಯಭೋಜ್ಯಾದಿ ಬೇಕಾದ ಸುಖವಾಗುತ್ತಿತ್ತು. ಅಂತಹ ಸುಖಾಪೇಕ್ಷೆಯು ಪರಮಾತ್ಮನಿಗಿಲ್ಲ. ಭಕ್ತಿಯೊಂದಕ್ಕೆ ಪ್ರೀತನಾಗುವನು. ಸಾತ್ವಿಕ ರಾಜಸ ತಾಮಸರಾದ ತ್ರಿವಿಧ ಜೀವರಿಂದ ಅವರವರ ಯೋಗ್ಯತಾನುಸಾರವಾಗಿ ಕರ್ಮಗಳನ್ನು ಮಾಡಿ ಮಾಡಿಸಿ, ಅವರವರ ಯೋಗ್ಯತಾನುಸಾರ ಸಾತ್ವಿಕರಾದ ದೇವತೆಗಳಿಗೆ ನಿತ್ಯಸುಖಮಯವಾದ ಮುಕ್ತಿಯನ್ನು, ರಾಜಸರಾದ ಮನುಷ್ಯರಿಗೆ ಸುಖದುಃಖ ಮಿಶ್ರವಾದ ನಿತ್ಯಸಂಸಾರವನ್ನು, ತಾಮಸರಾದ ದೈತ್ಯರಿಗೆ ನಿತ್ಯದುಃಖಮಯವಾದ ತಮಸ್ಸನ್ನು ಕೊಡುವನು. ಮನುಷ್ಯರಲ್ಲಿ ಮನುಷ್ಯೋತ್ತಮರು ನಿತ್ಯಸುಖವನ್ನೇ ಹೊಂದುವರೆಂದು ತಿಳಿಯಬೇಕು. ॥೨೦॥

### ಭಾವದರ್ಪಣ

ಜೀವರು. ಅಂಶ, ಜೀವರ ಕಲಾದಲ್ಲಿ ತನ್ನಾಮಕನಾಗಿ ಇದ್ದಾನೆಂಬರ್ಥ. ॥೨೦॥

### ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಜೀವ ಇತಿ ॥ ಅಂಶೀ ಮೂಲರೂಪೀ ॥ ಇಂದ್ರಿಯಾಂತರ್ಗತಃ ಅಂಶಃ॥ ಜೀವಾಂತರ್ಯಾಮಿ ಇತಿ ಪೂರ್ವೋಕ್ತ ರೂಪತ್ರಯಂ ವಿವೃತಮ್. ॥೨೦॥

### ಕನ್ನಡಾರ್ಥ :

ಅಂಶಿರೂಪವನ್ನು ವಿವರಿಸುತ್ತಾರೆ, ಜೀವರಂತರ್ಯಾಮಿ ಎಂಬ ಪದ್ಯದಿಂದ. ಅಂಶೀ ಮೂಲರೂಪ. ಇಂದ್ರಿಯಗಳಲ್ಲಿ ಅಂತರ್ಗತವಾದುದು ಅಂಶ

ಜೀವಾಂತರ್ಯಾಮಿ ರೂಪವು ಅಂಶ. ಈ ಮೂರು ಪದ್ಯಗಳಿಂದ ಮೂರು ರೂಪಗಳು ವಿವರಿಸಲ್ಪಟ್ಟವು. ॥೨೧॥

## ಶ್ರೀಗುರುಹೃದಯಪ್ರಕಾಶಿಕೆ

ಜೀವರ ಅಂತರ್ಯಾಮಿ, ಅಂಶರೂಪನು ದೇಹಗಳಲ್ಲೂ ಇಂದ್ರಿಯ ಗಳಲ್ಲೂ ಸಹ ವಿಹರಿಸುತ್ತಾ ಅಂಶವೆಂಬರೂಪದಿಂದ ಸುಖಪೂರ್ಣನಾದಗ್ಯೂ, ಶಬ್ದಾದಿ ವಿಷಯಗತ ಸ್ವರಸ ತೆಗೆದುಕೊಂಡು ಇತರ ರಸಗಳನ್ನು ಇತರರಿಗೆ ಕೊಟ್ಟು ತೃಪ್ತಿಪಡಿಸಿ, ಕೊನೆಗೆ ದೇವ ದಾನವ ಮಾನವರೆಂಬ ತ್ರಿವಿಧಜೀವರಿಗೆ ನಿತ್ಯಸುಖ, ನಿತ್ಯದುಃಖ. ನಿತ್ಯಸುಖದುಃಖವೆಂಬ ಸಂಸಾರ ಸಹ ಕೊಡುವನು, ಸುದಾಮಸಖ ಎಂಬುವುದರಿಂದ ಕುಚೇಲನ ಅವಲಕ್ಕಿ ನಿಮಿತ್ತ ಮಾಡಿ ಐಶ್ವರ್ಯ ವನ್ನು ಕೊಟ್ಟಂತೆ ತ್ರಿವಿದಜೀವರ ನಿತ್ಯಭಕ್ತಿ, ನಿತ್ಯದ್ವೇಷ, ನಿತ್ಯೋದಾಸೀನ ವೆಂಬ ಸ್ವಭಾವನಿಮಿತ್ತಮಾಡಿ, ತತ್ತದ್ಯೋಗ್ಯಫಲಕೊಡುವುದರಿಂದ ವೈಷಮ್ಯವಿಲ್ಲವೆಂದು ಅಭಿಪ್ರಾಯ. ॥೨೧॥

# ಸರ್ವವ್ಯಾಖ್ಯಾನಸಾರಸಂಗ್ರಹ

**ಶ್ರೀಪರಮಾತ್ಮನ ಅಂಶಿ ಮತ್ತು ಅಂಶ ರೂಪಗಳ ವಿಷಯ ತಿಳಿಸುತ್ತಾರೆ.**

ಸಕಲ ಜೀವರಾಶಿಗಳಲ್ಲಿ–ಸಾತ್ವಿಕರು, ರಾಜಸರು, ತಾಮಸರು, ಎಂದು ಮೂರು ಪ್ರಕಾರ. ಇಂತಹ ತ್ರಿವಿಧಜೀವರ ಸ್ವರೂಪದೇಹವು ಅಲ್ಪಪರಮಾಣು ರೂಪದಲ್ಲಿದೆ. ಜೀವರ ಸ್ವರೂಪದೇಹವು ಅನಾದ್ಯನಂತಕಾಲದಿಂದ ನಿತ್ಯವಾಗಿದೆ ಅಂತಹ ಜೀವರಲ್ಲಿ ಅಂತರ್ಯಾಮಿರೂಪದಿಂದ ಶ್ರೀಪರಮಾತ್ಮನಿದ್ದಾನೆ. ಸ್ವರೂಪಗತ ಜೀವಾಂತರ್ಯಾಮಿ ರೂಪಕ್ಕೆ ಬಿಂಬನೆಂದು ಹೆಸರು. ಸಕಲ ತ್ರಿವಿಧಜೀವರು ಬಿಂಬರೂಪವಾದ ಪರಮಾತ್ಮನಿಗಿಂತ ಅತ್ಯಂತ ಭಿನ್ನರು ಸರ್ವಜೀವರೂ ಶ್ರೀಪರಮಾತ್ಮನ ಪ್ರತಿಬಿಂಬಭೂತರು. ಬಿಂಬನಾದ ಈಶನಿಗೂ, ಅವನ ಪ್ರತಿಬಿಂಬರಾದ ಜೀವರಿಗೂ ಅನಾದ್ಯನಂತಕಾಲದಿಂದ ಅನೋನ್ಯ ಸಂಬಂಧ. ಶ್ರೀಪರಮಾತ್ಮನ ಅಂತರ್ಯಾಮಿ ರೂಪಕ್ಕೆ ಅಂಶ ಎಂದು ಹೆಸರು.

ಜೀವರ ಸ್ಥೂಲದೇಹಗತ ಸಕಲೇಂದ್ರಿಯಗಳಲ್ಲಿ ಜೀವನು ಪ್ರಕಾಶತೋ ವ್ಯಾಪ್ತನಾಗಿದ್ದಾನೆ. ಈ ಕಾರಣದಿಂದಲೇ ಸಕಲೇಂದ್ರಿಯಗಳ ದ್ವಾರಾ ನಡೆಯುವ ಕ್ರಿಯಾ ವಿಶೇಷಗಳ ಅನುಭವವು ಪ್ರಕಾಶತೋವ್ಯಾಪ್ತನಾದ ಜೀವನಿಗೆ ಬಿಂಬಕ್ರಿಯಾದ್ವಾರಾ ಉಂಟಾಗುವುದು. ಹೀಗೆ ಪ್ರಕಾಶತೋ ವ್ಯಾಪ್ತನಾದ ಜೀವನಲ್ಲಿ ಸ್ಥಿತನಾಗಿರುವ ಶ್ರೀಪರಮಾತ್ಮನ ರೂಪಗಳಿಗೆ ಅಂಶ ಎಂದು ಹೆಸರು. ಪ್ರಸಕ್ತ ಪದ್ಯದಲ್ಲಿ ಕಳೇವರಗಳೊಳಗೆ ಎಂದು ಬಹುವಚನ ಪ್ರಯೋಗವಿದೆ. ಇದರಿಂದ ಜೀವಸ್ವರೂಪದ ಸುತ್ತಲೂ ಆವರ್ಕವಾದ ಅನಾದಿ ಲಿಂಗದೇಹ, ಜನ್ಮಾಂತರಗಳಿಗೆ ಕಾರಣವಾದ ಅನಿರುದ್ಧ ಶರೀರ ಮತ್ತು ಸಾಧನಶರೀರವೆಂದೆನಿಪ ಸ್ಥೂಲದೇಹ–ಈ ರೀತಿ ಲಿಂಗಾನಿರುದ್ಧ ಸ್ಥೂಲ ಗಳೆಂದು ಶರೀರತ್ರಯಗಳನ್ನು ಪರಿಗಣಿಸಬೇಕು. ಲಿಂಗದೇಹಗತ ಸೂಕ್ಷ್ಮೇಂದ್ರಿ ಯಗಳಲ್ಲಿಯೂ, ಅನಿರುದ್ಧ ಶರೀರಗತ ಇಂದ್ರಿಯಗಳಲ್ಲಿಯೂ, ಸ್ಥೂಲ ಶರೀರಗತ ಇಂದ್ರಿಯಗಳಲ್ಲಿ ಅಂಶನಾಮಕನಾಗಿ ಶ್ರೀಪರಮಾತ್ಮನು ಇಂದ್ರಿಯಗಳ ದ್ವಾರಾ ಶರೀರದ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು.

ವಿಷಯಗಳನ್ನು ಗ್ರಹಿಸುವ ಪಂಚಜ್ಞಾನೇಂದ್ರಿಯಗಳಿಗೆ ಗಂಧಾದಿ ವಿಷಯಗಳು ಸನ್ನಿಕರ್ಷವಾದಾಗ, ಆ ಇಂದ್ರಿಯಗಳು ಆಯಾಯ ವಿಷಯ ಗಳನ್ನು ಸ್ವೀಕರಿಸಿ ಮನಸೇಂದ್ರಿಯಕ್ಕೆ ಮುಟ್ಟಿಸುವುವು. ಮನಸ್ಸಿನಿಂದ ಪಂಚ ಕರ್ಮೇಂದ್ರಿಯಗಳ ದ್ವಾರಾ ಕ್ರಿಯಾಭಿವ್ಯಕ್ತಿ. ವಿಷಯಗ್ರಹಣ ರೂಪವಾದ ಜ್ಞಾನವು ಪಂಚಜ್ಞಾನೇಂದ್ರಿಯಗಳ ಮೂಲಕವೂ ಕ್ರಿಯಾಭಿವ್ಯಕ್ತಿಯ ಅನು ಭವವು ಪಂಚಕರ್ಮೇಂದ್ರಿಯಗಳ ದ್ವಾರವೂ, ದೇಹಗತ ಇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನ ಅನುಭವಕ್ಕೆ ಅಂಶನಾಮಕನಾದ ಶ್ರೀಪರ ಮಾತ್ಮನು ತಂದೀಯುವನು.

ಜೀವರ ಅನುಭವಕ್ಕೆ ವಿಷಯಗಳಾದ ಗಂಧ, ರಸ, ರೂಪ, ಶಬ್ದ, ಸ್ಪರ್ಶಾದಿಗಳಲ್ಲಿ ಹಾಗೂ ಕರ್ಮೇಂದ್ರಿಯಗಳ ದ್ವಾರಾ ನಡೆಯುವ ವ್ಯಾಪಾರ ರೂಪವಾದ ಕ್ರಿಯೆಗಳಲ್ಲಿ ಮಾನಸಿಕ, ಚಿತ್ತ, ಬೌದ್ಧಿಕ ಇತ್ಯಾದಿ ಮನೋಕ್ರಿಯೆ ಗಳಲ್ಲಿ ಶ್ರೀಪರಮಾತ್ಮನು ತತ್ತನ್ನಾಮಕನಾಗಿ, ತದ್ರೂಪಗಳಿಂದ ಇರುವನು. ಇಂತಹ ವಿಷಯಾಂತರ್ಗತ, ಕರ್ಮಾಂತರ್ಗತ ಭಗವದ್ರೂಪಗಳೇ

ಸ್ವಾಖ್ಯಗಳೆನಿಸುವುವು. ವಿಷಯಾಂತರ್ಗತ ತನ್ನದೇ ಆದ ಭಗವದ್ರೂಪಗಳಲ್ಲಿ ರಮಿಸಿ, ಸ್ವಾಖ್ಯರಸಸ್ವೀಕಾರದಿಂದ ಬಿಂಬಕ್ರಿಯಾ ನಡೆಯುವುದು. ಅದರ ದ್ವಾರಾ ಜೀವರಿಗೆ ವಿಷಯಾನುಭವ ಅಭಿವ್ಯಕ್ತಿ. ಬಿಂಬನು ಉಂಡರೇ ಪ್ರತಿಬಿಂಬರಾದ ಸಕಲಜೀವರ ಉಂಬುವ ಕ್ರಿಯೆಯು ಅಭಿವ್ಯಕ್ತಿ. ಸ್ವಾಖ್ಯರಸಸ್ವೀಕಾರ ಬಿಂಬನಿಂದ, ಆದರಿಂದ ಜೀವರಿಗೆ ವಿಷಯಾನುಭವ. ಈ ಕಾರಣದಿಂದಲೇ ಈ ವಿಷಯುಗಳನುಂಡು ಎಂದಿದ್ದಾರೆ.

ಪ್ರಾಕೃತವಿಷಯುಗಳ ಸ್ಪರ್ಶವಾಗಲೀ, ಅನುಭವವಾಗಲೀ ಶ್ರೀಪರಮಾತ್ಮನಿಗಿಲ್ಲ. ಅವನು ನಿತ್ಯ ಸ್ವಗತಾನಂದದಲ್ಲೇ ಪರಿಪೂರ್ಣನಾಗಿದ್ದು ರಮಿಸುವನು. ಸಾತ್ವಿಕಚೇತನರಿಗೆ ನಿತ್ಯಸುಖವನ್ನೂ, ನಿತ್ಯ ಸಂಸಾರಿಗಳಾದ ರಾಜಸರಿಗೆ ಸುಖದುಃಖಮಿಶ್ರವಾದ ಸಂಸಾರವನ್ನೂ, ತಮೋಯೋಗ್ಯರಾದ ದೈತ್ಯರಿಗೆ ನಿತ್ಯದುಃಖರೂಪವಾದ ಗತಿಯನ್ನೂ ಆ ಸುಧಾಮುಸುಖನು ಈಯುವನು. ॥೨೧॥

## ಪದ್ಯ—೨೨

**ಮೂಲ :–**

**ದೇಶ ದೇಶವ ಸುತ್ತಿ ದೇಹಾ ।**<br>
**ಯಾಸಗೊಳಿಸದೆ ಕಾಮ್ಯಕರ್ಮ ದು ।**<br>
**ರಾಶೆಗೊಳಗಾಗದಲೆ ಬ್ರಹ್ಮಾದ್ಯಖಿಳ ಚೇತನರು ॥**<br>
**ಭೂ ಸಲಿಲ ಪಾವಕ ಸಮೀರಾ ।**<br>
**ಕಾಶ ಮೊದಲಾದಖಿಳ ತತ್ತ್ವ ಪ ।**<br>
**ರೇಶರಿಗಿವಧಿಷ್ಠಾನವೆಂದರಿತರ್ಚಿಸನವರತ ॥೨೨॥**

## ಅವತರಣಿಕೆ

ಪೃಥ್ವ್ಯಾದಿಪಂಚಭೂತಗಳು, ಬ್ರಹ್ಮಾದಿ ಅಖಿಳ ಚೇತನವರ್ಗ, ಇವೆಲ್ಲವೂ ಆ ಪರಾತ್ಪರನಿಗೆ ಅಧಿಷ್ಠಾನಗಳೆಂದು ಅರಿತು, ಆಯಾಯಾ ಅಧಿಷ್ಠಾನಗತ ಭಗವದ್ರೂಪಗಳನ್ನು ನಿರಂತರ ಪೂಜಿಸಬೇಕೆಂದು ತಿಳಿಸುತ್ತಾರೆ.

## ಪ್ರತಿಪದಾರ್ಥ

**ದೇಶ ದೇಶವ ಸುತ್ತಿ**–ಜ್ಞಾನಾನುಸಂಧಾನರಹಿತರಾಗಿ ಅನೇಕ ಪುಣ್ಯಕ್ಷೇತ್ರಗಳನ್ನು ಚರಿಸಿ, **ದೇಹಾಯಾಸಗೊಳಿಸದೆ**–ಈ ಸಾಧನದೇಹವನ್ನು ವೃಥಾ ಶ್ರಮಪಡಿಸಿ ಬಳಲಿಸದೆ, **ಕಾಮ್ಯಕರ್ಮ**–ಕಾಮಿತಫಲಗಳನ್ನು ಅಪೇಕ್ಷಿಸುತ್ತಾ ಅನೇಕ ಸತ್ಕರ್ಮಗಳನ್ನು, **ದುರಾಶೆಗೆ ಒಳಗಾಗದೆ**–ದುರಾಶಾಗ್ರಸ್ತನಾಗದೆ, ಕೇವಲ ಭಗವತ್ಪ್ರೀತಿಗಾಗಿ ಮಾಡುತ್ತಾ, **ಬ್ರಹ್ಮಾದಿ**–ಬ್ರಹ್ಮದೇವರೇ ಮೊದಲಾಗಿ, **ಅಖಿಳಚೇತನರು**–ಸಮಸ್ತರಾದ ಚತುರ್ವಿಂಶತಿ ತತ್ತ್ವಾಭಿಮಾನಿದೇವತೆಗಳು, **ಭೂ**–ಪೃಥಿವೀ, **ಸಲಿಲ**–ಹರಿಯುತ್ತಿರುವ ನೀರು (ಅಪ್‌ತತ್ತ್ವ), **ಪಾವಕ**–ಅಗ್ನಿ (ತೇಜಃತ್ತತ್ವ) **ಸಮೀರ**–ಬೀಸುತ್ತಿರುವ ಗಾಳಿ (ವಾಯುತತ್ತ್ವ), **ಆಕಾಶ**–ಸರ್ವತ್ರ ವ್ಯಾಪಕವಾಗಿರುವ ವಿಶಾಲ ಆಕಾಶತತ್ತ್ವ, **ಮೊದಲಾದ**–ಇತ್ಯಾದಿ, **ಅಖಿಳತತ್ತ್ವ**–ಪಂಚಭೂತಗಳೆಂಬ ತತ್ತ್ವಗಳು. ಅವುಗಳಲ್ಲಿ ಸಮಾವೇಶರೂಪದಲ್ಲಿರುವ ಉಳಿದ ೧೯ ತತ್ತ್ವಗಳು. **ಪರೇಶಗೆ**–ಪರಾನಾಮಕಳಾದ ಶ್ರೀಲಕ್ಷ್ಮೀದೇವಿಗಿಂತ ಅನಂತಾನಂತ ಕೋಟಿ ಗುಣಗಳಿಂದ ಉತ್ತಮೋತ್ತಮನಾದ ಶ್ರೀಲಕ್ಷ್ಮೀನಿಯಾಮಕನಾದ ಶ್ರೀಪರಮಾತ್ಮನಿಗೆ, **ಅಧಿಷ್ಠಾನವೆಂದು** – ಆವಾಸಸ್ಥಾನಗಳೆಂದು, **ಅರಿತು** – ಜ್ಞಾನಾನುಸಂಧಾನಪೂರ್ವಕ ತಿಳಿದು, **ಅನವರತ**–ಎಡಬಿಡದೆ (ಯಾವಾಗಲೂ), **ಅರ್ಚಿಸು**–ಅಧಿಷ್ಠಾನಾಂತರ್ಗತನಾದ ಶ್ರೀಪರಮಾತ್ಮನನ್ನು ಪೂಜಿಸು. ॥೨೨॥

# ವ್ಯಾಖ್ಯಾನಗಳು

## ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಅನುಸಂಧಾನರಹಿತನಾಗಿ ಪುಣ್ಯದೇಶಗಳ ತಿರುಗಿದ್ದರಿಂದ ಪ್ರಯೋಜನವಿಲ್ಲ ಎಂತ ಹೇಳತಾರೆ.

ಐಹಿಕದಲ್ಲಿ ವನಿತಾದಿ ನಾನಾವಿಧ ಪ್ರಾಕೃತಭೋಗಗಳ ಅಪೇಕ್ಷಾರೂಪವಾದ ದುರಾಶೆಯಿಂದ ಕಾಮ್ಯವಾದ ಕಾರ್ಯಗಳ, ಅನುಸಂಧಾನಹೀನರಾಗಿ ಅನೇಕ ಪುಣ್ಯಕ್ಷೇತ್ರಗಳ ಚರಿಸಿ ವೃಥಾ ಶರೀರವನ್ನು ಕಷ್ಟಪಡಿಸಿ ಶ್ರಮಪಡಧಾಂಗೆ, ಕಾಮ್ಯಕರ್ಮಕ್ಕೆ, ಅನುಸಂಧಾನವಿಲ್ಲದೆ ಪುಣ್ಯಕ್ಷೇತ್ರಗಳ ಯಾತ್ರಾಕ್ಕೂ ಈ ಎರಡಕ್ಕೂ ವಶವಾಗದೇನೆ ಭೂಮಿ ಉದಕ ಅಗ್ನಿ ವಾಯು ಆಕಾಶ, ಈ ಪಂಚ ಭೂತಗಳೇ ಆದಿಯಾಗಿ ಸಮಸ್ತವಾದ ಚತುರ್ವಿಂಶತಿತತ್ತ್ವಗಳು ಸೇರಿ ಜಗತ್ತೇನು, ಚರಾಚರಜೀವರ ದೇಹವೇನು ನಿರ್ಮಿತವಾಗಿವೆ ಇವುಗಳಲ್ಲಿ ಬ್ರಹ್ಮದೇವರೇ ಆದಿಯಾಗಿ ಸಮಸ್ತರಾದ ಚತುರ್ವಿಂಶತಿ ತತ್ತ್ವಾಭಿಮಾನಿ ದೇವತೆಗಳು ಅಭಿಮಾನಿಗಳಾಗಿ ಇದ್ದಾರೆ. ಉತ್ತಮರಾದ ರಮಾದೇವಿಯರಿಗೆ ಈಶನಾದ ಪರಮಾತ್ಮಗೆ ತತ್ತ್ವಗಳು, ತತ್ತ್ವದೇವತೆಗಳು ಇವು ಎರಡೂ ಆವಾಸಸ್ಥಾನವೆಂದು ತಿಳಿದವನಾಗಿ, ನಿರಂತರದಲ್ಲೂ ದೇಹಗತ ತತ್ತ್ವದೇವತೆಗಳು ಇವು ಎರಡೂ ಆವಾಸಸ್ಥಾನವೆಂದು ತಿಳಿದವನಾಗಿ, ನಿರಂತರದಲ್ಲೂ ದೇಹಗತ ತತ್ತ್ವಗಳಲ್ಲಿ, ಬಾಹ್ಯತತ್ತ್ವಗಳಲ್ಲಿ ತದಭಿಮಾನಿಗಳ ಚಿಂತಿಸಿ, ತದಂತರ್ಗತ ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಪರಮಾತ್ಮನ್ನ ಚಿಂತಿಸಿ ಪರಸ್ಪರ ಐಕ್ಯಚಿಂತನಾರೂಪವಾದ ಪೂಜೆ ಮಾಡು ಎಂತ ಅರ್ಥ ॥೨೨॥

## ಭಾವಪ್ರಕಾಶಿಕೆ

ಸಕಲ ಚೇತನ ರಾಶಿಗಳೂ, ಇಂದ್ರಿಯಗಳೂ, ತತ್ತ್ವಾಭಿಮಾನಿಗಳೂ ಇವೆಲ್ಲವೂ ಭಗವದಧಿಷ್ಠಾನವೆಂದರಿತು ಪೂಜಿಸದೆ ಇರುವವನು ವೃಥಾ ಆಯಾಸಪಟ್ಟು ತೀರ್ಥಯಾತ್ರಾ ಮಾಡುತ್ತೇನೆಂದು ದೇಹಾಯಾಸಗೊಳಿಸಿ ದೇಶ ದೇಶ ತಿರುಗಿದರೂ ಪ್ರಯೋಜನವಿಲ್ಲ. ಕಾಮ್ಯಫಲಾಪೇಕ್ಷೆಯಿಂದ ದುರಾಶೆಗೊಳಗಾಗಿ

ವ್ರತನಿಯಮಾದಿಗಳನ್ನು ಮಾಡಿದರೂ ಫಲವಿಲ್ಲ. ಆದ್ದರಿಂದ ವೃಥಾ ದೇಶ ದೇಶ ಸುತ್ತಿ ದೇಹಾಯಾಸಗೊಳಿಸದೆ, ದುರಾಶೆಯಿಂದ ಕಾಮ್ಯಕರ್ಮಗಳನ್ನಾಚರಿಸದೆ ಬ್ರಹ್ಮದೇವರು ಮೊದಲಾದ ಸಕಲ ಚೇತನರು ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ ಮೊದಲಾದ ೨೪ ತತ್ತ್ವಾಭಿಮಾನಿ ದೇವತೆಗಳು ಭಗವಂತನಿಗೆ ಪ್ರತಿಮಾಸ್ಥಾನೀಯರೆಂದು ತಿಳಿದು ಸರ್ವಕಾಲದಲ್ಲೂ ಪೂಜಿಸಬೇಕೆಂಬ ತಾತ್ಪರ್ಯ ॥೨೨॥

## ಭಾವದರ್ಪಣ

ಪಂಚಭೂತಗಳು ಪರಮಾತ್ಮಗೆ ಅಧಿಷ್ಠಾನವೆಂದು ಹೇಳುತ್ತಾರೆ.

ಈ ವಿಷಯ ಮೂರನೇ ಸಂಧಿ ಮೊದಲು ಪದ್ಯದಲ್ಲಿ ವಿವರ ಮಾಡಿ ಇದೆ. ಅಲ್ಲೇ ನೋಡಬೇಕಾದ್ದು. ॥೨೨॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ದೇಶ ಇತಿ ॥ ತತ್ತ್ವ ಇತಿ ದ್ವಯಂ ಚ ಇತ್ಯನ್ವಯಃ ॥೨೨॥

## ಕನ್ನಡಾರ್ಥ

ಕಾಮ್ಯಕರ್ಮಗಳನ್ನು ಬಿಟ್ಟು ನಿಷ್ಕಾಮದಿಂದ ತತ್ತ್ವ ಹಾಗೂ ತತ್ತ್ವೇಶರುಗಳು ಭಗವಂತನನ್ನು ಚಿಂತಿಸುವುದೇ ಕರ್ತವ್ಯವೆಂದು ಉಪದೇಶಿಸುತ್ತಾರೆ, ದೇಶ ಎಂಬ ಪದ್ಯದಿಂದ. ತತ್ತ್ವಪ ಎಂಬ ಪದವು ತತ್ತ್ವ, ತತ್ತ್ವೇಶರುಗಳಲ್ಲಿ ಎಂಬ ಅರ್ಥವನ್ನು ಹೇಳುವದು. ॥೨೨॥

## ಶ್ರೀಗುರುಹೃದಯಪ್ರಕಾಶಿಕೆ

ಜೀವಜಡಾತ್ಮಕಪ್ರಪಂಚ ದೇವರಧಿಷ್ಠಾನವೆಂದರಿಯದೆ, ಸಕಾಮ್ಯ ತೀರ್ಥಯಾತ್ರಾದಿಗಳಿಂದ ಫಲವಿಲ್ಲವೆಂದು ಬೋಧಿಸುತ್ತಾರೆ, ದೇಶವೆಂದು.

ಸೌಖ್ಯಾಪೇಕ್ಷೆಯಿಂದ ದೇಶದೇಶವೆಂಬ ಅನೇಕ ಕ್ಷೇತ್ರತೀರ್ಥಗಳನ್ನು ಸಂಚರಿಸಿ ದೇಹಾಯಾಸ ಮಾಡಿಕೊಳ್ಳದೆ, ಬಡ್ಡೀ ಬರುತ್ತದೆಂಬ ಆಶೆಗೆ ಹಣವನ್ನು ಕೊಟ್ಟಂತೆ, ಫಲಾಪೇಕ್ಷಿಸಿ ಮಾಡುವ ದಾನಧರ್ಮದ ಶ್ರಮಕರವಾದ ಆಶೆಗೂ ಒಳಪಡದೆ, ಬ್ರಹ್ಮಾದಿ ಸಕಲ ಜೀವರೂ ಭೂಮಿ ಜಲ ಅಗ್ನಿ ವಾಯು ಆಕಾಶ ಮೊದಲಾದ ಜಡ ಇವೆರಡೂ ದೇವರಿಗೆ ಪ್ರತಿಮೆಯಂತೆ ಅಧಿಷ್ಠಾನವೆಂದು ಭಾವಿಸಿ, ತದನುಕೂಲವಾಗಿ ನಡೆಯುವುದೇ ದೇವರ ಪೂಜೆ ಎಂದು ತಿಳಿಯುವುದು.

**ಸರ್ವಾಣಿಮದ್ಧಿಷ್ಣ್ಯತಯಾಭವದ್ಭಿಃ ಚರಾಣಿ ಭೂತಾನಿ ಸುತಾಧ್ರುವಾಣಿ।**
**ಸಂಭಾವಿತವ್ಯಾನಿ ಪದೇಪದೇ ವೋವಿವಿಕ್ತದೃಷ್ಟಿಸ್ತದುತಾರ್ಹಣಂ ಮೇ ॥**
ಎಂಬ ಭಾಗವತಾರ್ಥ ವಿವರಿಸಲ್ಪಟ್ಟಿತು ॥೨೨॥

# ಸರ್ವವ್ಯಾಖ್ಯಾನಸಾರಸಂಗ್ರಹ

ಕಾಮ್ಯಕರ್ಮಗಳನ್ನು ತೊರೆದು, ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಸರ್ವಾಧಿಷ್ಠಾನಗಳಲ್ಲಿ ಸರ್ವತ್ರವ್ಯಾಪ್ತನಾಗಿರುವ ಆ ಪರೇಶನನ್ನು ಸಂಸ್ಮರಣ ಪೂರ್ವಕ ಅರ್ಚಿಸೆಂದು ತಿಳಿಸುತ್ತಾರೆ.

ತೀರ್ಥಕ್ಷೇತ್ರಯಾತ್ರೆಯು ಸತ್ಕರ್ಮವೆನಿಸುವುದು. ಆದರೆ ಕ್ಷೇತ್ರಜ್ಞ ನಾದ ಶ್ರೀಪರಮಾತ್ಮನ ಸ್ಮರಣೆ ಮಾಡುತ್ತ, ಆಯಾಯಾ ಕ್ಷೇತ್ರಗತ ತೀರ್ಥಾಭಿ ಮಾನಿದೇವತೆಗಳು, ನದ್ಯಭಿಮಾನಿದೇವತೆಗಳು, ಆ ದೇವತಾಂತರ್ಗತ ದೇವ ದೇವೇಶನನ್ನು ನೆನೆಯದೆ, ಕೇವಲ ಯಾಂತ್ರಿಕವಾಗಿ, ದೇಶ ದೇಶವ ಸುತ್ತುವುದ ರಿಂದ ಯಾವ ಪ್ರಯೋಜನವೂ ಇಲ್ಲ. ಸತ್ಫಲಪ್ರದವಾಗುವುದಿಲ್ಲ. ಅಂತಹ ಕ್ಷೇತ್ರಾಟನೆಯಿಂದ ಶರೀರ ದಂಡನೆ ಅಷ್ಟೆ.

ಅನೇಕ ಅಭೀಷ್ಟಗಳನ್ನು ಇಟ್ಟುಕೊಂಡು, ಮಾಡುವ ಕರ್ಮಗಳೆಲ್ಲವೂ ಕಾಮ್ಯಕರ್ಮಗಳು. ಕಾಮ್ಯಕರ್ಮಗಳು ಭಗವತ್ಪ್ರೀತಿಗೆ ಕಾರಣವಾಗುವುದಿಲ್ಲ.

ಕರ್ಮಗಳು ಫಲಾಪೇಕ್ಷರಹಿತವಾಗಿದ್ದು, ಕೇವಲ ಭಗವತ್ಪ್ರೀತಿಗಾಗಿ ಇರಬೇಕು ಅದರಿಂದ ಶ್ರೀಶನ ಪರಮಾನುಗ್ರಹ ಪ್ರಾಪ್ತಿ. ಕಾಮ್ಯಕರ್ಮಗಳಿಗೆ ಫಲರೂಪವಾಗಿ ತತ್ಕಾಲಿಕ ಭೋಗಭಾಗ್ಯಗಳು ಪ್ರಾಪ್ತವಾಗುವುವು. ಆ ಭೋಗ ಕ್ಷೀಣವಾದ ನಂತರ, ಪುನಃ ಕ್ಲೇಶಾದಿಗಳೇ ಪ್ರಾಪ್ತಿ.

ಚತುರ್ವಿಂಶತಿತತ್ತ್ವಗಳಿಂದ ನಿರ್ಮಿಸಲ್ಪಟ್ಟ ಈ ಪ್ರಪಂಚವು ಚರಾಚರಾತ್ಮಕವಾದದ್ದು. ಅಂತೆಯೇ ಪಿಂಡಾಂಡರೂಪವಾದ ಈ ಶರೀರವೂ ಸಹ ಚತುರ್ವಿಂಶತಿ ತತ್ತ್ವಗಳಿಂದ ನಿರ್ಮಿತವಾಗಿದೆ. ಈ ಚತುರ್ವಿಂಶತಿ ತತ್ತ್ವಗಳಲ್ಲಿ ಭೂತಪಂಚಕಗಳಿಂದ ಈ ಶರೀರವು ನಿರ್ಮಿತವಾಗಿರುವುದರಿಂದ, ಈ ದೇಹಕ್ಕೆ ಪಾಂಚಭೌತಿಕಶರೀರವೆಂದು ಹೆಸರು. ಈ ಪಂಚಭೂತಗಳಲ್ಲಿ ಅವ್ಯಕ್ತಾದಿ ಇತರ ೧೯ ತತ್ತ್ವಗಳು ಅಡಕವಾಗಿವೆ.

ಆ ರಮಾವರನಿಗೆ ಪರೇಶನೆಂದು ಹೆಸರು. ಶ್ರೀಲಕ್ಷ್ಮಿಗೂ ನಿಯಾಮಕನಾದ ಪರೇಶನಿಗೆ ಚತುರ್ವಿಂಸತಿ ತತ್ತ್ವಗಳು, ತತ್ತ್ವೇಶರು ಮುಖ್ಯ ಅಧಿಷ್ಠಾನಗಳು. ಆ ಅಧಿಷ್ಠಾನಾಂತರ್ಗತ ಅಪ್ರಮೇಯನನ್ನು ಅನವರತ ಜ್ಞಾನಾನುಸಂಧಾನ ಪೂರ್ವಕ ಅರಿತು ಅರ್ಚಿಸಬೇಕೆಂದು ತಿಳಿಸುತ್ತಾರೆ. ॥೨೨॥

## ಪದ್ಯ—೨೩

**ಮೂಲ :–**

**ಎರಡು ವಿಧದಲಿ ಲೋಕದೊಳು ಜೀ ।**
**ವರುಗಳಿಪ್ಪರು ಸಂತತ ಕ್ಷರಾ ।**
**ಕ್ಷರ ವಿಲಿಂಗ ಸಲಿಂಗ ಸೃಜ್ಯಾಸೃಜ್ಯ ಭೇದದಲಿ ॥**
**ಕರೆಸುವುದು ಜಡಪ್ರಕೃತಿ ಪ್ರಣವಾ ।**
**ಕ್ಷರ ಮಹಾದಣುಕಾಲನಾಮದಿ ।**
**ಹರಿ ಸಹಿತ ಭೇದಗಳ ಪಂಚಕ ಸ್ಮರಿಸು ಸರ್ವತ್ರ ॥೨೩॥**

**ಪ್ರತಿಪದಾರ್ಥ**

**ಲೋಕದೊಳು**–ಬ್ರಹ್ಮಾಂಡಗತ ಹದಿನಾಲ್ಕು ಲೋಕಗಳಲ್ಲಿ, **ಕ್ಷರ**–ಸ್ಥೂಲದೇಹಗಳನ್ನು ಹೊಂದಿ, ಸ್ಥೂಲ, ಅನಿರುದ್ಧ, ಲಿಂಗಶರೀರಗಳ ನಾಶವನ್ನು ಹೊಂದಿರುವ ಕ್ಷರಜೀವರು, **ಅಕ್ಷರ**–ದೇಹನಾಶರಹಿತರಾದ ಶಾಶ್ವತರೂಪದಲ್ಲಿರುವ ಶ್ರೀರಮಾದೇವಿಯರು ಅಕ್ಷರನಾಮಕಗಳು, **ಎರಡು ವಿಧದಲಿ**–ಈ ಪ್ರಕಾರ ಕ್ಷರ–ಅಕ್ಷರವೆಂದು ಎರಡು ಪ್ರಕಾರವಾಗಿ. **ಜೀವರುಗಳಿಪ್ಪರು**–ಜೀವರಾಶಿಗಳಿವೆ. **ವಿಲಿಂಗ**–ಸಾಧನಪೂರ್ತಿಯಾಗಿ, ಲಿಂಗಭಂಗಹೊಂದಿ, ತಮ್ಮ ಸ್ವರೂಪಗತಿ ಐದಿರುವ ವಿಲಿಂಗಜೀವರೆಂತಲೂ, **ಸಲಿಂಗ**–ಲಿಂಗಭಂಗವಾಗದೇ ಪ್ರಕೃತ್ಯಾತ್ಮಕ ಅನಾದಿಲಿಂಗದೇಹದಿಂದ ಸಹಿತರಾದ ಸಲಿಂಗಜೀವರೆಂತಲೂ ಎರಡು ಪ್ರಕಾರ. **ಸೃಜ್ಯ**–ಬ್ರಹ್ಮಾಂಡದಲ್ಲಿ ಸೃಷ್ಟರಾಗಿ ಲಿಂಗಭಂಗಕ್ಕಾಗಿ ಸಾಧನಮಾಡುತ್ತಾ ಇರುವ ಸಲಿಂಗಜೀವರು, **ಅಸೃಜ್ಯ**–ಇನ್ನೂ ಸೃಷ್ಟಿಗೆ ಬಾರದಿರುವ ಅಸೃಜ್ಯಜೀವರು ಎಂತ ಪುನಃ ಎರಡು ಪ್ರಕಾರ. **ಭೇದದಲಿ ಕರೆಸುವುದು**–ಜೀವರು ಈ ಪ್ರಕಾರ ಭೇದಯುಕ್ತರಾಗಿದ್ದಾರೆ. **ಜಡಪ್ರಕೃತಿ**–ಇನ್ನು ಜಡವಸ್ತುಗಳ ಸಮೂಹದಲ್ಲಿ, ಜಗತ್ಸೃಷ್ಟಿಗೆ ಉಪಾದಾನಕಾರಣವಾದ

**ಜಡಪ್ರಕೃತಿ.** ಇದು ಪೃಥಿವ್ಯಾದಿ ಪಂಚಭೂತಗಳು, ಸತ್ವಾದಿಗುಣತ್ರಯಗಳು, ಅವುಗಳ ಕಾರ್ಯಾಭಿವ್ಯಕ್ತಿ ಇವಕ್ಕೆ ಉಪಾದಾನಕಾರಣಭೂತವಾದ ಮೂಲ ಪ್ರಕೃತಿಯು. **ಪ್ರಣವ**–ಓಂಕಾರ, **ಅಕ್ಷರ**–ಪಂಚಾಶದ್ವರ್ಣಗಳು, ಅನಂತ ವೇದರಾಶಿಗಳು, **ಮಹತ್ ಅಣುಕಾಲ**–ಅನಾದಿ ಪ್ರವಾಹತೋನಿತ್ಯವಾದ, ರಮಾಭಿಮನ್ಯವಾದ, ಮಹಾಕಾಲ, ಲವಕಾಲಗಳೆಂಬ ಅಣುಕಾಲಗಳು, **ನಾಮದಿ**–ಈ ಹೆಸರುಗಳಿಂದ ಜಡವಸ್ತುಗಳಿವೆ. **ಹರಿ ಸಹಿತ**–ಜೀವ ಜಡಗಳಲ್ಲಿ ಅಂತಸ್ಥಿತನಾದ, ಅವುಗಳಿಂದ ಅತ್ಯಂತ ವಿಲಕ್ಷಣನಾದ ಶ್ರೀಪರಮಾತ್ಮನನ್ನು, **ಭೇದಗಳ ಪಂಚಕ**–ಪಂಚಭೇದತತ್ತ್ವಗಳನ್ನು, **ಸರ್ವತ್ರ ಸ್ಮರಿಸು**–ಎಲ್ಲೆಲ್ಲಿಯೂ ಚಿಂತಿಸು ||೨೩||

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪಂಚಭೇದಗಳ ಸರ್ವತ್ರ ಚಿಂತಿಸಬೇಕೆಂದು ಹೇಳತಾರೆ.

ಬ್ರಹ್ಮಾಂಡದಲ್ಲಿ ವಿದ್ಯಮಾನವಾದ ಹದಿನಾಲ್ಕು ಲೋಕಗಳಲ್ಲಿ, ಹಾಂಗೆ ವೈಕುಂಠ, ಅಂಧಂತಮಸ್ಸು, ಅಂಡದ ಹೊರಗೆ ಅದಕ್ಕೆ ಆಚೇಲಿ ಅವ್ಯಾಕೃತಾಕಾಶ ಇಷ್ಟು ಪ್ರದೇಶದಲ್ಲಿ ಜೀವರು ಇದ್ದಾರೆ. ಲೋಕಶಬ್ದ ಲೋಕಪರವೂ ಪ್ರದೇಶಪರವೂನೂ. ಇವುಗಳಲ್ಲಿ ಸ್ಥೂಲದೇಹಗಳ ಐದಿ ಅದರ ನಾಶವುಳ್ಳವರು ಕ್ಷರಜೀವರು ಎಂತ ಸಾಂಕೇತ ಅಷ್ಟೇ ಹೊರತು, ಕ್ಷರಶಬ್ದ ಸ್ವರೂಪದಲ್ಲಿ ಸಮನ್ವಯವಲ್ಲ. ಇವರು ಬ್ರಹ್ಮಾದಿ ತೃಣಾಂತ ತ್ರಿವಿಧ ಜೀವರು. ಅಕ್ಷರ ಎಂದರೆ ನಾಶರಹಿತವು. ಸ್ಥೂಲದೇಹ ದಾವಾಗ್ಯೂ ಐದೋಣ ಇಲ್ಲದೆ, ಅದರ ನಾಶವೂ ಇಲ್ಲದೆ ಇಂಥಾವರು ರಮಾದೇವಿಯರು ಒಬ್ಬರೇ. ಇವರಲ್ಲಿ ಅಸ್ವತಂತ್ರಾಖ್ಯ ಜೀವರ ಲಕ್ಷಣ ಇರೋಣದರಿಂದ ಜೀವರು ಎಂತಲೂ, ಈಶನಂತೆ ಅನಾದ್ಯನಂತಕಾಲಕ್ಕೂ ಪಾಂಚಭೌತಿಕಸ್ಥೂಲದೇಹದಿಂದ ರಹಿತರಾದ್ದರಿಂದಲೂ, ಶಶ್ವದೇಕಪ್ರಕಾರವಾಗಿ ಈಶನೋಪಾದಿಯಲ್ಲಿ ಒಬ್ಬರೇ ಆದ್ದರಿಂದಲೂ, ಅಕ್ಷರರು

ಎಂತಲೂ, ಜೀವರು ಎಂತಲೂ, ಈಶರು ಎಂತಲೂ ಈ ಪ್ರಕಾರ ಅನ್ವರ್ಥ ನಾಮದಿಂದ ಕರೆಸುವರು. ಈ ಪ್ರಕಾರ ಕ್ಷರಾಕ್ಷರಭೇದಗಳಿಂದ ಎರಡು ವಿಧವಾಗಿ ಜೀವಸಮುದಾಯರು ನಿರಂತರದಲ್ಲೂ, ಅನಾದ್ಯನಂತಕಾಲಕ್ಕೂ ಇರೋವ ರಾಗಿದ್ದಾರೆ.

ಕ್ಷರಸಾಂಕೇತರಾದ ಸ್ಥೂಲದೇಹಗಳ ಧರಿಸಿ ನಾಶವುಳ್ಳವರಾದ ಜೀವರಲ್ಲಿ ಇರತಕ್ಕ ಭೇದಗಳು ದಾವವೆಂದರೆ ವಿವರ—ಸಾಧನ ಪೂರ್ತಿ ಆಗಿ, ಲಿಂಗಭಂಗ ಐದಿ, ತಮ್ಮ ತಮ್ಮ ಸ್ವರೂಪಗತಿ ಐದಿ ನ ಚ ಪುನರಾವರ್ತನರಾದ ಕ್ಷರ ಸಾಂಕೇತರಾದವರು ಇವರು ಒಂದು (ವಿಲಿಂಗ), ಸಲಿಂಗ ಎಂದರೆ, ಲಿಂಗಭಂಗ ಇಲ್ಲದೇ ಸ್ವರೂಪಕ್ಕೆ ಅನ್ಯವಾದ ಪ್ರಕೃತ್ಯಾತ್ಮಕ ಅನಾದಿಲಿಂಗದೇಹದಿಂದ ಸಹಿತ ರಾದವರು ಒಂದು, ಅಂತು ಎರಡು ಪ್ರಕಾರ. ಇದರಲ್ಲಿ ಸಲಿಂಗರಾದ ಕ್ಷರ ಜೀವರಲ್ಲಿ ಎರಡು ಪ್ರಕಾರ, ಬ್ರಹ್ಮಾಂಡದಲ್ಲಿ ಸೃಷ್ಟರಾಗಿ ಲಿಂಗಭಂಗಕ್ಕಾಗಿ ಸಾಧನ ಮಾಡತಾ ಇರತಕ್ಕ ಸಲಿಂಗರಾದ ಪರಿದೃಶ್ಯಮಾನರಾದ ಜೀವರು ಒಂದು, ಅಸೃಜ್ಯ ಎಂದರೆ, ಉತ್ತರೋತ್ತರ ಸೃಷ್ಟಿಗೆ ಬರತಕ್ಕವರು, ಇದುವರೆಗೆ ಸೃಷ್ಟಿಗೆ ಬಾರದವರು. ಇವರು ಅಸೃಜ್ಯಜೀವರಾಶಿಗಳು ಅನಂತರು ಒಂದು. ಇವರು ಅವ್ಯಾಕೃತಾಕಾಶದಲ್ಲಿ ಅನಂತರಾಗಿ ಇದ್ದಾರೆ. ಜೀವರು ಈ ಪ್ರಕಾರ ಭೇದದಿಂದ ಕರೆಸೋವಗತಾರೆ.

ಇನ್ನು ಜಡಗಳೊಳಗೆ ಪೃಥಿವ್ಯಾದಿ ಪಂಚಭೂತಗಳು, ಗುಣತ್ರಯಂಗಳು, ಕಾರ್ಯಭೂತಗಳು ಇವೇನು, ಇವಕ್ಕೆ ಉಪಾದಾನಕಾರಣಭೂತವಾದ ಮೂಲ ಜಡಪ್ರಕೃತಿ ಏನು, ಜಡರೂಪವಾದ ಓಂಕಾರ ಎಂಬ ಅಕ್ಷರ, ಇದರಿಂದ ಅಭಿವ್ಯಕ್ತವಾದ ಮಂತ್ರಗಳು, ಏಕಪಂಚಾಶದ್ವರ್ಣಗಳು, ವೇದಗಳು, ಅನಾದಿ ನಿತ್ಯವಾದ ಉಪಾದಾನಭೂತವಾದ ರಮಾಭಿಮನ್ಯವಾದ ಜಡಭೂತವಾದ ಮಹಾಕಾಲ, ತದುಪಾದೇಯ ಕ್ಷಣ–ಲವ ಕಾಲಗಳು, ಈ ಪ್ರಕಾರ ನಾಮದಿಂದ ಇರತಕ್ಕ ಜಡಗಳು, ಅಂತು ಜೀವರು ಎಂತಲೂ, ಜಡಗಳೆಂತಲೂ ಎರಡು ವಿಧ ವಾಯಿತು.

ಈ ಜೀವಜಡಗಳಿಗೆ ವಿಲಕ್ಷಣನಾದ ಸರ್ವೋತ್ತಮನಾದ ಪರಮಾತ್ಮ ಒಂದು. ಪೂರ್ವೋಕ್ತ ಮೂರರಿಂದ ಸಹಿತನಾಗಿ ಪಂಚವಿಧವಾದ ಭೇದವಾಗಿ ಇರುವ ವಿಶೇಷಗಳು, ಚರಾಚರ ಸರ್ವತ್ರದಲ್ಲೂ ಚಿಂತಿಸೋವನಾಗಬೇಕು. ಈ ಪಂಚಭೇದಗಳು ದಾವವೆಂದರೆ ಅದರನ್ನ ಮುಂದಿನ ಶ್ಲೋಕದಲ್ಲಿ ವಿವರ ಮಾಡಿ ಹೇಳತಾರೆ. ॥೨೩॥

## ಭಾವಪ್ರಕಾಶಿಕೆ

ಸರ್ವಲೋಕಗಳಲ್ಲೂ ಕ್ಷರಪುರುಷ ಅಕ್ಷರಪುರುಷರೆಂದು ಎರಡು ಪ್ರಕಾರ ಜೀವರುಂಟು. ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋಕ್ಷರ ಉಚ್ಯತೇ ಎಂಬ ಗೀತಾವಾಕ್ಯದಿಂದ ಕ್ಷರ ಅಂದರೆ ಬ್ರಹ್ಮದೇವರು ಮೊದಲಾದ ಸಕಲ ಪ್ರಾಣಿಗಳು ಎಂದರ್ಥ, ಕ್ಷರ ಶಬ್ದಕ್ಕೆ ನಾಶಉಳ್ಳವರು ಎಂದರ್ಥ. ಬ್ರಹ್ಮದೇವರು ಮೊದಲು ಎಲ್ಲಾ ಜೀವರಿಗೂ ಶರೀರನಾಶ ಉಂಟಾದುದರಿಂದ ಕ್ಷರರೆಂದು ಹೆಸರು. ನಿರ್ವಿಕಾರರಾದ ರಮಾದೇವಿಯರಿಗೆ ಅಕ್ಷರ ಎಂದು ಹೆಸರು. ಅಕ್ಷರಪುರುಷನೆಂದು ಸ್ತ್ರೀಯಾದ ರಮಾದೇವಿಗೆ ಪುರುಷವಾಚಕವು ಹೇಗೆಂದರೆ ಪುರುಷರಂತೆ ಬ್ರಹ್ಮಾದಿಗಳನ್ನು ಸೃಷ್ಟಿಮಾಡುವ ಶಕ್ತಿ ಉಳ್ಳವರಾದುದರಿಂದ ಪುರುಷ ಶಬ್ದವು ರಮಾದೇವಿಯರಿಗುಂಟು. ಇವರಿಗೆ ಯಾವಾಗಲೂ ಶರೀರ ನಾಶವಿಲ್ಲದ ಕಾರಣ ಅಕ್ಷರ ಎಂದು ಹೆಸರಾಯಿತು. ಹೀಗೆ ಸರ್ವ ಪ್ರಪಂಚದಲ್ಲೂ ಕ್ಷರಾಕ್ಷರವೆಂಬ ಎರಡು ವಿಧ ಪುರುಷರುಂಟು. ಇರೆರಡರಲ್ಲಿ ಕ್ಷರಪುರುಷರಾದ ಬ್ರಹ್ಮಾದಿ ಚೇತನರ ಗಣದಲ್ಲಿ ವಿಲಿಂಗರೆಂತಲೂ ಸಲಿಂಗರೆಂತಲೂ ಎರಡು ಪ್ರಕಾರ. ಸಾಧನ ಪೂರ್ತಿಯಾದ ಮೇಲೆ ಬ್ರಹ್ಮಣಾಸಹ ವಿರಜಾನದಿ ಸ್ನಾನ ಮಾಡಿ, ಲಿಂಗಶರೀರ ಭಂಗವಾದಮೇಲೆ ಮುಕ್ತಿಯನ್ನು ಹೊಂದುವ ಮುಕ್ತರಾದ ಬ್ರಹ್ಮಾದಿ ಸಕಲ ಚೇತನರೂ ಮತ್ತು ತಮೋಯೋಗ್ಯರಾದ ಕಲಿ ಮೊದಲಾದವರು ವಾಯುದೇವರ ಗದಾಪ್ರಹಾರದಿಂದ ಲಿಂಗಶರೀರ ಭಂಗವಾಗಿ ನಿತ್ಯದುಃಖಮಯವಾದ ಅಂಧಂತಮಸ್ಸನ್ನು ಹೊಂದುವರು ವಿಲಿಂಗರು. ಸಲಿಂಗರೆಂದರೆ ಲಿಂಗದೇಹದಿಂದ ಸಹಿತರಾಗಿ ಇರುವರು. ಈ ಸಲಿಂಗರಲ್ಲಿ ಎರಡು ಪ್ರಕಾರ—ಸೃಜ್ಯರು ಅಸೃಜ್ಯರು. ಸೃಜ್ಯರೆಂದರೆ ಈ ಬ್ರಹ್ಮಕಲ್ಪದಲ್ಲಿ ಸೃಷ್ಟಿಗೆ ಬಂದವರೆಂದರ್ಥ. ಅಸೃಜ್ಯರೆಂದರೆ ಇನ್ನೂ ಸೃಷ್ಟಿಗೆ ಬಾರದವರು.

ಹೀಗೆ ಚೇತನರಲ್ಲಿ ಭೇದಗಳು ಏರ್ಪಟ್ಟಿರುವುವು. ಜಡದಲ್ಲಿ ಜಡಪ್ರಕೃತಿ ಓಂ ಎಂಬ ಪ್ರಣವಾಕ್ಷರ, ಉಪಲಕ್ಷಣಯಾ ವೇದಗಳು ದ್ವಿಪರಾರ್ಧವಾದ ಮಹಾ ಕಾಲ, ಪರಮಾಣು ಮುಂತಾದ ಅಣುಕಾಲ ಇವುಗಳೆಲ್ಲವು ಜಡವೆನಿಸುವುವು. ಪರಮಾತ್ಮನನ್ನು ಜಡಚೇತನಗಳಲ್ಲಿ ಪಂಚಭೇದಗಳನ್ನು ತಿಳಿದು ಚಿಂತಿಸ ಬೇಕೆಂಬ ತಾತ್ಪರ್ಯ. ॥೨೩॥

### ಭಾವದರ್ಪಣ

ಎರಡು ಇತಿ, ವಿಲಿಂಗ–ಮುಕ್ತರು. ಸಲಿಂಗ–ಲಿಂಗದೇಹದಿಂದ ಸಹಿತರು, ಅಮುಕ್ತರು. ಸೃಜ್ಯ–ಸೃಷ್ಟಿಗೆ ಬಂದವರು. ಅಸೃಜ್ಯ–ಸೃಷ್ಟಿಗೆ ಬರದೆ ಇದ್ದವರು ಎಂಬರ್ಥ. ದ್ವೇಧಾ–ಎರಡು ಪ್ರಕಾರ. ॥೨೩॥

### ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಎರಡು ಇತಿ ॥ ದ್ವಾವಿಮೌ ಇತ್ಯುಕ್ತೇಃ ॥ ಪ್ರಣವಾಂತಂ ಅಕ್ಷರ ಇತಿ ॥೨೩॥

### ಕನ್ನಡಾರ್ಥ

ದ್ವಾವಿಮೌ ಎಂಬ ಗೀತಾವಾಕ್ಯದಂತೆ ಕ್ಷರಾಕ್ಷರಗಳೆಂದು ಎರಡು ವಿಧ. ಪ್ರಣವಾಕ್ಷರ ಎಂದು ಜೋಡಿಸಬೇಕು. ಕ್ಷರ–ಅಕ್ಷರ, ಮುಕ್ತ–ಅಮುಕ್ತ, ಸೃಜ್ಯ–ಅಸೃಜ್ಯ, ಜಡಪ್ರಕೃತಿ. ವೇದ, ಅಣುಮಹತ್ಕಾಲಗಳು ; ಹೀಗೆ ಪ್ರಭೇದ ಗಳನ್ನು ತಿಳಿದು ಹರಿಯನ್ನು ಸರ್ವತ್ರ ಸ್ಮರಿಸು ಎಂದು ತಾತ್ಪರ್ಯ ॥೨೩॥

### ಶ್ರೀಗುರುಹೃದಯಪ್ರಕಾಶಿಕೆ

ಜೀವಜಡ ಪರಮಾತ್ಮಸ್ವರೂಪ ವಿವರಪೂರ್ವಕ ಪಂಚಭೇದಜ್ಞಾನ ವನ್ನು ಮೂರುಪದ್ಯದಿಂದ ತಿಳಿಸುತ್ತಾರೆ, ಎರಡು ಎಂದು ಆರಂಭಿಸಿ. ಲೋಕ ವೆಂಬ ಸರ್ವತ್ರರಲ್ಲಿ ಕ್ಷರ ಅಕ್ಷರ ಎಂದು ಎರಡು ವಿಧ ಜೀವರು ಸದಾ

ಇರುವರು, ಕೂಟಸ್ಥೋಽಕ್ಷರ ಉಚ್ಯತೇ ಎಂಬ ಗೀತಾ ರೀತ್ಯಾ, ಅಕ್ಷರ ಎಂದು ಪ್ರಾಕೃತದೇಹರಹಿತಳಾದ್ದರಿಂದ, ರಮಾದೇವಿ ಹೇಳಿಸಿಕೊಳ್ಳುವಳು. ಶರೀರ ನಾಶವುಳ್ಳವರಾದ್ದರಿಂದ ಬ್ರಹ್ಮಾದಿ ಜೀವರೆಲ್ಲಾ ಕ್ಷರರೆಂದು ಕರೆಸುವರು. ಆ ಕ್ಷರಜೀವರಲ್ಲಿ ಮುಕ್ತರಾದವರು, ವಿಲಿಂಗರೆಂತಲೂ, ಸೂಕ್ಷ್ಮಶರೀರಬದ್ಧರು ಸಲಿಂಗರೆಂತಲೂ ಎರಡು ವಿಧ. ಆ ಸಲಿಂಗರಲ್ಲಿ ಈ ಕಲ್ಪದಲ್ಲಿ ಸೃಷ್ಟರಾದವರು ಸೃಜ್ಯರೆಂತಲೂ, ಮುಂದಣ ಬ್ರಹ್ಮಕಲ್ಪಾದಿಗಳಲ್ಲಿ ಸೃಷ್ಟಿಯಾಗತಕ್ಕವರು ಅಸೃಜ್ಯರೆಂತಲೂ ಎರಡು ವಿಧ. ಓಂಕಾರವೆಂಬ ಪ್ರಣವ ಮೊದಲಾದ ಅಕ್ಷರಗಳೂ, ಪಂಚಭೂತಕ್ಕೆ ಕಾರಣವಾದ ತ್ರಿಗುಣಾತ್ಮಕ ಜಡಪ್ರಕೃತಿ, ಕಾಲ, ಮಹತ್ತು, ಅಣು ಮೊದಲಾದ ಜಡ ವಿಕಾರವಾಗುವುದರಿಂದ ಕ್ಷರವೆಂದೂ ಕರೆಸುವುದು. ಸ್ವತಂತ್ರವಸ್ತು ಶ್ರೀಹರಿ ಕ್ಷರಾಕ್ಷರಪುರುಷೋತ್ತಮ ಎನಿಸುವನು. ಈ ಜಡ, ಚೇತನ, ಪರಮಚೇತನಗಳಲ್ಲಿ ಪಂಚವಿಧ ಭೇದ ಸ್ಮರಿಸುವುದು.

**ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ ।**
**ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥**
**ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।**
**ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯಈಶ್ವರಃ ॥**

## ಸರ್ವವ್ಯಾಖ್ಯಾನಸಾರಸಂಗ್ರಹ

ಈಶ–ಜೀವವರ್ಗ–ಜಡವರ್ಗ ಇವುಗಳಲ್ಲಿರುವ ಅನಾದಿನಿತ್ಯವಾದ ಪಂಚ ಭೇದ ವಿಷಯಂಗಳನ್ನು ತಿಳಿಸುತ್ತಾರೆ.

ಚರಾಚರಾತ್ಮಕವಾದ ಈ ಬ್ರಹ್ಮಾಂಡಗತ ಚತುರ್ದಶಭುವನಗಳಲ್ಲಿ ಜೀವ ರಾಶಿಗಳು ಎರಡು ಪ್ರಕಾರವಾಗಿ ಇವೆ :

ಕ್ಷರಜೀವರು ಮತ್ತು ಅಕ್ಷರ ಜೀವರು.

ಬ್ರಹ್ಮಾದಿ ತೃಣಜೀವಪರ್ಯಂತ ಸಮಸ್ತ ತ್ರಿವಿಧಜೀವರೂ ದೇಹನಾಶ ವುಳ್ಳವರು. ದೇಹಗಳು ನಾಲ್ಕು ಪ್ರಕಾರ : ಸ್ವರೂಪದೇಹ—ಇದು ಅಪ್ರಾಕೃತ, ಅನಾದಿನಿತ್ಯ. ಸ್ವರೂಪದೇಹಕ್ಕೆ ಆವರಣರೂಪದಲ್ಲಿರುವ ಲಿಂಗ ದೇಹ. ಇದು ನಾಶಹೊಂದುವುದು. ಅನಿರುದ್ಧ ಶರೀರ–ಜೀವನ್ಮುಕ್ತಸ್ಥಿತಿಯಲ್ಲಿ ಇದರ ನಾಶ. ಪಾಂಚಭೌತಿಕ ಸ್ಥೂಲಶರೀರ. ಇದು ಮರಣದಿಂದ ನಾಶ ಹೊಂದುವುದು. ಹೀಗೆ ಬ್ರಹ್ಮಾದಿ ಸಮಸ್ತ ಜೀವರಿಗೂ ಲಿಂಗ–ಅನಿರುದ್ಧ– ಸ್ಥೂಲ ದೇಹಗಳ ನಾಶ ಉಂಟು. ಕ್ಷರ ಎಂದರೆ, ನಾಶ ಎಂದರ್ಥ. ಆದ್ದರಿಂದ ಈ ವರ್ಗಕ್ಕೆ ಕ್ಷರವರ್ಗವೆಂದು ಹೆಸರು.

ಯಾವ ವಿಧವಾದ ನಾಶವೂ ಇಲ್ಲದ ಶ್ರೀಲಕ್ಷ್ಮೀದೇವಿಯು ಅಕ್ಷರಳು. ಶ್ರೀಹರಿಗೆ ನಿತ್ಯಾವಿಯೋಗಿನಿಯಾಗಿ, ಶ್ರೀಹರಿಯ ಸಮವ್ಯಾಪ್ತಿಯಾಗಿರುವಳು.

ಪುನಃ ಕ್ಷರ ಜೀವರಲ್ಲಿ ಎರಡು ಪ್ರಕಾರ :

ವಿಲಿಂಗಜೀವರು ಮತ್ತು ಸಲಿಂಗಜೀವರು.

ಸಾಧನೆ ಪೂರ್ತಿಯಾಗಿ, ಲಿಂಗಭಂಗಹೊಂದಿದ ಮುಕ್ತ ಜೀವರೆಲ್ಲಾ ವಿಲಿಂಗರು. ಅವರು ಸ್ವರೂಪದೇಹದಿಂದ ವಿರಾಜಮಾನರಾಗಿರುತ್ತಾರೆ. ಮುಕ್ತಿಯಲ್ಲಿ ಸ್ವರೂಪದೇಹೇಂದ್ರಿಯಗಳಿಂದಲೇ ಬಿಂಬಕ್ರಿಯಾದ್ವಾರಾ ಮುಕ್ತರ ವ್ಯಾಪಾರಗಳು.

ಪ್ರಸಕ್ತ ಬ್ರಹ್ಮಕಲ್ಪ ಅಥವಾ ಕಲ್ಪಗಳಲ್ಲಿ ಮುಕ್ತರಾಗುವ ಜೀವರಗಣಕ್ಕೆ ಸಲಿಂಗವೆಂದು ಹೆಸರು. ಸಾಧನೆಪೂರ್ತಿಯಾಗದೆ, ಸಾಧನಮಾರ್ಗದಲ್ಲಿರುವ ಜೀವರೆಲ್ಲರೂ ಸಲಿಂಗರು.

ಇನ್ನು ಸಲಿಂಗಜೀವರಲ್ಲಿ ಎರಡು ವಿಧ :

ಸೃಜ್ಯರು ಮತ್ತು ಅಸೃಜ್ಯರು.

ಭಗವದಿಚ್ಛೆಯಿಂದ ಸೃಷ್ಟಿಗೆ ತರತಲ್ಪಟ್ಟ ಜೀವರುಗಳೇ ಸೃಜ್ಯರೆನಿಸುವರು.

ಇನ್ನೂ ಸೃಷ್ಟಿಗೆ ಬಾರದ ಅನಂತಾನಂತ ಜೀವರು. ಪ್ರಾಜ್ಞನಾಮಕ ಪರಮಾತ್ಮನಿಂದ ಆಲಿಂಗಿತರಾಗಿ, ಕಾರ್ಯಾಭಿವ್ಯಕ್ತಿರಹಿತರಾಗಿರುವರು.

ಇನ್ನು ಜಡವಸ್ತುಗಳ ವಿಂಗಡಣೆ. ಚೇತನಾತ್ಮಕವಾದ ಯಾವ ಪ್ರವೃತ್ತಿಯೂ ಇಲ್ಲದ ವಸ್ತುಗಳು ಜಡಗಳು. ಇವುಗಳಲ್ಲಿ—

ತ್ರಿಗುಣಾತ್ಮಕವಾದ ಪ್ರಕೃತಿಯು ಜಡವು. ಇದರ ಅತ್ಯಂತ ಸೂಕ್ಷ್ಮ ರೂಪವೇ ಮೂಲಪ್ರಕೃತಿಯು. ಇದು ಜಗತ್ತಿನ ಸೃಷ್ಟಿಗೆ ಉಪಾದಾನ ಕಾರಣವು.

ಓಂಕಾರವೇ ಪ್ರಣವವು. ಪ್ರಣವಪ್ರತಿಪಾದ್ಯನಿಂದ ಪ್ರಣವಮಂತ್ರದ ಅಭಿವ್ಯಕ್ತಿ.

ಓಂಕಾರದಿಂದ ಅಭಿವ್ಯಕ್ತವಾದ ಮಂತ್ರಗಳು, ವೇದಗಳು, ಅಕಾರಾದಿ ಕ್ಷಕಾರಪರ್ಯಂತ ವರ್ಣಗಳು ಇವು ಜಡಗಳು. ಮಂತ್ರಪ್ರತಿಪಾದ್ಯನಾದ, ವೇದಪ್ರತಿಪಾದ್ಯನಾದ, ವರ್ಣಪ್ರತಿಪಾದ್ಯನಾದ ಶ್ರೀಪರಮಾತ್ಮನ ಸನ್ನಿಧಾನ ವಿಶೇಷದಿಂದ ಈ ಅಕ್ಷರಗಳ ಅಭಿವ್ಯಂಜಕಶಕ್ತಿಯು ಅಭಿವ್ಯಕ್ತಿಯಾಗುವುದು.

ಕಾಲವು ಪ್ರವಾಹತೋನಿತ್ಯವಾದದ್ದು, ಸ್ವರೂಪದಲ್ಲಿ ಜಡವು. ಕಾಲಾಂತರ್ಗತನಾದ ಶ್ರೀಪರಮಾತ್ಮನ ಸನ್ನಿಧಾನದಿಂದ ಕಾಲದ ಅಭಿವ್ಯಕ್ತಿ. ಕಾಲದಲ್ಲಿ ಮಹಾಕಾಲ, ಅಣುಕಾಲ ಎಂದು ಎರಡು. ಬ್ರಹ್ಮಕಲ್ಪ: ಮಹಾಯುಗ. ಮನ್ವಂತರಾದಿಗಳು ಮಹಾಕಾಲಗಳು. ಪ್ರಳಯಕಾಲವೂ ಮಹಾಕಾಲವೇ. ಆದರೆ ಇಂತಹ ಮಹಾಕಾಲಗಳು ಮಹಾಮಹಿಮಸಂಪನ್ನನಾದ ಮಾಧವನಿಗೆ ಎವೆ ಹಾಕುವ ಕಾಲವೆಂದೆನಿಸಿವೆ.

ಸಂವತ್ಸರ–ಅಯನ–ಋತು–ಮಾಸ–ಪಕ್ಷ–ದಿನ ಇವುಗಳು ಕಾಲಾಂಶಗಳು. ಅವುಗಳಿಗಿಂತ ಅಲ್ಪವಾದ ಘಂಟೆ, ನಿಮಿಷ, ಕ್ಷಣ ಇತ್ಯಾದಿ ಅಣು

ಕಾಲಗಳೆನಿಸುವುವು. ಕಾಲನಾಮಕನಾಗಿ, ಕಾಲಶಬ್ದವಾಚ್ಯನಾಗಿ, ಕಾಲರೂಪನಾಗಿ ಶ್ರೀಪರಮಾತ್ಮನು ಪ್ರವಾಹತೋನಿತ್ಯವಾದ ಕಾಲದಲ್ಲಿ ಅಂತರ್ಗತನಾಗಿದ್ದು, ಕಾಲಕ್ಕನುಗುಣವಾದ ಕ್ರಿಯೆಗಳಿಗೆ ಕಾರಣನಾಗಿದ್ದಾನೆ.

ಇಂತು ಸರ್ವಸ್ವತಂತ್ರನಾದ ಈಶ. ಅವನ ಅಧೀನರಾದ ಜೀವವರ್ಗ (ರಮಾಸಹಿತ), ಜಡವರ್ಗ ಇವುಗಳಲ್ಲಿ ಈಶ ಜೀವ ಭೇದ, ಈಶ ಜಡ ಭೇದ, ಜೀವ–ಜೀವ ಭೇದ, ಜಡ–ಜಡ ಭೇದ, ಮತ್ತು ಜೀವ–ಜಡಭೇದ ಎಂಬ ಪಂಚಭೇದಗಳನ್ನು ಸರ್ವತ್ರ, ಸರ್ವಾವಸ್ಥೆಗಳಲ್ಲಿ ಜ್ಞಾನಪೂರ್ವಕ ತಿಳಿದು, ಜೀವ ಮತ್ತು ಜಡರಿಂದ ಈಶನು ಅತ್ಯಂತ ವಿಲಕ್ಷಣನಾಗಿದ್ದಾನೆಂದು ನಿರುತ ಸ್ಮರಿಸುತ್ತಿರು ಎಂದು ತಿಳಿಸುತ್ತಾರೆ ॥೨೩॥

## ಪದ್ಯ—೨೪

**ಮೂಲ :–**

**ಜೀವ ಜೀವರ ಭೇದ ಜಡ ಜಡ ।**
**ಜೀವ ಜಡಗಳ ಭೇದ ಪರಮನು ।**
**ಜೀವ ಜಡ ಸುವಿಲಕ್ಷಣನು ಎಂದರಿತು ನಿತ್ಯದಲಿ ॥**
**ಈ ವಿರಿಂಚಾಂಡದಲಿ ಎಲ್ಲಾ ।**
**ಠಾವಿನಲಿ ತಿಳಿದೈದು ಭೇದ ಕ ।**
**ಳೇವರದೊಳರಿತಚ್ಯುತನ ಪದ ಐದು ಶೀಘ್ರದಲಿ ॥೨೪॥**

**ಅವತರಣಿಕೆ**

ಹಿಂದಿನ ಪದ್ಯದಲ್ಲಿ ಜೀವರಾಶಿಗಳು ಮತ್ತು ಜಡವಸ್ತುಗಳಲ್ಲಿರುವ ವಿವಿಧ ಪ್ರಭೇದಗಳನ್ನು ತಿಳಿಸಿ, ಪ್ರಸಕ್ತ ಪದ್ಯದಿಂದ ಪಂಚಭೇದಗಳ ವಿಷಯವನ್ನು ವಿವರಿಸುತ್ತಾರೆ.

**ಪ್ರತಿಪದಾರ್ಥ**

**ಜೀವ ಜೀವರಭೇದ**–ಒಂದು ಜೀವಕ್ಕೂ ಇನ್ನೊಂದು ಜೀವಕ್ಕೂ ಇರುವ ಪರಸ್ಪರ ತಾರತಮ್ಯ. **ಜಡ ಜಡಭೇದ**–ಜಡವಸ್ತುಗಳಲ್ಲಿರುವ ಪರಸ್ಪರ ಭೇದ. **ಜೀವ ಜಡಗಳ ಭೇದ**–ಚೇತನಭೂತರಾದ ಜೀವರಿಗೂ ಸ್ವತಃ ಏವ ಪ್ರವೃತ್ತಿ ರಹಿತವಾದ ಜಡಗಳಿಗೂ ಇರುವ ಪರಸ್ಪರ ವೈಲಕ್ಷಣ್ಯ. **ಪರಮನು**–ಸರ್ವೋತ್ತಮನಾದ ಶ್ರೀಪರಮಾತ್ಮನು, **ಜೀವ**–ಸಮಸ್ತ ಜೀವವರ್ಗಗಳಿಂದಲೂ, **ಜಡ**–ಸಕಲ ಜಡವಸ್ತುಗಳಿಂದಲೂ, **ಸುವಿಲಕ್ಷಣನು**–ಅತ್ಯಂತ ಭಿನ್ನನು (ಸಮೀಚೀನವಾದ ವಿಲಕ್ಷಣಸ್ವರೂಪನು) **ಎಂದರಿತು**–ಎಂಬ ತತ್ತ್ವವನ್ನು ಗುರೂಪದೇಶದ್ವಾರಾ, ಶಾಸ್ತ್ರಯೋನಿತ್ವಾತ್ ತಿಳಿದು, **ನಿತ್ಯದಲಿ**–ಪ್ರತಿದಿನದಲ್ಲೂ ಈ ಪಂಚಭೇದತತ್ತ್ವವನ್ನು ಜ್ಞಾನಾನುಭವಕ್ಕೆ ತಂದುಕೊಳ್ಳುತ್ತಾ, **ಈ ವಿರಿಂಚಾಂಡದಲಿ**–ಈ ಬ್ರಹ್ಮಾಂಡಗತ, **ಎಲ್ಲಾ ಠಾವಿನಲಿ**–ಸರ್ವಸ್ಥಳಗಳಲ್ಲಿ (ಸರ್ವಾಧಿಷ್ಠಾನಗಳಲ್ಲಿ), **ಐದು ಭೇದ**–ಪೂರ್ವೋಕ್ತ ಪಂಚಭೇದಗಳನ್ನು, **ಅರಿತು**–ಚೆನ್ನಾಗಿ ತಿಳಿದವನಾಗಿ, **ಕಳೇವರದೊಳು**–ಚೇತನಾಚೇತನ ಸ್ಥೂಲ ದೇಹಗಳಲ್ಲಿ,(ಅವುಗಳಲ್ಲಿ ಪರಸ್ಪರ ಭೇದ),**ಅಚ್ಯುತನ**–ನಾಶರಹಿತನಾದ ಶ್ರೀಪರಮಾತ್ಮನ, **ಪದ**–ಚರಣಕಮಲಗಳನ್ನು, ಅಂದರೆ ಶಾಶ್ವತವಾದ **ಮುಕ್ತಿ** ಧಾಮವನ್ನು, **ಶೀಘ್ರದಲಿ ಐದು**–ಜಾಗ್ರತೆಯಾಗಿ ಸೇರುವವನಾಗು. ॥೨೪॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಈ ಶ್ಲೋಕದಲ್ಲಿ ಪಂಚಭೇದ ಹೇಳುತ್ತಾರೆ.

ಜೀವರಲ್ಲಿ ಚೇತನಜೀವರೆಂತಲೂ, ಜಡಜೀವರೆಂತಲೂ ಎರಡು ಪ್ರಕಾರ, ಚೇತನಜೀವರಲ್ಲಿ ಪರಸ್ಪರ ಭೇದ. ಜಡಜೀವರಾದ ವೃಕ್ಷಜೀವರಲ್ಲಿ ಪರಸ್ಪರ ಭೇದ, ಚೇತನ ಜೀವರಾದ ಮನುಷ್ಯರು, ಪಶುಗಳು, ಪಕ್ಷಿಗಳು ಮೊದಲಾದವರಲ್ಲಿ ಅವಾಂತರ ಭೇದ, ಜಡಜೀವರಾದ ವೃಕ್ಷ, ಗುಲ್ಮ ಇದರಲ್ಲಿ ಅವಾಂತರ ಭೇದ. ಜಡಜೀವರಾದ

ಚೂತವೃಕ್ಷ ಜೀವಗೂ, ಪನಸವೃಕ್ಷಜೀವಗೂ ಪರಸ್ಪರ ಭೇದ. ಚೇತನರಾದ ಮಾನುಷಾದಿ ಜೀವರಿಗೂ, ಜಡಜೀವರಾದ ಚೂತ ಫನಸಾದಿ ವೃಕ್ಷಗಳ ಜೀವರಿಗೂ ಭೇದ. ಶುದ್ಧಜಡಗಳಿಗೂ, ಈ ಜೀವರುಗಳಿಗೂ ಭೇದ. ಶ್ರೀಪರಮಾತ್ಮನು ಚೇತನಜೀವರಿಂದ ಭೇದ ಎಂದರೆ ಚೇತನಜೀವರಿಗೂ ಪರಮಾತ್ಮಗೂ ಭೇದ. ಜಡಜೀವರಿಗೂ ಪರಮಾತ್ಮಗೂ ಭೇದ. ಜೀವರ ಕಾರಣದಿಂದ ಮೂರು ಭೇದ. ಪರಮಾತ್ಮನ ಕಾರಣದಿಂದ ಎರಡು ಭೇದ. ಅಂತು ಐದು ಭೇದ. ಪರಮಾತ್ಮ ಚರಾಚರ ಸರ್ವರಿಂದ ಸಮೀಚೀನವಾದ ವಿಲಕ್ಷಣ ಸ್ವರೂಪನು ಎಂತ ತಿಳಿದವನಾಗಿ, ಪ್ರತಿದಿನವಲ್ಲೂ ಈ ಬ್ರಹ್ಮಾಂಡ ದಲ್ಲಿ ಸರ್ವಸ್ಥಳಗಳಲ್ಲಿ ಪೂರ್ವೋಕ್ತಪ್ರಕಾರ ಸ್ವರೂಪವನ್ನು ಹಿಡಿದು ಐದು ಭೇದ ಅಂತ ಅರಿಯೋವನಾಗಿ—ಈ ಸ್ವರೂಪ ಹಿಡಿದು ಹೇಳಿದ ಪಂಚಭೇದ ಗಳು ವರ್ತಮಾನದಲ್ಲಿ ಪ್ರತ್ಯಕ್ಷವಲ್ಲ, ಮೋಕ್ಷದಲ್ಲಿ ಪ್ರತ್ಯಕ್ಷವು—ಸ್ವರೂಪವನ್ನು ಅನುಸರಿಸಿದ ಪಂಚಭೇದ ಸತ್ಯ. ಪ್ರಕೃತ ಪಂಚಭೇದ ತಿಳಿಯಬೇಕಾದರೆ, ಪ್ರಾಣಿಗಳು ಧರಿಸಿದ ಚೇತನಾಚೇತನ ಸ್ಥೂಲದೇಹಗಳು ಪರಸ್ಪರ ಅನೇಕ ಭೇದಗಳಿಂದ ಸಹಿತವಾಗಿ ಅವೆ. ಈ ದೇಹಗಳು ಯಾವತ್ತೂ ಸ್ವರೂಪ ವನ್ನು ಅನುಸರಿಸಿ ಆಕಾರಗಳು ನಿರ್ಮಿತವಾದ್ದರಿಂದ ಸ್ಥೂಲದೇಹಗಳ ಅನುಸರಿಸಿ, ಪಂಚಭೇದಗಳ ತಿಳಿಯಬೇಕು. ಇಂಥಾ ಸ್ಥೂಲದೇಹದೊಳು ವಿದ್ಯಮಾನನಾದ ಪರಮಾತ್ಮನ್ನ ಧ್ಯಾನೋಪಾಸನಾದಿಗಳಿಂದ ಅರಿತು, ಅಪರೋಕ್ಷೀಕರಿಸಿಕೊಂಡು, ಅತಿ ಜಾಗ್ರತೆಯಿಂದ ವೈಕುಂಠಗತ ನಾಶರಹಿತನಾದ ಪರಮಾತ್ಮನ ಪಾದವನ್ನು ಸೇರೋವನಾಗು.

**ವಿಶೇಷಾರ್ಥ :–** ಪ್ರಕಾರಾಂತರ (ಗೀತಾತಾತ್ಪರ್ಯ ಅರ್ಥ)

ಜೀವ ಜೀವರ ಭೇದ ಎಂದರೆ, ಸುಖದುಃಖಾದ್ಯನುಭವ ಪ್ರತ್ಯೇಕ ಇರುವದ್ದರಿಂದ ಜೀವರು ಪರಪ್ಪರ ಭೇದವುಳ್ಳವರು.

ಜಡ ಜಡ ಭೇದ, ಎಂದರೆ, ನೀರು ಬೆಂಕಿ ಮೊದಲಾದ್ದರ ಗುಣ ಬ್ಯಾರೆ ಬ್ಯಾರೆ ಆದ್ದರಿಂದ ಜಡಗಳು ಪರಸ್ಪರ ಭೇದವುಳ್ಳವು,

ಜೀವ ಜಡಗಳ ಭೇದ ಎಂದರೆ, ಜಡವಸ್ತುವಿಗೆ ಜ್ಞಾನವಿಲ್ಲ, ಜೀವರಿಗೆ ಜ್ಞಾನವಿದೆ. ಆದ್ದರಿಂದ ಜೀವ ಜಡಕ್ಕೆ ಭೇದ.

ಜೀವ ಪರಮಾತ್ಮರ ಭೇದ ಎಂದರೆ, ಜೀವರು ಪರಾಧೀನಜ್ಞಾನಿಗಳು. ಪರಮಾತ್ಮ ಸ್ವತಂತ್ರಜ್ಞಾನಿ, ಸರ್ವಜ್ಞನಾದ್ದರಿಂದ ಜೀವ ಪರಮಾತ್ಮರ ಭೇದ.

ಜಡ ಪರಮಾತ್ಮರಭೇದ ಎಂದರೆ, ಜ್ಞಾನವಿಲ್ಲದೇ ಜಡವೇ ದೇವರಲ್ಲವಾದ್ದರಿಂದ ಜಡ ಪರಮಾತ್ಮರ ಭೇದ. ॥೨೪॥

## ಭಾವಪ್ರಕಾಶಿಕೆ

ಈ ಪಂಚಭೇದ ಲಕ್ಷಣವನ್ನು ೭ನೆಯ ಸಂಧಿ ೧೨ನೆಯ ಪದ್ಯದಲ್ಲಿ ಹೇಳಿರುವರು. ಅದರ ವ್ಯಾಖ್ಯಾನದಲ್ಲಿ ಈ ೫ ಭೇದ ಲಕ್ಷಣಗಳನ್ನು ಪ್ರಮಾಣ ಸಹಿತ ವಿಸ್ತಾರ ಮಾಡಿರುತ್ತೆ. ಹೇಳಿದುದನ್ನೇ ದಾಸರಾಯರು ಮತ್ತೇಕೆ ಹೇಳಿರುವರು ? ಇದರಿಂದ ಶಾಸ್ತ್ರಗಳಲ್ಲಿ ದೋಷವೆಂದು ತೆಗೆದಿರುವ ಪುನರುಕ್ತಿ ದೋಷವು ಬರುವುದೆಂದರೆ ಸಾಮಾನ್ಯವಾಗಿ ಶ್ಲೋಕಾದಿಗಳಲ್ಲಿ ಅಥವಾ ವಾಕ್ಯಗಳಲ್ಲಿ ಹೇಳಿದ ಮಾತನ್ನು ಮತ್ತೂ ಹೇಳಿದರೆ ಪುನರುಕ್ತಿಯೆಂಬ ದೋಷ ಬರುವುದು. ಉಪದೇಶರೂಪವಾಗಿ ಬೋಧಿಸುವ ಗ್ರಂಥಗಳಲ್ಲಿ ಜನರಿಗೆ ದೃಢ ಹುಟ್ಟುವುದಕ್ಕಾಗಿ ಪುನಃಪುನಃ ಹೇಳುವುದು ದಾರಢ್ಯಪಡಿಸುವುದಕ್ಕಾಗಿಯೇ ಹೊರತು ದೋಷವಾಗಲಾರದು. ಭಾಗವತ ಚತುರ್ಥಸ್ಕಂಧ ಮೊದಲನೆಯ ಅಧ್ಯಾಯ ಮೊದಲನೆಯ ಶ್ಲೋಕ ಪುನಃಪುನಃ "ಕಥಾಂ ಭೂಯಃ ಅಭ್ಯಾಸಾದುತ್ತಮಂ ಫಲಂ" ಜ್ಞಾನಿಗಳು ಒಂದೊಂದು ಕಥೆಯನ್ನು ಮತ್ತು ಮತ್ತು ಹೇಳಿರುವರು. ಈ ಪ್ರಸಕ್ತಿ ಬರಲು ಕಾರಣವೇನೆಂದರೆ, ತೃತೀಯಸ್ಕಂಧದಲ್ಲಿ ಸ್ವಾಯಂಭುವ ಮನುವಿಗೆ ಶತರೂಪೆಯೆಂಬ ಹೆಂಡತಿಯಲ್ಲಿ ಆಕೂತಿ, ದೇವಹೂತಿ, ಪ್ರಸೂತಿಯೆಂಬ ಮೂರುಮಂದಿ ಹೆಣ್ಣುಮಕ್ಕಳು ಹುಟ್ಟಿದರೆಂದು ಹೇಳಿದ್ದರು. ಮತ್ತೂ ಚತುರ್ಥಸ್ಕಂಧಾರಂಭದಲ್ಲಿ ಮನೋಸ್ತು ಶತರೂಪಾಯಾಂ ತಿಸ್ರಃ ಕನ್ಯಾಶ್ಚ ಜಜ್ಞಿರೇ ॥ ಆಕೂತಿರ್ದೇವಹೂತಿಶ್ಚ ಪ್ರಸೂತಿರಿತಿ ವಿಶ್ರುತಾಃ ॥೧॥ ಎಂದು ಅದೇ ಅರ್ಥವನ್ನೇ ಹೇಳಿರುವರು. ಈ ಸ್ಥಳ

ದಲ್ಲಿ ಪುನರುಕ್ತಿದೋಷ ಪರಿಹಾರಕ್ಕೋಸ್ಕರ ಆ ತಾತ್ಪರ್ಯಶ್ಲೋಕವು ಹೊರಟಿತು. ಅದರಂತೆ ದಾಸರಾಯರು ಈವರೆಗೂ ಅನೇಕ ಸ್ಥಳಗಳಲ್ಲೂ ಇನ್ನು ಮುಂದೆ ಅನೇಕ ಸ್ಥಳಗಳಲ್ಲೂ ಹೇಳಿದುದನ್ನು ಮತ್ತೂ ಮತ್ತೂ ಹೇಳಿರು ವರು. ಇದರ ಉದ್ದೇಶವೇನೆಂದರೆ, ಹೇಗೆ ಓಂ ರಾಂ ರಾಮಾಯ ನಮಃ ಇತ್ಯಾದಿ ಮಂತ್ರಗಳನ್ನು ಒಂದೇಸಲ ಹೇಳದೆ ಆವೃತ್ತಿಯಿಂದ ಹೆಚ್ಚು ಫಲ ಬರುವುದೋ ಹಾಗೆಯೇ ಕೆಲವು ಮುಖ್ಯವಾದ ವಿಷಯಗಳನ್ನು ಒಂದೇಸಲ ಹೇಳಿಬಿಟ್ಟರೆ ಎಲ್ಲೋ ಒಂದು ಸಲ ಅದನ್ನು ಹೇಳಿರುವರು ಎಂದು ಅಶ್ರದ್ಧೆ ಮಾಡುವರು. ಆದ್ದರಿಂದ ಸಾಧಾರಣ ವಿಷಯವನ್ನು ಒಂದು ಸಲ ಹೇಳಿದರೆ ಸಾಕಾಗುತ್ತೆ. ಅಸಾಧಾರಣ ವಿಷಯವನ್ನು ಪುನಃಪುನಃ ಹೇಳಿದರೆ ಒಂದು ಸಲಕ್ಕೆ ೪ ಸಲ ಅದನ್ನೇ ಹೇಳಿದ್ದಾರಪ್ಪ ! ಅದರಲ್ಲಿ ವಿಶೇಷವಿರಬಹುದು ಎಂದು ಜನರಿಗೆ ವಿಶ್ವಾಸ ಹುಟ್ಟುವುದು. ಹೀಗೆ ಹೇಳಿರುವವರು ದಾಸರಾಯರು ಒಬ್ಬರೇ ಅಲ್ಲ. ಸತ್ಯಂಸತ್ಯಂ ಪುನಸ್ಸಂತ್ಯಂ ಭುಜಮುದ್ಧೃತ್ಯ ಚೋಚ್ಯತೆ ॥ ವೇದಶಾಸ್ತ್ರಾತ್ಪರಂ ನಾಸ್ತಿ ನ ದೈವಂ ಕೇಶವಾತ್ಪರಂ॥ ನನ್ನ ಎರಡು ಕೈಗಳನ್ನೂ ಮೇಲೆತ್ತಿ ಸತ್ಯವಾಗಿಯೂ ಸತ್ಯವಾಗಿಯೂ ಮತ್ತೂ ಮತ್ತೂ ಸತ್ಯವನ್ನು ಮಾಡಿ ಹೇಳುವೆನು ! ಏನೆಂದು ಅಂದರೆ, ವೇದಕ್ಕೆ ಸಮವಾದ ಶಾಸ್ತ್ರವಿಲ್ಲ, ಕೇಶವನಿಗಿಂತಲೂ ಉತ್ತಮ ದೈವವಿಲ್ಲವೆಂದು ದೃಢವಾಗಿ ಹೇಳುವೆನು ಎಂದು ವೇದವ್ಯಾಸದೇವರೇ ಹೇಳಿರುವರು. ಭಾಗವತ ಏಕಾದಶಸ್ಕಂಧದಲ್ಲಿ ಉದ್ಧವನಿಗೆ ಶ್ರೀಕೃಷ್ಣನು ಉಪದೇಶಮಾಡುತ್ತಾ ಭಕ್ತಿಯೋಗವನ್ನು ಪೂರ್ವ ದಲ್ಲಿ ಹೇಳಿರುವೆನು. ಅಭ್ಯಾಸಕ್ಕಾಗಿ ಮತ್ತೂ ಹೇಳುವೆನು ಕೇಳು ಎಂದು ಹೇಳಿದ ಭಕ್ತಿಯೋಗ ಲಕ್ಷಣವನ್ನು ಮತ್ತೂ ಹೇಳುವನು. ಆದ್ದರಿಂದ ಜನರಿಗೆ ದಾರಢ್ಯ ಹುಟ್ಟುವುದಕ್ಕಾಗಿ ಅಲ್ಲಲ್ಲಿ ಹೇಳಿದ ವಾಕ್ಯವನ್ನು ಪುನಃ ಹೇಳಿರುವರು. ಅಂತಹ ಎಲ್ಲಾ ಸ್ಥಳಗಳಿಗೂ ಇದೇ ಸಮಾಧಾನವೆಂದು ತಿಳಿಯಬೇಕು. ಪ್ರಕೃತ ಭಗವದುಪಾಸನೆಗೆ ಮುಖ್ಯವಾದವು ಪಂಚಭೇದ ತಾರತಮ್ಯಜ್ಞಾನ ಇವೆರಡು. ಮಹಾಭಾರತತಾತ್ಪರ್ಯನಿರ್ಣಯ ಮೊದಲನೆಯ ಅಧ್ಯಾಯ ದಲ್ಲಿ ಹೇಳಿರುವಂತೆ, ಶ್ರೀಹರಿಯೇ ಸರ್ವೋತ್ತಮನೆಂದು ತಿಳಿದು ಲಕ್ಷ್ಮೀ ಬ್ರಹ್ಮಾದಿ ಸಕಲ ಪ್ರಾಣಿಗಳಲ್ಲೂ ತಾರತಮ್ಯವನ್ನು ತಿಳಿದು ಉಪಾಸನೆ ಮಾಡ ಬೇಕು. ಇದರ ಹೊರತು ಬೇರೆ ಯಾವ ಮಾರ್ಗದಿಂದಲೂ, ಯಾವ ಕಾರಣ

ದಿಂದಲೂ, ಯಾವ ಕಾಲದಲ್ಲೂ ಮುಕ್ತಿಯು ದೊರೆಯಲಾರದು. ಪಂಚಭೇದಗಳನ್ನು ತಿಳಿಯಬೇಕು. ಆ ಪಂಚಭೇದಗಳು ಯಾವುವೆಂದರೆ, ಜೀವರಿಗೂ ಪರಮಾತ್ಮನಿಗೂ ಭೇದ, ಜೀವರಿಗೂ ಜೀವರಿಗೂ ಪರಸ್ಪರ ಭೇದ, ಜಡಗಳಿಗೂ ಪರಮಾತ್ಮನಿಗೂ ಭೇದ, ಜಡಗಳಿಗೂ ಜಡಗಳಿಗೂ ಭೇದ, ಜಡರಿಗೂ ಜೀವರಿಗೂ ಭೇದ. ಈ ಪ್ರಕಾರ ೫ ಭೇದಗಳು ಸರ್ವಕಾಲಗಳಲ್ಲೂ ಸರ್ವಾವಸ್ಥೆಗಳಲ್ಲೂ ಸಹ ನಿತ್ಯವಾದವು. ಮುಕ್ತರಲ್ಲೂ ಸಹ ಪಂಚಭೇದಗಳುಂಟು. ಇದರಂತೆ ತಾರತಮ್ಯವೂ ಸರ್ವಾವಸ್ಥೆಗಳಲ್ಲೂ, ಸರ್ವಕಾಲದಲ್ಲೂ, ಮುಕ್ತಿಯಲ್ಲೂ ಸಹ ನಿತ್ಯವಾದವು ಎಂದು ಹೇಳಿರುವರು. ಇಂತಹ ಪಂಚಭೇದಗಳನ್ನು ತಿಳಿಯಬೇಕು. ಪರಮಾತ್ಮನ ಮೂಲರೂಪ, ಅವತಾರರೂಪ, ಆವೇಶರೂಪ ಮೊದಲಾದುವುಗಳಲ್ಲಿಯೂ ಸರ್ವತ್ರವ್ಯಾಪ್ತವಾದ ಭಗವದ್ರೂಪಗಳಲ್ಲೂ ಸಹ ಪರಸ್ಪರಭೇದವನ್ನು ತಿಳಿಯಬಾರದು. ಪರಮಾತ್ಮನು ನಿರ್ದೋಷನು. ಆನಂದಾದಿ ಗುಣಪೂರ್ಣನು ಎಂದು ಉಪಾಸನೆಮಾಡದೆ ಮುಕ್ತಿಯು ಬಾರದು. ರಾಮಕೃಷ್ಣಾದಿ ಅವತಾರಗಳು ಪರಮಾತ್ಮನ ಸ್ವರೂಪವೆಂದು ತಿಳಿಯಬೇಕು. ಯಾವದು ಸಾಕ್ಷಾದವತಾರವೆಂದು ಶಾಸ್ತ್ರಗಳಲ್ಲಿ ಹೇಳುವುದಿಲ್ಲವೋ ಆ ರೂಪಗಳಲ್ಲಿ ಪರಮಾತ್ಮನ ವಿಶೇಷಾವೇಶವನ್ನು ತಿಳಿಯಬೇಕು. ಹೀಗೆ ಚೆನ್ನಾಗಿ ತಿಳಿದು ಉಪಾಸನೆ ಮಾಡಿದರೇನೇ ಮುಕ್ತಿಯು ದೊರಕುವುದೇ ಹೊರತು ಇಲ್ಲವಾದರೆ ಇಲ್ಲ ಎಂದು ಹೇಳಿರುವರು. ಇವುಗಳೆಲ್ಲವೂ ಮುಖ್ಯವಿಷಯಗಳೆಂದು ಶ್ರೀಮದಾಚಾರ್ಯರೇ ಹೇಳಿರುವುದರಿಂದ ದಾಸರಾಯರು ಇವುಗಳಲ್ಲಿ ಭಕ್ತಜನರಿಗೆ ದಾರ್ಢ್ಯ ಹುಟ್ಟುವುದಕ್ಕಾಗಿ ಪುನಃಪುನಃ ಹೇಳಿರುವರೇ ಹೊರತು ಹೊತ್ತು ಹೋಗದೆ ಗ್ರಂಥವನ್ನು ನಿಷ್ಕಾರಣವಾಗಿ ಬೆಳೆಸುವ ಉದ್ದೇಶದಿಂದ ಹೇಳಲಿಲ್ಲವೆಂದು ತಿಳಿಯಬೇಕು. ಈ ಪಂಚಭೇದಗಳು ಹೇಗೆ ಆಗುವುವೆಂಬ ವಿಷಯವನ್ನು ವಿಸ್ತಾರವಾಗಿ ೭ನೆಯ ಸಂಧಿಯ ೧೨ನೆಯ ಪದ್ಯದ ತಾತ್ಪರ್ಯಾರ್ಥದಲ್ಲಿ ಬರೆದಿರುತ್ತೆ. ಇಂತಹ ಪಂಚಭೇದವನ್ನು ಈ ಬ್ರಹ್ಮಾಂಡದಲ್ಲಿ ಸರ್ವತ್ರ ತಿಳಿದು ಜೀವ ಜಡ ವಿಲಕ್ಷಣನಾದ ಪರಮಾತ್ಮನನ್ನು ತನ್ನ ಶರೀರದ ಹೃದಯಾಕಾಶದಲ್ಲಿ ಸಮಾಧಿಲಕ್ಷಣದಿಂದ ಅಂದರೆ ಮೇಲೆ ೧೮ನೆಯ ಪದ್ಯದಲ್ಲಿ ಪಾಲಿನೊಳ್ ಘೃತವಿದ್ದ ತೆರದಂತಿಪ್ಪ ಎಂಬ ಪದಕ್ಕೆ ತಾತ್ಪರ್ಯಾರ್ಥ ಬರೆಯುವಾಗ ಜಿತೇಂದ್ರಿಯನಾಗಿ, ಜಿತಶ್ವಾಸನಾಗಿ ಅಭ್ಯಾಸಮಾಡುವ ಯೋಗೆ

ಲಕ್ಷಣವು ಬರೆಯಲ್ಪಟ್ಟಿದೆ. ಅದರಂತೆ ಹೃದಯಾಕಾಶದಲ್ಲಿ ಇರುವ ಪರಮಾತ್ಮನನ್ನು ಧ್ಯಾನಮಾಡಿ ಅಪರೋಕ್ಷದಲ್ಲಿ ಅಚ್ಯುತನನ್ನು ಕಂಡು ಅವನ ಅನುಗ್ರಹದಿಂದ ಶೀಘ್ರದಲ್ಲಿ ಪರಮಾತ್ಮನ ಪಾದಾರವಿಂದವನ್ನು ಹೊಂದು ಅಂದರೆ ಮುಕ್ತಿಯನ್ನು ಹೊಂದು ಎಂದು ತಾತ್ಪರ್ಯ. ॥೨೪॥

## ಭಾವದರ್ಪಣ

ಜೀವ ಜೀವರೇತಿ । ಈ ವಿಷಯದಲ್ಲಿ ೭ನೇ ಸಂಧಿ ೨೧ನೇ ಪದ್ಯದಲ್ಲಿ ಬರದದೆ. ಅಲ್ಲೇ ವಿವರ ನೋಡಿಕೊಳ್ಳತಕ್ಕದ್ದು. ॥೨೪॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಜೀವ ಇತಿ ॥ ಅಪರೋಕ್ಷಾಂತರಂಗತ್ವಾತ್ ಅಭ್ಯಾಸಃ ॥೨೪॥

## ಕನ್ನಡಾರ್ಥ

ಪಂಚಭೇದಜ್ಞಾನಪುರಃಸರವಾಗಿ ಸರ್ವೋತ್ತಮತ್ವಾದಿ ಬುದ್ಧಿಯಿಂದ ಕೂಡಿದ ನಿರ್ಮಲ ಭಕ್ತಿಯಿಂದ ವಿಷ್ಣೂಪಾಸನವನ್ನು ಮಾಡಿದರೇ ಮೋಕ್ಷವಾಗುವದರಿಂದ ಪಂಚ ಭೇದಗಳನ್ನು ನಿರೂಪಿಸುತ್ತಾರೆ ಜೀವ ಎಂಬ ಪದ್ಯದಿಂದ ಈ ತಾರತಮ್ಯಜ್ಞಾನವು ಅಪರೋಕ್ಷಕ್ಕೆ ಅಂತರಂಗಸಾಧನವಾದುದರಿಂದ ಪರಸ್ಪರ ಭೇದಜ್ಞಾನವಾಗಲಿಕ್ಕೆ "ಜೀವ ಜೀವ" ಎಂದು ಎರಡೆರಡು ಆವೃತ್ತಿಗಳಿಂದ ಹೇಳಲ್ಪಟ್ಟಿರುತ್ತದೆ ॥೨೪॥

## ಶ್ರೀಗುರುಹೃದಯಪ್ರಕಾಶಿಕೆ

ಸುಖದುಃಖಾದ್ಯನುಭವ ಪ್ರತ್ಯೇಕವಿರುವದರಿಂದ ಜೀವರು ಪರಸ್ಪರ ಭೇದವುಳ್ಳವರು, ನೀರೂ ಬೆಂಕಿ ಮೊದಲಾದ್ದರ ಗುಣ ಬೇರೆಬೇರೆಯಾದ್ದರಿಂದ ಜಡಗಳು ಪರಸ್ಪರ ಭೇದವುಳ್ಳವು. ಜಡವಸ್ತುವಿಗೆ ಜ್ಞಾನವಿಲ್ಲ, ಜೀವರಿಗೆ ಜ್ಞಾನವಿದೆಯಾದ್ದರಿಂದ ಜಡಜೀವವಸ್ತುಗಳು ಬೇರೆ ಬೇರೆ, ಜೀವರು ಪರಾಧೀನಜ್ಞಾನಿಗಳು, ಪರಮಾತ್ಮ ಸ್ವತಂತ್ರಜ್ಞಾನಿ ಸರ್ವಜ್ಞನಾದ್ದರಿಂದ ಜೀವ

ಪರಮಾತ್ಮ ಭೇದ. ಜ್ಞಾನವಿಲ್ಲದ ಜಡವೇ ದೇವರಲ್ಲವಾದ್ದರಿಂದ ಜಡ ಪರಮಾತ್ಮ ಭೇದ ಸಹ ಐದು. ಈ ಬ್ರಹ್ಮಾಂಡವಲ್ಲಿ ಸಕಲಸ್ಥಳದಲ್ಲೂ ಈ ಐದು ಭೇದಜ್ಞಾನ ತಿಳಿದು. ನಾಶರಹಿತನಾದ ದೇವರ ಸ್ಥಾನವಾದ ಲೋಕವನ್ನು ಶೀಘ್ರ ಹೊಂದಬೇಕು.

**ಜೀವೇಶಯೋರ್ಜಡಾನಾಂ ಚ ಜೀವಭೇದಃ ಪರಸ್ಪರಂ ।**
**ಜಡೇಶಯೋಸ್ತಥಾ ನಿತ್ಯಂ ಜಡಜೀವಭಿದಾ ತಥಾ ॥**
**ಪಂಚಭೇದಾ ಇಮೇ ನಿತ್ಯಾಸ್ಸರ್ವಾವಸ್ಥಾಸು ಸರ್ವದಾ ॥**

ಎಂಬ ಗೀತಾ ತಾತ್ಪರ್ಯಾರ್ಥ ವಿವರಿಸಲ್ಪಟ್ಟಿತು.

**ಅಲ್ಪಶಕ್ತಿರಸಾರ್ವಜ್ಞಂ ಪಾರತಂತ್ರ್ಯಮಪೂರ್ಣತಾ ।**

# ಸರ್ವವ್ಯಾಖ್ಯಾನಸಾರಸಂಗ್ರಹ

ಚೈತನ್ಯವುಳ್ಳ ಪ್ರಾಣಿಗಳಿಗೆ ಜೀವ ಎಂದು ಹೆಸರು. ಇಂತಹ ಜೀವರು ಅನಂತಾನಂತ ಸಂಖ್ಯೆಯಲ್ಲಿದ್ದಾರೆ. ಜೀವರಾಶಿಗಳಲ್ಲಿ ಮುಖ್ಯವಾಗಿ ಎರಡು ವಿಧ--ಜಂಗಮಜೀವರು ಮತ್ತು ಸ್ಥಾವರಜೀವರು.

ಜಂಗಮವರ್ಗಕ್ಕೆ ಸೇರಿದ ದೇವತೆಗಳು, ಖೇಚರರಾದ ಪಕ್ಷಿ ವರ್ಗ, ಭೂಚರರಾದ ಮಾನವರು, ಪಶ್ವಾದಿಪ್ರಾಣಿಗಳು, ಜಲಚರರಾದ ಮೀನು, ಮೊಸಳೆ ಇತ್ಯಾದಿ ಪ್ರಾಣಿಗಳು, ಅತ್ಯಂತ ಸೂಕ್ಷ್ಮವಾದ ಕ್ರಿಮಿಗಳು, ಇತ್ಯಾದಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚರಿಸುವವರು ಜಂಗಮಜೀವರು. ಜೀವವಿದ್ದರೂ ಸ್ಥಳದಿಂದ ಸ್ಥಳಕ್ಕೆ ಚಲಿಸಲಾಗದವರು ವೃಕ್ಷ, ಗುಲ್ಮ, ಲತಾದಿಗಳು ಸ್ಥಾವರ ಜೀವರು.

ಜಂಗಮಜೀವರಲ್ಲಿ ಒಬ್ಬರಿದ್ದ ಹಾಗೆ ಮತ್ತೊಬ್ಬರಿಲ್ಲ. ಜೀವರ ಮನೋಶಕ್ತಿ, ಬುದ್ಧಿಶಕ್ತಿ, ಆಧ್ಯಾತ್ಮಿಕಶಕ್ತಿ, ದೈಹಿಕಶಕ್ತಿ, ಆಲೋಚನಾಶಕ್ತಿ, ವಿವೇಚನಾ

ಶಕ್ತಿ ಇತ್ಯಾದಿ ಪ್ರಕ್ರಿಯೆಗಳಲ್ಲಿ ಪರಸ್ಪರ ಭೇದವಿದೆ. ನೀಚೋಚ್ಚಭಾವವಾದ ತಾರತಮ್ಯವಿದೆ. ಪ್ರತಿಜೀವರ ಸುಖದುಃಖಾನುಭವ ಪ್ರತ್ಯೇಕ ಪ್ರತ್ಯೇಕವಾಗಿದೆ.

ಇದರಿಂದ ಜೀವ ಜೀವಕ್ಕೆ ಪರಸ್ಪರ ಭೇದ.

ಎಲ್ಲಾ ಜಡವಸ್ತುಗಳಲ್ಲಿ ಪರಸ್ಪರ ಭೇದವಿದೆ. ಜಡವಸ್ತುಗಳ ಗುಣಗಳು ಬ್ಯಾರೆ ಬ್ಯಾರೆ ಇವೆ. ಇದರಿಂದ ಜಡ ಜಡಭೇದವು ಸಿದ್ಧವಾಗುವುದು.

ಜೀವರಾಶಿಗಳಿಗೆ ಜ್ಞಾನಶಕ್ತಿ ಇದೆ. ವಿವೇಚನಾ ಶಕ್ತಿ ಉಂಟು. ಆದರೆ ಶುದ್ಧ ಜಡಗಳಿಗೆ ಜ್ಞಾನಶಕ್ತಿಯಾಗಲೀ, ಮನೋಸಾಮರ್ಥ್ಯವಾಗಲೀ ಸುತರಾಂ ಇಲ್ಲ. ಸ್ವತಃ ಏವ ಪ್ರವೃತ್ತಿಶಕ್ತಿ ಜಡಗಳಿಗೆ ಇಲ್ಲ. ಇದರಿಂದ ಜೀವಜಡಗಳಿಗೆ ಅತ್ಯಂತ ವೈಲಕ್ಷಣ್ಯವಿದೆ.

ಸರ್ವಪ್ರಕಾರಗಳಲ್ಲಿಯೂ ಉತ್ತಮೋತ್ತಮನಾದುದರಿಂದ ಶ್ರೀಪರಮಾತ್ಮನು ಪರಮನು.

ಆ ಪರಮನು ಸಕಲಜೀವರಾಶಿಗಳಿಂದಲೂ ಮತ್ತು ಸಮಸ್ತ ಜಡವಸ್ತುಗಳಿಂದಲೂ ಅತ್ಯಂತ ಭಿನ್ನನು. ಈ ವೈಲಕ್ಷಣ್ಯ ಅಂದರೆ, ಜೀವೇಶಭೇದ ಮತ್ತು ಜಡೇಶಭೇದ ಪಾರಮಾರ್ಥಿಕವಾದದ್ದು. ನಿತ್ಯಸತ್ಯವಾದದ್ದು. ಜೀವರು ಅಲ್ಪಶಕ್ತರು ಅಲ್ಪಜ್ಞಾನಿಗಳು. ಶ್ರೀಪರಮಾತ್ಮನಾದರೋ ಸರ್ವಶಕ್ತನು ಮತ್ತು ಸರ್ವಜ್ಞನು. ಜೀವರು ಅಸ್ವತಂತ್ರರು. ಅವರ ಕರ್ತೃತ್ವಶಕ್ತಿ ಭಗವದಧೀನವಾಗಿದೆ. ಆದರೆ ಆ ಪರಮನು ಸರ್ವತಂತ್ರಸ್ವತಂತ್ರನು. ಸರ್ವಜೀವರಿಗೆ ನಿಯಾಮಕನು, ಪ್ರೇರಕನು. ಜೀವರಾದರೋ ಶ್ರೀಶನ ಪ್ರತಿಬಿಂಬಭೂತರು. ನಿಯಮ್ಯರು. ಪ್ರೇರ್ಯರು. ಇದರಿಂದ ಜೀವೇಶಭೇದ ಸಿದ್ಧವಾಯಿತು.

ಜಡವಸ್ತುಗಳ ಕಣಕಣಗಳಲ್ಲಿ ಶ್ರೀಪರಮಾತ್ಮನು ವ್ಯಾಪ್ತನಾಗಿದ್ದಾನೆ. ಅವನ ವ್ಯಾಪ್ತರೂಪಗಳಿಂದಲೇ ಜಡವಸ್ತುಗಳ ಗುಣಸ್ವಭಾವಗಳ ಅಭಿವ್ಯಕ್ತಿ.

ಇದರಿಂದ ಜಡೇಶರ ಭೇದ. ಇಂತು ಪರಮನು ಜೀವ ಜಡಗಳಿಂದ ಸುವಿಲಕ್ಷಣನು.

ಶ್ರೀಶನ ಜ್ಯೇಷ್ಠಪುತ್ರರಾದ ಬ್ರಹ್ಮದೇವರಿಗೆ ವಿರಿಂಚಿ ಎಂದು ಹೆಸರು. ವಿರಿಂಚಾಂಡವೆಂದರೆ–ಬ್ರಹ್ಮಾಂಡ ಎಂದರ್ಥ.

ಇಂತಹ ವಿರಿಂಚಾಂಡದಲ್ಲಿ ಸಕಲ ಸ್ಥಳಗಳಲ್ಲಿ, ಕಾಲಗಳಲ್ಲಿ ಅಂದರೆ ಸಮಸ್ತ ಅಧಿಷ್ಠಾನಗಳಲ್ಲಿ ಪೂರ್ವೋಕ್ತ ಪಂಚಭೇದಗಳನ್ನು ಗುರೂಪದೇಶ ದ್ವಾರಾ ತಿಳಿಯಬೇಕು. ನಾಶರಹಿತನಾದ ಅಚ್ಯುತನಾಮಕ ಶ್ರೀಪರಮಾತ್ಮನು ಜಡವಾದ ಈ ಸ್ಥೂಲದೇಹದಲ್ಲಿ ವ್ಯಾಪ್ತನಾಗಿ, ಶರೀರಗತ ಇಂದ್ರಿಯವ್ಯಾಪಾರ ಗಳನ್ನು ಮಾಡಿ, ಜೀವನಿಂದ ಮಾಡಿಸುತ್ತಿರುವನು.

ನಮ್ಮ ದೇಹ ಪಾಂಚಭೌತಿಕ ಶರೀರವು. ಮರಣದ ದೆಸೆಯಿಂದ ಸ್ಥೂಲ ಶರೀರವು ನಾಶವನ್ನು ಹೊಂದುವುದು. ದೇಹದಲ್ಲಿ ಆವಾಸನಾಗಿರುವ ಆತ್ಮನು ಚೇತನಸ್ವರೂಪನು. ಅವನೇ ಜೀವನಾಮಕನು. ಅವನಿಗೆ ನಾಶವಿಲ್ಲ. ಇದರಿಂದ ದೇಹವೇ ಜೀವವಲ್ಲ. ಇದರಿಂದ ಜೀವ–ಜಡ ಭೇದ ಸಿದ್ಧವಾಯಿತು. ಜೀವೇಶ ಭೇದ ಸಿದ್ಧವಾಯಿತು.

೧. ಈಶನ ವಿವಕ್ಷಾ ಎರಡು ಭೇದಗಳು— (೧) ಜೀವೇಶಭೇದ
(೨) ಜಡೇಶ ಭೇದ

೨. ಜೀವ–ಜಡಗಳ ವಿವಕ್ಷಾ ಮೂರು ಭೇದಗಳು (೧) ಜೀವ–ಜೀವ ಭೇದ
(೨) ಜಡ–ಜಡಭೇದ
(೩) ಜೀವ–ಜಡ ಭೇದ

ಹೀಗೆ ಪಂಚಭೇದ, ತಾರತಮ್ಯಜ್ಞಾನವನ್ನು ಹೊಂದಿ, ಶಾಶ್ವತವಾದ ಮುಕ್ತಿಸುಖವನ್ನು ಪಡೆ ಎಂದಿದ್ದಾರೆ. ॥೨೪॥

# ಪದ್ಯ—೨೫

**ಮೂಲ :–**

**ಆದಿಯಲ್ಲಿ ಕ್ಷರಾಕ್ಷರಾಖ್ಯ ।**
**ದ್ವೇಧ ಅಕ್ಷರದೊಳು ರಮಾ ಮಧು ।**
**ಸೂದನರು ಕ್ಷರಗಳೊಳು ಪ್ರಕೃತಿ ಪ್ರಣವ ಕಾಲಗಳು ॥**
**ವೇಧ ಮುಖ್ಯ ತೃಣಾಂತ ಜೀವರ ।**
**ಭೇದಗಳನರಿತೀ ರಹಸ್ಯವ ।**
**ಬೋಧಿಸದೆ ಮಂದರಿಗೆ ಸರ್ವತ್ರದಲಿ ಚಿಂತಿಪುದು ॥೨೫॥**

**ಅವತರಣಿಕೆ**

ಹಿಂದಿನ ಪದ್ಯಗಳಲ್ಲಿ ಹೇಳಿದ ತತ್ತ್ವಗಳನ್ನು ಪ್ರಸಕ್ತ ಪದ್ಯದಲ್ಲಿ ತಾತ್ಪರ್ಯರೂಪದಲ್ಲಿ ಪರಸ್ಪರ ಭೇದ ಹಾಗೂ ತಾರತಮ್ಯತತ್ತ್ವಗಳನ್ನು ಗುರೂಪದೇಶದ್ವಾರಾ ತಿಳಿದು ಈ ರಹಸ್ಯವನ್ನು ಮಂದರಾದ ಅಯೋಗ್ಯರಿಗೆ ತಿಳಿಸದೆ, ಪರಮಾತ್ಮನ ಸರ್ವತ್ರ ಚಿಂತಿಸಬೇಕೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಆದಿಯಲಿ**–ಪ್ರಥಮದಲ್ಲಿ ಹೇಳಿದ, **ಕ್ಷರ**–ದೇಹನಾಶವುಳ್ಳ ಕ್ಷರಜೀವರು ಎಂತಲೂ, **ಅಕ್ಷರ**–ನಾಶರಹಿತರಾದ ಅಕ್ಷರ ಎಂತಲೂ, **ಆಖ್ಯ**–ಪ್ರಸಿದ್ಧರಾದ, **ದ್ವೇಧ**–ಎರಡು ಪ್ರಕಾರಗಳಿವೆ. **ಅಕ್ಷರದೊಳು**–ಅಕ್ಷರ ವರ್ಗದಲ್ಲಿ **ರಮಾ**–ಅಸ್ವಂತತ್ರರಾದ ಶ್ರೀಲಕ್ಷ್ಮೀದೇವಿ, **ಮಧುಸೂದನರು**–ಸರ್ವತಂತ್ರಸ್ವತಂತ್ರನಾದ ಸರ್ವೋತ್ತಮನಾದ ಶ್ರೀಪರಮಾತ್ಮ, ಈ ಉಭಯರೂ ಅಕ್ಷರ ಸಾಂಕೇತರು. **ಕ್ಷರಗಳೊಳು**–ದೇಹನಾಶವುಳ್ಳ ಕ್ಷರವರ್ಗದಲ್ಲಿ, **ಪ್ರಕೃತಿ**–ಮೂಲ

ಜಡಪ್ರಕೃತಿ, **ಪ್ರಣವ**–ಅಕಾರ, ಉಕಾರ, ಮಕಾರಾತ್ಮಕವಾದ ಓಂಕಾರ, **ಕಾಲಗಳು**–ಪ್ರವಾಹತೋನಿತ್ಯವಾದ ಕ್ಷಣ, ಲವಾದಿ ಕಾಲಪ್ರಭೇದಗಳು, **ವೇಧ ಮುಖ್ಯ**–ಬ್ರಹ್ಮದೇವರನ್ನು ಆರಂಭಮಾಡಿ. **ತೃಣಾಂತ ಜೀವರ**–ತೃಣ ಜೀವರ ಪರ್ಯಂತ, ಅಂದರೆ, ಶುದ್ಧ ಜಡಗಳು. ತದನ್ಯ ಜೀವಗಣಗಳು, **ಭೇದಗಳನರಿತು**–ಅಕ್ಷರ ವರ್ಗದಲ್ಲಿ ಲಕ್ಷ್ಮೀ ಮತ್ತು ನಾರಾಯಣ ಇವರಿಗಿರುವ ಪರಸ್ಪರ ಭೇದ, ಆ ಕ್ಷರವರ್ಗಗತ ಪಂಚಭೇದಗಳನ್ನು (ಈ ಪಂಚಭೇದಗಳಲ್ಲಿ ರಮಾ ಮಧುಸೂದನರ ಭೇದವೂ ಸೇರಿದೆ) **ಈ ರಹಸ್ಯವ**–ಈ ರಹಸ್ಯ ತತ್ತ್ವವನ್ನು, **ಅರಿತು**–ಗುರೂಪದೇಶದ್ವಾರಾ ತಿಳಿದು, **ಮಂದರಿಗೆ**–ಅಜ್ಞಾನಿಗಳಿಗೆ, **ಬೋಧಿಸದೆ**–ಉಪದೇಶ ಮಾಡಕೂಡದು, **ಸರ್ವತ್ರದಲಿ**–ಸರ್ವಾಧಿಷ್ಠಾನಗಳಲ್ಲಿ, **ಚಿಂತಿಪುದು**–ಪಂಚಭೇದ ಮತ್ತು ತಾರತಮ್ಯಗಳ ತತ್ತ್ವವನ್ನು ಚಿಂತಿಸಬೇಕು. ॥೨೫॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಭೇದಗಳು ಆರು ಎಂತ ಹೇಳತಾರೆ.

ಪ್ರಥಮದಲ್ಲಿ ಹೇಳಿದ ಕ್ಷರಜೀವರು ಎಂತಲೂ, ಅಕ್ಷರ ಜೀವರು ರಮಾ ಎಂತಲೂ ಪ್ರಸಿದ್ಧರಾದ ಜೀವರು, ಎರಡು ವಿಧ ಎಂದರೆ ಎರಡು ಪ್ರಕಾರವು. ಇದರೊಳು ಅಕ್ಷರದಲ್ಲಿ ಅಸ್ವತಂತ್ರರಾದ ರಮಾದೇವಿಯರೂ, ಸರ್ವಸ್ವತಂತ್ರನಾದ, ಸರ್ವೋತ್ತಮನಾದ ಶ್ರೀಪರಮಾತ್ಮ ಈ ಉಭಯರೂ ಅಕ್ಷರ ಸಾಂಕೇತರು. ಶ್ರೀರಮಾ ಪರಮಾತ್ಮರು ಪರಸ್ಪರ ಭೇದರು, ಆದ್ದರಿಂದ ಅಕ್ಷರದೊಳಗೆ ಒಂದು ಭೇದ. ನಾಶವುಳ್ಳವುಗಳಲ್ಲಿ ಪೂರ್ವೋಕ್ತವಾದ ಮೂಲಜಡ ಪ್ರಕೃತಿ, ಓಂಕಾರ, ಕ್ಷಣ–ಲವಾದಿಕಾಲಗಳು, ಜೀವೋತ್ತಮರಾದ ಬ್ರಹ್ಮದೇವರು ಆರಂಭ ಮಾಡಿ, ತೃಣಜೀವರೇ ಅಂತವಾಗಿ, ಜೀವರ ಅಂತು ಶುದ್ಧ ಜಡಗಳ, ತದನ್ಯ ಜೀವರ ಅಂತು ಎರಡರಲ್ಲಿ ಪಂಚಭೇದಗಳ ಅರಿತವನಾಗಿ, ಅಕ್ಷರದಲ್ಲಿ ಒಂದು ಭೇದ, ಕ್ಷರದಲ್ಲಿ ಐದು ಭೇದ ಆಂತು ಆರು ಭೇದಗಳ ತಿಳಿದು ಅನುಷ್ಠಾನ ಮಾಡತಾ, ಈ ಆರು ಭೇದಗಳ ಲಕ್ಷಣವನ್ನ, ರಹಸ್ಯವನ್ನ

ಮಿಥ್ಯಾಜ್ಞಾನಿಗಳಿಗೆ ತಿಳಿಸದೆ ಸರ್ವತ್ರ ಚಿಂತಿಸೋವನಾಗು. ವೇಧ ಮುಖ್ಯ ತೃಣಾಂತ ಎಂಬೋಣದರಿಂದ ತಾರತಮ್ಯವೂ ಚಿಂತಿಸಬೇಕೆಂತ ಭಾವವು. ಇದರ ವಿಚಾರ ಸಂಧ್ಯಂತರದಲ್ಲಿ ವಿವರ ಮಾಡಿದ್ದಾರೆ. ॥೨೫॥

## ಭಾವಪ್ರಕಾಶಿಕೆ

ದ್ವಾವಿಮೌ ಪುರುಷೌಲೋಕೇ ಕ್ಷರಶ್ಚಾಕ್ಷರ ಏವಚ । ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥ ಎಂಬೀ ಗೀತಾವಾಕ್ಯಾನುಸಾರ ಕ್ಷರ ಪುರುಷ, ಅಕ್ಷರಪುರುಷರು ಎಂಬೆರಡು ಬಗೆ. ನಾಶ ಹೊಂದುವ ಎಲ್ಲಾ ಪ್ರಾಣಿಗಳೂ ಕ್ಷರರೆಂತಲೂ, ನಿರ್ವಿಕಾರರಾದ ರಮಾದೇವಿಯರು ಅಕ್ಷರರೆಂತಲೂ ಹೇಳಿರುವರು. ಅದೇ ಅರ್ಥವನ್ನು ಇಲ್ಲಿ ವಿಸ್ತಾರವಾಗಿ ಹೇಳಿರುವರು. ಕ್ಷರ ಅಕ್ಷರ ಇವೆರಡರಲ್ಲಿ ರಮಾದೇವಿಯೂ, ಪರಮಾತ್ಮನೂ ಇವರಿಬ್ಬರನ್ನು ಅಕ್ಷರ ಪುರುಷರನ್ನಾಗಿ ತೆಗೆದುಕೊಳ್ಳಬೇಕು. ಯದ್ಯಪಿ ಗೀತೆಯಲ್ಲಿ ಉತ್ತಮ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ಕ್ಷರಪುರುಷರೂ, ಅಕ್ಷರಪುರುಷರೂ ಅಲ್ಲದ ಮತ್ತೊಬ್ಬ ಪುರುಷನಿರುವನು. ಯಸ್ಮಾತ್ಕ್ಷರಮತೀತೋಽಹಮಕ್ಷರಾ ದಪಿಚೋತ್ತಮಃ ಅತೋಽಸ್ಮಿ ವೇದೇ ಲೋಕೇ ಚ ಪ್ರಥಿತಃ ಪುರುಷೋತ್ತಮಃ ಯಾವ ಕಾರಣದಿಂದ ನಾನು ಕ್ಷರರನ್ನು ಮೀರಿರುವೆನೋ, ಅಕ್ಷರಳಾದ ರಮಾ ದೇವಿಗಿಂತಲೂ ನಾನೇ ಉತ್ತಮನೋ ಆ ಕಾರಣದ ದೆಶೆಯಿಂದ ಲೋಕದಲ್ಲೂ ವೇದಗಳಲ್ಲೂ ನಾನು ಪುರುಷೋತ್ತಮನೆಂದು ಪ್ರಖ್ಯಾತನಾಗಿರುವೆನು, ಎಂದು ಶ್ರೀಕೃಷ್ಣನ ವಾಕ್ಯವಿರುವುದು. ಹಾಗಿರಲು ದಾಸರಾಯರು ಅಕ್ಷರಪುರುಷರಲ್ಲಿ ನಾರಾಯಣನನ್ನೂ ಸಹ ಸೇರಿಸುವುದೇಕೆ ಎಂದರೆ, ಗೀತೆಯ ವಾಕ್ಯದಿಂದ ಲಕ್ಷ್ಮೀದೇವಿಯರಿಗಿಂತಲೂ ಪರಮಾತ್ಮನಿಗೆ ಉತ್ತಮತ್ವವನ್ನು ಪ್ರದರ್ಶನ ಮಾಡಿದಂತಾಯಿತು. ದಾಸರಾಯರು ಕ್ಷರಾಕ್ಷರ ಪದಗಳ ಅರ್ಥದ ಮೇಲೆ ದೇಹದಿಂದಲೂ, ದೇಶದಿಂದಲೂ, ಕಾಲದಿಂದಲೂ, ನಾಶರಹಿತರು ಅಕ್ಷರ ರೆಂತಲೂ, ದೇಹತಃ, ದೇಶತಃ, ಕಾಲತಃ ನಾಶ ಉಳ್ಳವರು ಕ್ಷರರೆಂತಲೂ ಅರ್ಥವಿಟ್ಟುಕೊಂಡು ಪರಮಾತ್ಮನು ಹೇಗೆ ದೇಶತಃ, ಕಾಲತಃ ದೇಹದ ನಾಶವೃದ್ಧಿಗಳು ಇಲ್ಲದವನೋ ಹಾಗೇ ಲಕ್ಷ್ಮೀದೇವಿಯರೂ ಸಹ ದೇಹತಃ, ದೇಶತಃ, ಕಾಲತಃ ನಾಶರಹಿತರು ಎಂದು ಹೇಳಿದರು. ಹೀಗೆ ಹೇಳಿದ ಮಾತ್ರ

ದಿಂದ ಗೀತಾ ವಾಕ್ಯಕ್ಕೆ ವಿರೋಧ ಬಂತೆಂದು ಭಾವಿಸಬಾರದು. ಸ್ವಾತಂತ್ರ್ಯ, ಪರತಂತ್ರಾದಿ ಭೇದಗಳಿಂದ ಲಕ್ಷ್ಮೀದೇವಿಯರಿಗಿಂತಲೂ ಪರಮಾತ್ಮನು ಉತ್ತಮನೆಂದು ಸ್ವತಃ ಸಿದ್ಧವಾದ ಪ್ರಯುಕ್ತ, ಮತ್ತೂ ಬೇರೆ ಹೇಳಬೇಕಾಗಿಲ್ಲ ವೆಂಬ ಅಭಿಪ್ರಾಯದಿಂದ ದಾಸರಾಯರು ಪುರುಷೋತ್ತಮನೆಂದು ಪ್ರತ್ಯೇಕ ವಾಗಿ ಹೇಳಲಿಲ್ಲವೆಂದು ತಿಳಿಯಬೇಕು. ಕ್ಷರ ಜೀವರಾದ ಜಡ ಚೇತನಜೀವ ರನ್ನು ಹೇಳುತ್ತಾರೆ. ಕ್ಷರರಲ್ಲಿ ಜಡಪ್ರಕೃತಿ, ಪ್ರಣವ, ಮಹಾಕಾಲ, ಅಣು ಕಾಲ, ಬ್ರಹ್ಮದೇವರು ಮೊದಲು ತೃಣಾಂತರಾದ ಸಕಲ ಚೇತನರು ನಾಶ ಉಳ್ಳವರಾದುದರಿಂದ ಕ್ಷರರಲ್ಲಿ ಸೇರಿದರು. ಇದರಲ್ಲಿ ಪ್ರಕೃತಿ, ವೇದ, ಕಾಲ ಇವು ಅನಾದಿಯೆಂದು ಪ್ರಸಿದ್ಧಿಯಾಗಿರಲು ದಾಸರಾಯರು ಕ್ಷರದಲ್ಲಿ ಇವನ್ನು ಏಕೆ ಸೇರಿಸಿದರೆಂದರೆ, ಪ್ರಕೃತಿಯಲ್ಲಿ ಚೇತನರೂಪಳಾದ ಲಕ್ಷ್ಮೀದೇವಿಯು ಮಾತ್ರವೇ ಅಕ್ಷರ ಜಡಪ್ರಕೃತಿಯ ರೂಪವನ್ನು ಸೃಷ್ಟಿಕಾಲದಲ್ಲಿ ಸ್ವೀಕರಿಸುವುದ ರಿಂದ ಕ್ಷರದಲ್ಲಿ ಗಣನವಾಯಿತು. ಪ್ರಳಯಕಾಲದಲ್ಲಿ ವೇದಸ್ವರೂಪಳಾಗಿ ದುರ್ಗಾದೇವಿ ಇದ್ದರೂ ಓಂ ಎಂಬ ಕ್ಷರವು ಸೃಷ್ಟಿಯಾದ ಮೇಲೆ ಬ್ರಹ್ಮದೇವ ರಿಗೆ ಉಪದೇಶರೂಪವಾಗಿ ಹೊರಗೆ ಬಂದಿತು. ಅದರಂತೆ ಕಾಲ ಅನಾದಿ ಯಾದರೂ ಈಗ ಕ್ಷಣಕಾಲವಾಯಿತು, ಘಳಿಗೆ ಆಯಿತು, ದಿನವಾಯಿತು ಎಂದು ದ್ವಿಪರಾರ್ಧಾವಸಾನವಾದ ಕಾಲವು ಕ್ಷಣಕ್ಷಣದಲ್ಲೂ ಹೋಗುತ್ತಿರುವುದ ರಿಂದ ಅನಿತ್ಯವಾಯಿತು. ಇವೆಲ್ಲವೂ ಪ್ರವಾಹರೂಪದಿಂದ ನಿತ್ಯವು. ನದಿಯಲ್ಲಿ ಪ್ರವಾಹ ಬರುತ್ತಿರುವುದು ನಿತ್ಯವಾದರೂ ಮುಂದೆ ಹೋದ ನೀರು ಹೋದದ್ದೇ ಹೊರತು ಆ ನೀರು ಮತ್ತೆ ಹೇಗೆ ಹಿಂದಿರುಗುವುದು ? ಇಲ್ಲ. ಪ್ರವಾಹ ನಿತ್ಯ ವಾದರೂ ಅಲ್ಲಿ ಬರುವ ಹೋಗುವ ನೀರು ಅನಿತ್ಯವು ಅದರಂತೆ ಕಾಲ, ಪ್ರಣವಾದಿಗಳು ಪ್ರವಾಹತೋ ನಿತ್ಯವು ಸೃಷ್ಟಿಕಾಲದಲ್ಲಿ ಬರುವುದು. ಪ್ರಳಯ ಕಾಲದಲ್ಲಿ ಪ್ರಣವವು ವೇದದಲ್ಲಿ, ಮಹಾಕಾಲದಲ್ಲಿ ಕ್ಷಣಲವಾದಿ ಕಾಲಗಳೂ ಸೇರಿಹೋಗುವವು. ಆದ್ದರಿಂದ ಇವುಗಳನ್ನು ಕ್ಷರದಲ್ಲಿ ಸೇರಿಸಿದರು. ಹೀಗೆ ಕ್ಷರಾಕ್ಷರ ಪುರುಷರ ಭೇದಗಳನ್ನು ತಿಳಿದು ತಮೋಯೋಗ್ಯರಿಗೆ ಈ ರಹಸ್ಯ ವನ್ನು ಪೇಳದೆ ಸರ್ವತ್ರದಲ್ಲೂ ಅಧಿಕಾರಿಯು ಮಾತ್ರ ಇದನ್ನು ಚಿಂತಿಸ ಬೇಕು. ॥೨೫॥

**ಭಾವದರ್ಪಣ**

ಆದಿಯಲೀತಿ,

## ಶ್ರೀವ್ಯಾಸದಾಸಸಿಧ್ಧಾಂತಕೌಮುದೀ

ಆದಿ ಇತಿ ॥ ದ್ವೇಧ–ದ್ವಿವಿಧ ॥ ಜೀವರ–ಕ್ಷರರ ಇತಿ ಪೂರಣೀಯಮ್. ॥೨೫॥

## ಕನ್ನಡಾರ್ಥ

ಕ್ಷರಾಕ್ಷರಗಳಲ್ಲಿ ಲಕ್ಷ್ಮೀದೇವಿಯು ಅಕ್ಷರಳೆನಿಸಿದ್ದರೂ ಮುಖ್ಯ ಅಕ್ಷರ ಶಬ್ದವಾಚ್ಯನು ಶ್ರೀಹರಿಯೊಬ್ಬನೇ. ಲಕ್ಷ್ಮೀದೇವಿಗೆ ಪಾರತಂತ್ರ್ಯವಿರುವದರಿಂದ ಅಮುಖ್ಯಳು ಎಂದೂ, ಆದರೂ ಇತರ ಕ್ಷರರಿಂದ ವಿಲಕ್ಷಣಳೆಂದೂ ತಿಳಿಸಲು ರಮಾಮಧುಸೂದನರಿಬ್ಬರನ್ನೂ ಅಕ್ಷರಗಳೆಂದು ನಿರೂಪಿಸಿರುತ್ತಾರೆ. ದ್ವೇಧ–ಎರಡು ವಿಧ ಜೀವರ ಎಂಬುದಕ್ಕೆ ಕ್ಷರಜೀವರ ಎಂದು ಅರ್ಥ ತಿಳಿಯಬೇಕು. ॥೨೫॥

## ಶ್ರೀಗುರುಹೃದಯಪ್ರಕಾಶಿಕೆ

ಅಸ್ವಾತಂತ್ರ್ಯನಿಮಿತ್ತ ಜೀವಕೋಟಿಯಲ್ಲಿ ರಮಾದೇವಿ ಮೇಲೆ ಸೇರಿದಾಗ್ಯೂ ಶರೀರಬಂಧರಹಿತಳಾದ್ದರಿಂದ ಈಶಕೋಟಿಪ್ರವಿಷ್ಟಳೆಂದು ತಿಳಿಯಬೇಕೆಂತ ಬೋಧಿಸುತ್ತಾರೆ, ಆದಿ ಎಂದು. ಆದಿಯಲ್ಲಿ ಎಂದರೆ ಯಾವಾಗಲೂ ಕ್ಷರಾಕ್ಷರ ಎಂದು ಎರಡು ವಿಧವಸ್ತು ನಿತ್ಯ. ಅದರಲ್ಲಿ ಶರೀರ ಬಂಧವಿಲ್ಲದೆ ನಿತ್ಯಮುಕ್ತರಾದ್ದರಿಂದ ರಮಾನಾರಾಯಣರಿಬ್ಬರೂ ಅಕ್ಷರರೆಂದು ಕರೆಸುವರು. ವೇಧನೆಂಬ ಬ್ರಹ್ಮ ಮೊದಲಾದ ಸಮಸ್ತ ಜೀವರೂ ಅನಾದಿ ಶರೀರ ಬಂಧವಿದ್ದು ದೇವರ ಪ್ರಸಾದದಿಂದ ಮುಕ್ತರಾಗುವುದರಿಂದ ನಿತ್ಯರಾದರೂ ಕ್ಷರರು ಎನಿಸಿಕೊಳ್ಳುವರು. ತ್ರಿಗುಣರೂಪ ಸೂಕ್ಷ್ಮಜಡಪ್ರಕೃತಿ, ಓಂಕಾರಾದ್ಯಕ್ಷರಗಳು, ಕ್ಷಣಾದಿ ಕಾಲ ಸಹ, ಸ್ಥೂಲ ಸೂಕ್ಷ್ಮಭಾವ ವಿಕಾರಪ್ರವಾಹ ಹೊಂದುವುದರಿಂದ ಕ್ಷರಗಳು ಎಂದು ತಿಳಿಸುವ ಶಾಸ್ತ್ರರಹಸ್ಯವನ್ನು ಮಂದರೆಂಬ ಅಭೇದಜ್ಞಾನ ದಾರ್ಢ್ಯಯಿರುವರಿಗೆ ಬೋಧೆ ಮಾಡದೆ ಸರ್ವತ್ರ ಸಜ್ಜನರ ಚಿಂತಿಸುವುದು. ॥೨೫॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪಂಚಭೇದ ತತ್ತ್ವವನ್ನು ಇನ್ನೂ ವಿವರಿಸುತ್ತಾರೆ.

ಪೂರ್ವೋಕ್ತ ಪದ್ಯಗಳಲ್ಲಿ ಕ್ಷರಾಕ್ಷರ ಭೇದದ ವಿವರಣೆಯನ್ನು ತಿಳಿಸ ಲಾಗಿದೆ. ಈ ಕಾರಣದಿಂದ ಆದಿಯಲಿ ಎಂದಿದ್ದಾರೆ.

ಯಾವ ವಿಧವಾದ ನಾಶವೂ ಇಲ್ಲದೇ ಶಶ್ವದೇಕಪ್ರಕಾರವಾಗಿರುವ ಚೇತನ ವರ್ಗಕ್ಕೆ ಅಕ್ಷರರು ಎಂದು ಹೆಸರು. ಕ್ಷರ–ಎಂದರೆ, ನಾಶವೆಂದರ್ಥ ಅಕ್ಷರ–ವೆಂದರೆ ನಾಶರಹಿತವಾದದ್ದು.

ಈ ಅಕ್ಷರವರ್ಗದಲ್ಲಿ ಶ್ರೀಲಕ್ಷ್ಮೀದೇವಿ ಮತ್ತು ಶ್ರೀಮನ್ನಾರಾಯಣ ಇವರಿಬ್ಬರು ಸೇರಿದ್ದಾರೆ.

ಮಧುನಾಮಕ ದೈತ್ಯನನ್ನು ಸಂಹರಿಸಿದ ಶ್ರೀಹರಿಯು ಮಧುಸೂದನನು. ಶಶ್ವದೇಕಪ್ರಕಾರನಾಗಿರುವನು. ಶ್ರೀರಮಾದೇವಿ ದೇಹತಃ ಕಾಲತಃ ದೇಶತಃ ನಾಶರಹಿತಳು. ಇದರಿಂದ ಅಕ್ಷರನಾಮಕಳು. ಆದರೆ ಅಕ್ಷರ ವರ್ಗಕ್ಕೆ ಸೇರಿದ್ದರೂ. ಶ್ರೀಪರಮಾತ್ಮನಿಂದ ಭಿನ್ನಳು. ದೇಹತಃ ಕಾಲತಃ ದೇಶತಃ ನಾಶವನ್ನು ಹೊಂದುವ ಜೀವರು ಕ್ಷರವರ್ಗಕ್ಕೆ ಸೇರಿದ್ದಾರೆ. ಇವರಲ್ಲಿ ಸಾತ್ವಿಕರು–ರಾಜಸರು–ತಾಮಸರು ಎಂಬ ತ್ರಿವಿಧ ಜೀವಪ್ರಭೇದವಿದೆ. ಬ್ರಹ್ಮಾದಿ ತೃಣಜೀವ ಪರ್ಯಂತ ವಿದ್ಯಮಾನರಾಗಿರುವ ಜೀವರಾಶಿಗಳಲ್ಲಿ ಪರಸ್ಪರ ಭೇದವಿದೆ. ಇದೇ ಜೀವ–ಜೀವ ಭೇದವು.

ಮೂಲಜಡಪ್ರಕೃತಿ. ಓಂಕಾರರೂಪವಾದ ಪ್ರಣವಮಂತ್ರ, ಮಹಾಕಾಲ, ಅಣುಕಾಲಗಳೆಂಬ ಕಾಲಪ್ರಭೇದಗಳು ಜಡವರ್ಗಕ್ಕೆ ಸೇರಿವೆ.

ವೇದಗಳು ಅನಾದಿನಿತ್ಯ ಅಪೌರುಷೇಯ. ವೇದಗಳು ಶ್ರೀಪರಮಾತ್ಮನಲ್ಲಿ ಆಶ್ರಯ ಪಡೆಯುವುವು. ಅಂತೆಯೇ ಕಾಲವು ಪ್ರವಾಹತೋನಿತ್ಯವು

ನೀರಿನ ಪ್ರವಾಹವು ಹರಿಯುತ್ತಿರುವಾಗ, ನಾವು ನೋಡುತ್ತಿರುವಂತೆಯೇ ಒಂದು ಪ್ರವಾಹ ನಾಶವಾಗಿ, ಅದರ ಸ್ಥಾನದಲ್ಲಿ ಇನ್ನೊಂದು ಪ್ರವಾಹ ಬರುವುದು. ಈ ದೃಷ್ಟಿಯಿಂದ ಅನಿತ್ಯವು, ಪ್ರವಾಹತೋನಿತ್ಯವು. ಮಹಾಕಾಲ, ಅಣುಕಾಲಗಳೆಲ್ಲವೂ ಕಾಲಸ್ವರೂಪನಾದ ಕಾಲನಾಮಕನಲ್ಲಿ ಸೇರುವುದು. ಇವರಿಂದ ಜಡಗಳೂ ಕ್ಷರಗಳೆನಿಸುವುವು. ಇವುಗಳಲ್ಲಿ ಪರಸ್ಪರ ಭೇದವಿದೆ. ಇದೇ ಜಡ–ಜಡಭೇದ.

ಇಂತು ಕ್ಷರವರ್ಗದಲ್ಲಿ ಜೀವ–ಜೀವಭೇದ ಜಡ–ಜಡಭೇದ ಮತ್ತು ಜೀವ ಜಡಭೇದ ಎಂಬ ಮೂರು ಭೇದಗಳಿವೆ.

ಈಶನ ವಿವಕ್ಷಯಾ,ಜೀವೇಶಭೇದ (ಇವರಲ್ಲಿ ರಮಾ–ಮಧುಸೂದನರ ಭೇದವೂ ಗ್ರಾಹ್ಯ) ಮತ್ತು ಜಡೇಶಭೇದ–ಎಂದು ಎರಡು ಪ್ರಕಾರ.

ಒಟ್ಟಿನಲ್ಲಿ ಪಂಚಭೇದಗಳೆಂದು ಐದು ಪ್ರಕಾರವಾದ ಭೇದಗಳು ನಿತ್ಯ. ಈ ಭೇದ ಸ್ವಾಭಾವಿಕವಾಗಿದೆ. ಈಶ್ವರನಿಂದ ನಿರ್ಮಿತವಲ್ಲ. ಅನಾದಿ ನಿತ್ಯವಾದದ್ದು.

ಇಂತು ಈ ರಹಸ್ಯವನ್ನು ಗುರೂಪದೇಶದ್ವಾರಾ ಅರಿತು, ಅದನ್ನು ರೂಢಿಸಿಕೊಂಡು, ಸರ್ವತ್ರದಲ್ಲಿ ಇದನ್ನು ಧ್ಯಾನಕ್ಕೆ ವಿಷಯುವನ್ನಾಗಿ ಮಾಡಿ, ಚಿಂತಿಸುತ್ತಿರಬೇಕೆಂದು ತತ್ತ್ವದ ಮರ್ಮವನ್ನು ತಿಳಿಸುತ್ತಾರೆ.

ಪ್ರಮಾಣ :

೧. ದ್ವಾವಿಮೌ ಪುರುಷೌಲೋಕೇ ಕ್ಷರಾಕ್ಷರ ಏವಚ ।
ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ॥
—ಗೀತಾವಾಕ್ಯ

೨. ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ॥
—ಗೀತಾವಚನ ॥೨೫॥

# ಪದ್ಯ—೨೬

**ಮೂಲ:-**

**ದೀಪದಿಂ ದೀಪಗಳು ಪೊರಮು ।**
**ಟ್ಟಾಪಣಾಲಯುಗತ ತಿಮಿರಗಳ ।**
**ತಾ ಪರಿಹರಗೈಸಿ ತದ್ಗತಪದಾರ್ಥ ತೋರ್ಪಂತೆ ॥**
**ಸೌಪರಣಿವರವಹನ ತಾ ಬಹು ।**
**ರೂಪನಾಮದಿ ಎಲ್ಲ ಕಡೆಯಲಿ ।**
**ವ್ಯಾಪಿಸಿದ್ದು ಯಥೇಷ್ಟ ಮಹಿಮೆಯ ತೋರ್ಪ ತಿಳಿಸದಲೆ ॥೨೬॥**

**ಅವತರಣಿಕೆ :–**

ಸರ್ವತ್ರಾಧಿಷ್ಠಾನಗಳಲ್ಲಿ ವ್ಯಾಪ್ತನಾಗಿ ಆಯಾ ಅಧಿಷ್ಠಾನಗಳ ಸ್ವಭಾವ ಧರ್ಮಗಳನ್ನು ಅಭಿವ್ಯಕ್ತಿ ಮಾಡುತ್ತಾನೆಂದೂ, ಆ ಸರ್ವೇಶ್ವರನ ಮಹಾಮಹಿಮೆಯನ್ನು ಸದೃಷ್ಟಾಂತವಾಗಿ ತಿಳಿಸುತ್ತಾರೆ.

**ಪ್ರತಿಪದಾರ್ಥ**

**ದೀಪದಿಂ**–ಒಂದು ಮೂಲದೀಪದಿಂದ, **ದೀಪಗಳು**–ಅನೇಕ ದೀಪಗಳು, **ಪೊರಮುಟ್ಟು**–ಮೂಲ ತೇಜಸ್ಸಿನಿಂದ ಹೊರಟು. **ಆಪಣಾಲಯುಗತ**–ವ್ಯಾಪಾರ ಮಾಡತಕ್ಕ ಅಂಗಡಿಯಲ್ಲಿ ವ್ಯಾಪಿಸಿಕೊಂಡಿರುವ. **ತಿಮಿರಗಳ**–ಕತ್ತಲೆಯನ್ನು, **ಪರಿಹರಗೈಸಿ**–ದೂರಮಾಡಿ, **ತದ್ಗತ**–ಆ ಅಂಗಡಿಯಲ್ಲಿರುವ, **ಪದಾರ್ಥ**–ಮಾರಾಟದ ಸರಕುಗಳನ್ನು, **ತೋರ್ಪಂತೆ**–ಪ್ರದರ್ಶಿಸುವೋಪಾದಿಯಲ್ಲಿ. **ಸೌಪರಣಿವರವಹನ**–ಸೌಪರಣೀದೇವಿಯರ ಪತಿಯಾದ ಗರುಡನನ್ನೇ ವಾಹನವನ್ನಾಗಿ ಉಳ್ಳ, **ತಾ**–ಗರುಡವಾಹನನಾದ ಶ್ರೀಪರಮಾತ್ಮನು. **ಬಹುರೂಪನಾಮದಿ**–ಸರ್ವಾಧಿಷ್ಠಾನಗಳ ರೂಪಾಕಾರನಾಗಿ, ಅವುಗಳ ಹೆಸರುಗಳಿಂದಲೇ,

**ಎಲ್ಲ ಕಡೆಯಲಿ**–ಸರ್ವತ್ರ. **ವ್ಯಾಪಿಸಿದ್ದು**–ವ್ಯಾಪಕನಾಗಿದ್ದು. **ಯಥೇಷ್ಟ**–ಅಪಾರವಾದ, **ತಿಳಿಸದಲೆ**–ತನ್ನ ಇರವನ್ನು ಪ್ರಕಟಿಸದೇ, **ಮಹಿಮೆಯ ತೋರ್ಪ**–ತನ್ನ ಮಹಿಮೆಯನ್ನು ಪ್ರದರ್ಶಿಸುತ್ತಿರುವನು. ॥೨೬॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನೆ

ದೇವರು ಸರ್ವತ್ರ ಸಮನಾಗಿದ್ದಾಗ್ಯೂ ಅಧಿಷ್ಠಾನದ ಶಕ್ತಿಯನ್ನೇ ವ್ಯಕ್ತ ಮಾಡಿ ತೋರಿಸುವುದ್ದರಿಂದ ಜೀವರ ತಾರತಮ್ಯ ತಿಳಿಸಿ ಸ್ವಸಾಮರ್ಥ್ಯ ಸರ್ವರಿಗೂ ತಿಳಿಸಧಾಂಗೆ ಇರುವನೆಂದು ಸದೃಷ್ಟಾಂತವಾಗಿ ಹೇಳತಾರೆ.

ಒಂದು ದೀಪದಿಂದ ಅನೇಕ ದೀಪಗಳು ಹೊರಟು, ವ್ಯಾಪಾರಮಾಡತಕ್ಕ ಅಂಗಡಿ ಮನೆಯಲ್ಲಿ ಇಡಲ್ಪಟ್ಟ ಪದಾರ್ಥಗಳ ಕಾಣಗೊಡದೆ ಅಂಧಕಾರ ಸುತ್ತಿಕೊಂಡಿರುವ, ಇನ್ನೂ ಅನೇಕ ಪ್ರದೇಶಗಳಲ್ಲಿರುವ, ದೀಪಗಳಾದ ತಾವು ಪರಿಹಾರ ಮಾಡಿ, ಅಂಗಡಿಯಲ್ಲಿರುವ ಅಂಧಕಾರದಲ್ಲಿರುವ ಪದಾರ್ಥಗಳ ತೋರಿಸೋದಾಗತವೆ. ಈ ದೀಪಗಳೋಪಾದಿಯಲ್ಲಿ ಸೌಪರಣೀದೇವಿಯರ ಪತಿಯಾದ ಗರುಡದೇವರೇ ವಾಹನನಾಗಿ ಉಳ್ಳ ಬಿಂಬರೂಪಿ ಪರಮಾತ್ಮ ದೀಪ ಸದೃಶನಾಗಿ, ಅಂಶಿಭೂತನಾಗಿ ಜೀವಾಂತರ್ಗತದಲ್ಲಿ ಇರತಕ್ಕ ತಾನು, ಒಂದು ದೀಪದಿಂದ ಅನೇಕ ದೀಪಗಳು ಹೊರಟಂತೆ ತನ್ನ ಅಂಶಿಯಿಂದ ಅನೇಕವಾದ ದೀಪಸಾಮ್ಯಗಳಾದ ಅನೇಕ ಅಂಶಗಳು ಹೊರಟು, ಅಂಗಡಿಯಲ್ಲಿ ನಾನಾ ನಾಮದಿಂದ ಯುಕ್ತವಾದ ಪದಾರ್ಥಗಳೋಪಾದಿಯಲ್ಲಿ, ದೇಹಾಖ್ಯ ಪಟ್ಟಣದಲ್ಲಿ, ಇಂದ್ರಿಯಾಖ್ಯ ಅಂಗಡಿಗಳಲ್ಲಿ, ವ್ಯಾಪಾರಕ್ಕೆ ಯೋಗ್ಯವಾದ ಆಯಾ ಇಂದ್ರಿಯಗತ ಅನೇಕವಿಧ ಸದ್ವ್ಯಾಪಾರಗಳೆಂಬೋ ನಾನಾ ನಾಮದಿಂದ ಯುಕ್ತವಾದ ಪದಾರ್ಥಗಳು ನಾನಾ ವಿಧಗಳಾಗಿ ಇರೋವಾಗಿ ಅವೆ. ಈ ಪದಾರ್ಥಗಳ ವ್ಯಾಪಾರ ಮಾಡತಕ್ಕವ ವರ್ತಕನಾದ ಜೀವ. ಈ ಜೀವಗೆ

ಅಂಗಡಿಗೆತ ಪದಾರ್ಥಗಳು ಕಾಣಗೊಡದಂತೆ, ಅಜ್ಞಾನಾಖ್ಯ ಅಂಧಕಾರ ಸುತ್ತಿಕೊಂಡು ಆದೆ. ಅಂಧಕಾರ ಪರಿಹಾರಕ್ಕೆ ಒಂದು ದೀಪದಿಂದ ಅನೇಕ ದೀಪಗಳು ಮುಟ್ಟಿಸಿ, ಅವನ್ನು ಅಂಗಡಿ ಮನೆಯಲ್ಲಿ ಇಟ್ಟು ಅಂಧಕಾರವನ್ನ ವರ್ತಕ ಪರಿಹಾರಗೈಸಿದಂತೆ ಜೀವಸಾಂಕೇತನಾದ ವರ್ತಕನು, ಜೀವಾಂತರ್ಗತ ನಾದ, ಅಂಶಿಭೂತನಾದ ಪರಮಾತ್ಮ ಅನೇಕ ಅಂಶಗಳಿಂದ ದೇಹೇಂದ್ರಿಯಾದಿ ಎಲ್ಲಾ ಪ್ರದೇಶಗಳಲ್ಲಿ ಅಂಶವಿಶೇಷದಿಂದ ವ್ಯಾಪಿಸಿದ್ದಾನೆ ಎಂದು ತಿಳದು,ಆಯಾ ಇಂದ್ರಿಯಗಳಲ್ಲಿ ಅಂಶರೂಪಗಳ ಆವಾಹನವೆಂಬ ದೀಪಗಳ ಮುಟ್ಟಿಸಿ, ಸರ್ವ ವ್ಯಾಪಾರವೂ ಈಶತಂತ್ರದಿಂದ ಆಗತದೆ ಎಂದು ಮಾಡತಕ್ಕ ಅನುಸಂಧಾನ ದಿಂದ, ಅಜ್ಞಾನಾಖ್ಯ ಅಂಧಕಾರ ಪರಿಹಾರವಾಗತದೆ. ಆಗ್ಗೆ ಲಾಭ ಹೊಂದ ತಕ್ಕ ವ್ಯಾಪಾರಕ್ಕೆ ಯೋಗ್ಯವಾದ ಸುಕರ್ಮಗಳೆಂಬೋ ಪದಾರ್ಥಗಳು ಜ್ಞಾನ ಚಕ್ಷುಸ್ಸಿಗೆ ಗೋಚರವಾಗತವೆ. ತಾನು ಇದ್ದು ಸರ್ವವ್ಯಾಪಾರವೂ ಮಾಡಸ ತೇನು ಎಂಬೋದು, ಅಪಕ್ವ ಕಾಲದಲ್ಲಿ ಜೀವಗೆ ಪ್ರತ್ಯಕ್ಷನಾಗಿ ತಿಳಿಸದೆ, ಈ ಪ್ರಕಾರ ಅನುಸಂಧಾನ ಮಾಡುವ ಅಧಿಕಾರಿಗೆ ಜೀವನ ಯೋಗ್ಯತಾನುಸಾರ ಸಂಪೂರ್ಣವಾದ ತನ್ನ ಮಹಾತ್ಮೆಯನ್ನು ತೋರಸತಾನೆ. ಜೀವ ಅಸ್ವತಂತ್ರ ನೆಂತಲೂ, ತಾನು ಸ್ವತಂತ್ರನೆಂತಲೂ, ಸರ್ವವೂ ತನ್ನಾಧೀನವೆಂತಲೂ, ತನ್ನ ದ್ವಾರಾ ಜೀವನಕ್ರಿಯಾ ಎಂತಲೂ, ಇತ್ಯಾದಿ ಮಹಿಮಾವನ್ನ ಅನುಸಂಧಾತೃಗಳಿಗೆ ತಿಳಸತಾ ಇರತಾನೆ ಎಂತ ತಾತ್ಪರ್ಯ ॥೨೬॥

## ಭಾವಪ್ರಕಾಶಿಕೆ

ಒಂದು ದೀಪವಿದ್ದರೆ ಆ ದೀಪದಿಂದ ಮತ್ತೊಂದು ಅದರಿಂದ ಮತ್ತೊಂದು ದೀಪಗಳನ್ನು ಹಚ್ಚಿ ಅಂಗಡಿಗಳಲ್ಲೂ ಮನೆಗಳಲ್ಲೂ ಇಟ್ಟರೆ ಆ ದೀಪಗಳು ಅಲ್ಲಲ್ಲಿರುವ ಕತ್ತಲುಗಳನ್ನು ಪರಿಹರಿಸಿ ಅಲ್ಲಿರುವ ಪದಾರ್ಥಗಳನ್ನು ಜನರಿಗೆ ತೋರ್ಪಡಿಸುವಂತೆ ಶ್ರೀಪರಮಾತ್ಮನು ತನ್ನ ಮೂಲರೂಪವಾದ ಪದ್ಮನಾಭರೂಪದಿಂದ, ಅವತಾರರೂಪ, ಅಂಶರೂಪ ಮೊದಲಾದ ಅನೇಕ ರೂಪಗಳಿಂದ ಶ್ರೀಪರಮಾತ್ಮನೇ ಎಲ್ಲಾ ಕರ್ಮಗಳನ್ನು ಮಾಡಿದವನೆಂದು ಸಾಧಾರಣ ಜನರಿಗೆ ತಿಳಿಸದೆ ರಾಜರುಗಳಲ್ಲಿದ್ದು ರಾಜಕಾರ್ಯಗಳನ್ನೂ, ಭೃತ್ಯರ ಲ್ಲಿದ್ದು ಭೃತ್ಯಕಾರ್ಯಗಳನ್ನೂ ಮಾಡಿಸಿ ಜ್ಞಾನಿಗಳಿಗೆ ಮಾತ್ರ ತನ್ನ ಮಹಿಮೆ

ಯನ್ನು ತೋರ್ಪಡಿಸುವನು. ದೀಪವಾದರೂ ತನ್ನ ಪ್ರಕಾಶದಿಂದ ಆಯಾ ಸ್ಥಳಗಳಲ್ಲಿರುವ ಪದಾರ್ಥಗಳನ್ನು ಕಣ್ಣುಳ್ಳವರಿಗೆ ತೋರಿಸುವುದೇ ಹೊರತು ಕುರುಡರಿಗೆ ಹೇಗೆ ಆ ದೀಪವು ಪದಾರ್ಥ ಕಾಣುವಂತೆ ಮಾಡದೋ ಆದರಂತೆ ಪರಮಾತ್ಮನು ತನ್ನ ಮಹಿಮೆಯನ್ನು ಜ್ಞಾನಿಗಳಿಗೆ ತೋರಿಸುವನೇ ಹೊರತು ಅಜ್ಞಾನಿಗಳಿಗೆ ತೋರಿಸನು. ॥೨೬॥

## ಭಾವದರ್ಪಣ

ಬಹುರೂಪದಿಂದ ಸರ್ವತ್ರವ್ಯಾಪ್ತನೆಂದು ಸದೃಷ್ಟಾಂತ ಹೇಳುತ್ತಾರೆ. ದೀಪೇತಿ, ಪೊರಮಟ್ಟು= ಹೊರಗೆ ಹೊರಟು. ತದ್ಗತ= ಒಳಗೆ ಇರ ತಕ್ಕಂಥ ॥೨೬॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ದೀಪ ಇತಿ ॥ ಆಪಣ= ಅಂಗಡಿ । ತಿಮಿರ= ಕತ್ತಲೆ ॥೨೬॥

## ಕನ್ನಡಾರ್ಥ

ಪರಮಾತ್ಮನು ವ್ಯಾಪ್ತನಾಗಿದ್ದರೂ ಅನೇಕ ಬಹುರೂಪಗಳಿಂದ ಆಯಾ ಅಧಿಷ್ಠಾನಗಳಿಗೆ ಅನುಸಾರವಾಗಿ ಅಲ್ಲಲ್ಲಿ ಅಭಿವ್ಯಕ್ತನಾಗಿ ತನ್ನ ಮಹಿಮೆಯನ್ನು ತೋರಿಸುತ್ತಾನೆ. ಎಂಬುದನ್ನು ದೀಪದೃಷ್ಟಾಂತದಿಂದ ವಿಶದಪಡಿಸುತ್ತಾರೆ. "ದೀಪ" ಎಂಬ ಪದ್ಯದಿಂದ. ॥೬॥

## ಶ್ರೀಗುರುಹೃದಯಪ್ರಕಾಶಿಕೆ

ದೇವರು ಸರ್ವತ್ರ ಸಮನಾಗಿದ್ದಾಗ್ಯೂ, ಅಧಿಷ್ಠಾನದ ಶಕ್ತಿಯನ್ನೇ ವ್ಯಕ್ತಿ ಮಾಡಿ ತೋರಿಸುವುದರಿಂದ ಜೀವರ ತಾರತಮ್ಯ ತಿಳಿಸಿ ಸ್ವಸಾಮರ್ಥ್ಯ ಸರ್ವರಿಗೂ ತಿಳಿಸದ ಹಾಗೆ ಇರುವನೆಂದು ಸದೃಷ್ಟಾಂತ ತಿಳಿಸುತ್ತಾರೆ, ದೀಪ

ವೆಂದು. ಒಂದೇ ಅಗ್ನಿಅಭಿಮನ್ಯಮಾನದೀಪದಿಂದ ಬತ್ತಿಗಳ ತಾರತಮ್ಯಾನುಸಾರ ಅನೇಕ ದೀಪಗಳು ಹೊರಟು ಆಪಣವೆಂಬ ಅಂಗಡಿ, ಆಲಯವೆಂಬ ಮನೆ ಮುಂತಾದ್ದರಲ್ಲಿರುವ ಕತ್ತಲೆಯು ಪರಿಹರಿಸಿ ಅಲ್ಲಿರುವ ವಸ್ತುಗಳನ್ನು ಸ್ಪಷ್ಟಾಸ್ಪಷ್ಟ ಮುಂತಾದ ವಿಧದಿಂದ ತೋರಿಸುವ ಹಾಗೆ. ಸೌಪರ್ಣವರನೆಂಬ ಗರುಡನೇ ವಾಹನವಾಗಿ ಉಳ್ಳದೇವರು ಎಲ್ಲ ಕಡೆಯಲ್ಲಿಯೂ ತಾನು ಬಹುರೂಪ ನಾಮಾದಿ ಎಂದರೆ, ಆಯಾಯಾ ಅಧಿಷ್ಠಾನ ನಾಮರೂಪ ಧರಿಸಿ ವ್ಯಾಪಿಸಿದ್ದು, ಯಥೇಷ್ಟ ಮಹಿಮೆಯನ್ನು ಎಂದರೆ ತನ್ನ ಅಪರಿಮಿತ ಸಾಮರ್ಥ್ಯವನ್ನು ನೋಡುವರಿಗೆ ತಿಳಿಸದೆ, ತಚ್ಛಕ್ತಿ ಮಾತ್ರ ಕ್ರಿಯಾದಿಗಳನ್ನು ವ್ಯಕ್ತಿ ಮಾಡಿಕೊಡುತ್ತಿರುವನು ಎಂದರೆ, ಜನನಮರಣಾದಿಗಳಿಂದ ಜೀವರಲ್ಲಿ ಅಸ್ವಾತಂತ್ರ್ಯ ತಿಳಿಯಬರುವ ಕಾರಣ ದೇವರು ಸರ್ವತ್ರ ಇದ್ದಾನೆಂದು ವಿವೇಕಿಗಳಿಗೆ ತೋರತ್ತದೆಂದು ಅರ್ಥ. ॥೨೬॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವಾಧಿಷ್ಠಾನಗಳಲ್ಲಿ ವ್ಯಾಪ್ತನಾಗಿರುವ ಶ್ರೀಪರಮಾತ್ಮನ ಅಪರಿಮಿತ ಮಹಾಮಹಿಮೆಗಳನ್ನು ಸುಂದರವಾದ ದೃಷ್ಟಾಂತದಿಂದ ವಿವರಿಸುತ್ತಾರೆ.

ಸರಕುಗಳನ್ನು ವ್ಯಾಪಾರಮಾಡುವ ಅಂಗಡಿಗೆ ಆಪಣ ಎಂದು ಹೆಸರು. ಅಂಗಡಿಯಲ್ಲಿ ಕತ್ತಲು ಆವರಿಸಿದಾಗ, ಅದರಲ್ಲಿ ಆಯಾಯಾ ಸ್ಥಾನಗಳಲ್ಲಿ ಇಟ್ಟಿರುವ ವ್ಯಾಪಾರದ ಸರಕುಗಳು ಕಾಣಿಸುವುದಿಲ್ಲ. ಆ ಕತ್ತಲೆಯನ್ನು ಪರಿಹರಿಸಲು ವರ್ತಕನು ಒಂದು ದೀಪವನ್ನು ಹಚ್ಚಿಟ್ಟು, ಅದರಿಂದ ಅನೇಕ ದೀಪಗಳನ್ನು ಹಚ್ಚಿ, ಆಯಾಯಾ ಸ್ಥಾನಗಳಲ್ಲಿಡುವನು. ಇದರಿಂದ ಆಪಣಾಲಯಗತ ಕತ್ತಲೆಯು ಪರಿಹಾರವಾಗಿ, ಸರಕುಗಳು ಸ್ಪಷ್ಟವಾಗಿ ಗೋಚರವಾಗುವುವು.

ಇದೊಂದು ಸುಂದರವಾದ ದೃಷ್ಟಾಂತ, ಮೂಲದೀಪದ ಜ್ವಾಲೆಯಿಂದ, ಅನೇಕ ದೀಪಗಳು ಉರಿಯಲಾರಂಭಿಸುವುವು. ಇದರಿಂದ ಮೂಲದೀಪದ ಜ್ವಾಲೆಯು ಪ್ರಕಾಶ ಕುಂದುವುದಿಲ್ಲ. ಆ ಜ್ವಾಲೆಯು ಇತರ ದೀಪಗಳ ಪ್ರಕಾಶಕ್ಕೆ ಕಾರಣವಾಗುವುದು.

ಈ ದೃಷ್ಟಾಂತದಲ್ಲಿ ಬಿಂಬರೂಪೀ ಶ್ರೀಪರಮಾತ್ಮನು ಮೂಲದೀಪದ ಜ್ವಾಲೆಯಿದ್ದಂತೆ. ನಮ್ಮ ಶರೀರವೆಂಬುದೇ ಪಟ್ಟಣ, ಅಜ್ಞಾನವೆಂಬುದೇ ಅಂಗಡಿಯನ್ನು ಆವರಿಸಿರುವ ಕತ್ತಲೆಯು. ಇಂದ್ರಿಯಗಳ ದ್ವಾರಾ ಜೀವನು ಅನುಭವಿಸುವ ವಿಷಯಗಳೇ ವ್ಯಾಪಾರದ ಸರಕುಗಳು. ಜೀವನು ಮೂಲೇಶ ನಾಮಕ ಬಿಂಬನ ಅಡಿದಾವರೆಗಳಲ್ಲಿದ್ದು, ಆಶ್ರಯಹೊಂದಿ, ಸಾಧನಶರೀರ ವೆನಿಸಿದ ಈ ಸ್ಥೂಲದೇಹಗತ ಸಕಲೇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತ ನಾಗಿದ್ದಾನೆ. ಮೂಲರೂಪೀ ಬಿಂಬನು, ಪ್ರಕಾಶತೋವ್ಯಾಪ್ತನಾದ ಜೀವನಲ್ಲಿ ಅಂಶರೂಪಗಳಿಂದ ವಿದ್ಯಮಾನನಾಗಿದ್ದಾನೆ. ಬಿಂಬನು ಅಂಶರೂಪ. ದೇಹಗತ ಇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನಲ್ಲಿ ಪ್ರೇರಕನಾಗಿರುವ ಬಿಂಬನು ಅಂಶರೂಪಗಳಿಂದ ಇದ್ದಾನೆ. ಶ್ರೀಪರಮಾತ್ಮನ ಅಂಶ–ಅಂಶಿರೂಪ ಗಳಿಗೆ ಪರಸ್ಪರ ಭೇದವಿಲ್ಲ. ಈ ದೃಷ್ಟಾಂತದಲ್ಲಿ ವ್ಯಾಪಾರದ ಸರಕುಗಳನ್ನು ಮಾರುವ ವರ್ತಕನೇ ಜೀವನು. ಸರಕುಗಳು ಶಬ್ದಾದಿ ವಿಷಯಗಳು. ಅವುಗಳ ಅನುಭವವನ್ನು ಇಂದ್ರಿಯಗಳ ದ್ವಾರಾ, ಇಂದ್ರಿಯಾಭಿಮಾನಿದೇವತೆಗಳ ದ್ವಾರಾ ವರ್ತಕನಾದ ಜೀವನಿಗೆ ತಂದುಕೊಡುವುದರಿಂದ ಬಿಂಬನು ದೀಪ ಸದೃಶನು.

ಸೌಪರಣಿಯು ಗರುಡದೇವರ ಪತ್ನಿ. ಸೌಪರ್ಣೀಪತಿಯಾದ ಗರುಡನ ಹೆಗಲ ಮೇಲೆ ಕುಳಿತು ಸಂಚರಿಸುವ ಶ್ರೀಹರಿಯು ಸೌಪರಣೀವರವಹನು.

ಅಂತಹ ಸೌಪರಣೀವರವಹನು ಸರ್ವಸ್ಥಳಗಳಲ್ಲಿ, ಸರ್ವಾವಸ್ಥೆಗಳಲ್ಲಿ ಸರ್ವದೇಶಕಾಲಾದಿಗಳಲ್ಲಿ ಆಯಾಯಾ ಅಧಿಷ್ಠಾನಗಳ ಹೆಸರಿನಿಂದಲೇ, ತದ್ರೂಪ ತದಾಕಾರನಾಗಿ ವ್ಯಾಪಿಸಿದ್ದಾನೆ.

ಇಂತು, ಸರ್ವತ್ರವ್ಯಾಪಕನ ಮಹಿಮಾತಿಶಯಗಳು ಅಪರಿಮಿತ, ಅಗಣಿತ. ಆವನ ಯಥೇಷ್ಟ ಮಹಿಮೆಗಳನ್ನು ಯಾರೂ ಸಾಕಲ್ಯೇನ ಅರಿಯರು. ತಾನು ತನ್ನ ಇರವನ್ನು ತಿಳಿಸದೆ ಮಹಿಮೆಗಳನ್ನು ತೋರ್ಪನು. ॥೨೬॥

## ಪದ್ಯ–೨೭

**ಮೂಲ :–**

**ನಳಿನಮಿತ್ರಗೆ ಇಂದ್ರಧನು ಪ್ರತಿ ।**
**ಫಲಿಸುವಂತೆ ಜಗತ್ತ್ರಯವು ಕಂ ।**
**ಗೊಳಿಪದನುಪಾಧಿಯಲಿ ಪ್ರತಿಬಿಂಬಾಹ್ವಯದಿ ಹರಿಗೆ ॥**
**ತಿಳಿಯೆ ತ್ರಿಕಕುದ್ಧಾಮನತಿ ಮಂ ।**
**ಗಳ ಸುರೂಪವ ಸರ್ವ ಠಾವಿಲಿ ।**
**ಪೊಳೆವ ಹೃದಯಕೆ ಪ್ರತಿದಿವಸ ಪ್ರಹ್ಲಾದಪೋಷಕನು ॥೨೭॥**

ಸೂರ್ಯನ ಕಿರಣಗಳಿಂದ ಕಾಮನಬಿಲ್ಲು ಪ್ರತಿಫಲಿಸುವಂತೆ, ಬಿಂಬ ರೂಪಿಯಾದ ಶ್ರೀಹರಿಗೆ ಜಗತ್ತ್ರಯವು ಪ್ರತೀಕವೆಂದೆನಿಸುವುದೆಂದು ತಿಳಿಸುತ್ತಾರೆ ॥೨೭॥

**ನಳಿನಮಿತ್ರಗೆ**–ಕಮಲಮಿತ್ರನಾದ ಸೂರ್ಯನಿಗೆ, **ಇಂದ್ರಧನು**–ಮಳೆಗಾಲದಲ್ಲಿ ಆಕಾಶದಲ್ಲಿ ಮೂಡುವ ಕಾಮನ ಬಿಲ್ಲು, **ಪ್ರತಿಫಲಿಸುವಂತೆ**–ಧನುಸ್ಸಿನ ಆಕಾರದಲ್ಲಿ ಪ್ರತಿಫಲಿಸುವ ರೀತಿಯಲ್ಲಿ. **ಜಗತ್ತ್ರಯವು**–ತ್ರಿವಿಧ ಜೀವರು (ಜಗತ್‌ಶಬ್ದವು ಜೀವಪರ). **ಉಪಾಧಿಯಲಿ**–ಪ್ರತಿಫಲಿಸುವ ವಸ್ತುವಿನಂತೆ, **ಹರಿಗೆ**–ಬಿಂಬನಾದ ಶ್ರೀಪರಮಾತ್ಮನಿಗೆ, **ಪ್ರತಿಬಿಂಬಾಹ್ವಯದಿ**–ಪ್ರತಿಬಿಂಬ ಎಂಬ ಹೆಸರಿನಿಂದ, **ಕಂಗೊಳಿಪುದು**–ವಿದ್ಯಮಾನವಾಗಿದೆ. **ತಿಳಿಯೆ**–ಈ ರೀತಿ ಬಿಂಬಪ್ರತಿಬಿಂಬಗಳ ಅನ್ಯೋನ್ಯ ಸಂಬಂಧವನ್ನು ತಿಳಿದರೆ, **ತ್ರಿಕಕುದ್ಧಾಮನ**–ಶ್ವೇತದ್ವೀಪ, ಅನಂತಾಸನ ಮತ್ತು ವೈಕುಂಠ ಎಂಬ ಮುಕ್ತಧಾಮಗಳನ್ನೇ ಮಂದಿರವನ್ನಾಗಿ ಉಳ್ಳ ಶ್ರೀಪರಮಾತ್ಮನ, **ಅತಿ ಮಂಗಳ ಸುರೂಪವ**–ಅತ್ಯಂತ ಶುಭಪ್ರದವಾದ ಸಮೀಚೀನ ರೂಪಗಳನ್ನು **ಸರ್ವಠಾವಿನಲಿ**–ದೇಹಾಂತರ್ಗತ ಸರ್ವ ಇಂದ್ರಿಯಗಳಲ್ಲಿ, ಅಂತೆಯೇ

ಬ್ರಹ್ಮಾಂಡಾಂತರ್ಗತ ಸರ್ವಸ್ಥಳಗಳಲ್ಲಿ (ಸರ್ವಕಾಲದೇಶಾದಿಗಳಲ್ಲಿ), **ತಿಳಿಯೆ**–ತಿಳಿದಿದ್ದೇ ಆದರೆ, **ಪ್ರತಿದಿವಸ**–ನಿತ್ಯದಲ್ಲಿ (ಅನವರತ ಎಡಬಿಡದೆ). **ಪ್ರಹ್ಲಾದಪೋಷಕನು** – ಪ್ರಹ್ಲಾದವರದನಾದ ಶ್ರೀಲಕ್ಷ್ಮೀನರಸಿಂಹನು, **ಹೃದಯಕೆ**–ಮನಸ್ಸಿಗೆ, ಅಂದರೆ, ಹೃದಯಗತ ಕಮಲದಲ್ಲಿ, **ಪೊಳೆವ**–ಪ್ರತ್ಯಕ್ಷನಾಗುವನು ॥೨೭॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಕಮಲಗಳಿಗೆ ಮಿತ್ರನಾದ ಸೂರ್ಯಗೆ ಎಂದರೆ, ಸೂರ್ಯನ ದ್ವಾರಾ ವರ್ಷಾಕಾಲದಲ್ಲಿ ಆಕಾಶದಲ್ಲಿ ಇಂದ್ರದೇವರ ಧನುಸ್ಸು ಯಾವ ರೀತಿಯಿಂದ ಬೊಗ್ಗಿ ಇರುತ್ತದೋ ಅದೇ ಪ್ರಕಾರವಾಗಿ ಧನುರಾಕಾರದಿಂದ ತೇಜೋವಿಶಿಷ್ಟವಾಗಿ ಛಾಯಾ ಎಂಬುದು ಪ್ರತಿಫಲಿಸೋದಾಗತದೆ. ಆ ಧನುಸ್ಸು ಸೂರ್ಯ ಇರೋ ಕಾಲದಲ್ಲೇ ನಾಶವಾಗತದೆ. ಆದ್ದರಿಂದ ಇಂದ್ರಧನುಸ್ಸು ಉಪಾಧಿಯಿಂದ ಪ್ರತಿಫಲಿಸಿದ್ದಾಯಿತೇ ಹೊರತು, ಅನುಪಾಧಿ ದ್ವಾರಾ ಪ್ರತಿಫಲಿಸಿದ್ದಾಗಲಿಲ್ಲ. ಅನುಪಾಧಿಯೇ ಆಗಿದ್ದರೆ, ಸೂರ್ಯೋದಯಾರಭ್ಯ ಅಸ್ತಮಾನದವರಿಗೂ ೩೬೦ ದಿವಸದವರಿಗೂ ಇರಬೇಕು. ಈ ರೀತ್ಯಾ ಇಲ್ಲದ್ದರಿಂದ, ಉಪಾಧಿಯಿಂದ ಪ್ರತಿಫಲಿಸಿದಂತೆ ಸಿದ್ಧವು. ಇದರಂತೆ ಜಗತ್ರಯವೂ. ಜಗಚ್ಛಬ್ದ ಜೀವಪರ. ತ್ರಿವಿಧಜೀವರು ಪೂರ್ವೋಕ್ತ ದೃಷ್ಟಾಂತದಿಂದ ಉಪಾಧಿಯುಕ್ತರು. ಉಪಾಧಿ ದಾವವೆಂದರೆ–ಪರಮಾತ್ಮಗೆ ನಿತ್ಯಾವಿಯೋಗಿನಿಯಾದ ರಮಾದೇವಿಯರು ಜೀವಾಂತರ್ಗತದಲ್ಲಿ ಇದ್ದಾರೆ. ತದಂತರ್ಗತ ಬಿಂಬರೂಪೀ ಪರಮಾತ್ಮ ಇದ್ದಾನೆ. ಬಿಂಬ ಪ್ರತಿಬಿಂಬರ ಮಧ್ಯದಲ್ಲಿ ಇರತಕ್ಕ ರಮಾದೇವಿಯರೆಂಬ ವಸ್ತುವಿಶೇಷಕ್ಕೆ ಉಪಾಧಿ ಎಂತ ಸಂಕೇತ. ಬಿಂಬ ಪ್ರತಿಬಿಂಬರ ಮಧ್ಯಗತ ದರ್ಪಣಸದೃಶರು ರಮಾದೇವಿಯರು. ಅಷ್ಟೇ ಹೊರತು, ದರ್ಪಣದ್ವಾರಾ ಪ್ರತಿಬಿಂಬ ಪ್ರತಿಫಲಿಸಿದಂತೆ ಜೀವನೆಂಬೋ ಪ್ರತಿಬಿಂಬನಲ್ಲಿ ಉಪಾಧಿಪ್ರದರ್ಶನವು. ಈ ಪ್ರಕಾರ ಉಪಾಧಿಯಿಂದ ಸಹಿತ

ರಾದವರು, ಪ್ರತಿಬಿಂಬರಾದ ತ್ರಿವಿಧ ಜೀವರುಗಳು. ಗರುಡಪುರಾಣದಲ್ಲಿ ಪ್ರಮಾಣವದೆ. ಈ ಪ್ರಕಾರ ಜ್ಞಾನದೃಷ್ಟಿಯಿಂದ ಜೀವರಿಗೆ ವಿಷಯುವು. ಉಪಾಧಿರಹಿತವಾಗಿ ಪ್ರತಿಬಿಂಬರಾಗಿ ಇರತಕ್ಕವರು ರಮಾದೇವಿಯರು. ರಮಾ ದೇವಿಯರಿಗೂ ಪರಮಾತ್ಮನಿಗೂ ಮಧ್ಯೆ ಬ್ಯಾರೆ ಅಂತರವಿಲ್ಲ. ಆದ್ದರಿಂದ ಅನುಪಾಧಿಪ್ರತಿಬಿಂಬರು ರಮಾದೇವಿಯರು. ಕ್ಷರಾಕ್ಷರದಲ್ಲಿ ಸೋಪಾಧಿರನು ಪಾಧಿ ಇದು. ಬಿಂಬರೂಪಿಯಾದ ಪರಮಾತ್ಮಗೆ ಪೂರ್ವೋಕ್ತಪ್ರಕಾರ ಪ್ರತಿಬಿಂಬನಾಮದಿಂದ ಕರಿಸತಕ್ಕ ಕ್ಷರಾಕ್ಷರಜೀವರ ನಿರಂತರದಲ್ಲೂ, ಈ ರೀತ್ಯಾ ಪ್ರತಿಬಿಂಬರೆಂದು ತಿಳಿದರೆ. ಮೂರಾದಂಥಾ ಶ್ರೇಷ್ಠವಾದ ಶ್ವೇತದ್ವೀಪ, ಅನಂತಾಸನ, ವೈಕುಂಠ–ಈ ಮೂರುಮನೆಗಳುಳ್ಳ ಶ್ರೀಪರಮಾತ್ಮನ ಅತ್ಯಂತ ಮಂಗಳಪ್ರದರೂಪವನ್ನ ಧ್ಯಾನಿಸಿದರೆ, ಮನಸ್ಸಿಗೆ ದೇಹಾಂತರ್ಗತ ಸರ್ವ ಇಂದ್ರಿಯಗಳಲ್ಲೂ ಪ್ರತ್ಯಕ್ಷನಾಗತಾನೆ. ದಾರು ಎಂದರೆ–ದೇಹಾಂತರ್ಗತರಾದ ರಾಕ್ಷಸರ ಸಂಹಾರ ಮಾಡಿ, ಸಮೀಚೀನವಾದ ಜ್ಞಾನಾನಂದ ಕೊಡತಕ್ಕ ಶ್ರೀನರಸಿಂಹರೂಪೀ ಪರಮಾತ್ಮ ಎಂತ ತಾತ್ಪರ್ಯ. ಪ್ರಹ್ಲಾದನ್ನ ರಕ್ಷಿಸಿದಂತೆ, ಸರ್ವಾರಿಷ್ಟ ನಿವೃತ್ತಿಮಾಡಿ, ಶುಭರೂಪವಾದ ಆನಂದಾತಿಶಯ ಕೊಟ್ಟು ಕಾಪಾಡತಾನೆ–ಎಂತ ತಾತ್ಪರ್ಯ.

ಶ್ರೀಗರುಡಪುರಾಣದ ೨ನೆಯ ಅಧ್ಯಾಯದಲ್ಲಿ ಈ ಪ್ರಕಾರ ಹೇಳತಾರೆ : ದೇವರ ಮೂಲರೂಪದಲ್ಲಿ, ದೇವರ ಅವತಾರರೂಪಗಳು ಬ್ರಹ್ಮಾದಿ ಕಲ್ಯಂತ ಸಕಲಜೀವರಲ್ಲಿ ಇರೋ ಬಿಂಬರೂಪಗಳು, ಮಹಾಪ್ರಳಯದಲ್ಲಿ ಒಂದಂಶದಿಂದ ಲಯಹೊಂದುತ್ತಾವೆ, ಒಂದಂಶದಿಂದ ಜೀವರುಗಳಲ್ಲಿ ಇರದೆ ಸರ್ವಾಂಶದಿಂದ ಮೂಲರೂಪದಲ್ಲಿ ಏಕೀಭೂತ ಆಗೆತವೆಂದು ಪೇಳುವವರಿಗೆ ತಮಃ ಪ್ರಾಪ್ತಿ ಆಗತದೆ.

ಸ್ವರೂಪೋಪಾಧಿ, ಬಾಹ್ಯೋಪಾಧಿಯಾದ ಈ ಲಿಂಗದೇಹ. ಈ ಲಿಂಗ ದೇಹೋಪಾಧಿ ಎಂಬುದು ಮುಕ್ತಿಯೋಗ್ಯರಿಗೂ, ತಮೋಯೋಗ್ಯರಿಗೂ, ನಿತ್ಯ ಸಂಸಾರಿಗಳಿಗೂ ಮುಕ್ತಿಯಲ್ಲಿ ನಾಶವಾಗುತ್ತದೆ. ಪ್ರತಿಬಿಂಬದಲ್ಲಿ ದೇವರ

ಹತ್ತಿರ ಲಕ್ಷ್ಮೀರೂಪಗಳು ಸಹಾ ಉಂಟು. ಪ್ರಳಯದಲ್ಲಿ ದೇವರಂತೆ ಲಕ್ಷ್ಮೀ ರೂಪಗಳು ಒಂದಂಶದಿಂದ ಲಕ್ಷ್ಮೀಮೂಲರೂಪದಲ್ಲಿ ಸೇರುತ್ತವೆ. ॥೨೭॥

## ಭಾವಪ್ರಕಾಶಿಕೆ

"ಸೋಪಾಧಿರನುಪಾಧಿಶ್ಚ ಪ್ರತಿಬಿಂಬೋ ದ್ವಿಧೇಯತೇ । ಜೀವ ಈಶ ಸ್ಯಾನುಪಾಧಿ ಇಂದ್ರಚಾಪೋ ಯಥಾರವೇಃ॥ ಎಂದು ಬ್ರಹ್ಮಸೂತ್ರಭಾಷ್ಯದಲ್ಲಿ ಸೋಪಾಧಿಪ್ರತಿಬಿಂಬವೆಂತಲೂ ಅನುಪಾಧಿಪ್ರತಿಬಿಂಬವೆಂತಲೂ ಎರಡು ಪ್ರಕಾರ. ಅದರಲ್ಲಿ ಇಂದ್ರಧನುಸ್ಸು ಹೇಗೆ ಸೂರ್ಯನಿಗೆ ಸೋಪಾಧಿಪ್ರತಿ ಬಿಂಬವೋ ಹಾಗೆ ಪರಮಾತ್ಮನಿಗೆ ಜೀವರು ಅನುಪಾಧಿಪ್ರತಿಬಿಂಬರೆಂದು ಹೇಳಿರುವರು. ಸೋಪಾಧಿ ಅಂದರೇನು ? "ಉಪಾಧಿಸತ್ವೆ ಪ್ರತಿಬಿಂಬಸ್ಯ ಸತ್ವಂ ಉಪಾಧಿನಾಶೋ ಪ್ರತಿಬಿಂಬಸ್ಯ ನಾಶಃ ॥" ಉಪಾಧಿ ಇದ್ದರೆ ಪ್ರತಿಬಿಂಬ ಕಾಣುವುದು. ಕನ್ನಡಿ ಇಲ್ಲದಿದ್ದರೆ ಪ್ರತಿಬಿಂಬವೂ ಇಲ್ಲ. ಇದರಂತೆ ಸೂರ್ಯನು ಪೂರ್ವದಲ್ಲಿ, ಅಥವಾ ಪಶ್ಚಿಮದಲ್ಲಿ ಇರುವ ಕಾಲದಲ್ಲಿ ನೀರುಳ್ಳ ಮೇಘವು ಸೂರ್ಯನಿಗೆ ಅಭಿಮುಖವಾಗಿದ್ದಾಗ ಸೂರ್ಯನ ಬಿಂಬವು ಆ ಮೇಘದಲ್ಲಿ ಪ್ರತಿಬಿಂಬಿತವಾಗಿ ಬಿಲ್ಲಿನಂತೆ ನಾನಾ ಬಣ್ಣಗಳಿಂದ ಕಾಣುವದು. ಇದಕ್ಕೆ ಸೋಪಾಧಿಪ್ರತಿಬಿಂಬವೆಂಬ ಹೆಸರು. ನೀರುಳ್ಳ ಮೇಘವು ಇಲ್ಲದ ಕಾಲದಲ್ಲಿ ಆ ಇಂದ್ರಧನುಸ್ಸು ಕಾಣುವುದಿಲ್ಲ. ಅನು ಪಾಧಿ ಎಂದರೆ ಜೀವನ ಸ್ವರೂಪದೇಹವೇ ಉಪಾಧಿ ಎನಿಸಿ ಎಂದಿಗೂ ನಾಶ ವಿಲ್ಲದೇ ಪರಮಾತ್ಮನ ಬಿಂಬರೂಪವು ಸ್ವರೂಪದೇಹದಲ್ಲೇ ಪ್ರತಿಬಿಂಬಿಸು ವುದು, ಯದ್ಯಪಿ ಅಲ್ಲೂ ಸ್ವರೂಪದೇಹವೆಂಬ ಉಪಾಧಿ ಇದ್ದರೂ ಆ ಉಪಾಧಿಯು ಕನ್ನಡಿ. ನೀರು, ಮೇಘ ಮೊದಲಾದುವುಗಳಂತೆ ಕ್ಷಣಿಕವಲ್ಲ. ಗೀತೆಯಲ್ಲಿ ಬಾಹ್ಯೋಪಾಧಿಯೆಂತಲೂ, ಅಂತರೂಪಾಧಿ ಎಂತಲೂ ಎರಡು ಪ್ರಕಾರ ಹೇಳಿ ಬಾಹ್ಯೋಪಾಧಿಗೆ ನಾಶವುಂಟು. ಅಂತರೂಪಾಧಿಗೆ ನಾಶವಿಲ್ಲ ವೆಂದು ಹೇಳಿರುವರು. ನಾಶವಿಲ್ಲದ ಉಪಾಧಿಯೇ ಅನುಪಾಧಿ ಪ್ರತಿಬಿಂಬವು. ನಾಶವುಳ್ಳ ಉಪಾಧಿಯಿಂದ ಹುಟ್ಟುವ ಪ್ರತಿಬಿಂಬವು ಸೋಪಾಧಿ ಎಂದು ತಿಳಿಯಬೇಕು. ದಾಸರಾಯರು ಕೊಟ್ಟ ಉಪಮಾನವು ಅನುಪಾಧಿಪ್ರತಿಬಿಂಬಕೆಕ

ಸೋಪಾಧಿಪ್ರತಿಬಿಂಬವನ್ನು ಉಪಮಾನವಾಗಿ ಕೊಟ್ಟಿರುವರು. ಇದೊಂದು ವಿಷಮ ದೃಷ್ಟಾಂತವು. ಭಾಗವತ ನವಮಸ್ಕಂಧದಲ್ಲಿ "ಯಃ ಶೇತೇ ನಿಶಿ ಸಂತ್ರಸ್ತೋ ಯಥಾನಾರೀ ದಿವಾ ಪುಮಾನ್" ಹಗಲು ಕಾಲದಲ್ಲಿ ಸ್ತ್ರೀಯಾದ ವಳು ಹೇಗೆ ಭಯಪಡುವಳೋ, ಹಾಗೆ ರಾತ್ರಿಕಾಲದಲ್ಲಿ ಪುರುಷನಾದರೂ ಭಯಪಟ್ಟು ಮಲಗಿರುವನು ಎಂದು ಊರ್ವಶಿಯು ಪುರೂರವಸ ರಾಜನನ್ನು ಕುರಿತು ಹೇಳಿದ ವಾಕ್ಯವು. ಈ ಉಪಮಾನದಂತೆ ಇಲ್ಲೂ ಸೂರ್ಯನ ಪ್ರತಿಬಿಂಬವು ಇಂದ್ರಧನುಸ್ಸು ರೂಪವಾಗಿ ಉಪಾಧಿಯಿಂದ ಹೇಗೆ ಕಾಣು ವುದೋ ಹಾಗೆ ಪರಮಾತ್ಮನ ಪ್ರತಿಬಿಂಬವು ಜೀವರೆಂದು ತಿಳಿಯಬೇಕು. ಹೀಗೆ ಸರ್ವತ್ರ ಇರುವ ಜೀವರನ್ನು ಪರಮಾತ್ಮನ ಪ್ರತಿಬಿಂಬರೆಂದು ತಿಳಿದು ಬಿಂಬರೂಪಿಯಾದ ಪರಮಾತ್ಮನನ್ನು ಸರ್ವತ್ರ ಚಿಂತಿಸಲು. ಪರಮಾತ್ಮನು ಪ್ರಸನ್ನನಾಗಿ ಅಪರೋಕ್ಷದಲ್ಲಿ ಪ್ರಕಾಶಿಸುವನು ॥೨೭॥

## ಭಾವದರ್ಪಣ

ಶ್ರೀಶನೇ ಬಿಂಬನೆಂತಲೂ ಜೀವನೇ ಪ್ರತಿಬಿಂಬನೆಂತಲೂ ಇಂದ್ರಧನು ದೃಷ್ಟಾಂತ ಕೊಡುತ್ತಾರೆ. ನಲಿನಮಿತ್ರೇತಿ, ಸೂರ್ಯಯಂತರ್ಥ. "ಜೀವ ಈಶಸ್ಯಾನುಪಾಧಿ ಇಂದ್ರಚಾಪೋ ಯಥಾ ರವೇತಿ" ಪೈಂಗ್ಯಶ್ರುತೇಃ. ॥೨೭॥

## ಶ್ರೀವ್ಯಾಸದಾಸಸಿಧ್ಧಾಂತಕೌಮುದೀ

"ನಳಿನ" ಇತಿ॥ ನನು ಅಯಂ ಸೋಪಾಧಿಕ ಏವ ॥ ಸೂರ್ಯಸ್ವರೂ ಪೋಪಾಧೇಃ ಸತ್ವಾತ್ ॥ ಇತಿ ಚೇತ್ ನ ॥ ಕ್ವಚಿತ್ ರಾತ್ರಾವಪಿ ತದ್ದರ್ಶ ನಾತ್ ॥" ಇತಿ ಅಭಿನವಚಂದ್ರಿಕೋಕ್ತೇಃ ॥ "ಸೋಪಾಧಿಃ ಅನುಪಾಧಿಶ್ಚ" ಇತಿ ವಚನಾತ್ ॥ ಸ್ಪಷ್ಟತ್ವಾತ್ ಸೋಪಾಧ್ಯನುಕ್ತಿಃ. ॥೨೭॥

## ಕನ್ನಡಾರ್ಥ

ಸೂರ್ಯನಿಗೆ ಇಂದ್ರ ಧನಸ್ಸು ಪ್ರತಿಫಲಿಸುವಂತೆ ಈ ಜಗತ್ರಯವು ಪರ ಮಾತ್ಮನಿಗೆ ಉಪಾಧಿಯಲ್ಲ. ಉಪಾಧಿಯಿಲ್ಲದೇ ಪ್ರತಿಬಿಂಬವಾಗುತ್ತದೆ,

ಎಂದು ಹೇಳಿರುತ್ತಾರೆ, ಪರಮಾತ್ಮನಿಗೆ ಜೀವರು ಪ್ರತಿಬಿಂಬರು. ಪರಮಾತ್ಮನು ಬಿಂಬ. ನಮ್ಮ ಮುಖ ಮುಂತಾದ ಬಿಂಬಗಳಿಗೆ ಕನ್ನಡಿಯೊಳಗೆ ಪ್ರತಿಬಿಂಬವಾಗ ಬೇಕಾದರೆ ಕನ್ನಡಿ ಮೊದಲಾದ ಉಪಾಧಿಗಳು ಇರಬೇಕು. ಬಿಂಬನಿಗೆ ಉಪಾಧಿ ಸಂಸ್ಪರ್ಶದಿಂದ ಪ್ರತಿಬಿಂಬವಾಗುತ್ತದೆ. ಆದುದರಿಂದ ಪರಮಾತ್ಮನು ಬಿಂಬ ನಾದರೆ, ಜೀವನು ಪ್ರತಿಬಿಂಬನೆನಿಸಬೇಕಾದರೆ, ಮಧ್ಯದಲ್ಲಿ ಉಪಾಧಿಯು ಇರಬೇಕು. ಉಪಾಧಿನಾಶವಾದನಂತರ (ಕನ್ನಡಿ ಮುಂತಾದ) ನೆಳಲು ಮುಂತಾದ ಪ್ರತಿಬಿಂಬಗಳು ನಾಶಹೊಂದುವಂತೆ ಜೀವರೆಂಬ ಪ್ರತಿಬಿಂಬ ಉಪಾಧಿನಾಶದಿಂದ ನಾಶ ಹೊಂದುವರು. ಜೀವಭಾವವು ಹೋಗುವುದು. ಬ್ರಹ್ಮ ಒಂದೇ ಉಳಿಯುವುದು. ಇಂಥ ಬಿಂಬ ಪ್ರತಿಬಿಂಬ ಭಾವದಿಂದ ತಾತ್ವಿಕ ವಾಗಿ ಜೀವಭಾವವೇ ಇಲ್ಲದಂತಾಗುತ್ತದೆ, ಉಪಾಧಿಯಿಂದ ಜೀವರು ಕಲ್ಪಿತ ರೆಂದು ಹೇಳಿದಂತಾಗುತ್ತದೆ. ಆದುದರಿಂದ ಇದು ಹೇಗೆ ಸರಿ ? ಎಂದು ಸಂಶಯವು ಬರುತ್ತದೆ. ಈ ಸಂಶಯವನ್ನು ನಿವಾರಿಸಲು ಶ್ರೀಮದಾ ಚಾರ್ಯರು "ಆಭಾಸ ಏವ ಚ" ಎಂಬ ಬ್ರಹ್ಮಸೂತ್ರದ ಭಾಷ್ಯದಲ್ಲಿ ಬಿಂಬ ಪ್ರತಿಬಿಂಬಭಾವವನ್ನು ಸಮರ್ಥಿಸುತ್ತ "ರೂಪಂ ರೂಪಂ ಪ್ರತಿರೂಪೋ ಬಭೂವ" ಎಂಬ ಶ್ರುತಿಯನ್ನು ಉದಾಹರಿಸಿರುತ್ತಾರೆ ಮತ್ತು ವರಾಹಪುರಾಣ ವಚನಗಳ ಆಧಾರವನ್ನೂ ತೋರಿಸಿರುತ್ತಾರೆ.

ಪ್ರತಿಬಿಂಬಗಳಲ್ಲಿ ಎರಡು ತರಹಗಳಿರುತ್ತವೆ. ಕೆಲವು ಬಾಹ್ಯದೇಹಾದಿ ಪ್ರತಿಬಿಂಬಗಳಲ್ಲಿ ಅವಶ್ಯವಾಗಿ ಉಪಾಧಿಗಳು ಬೇಕೇಬೇಕಾಗುತ್ತವೆ. ಕನ್ನಡಿ ಮುಂತಾದುವುಗಳಲ್ಲಿ ಆಗುವ ಪ್ರತಿಬಿಂಬಗಳು ಈ ತರಹದವು ಆಗಿರುತ್ತವೆ. ಆದರೆ ಇನ್ನೂ ಕೆಲವು ಪ್ರತಿಬಿಂಬಗಳು ಉಪಾಧಿಯಿಲ್ಲದೇನೇ (ಸ್ವರೂಪಾತಿರಿಕ್ತ ಅಂದರೆ–ಬಿಂಬ ಹಾಗೂ ಪ್ರತಿಬಿಂಬಗಳನ್ನು ಬಿಟ್ಟು ಬೇರೆ ಉಪಾಧಿಗಳಿಲ್ಲದೆ) ಆಗುತ್ತವೆ. ಸೂರ್ಯನಿಗೆ ಆಗುವ ಇಂದ್ರಧನಸ್ಸು ಈ ತರಹದ ಪ್ರತಿಬಿಂಬವು. ಇದಕ್ಕೆ ಬೇರೆ ಉಪಾಧಿಯು ಇರುವದಿಲ್ಲ. ಇದಕ್ಕೆ "ನಿರುಪಾಧಿಪ್ರತಿಬಿಂಬವೆನ್ನು ತ್ತಾರೆ. "ಜೀವನು ಪರಮಾತ್ಮನಿಗೆ ನಿರುಪಾಧಿಪ್ರತಿಬಿಂಬನು ಜೀವನಸ್ವರೂಪವೇ ಜೀವನಿಗೆ ಉಪಾಧಿಯು ಹಾಗೂ ತಾನೇ ಪ್ರತಿಬಿಂಬನು." ಎಂದು ಪೈಂಗಿ ಶ್ರುತಿಯ ಆಧಾರವನ್ನು ತೋರಿಸಿರುತ್ತಾರೆ.

ಬೇರೆ ಉಪಾಧಿಗಳಿಂದ ಆಗುವ ಪ್ರತಿಬಿಂಬಗಳಲ್ಲಿ ಮಾತ್ರ (ಸೋಪಾಧಿಕ ಪತ್ರಿಬಿಂಬಗಳಲ್ಲಿ) ಉಪಾಧಿನಾಶದಿಂದ ಪ್ರತಿಬಿಂಬ ನಾಶವಾಗುವುದು. ಆದುದರಿಂದ ಜೀವನು ನಿರುಪಾಧಿಕಪ್ರತಿಬಿಂಬನಾದುದರಿಂದ ಉಪಾಧಿನಾಶದಿಂದ ಜೀವನಾಶವೆಂಬ ಭಯವಿಲ್ಲ. ಜೀವಪರಮಾತ್ಮರಿಗೆ ತಾತ್ವಿಕಬೇಧವೂ, ಜೀವನಿಗೆ ಪರಮಾತ್ಮನ ವಿಭಿನ್ನಾಂಶಭಾವವೂ ಸಿದ್ಧವಾಗುತ್ತದೆ ಎಂದು ಅಂಶಾಧಿಕರಣದಲ್ಲಿ ನಿರೂಪಿಸಿರುತ್ತಾರೆ.

ಈ ವಿಷಯದಲ್ಲಿ ಷಟ್ಪ್ರಶ್ನೋಪನಿಷತ್ತಿನಲ್ಲಿ ಹೇಳಿರುವ "ಛಾಯಾ" (ನೆಳಲು) ಎಂಬುದೂ ನಿರುಪಾಧಿಕ ಪ್ರತಿಬಿಂಬವೆಂದು ಹೇಳಿರುತ್ತಾರೆ. ಪುರುಷನ ದೇಹವೇ ಬಿಂಬ. ಅಲ್ಲಿ ಬೇರೆ ಯಾವುದೂ ಉಪಾಧಿಯಾಗಲು ಸಾಧ್ಯವಿಲ್ಲ. ಆದುದರಿಂದ ಪುರುಷದೇಹದ ಛಾಯೆಯು ನಿರುಪಾಧಿಕಪ್ರತಿಬಿಂಬವೆಂದು ಗೊತ್ತಾಗುತ್ತದೆ. ಇನ್ನು ಸೂರ್ಯನಿಗೆ ಇಂದ್ರಚಾಪವು (ಕಾಮನಬಿಲ್ಲು) ನಿರುಪಾಧಿಕಪ್ರತಿಬಿಂಬವಲ್ಲ ಸೂರ್ಯನ ಸ್ವರೂಪವೇ ಉಪಾಧಿಯೆಂದು ಹೇಳಬಹುದು. ಆದರೆ ಸೂರ್ಯನಿಂದ ಭಿನ್ನವಾದ ಉಪಾಧಿಯು ಇಲ್ಲವೆಂದೇ ಇದಕ್ಕೆ ಉತ್ತರ.

ಪ್ರಕೃತ ವ್ಯಾಖ್ಯಾನಕಾರರು "ಸೂರ್ಯನೇ ಉಪಾಧಿಯಾದುದರಿಂದ ಇಂದ್ರಚಾಪವು ಸೋಪಾಧಿಕಪ್ರತಿಬಿಂಬ"ವೆಂದು ಶಂಕಿಸಿ "ರಾತ್ರಿಯಲ್ಲಿಯೂ ಒಮ್ಮೊಮ್ಮೆ ಕಂಡುಬರುವುದರಿಂದ ಇಂದ್ರಚಾಪಕ್ಕೆ ಸೂರ್ಯನು ಉಪಾಧಿಯಾಗಿಲಾರನು" ಎಂದು "ಅಭಿನವಚಂದ್ರಿಕೆಯಲ್ಲಿ ಹೇಳಿರುತ್ತಾರೆ," ಎಂಬುದಾಗಿ ಅಭಿಪ್ರಾಯವನ್ನು ವ್ಯಕ್ತಗೊಳಿಸಿರುತ್ತಾರೆ. ಸೋಪಾಧಿಕಪ್ರತಿಬಿಂಬಗಳು ಸ್ಪಷ್ಟವಿರುವುದರಿಂದ ಪ್ರತ್ಯೇಕ ದೃಷ್ಟಾಂತವನ್ನು ಹೇಳಿರುವುದಿಲ್ಲ" ಎಂದು ತಿಳಿಯಬೇಕು. ॥೨೭॥

## ಶ್ರೀಗುರುಹೃದಯಪ್ರಕಾಶಿಕೆ

ಜೀವರು ದೇಹಾಭಿಮಾನಬದ್ಧರಾದ್ದರಿಂದ, ಜಲಗತ ಸೂರ್ಯಬಿಂಬದಂತೆ ಉಪಾಧಿ ಎಂಬ ದೇಹಾದಿ ನಿಮಿತ್ತಬದ್ಧರು. ಕಾಮನಬಿಲ್ಲೆಂದು ಅಂತರಿಕ್ಷದಲ್ಲಿ

ತೋರುವ ಧನುಸ್ಸಿನಲ್ಲಿ ಸೂರ್ಯಪ್ರತಿಬಿಂಬಿಸಿದಂತೆ ದೇವರು ನಿರಭಿಮಾನಿಯಾದ್ದರಿಂದ ಬಂಧನರಹಿತನೆಂದು ತಿಳಿಸುತ್ತಾರೆ. ನಳಿನ ಎಂದು.

ಕಮಲಮಿತ್ರನಾದ ಸೂರ್ಯನಿಗೆ ಇಂದ್ರಧನುಸ್ಸೆಂಬ ಕಾಮನಬಿಲ್ಲು ಪ್ರತಿಬಿಂಬಿಸಿ, ಸೂರ್ಯಬಿಂಬ ಸಂಬಂಧವಿಲ್ಲದೆ ಪ್ರತ್ಯೇಕ ವರ್ಣವಾಗಿ ಕಾಣಿಸುವಂತೆ ಅನುಪಾಧಿಯಲ್ಲಿ ಎಂದರೆ ಅಭಿಮಾನರೂಪಬಂಧಕ್ಕೆ ನಿಮಿತ್ತವಾಗದ ರೀತಿಯಿಂದ, ಈ ಜಗತ್ರಯವು ಶ್ರೀಹರಿಗೆ ಪ್ರತಿಬಿಂಬವೆಂಬ ಹೆಸರಿನಿಂದ, ವಿಜಾತೀಯವಾಗಿರುವುದು. ಹೀಗೆ ತ್ರಿಕಕುದ್ಧಾಮವೆಂಬ ವೈಕುಂಠ, ಶ್ವೇತದ್ವೀಪ ಮತ್ತು ಅನಂತಾಸನವೆಂಬ ಮೂರು ಉತ್ಕೃಷ್ಟ ಮನೆವುಳ್ಳ ದೇವರ ಅತಿಮಂಗಳ ಸುರೂಪವೆಂದರೆ ಪ್ರಕೃತಿ ಜೀವಾಧಿ ಸಂಬಂಧರಹಿತ ದಿವ್ಯ ಶುಭ ರೂಪವನ್ನು ಸರ್ವತ್ರದಲ್ಲೂ ತಿಳಿದರೆ, ಪ್ರತಿದಿವಸ ಹೃದಯಕೆ ಪೊಳೆವ– ಎಂದರೆ, ಸದಾ ಮನಸ್ಸಿಗೆ ಧ್ಯಾನಕ್ಕೆ ಗೋಚರಿಸುವನೆಂದರ್ಥ.

ಪ್ರಹ್ಲಾದಪೋಷಕನು–ಎಂಬುವುದರಿಂದ, ಹೀಗೆ ಉಪಾಸನೆಮಾಡಿದ್ದರಿಂದಲೇ, ಪ್ರಹ್ಲಾದನಿಗೆ ದೇವರು ಪ್ರತ್ಯಕ್ಷನಾಗಿ ಪೋಷಿಸಿದನೆಂದು ಈ ಅರ್ಥ. ಜ್ಞಾನಿಪ್ರತ್ಯಕ್ಷ ಸಹ–ಅಭಿಪ್ರಾಯ.

"ಸೋಪಾಧಿರನುಪಾಧಿಶ್ಚ ಪ್ರತಿಬಿಂಬೋದ್ವಿಧೇಯತೆ ।
ಜೀವ ಈಶಸ್ಯಾನುಪಾಧಿರಿಂದ್ರಚಾಪೋ ಯಥಾ ರವೇಃ ॥

ಎಂಬ ಶ್ರುತ್ಯರ್ಥ ವಿವರಿಸಲ್ಪಟ್ಟಿತು. ॥೨೭॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸೂರ್ಯನ ಉದಯವಾದ ತಕ್ಷಣ ಕಮಲಗಳು ಅರಳುತ್ತವೆ. ಕಮಲಗಳ ವಿಕಾಸಕ್ಕೆ ಸೂರ್ಯನ ಕಿರಣಗಳಲ್ಲಿರುವ ಪ್ರಚೋದಕಶಕ್ತಿಯೇ ಕಾರಣ. ಇದರಿಂದ ಕಮಲಮಿತ್ರನಾದ ಸೂರ್ಯನಿಗೆ ನಳಿನಮಿತ್ರನೆಂದು ಹೆಸರು.

ಮಳೆಗಾಲದಲ್ಲಿ ಸೂರ್ಯನು ಅಸ್ತನಾಗುವುದಕ್ಕೆ ಮುಂಚಿತವಾಗಿ, ಪೂರ್ವ ದಿಗಂತದಲ್ಲಿ ಕಾಮನಬಿಲ್ಲು ಮೂಡುವುದು. ಇದಕ್ಕೆ ಇಂದ್ರಧನು ಎಂದು ಹೆಸರು. ಸೂರ್ಯನ ಪ್ರಕಾಶಗತ ಸಪ್ತವರ್ಣಗಳು ಆ ಕಾಮನಬಿಲ್ಲಿನಲ್ಲಿ ಪ್ರತಿಬಿಂಬಿಸಿ, ಗೋಚರವಾಗುವುವು. ಈ ದೃಷ್ಟಾಂತದಲ್ಲಿ ಸೂರ್ಯನು ಬಿಂಬ. ಇಂದ್ರಧನುಸ್ಸು ಪ್ರತಿಬಿಂಬರೂಪವು. ಈ ಪ್ರತಿ ಬಿಂಬದ ಉತ್ಪತ್ತಿಗೆ ಮಳೆಯ ನೀರಿನ ಬಿಂದುಗಳು ಉಪಾಧಿಯು. ಉಪಾಧಿಯ ದ್ವಾರಾ ಸೂರ್ಯನ ಬೆಳಕು ರಶ್ಮಿಭಂಗಹೊಂದಿ ಸಪ್ತವರ್ಣಪಟ್ಟಿರೂಪದಲ್ಲಿ ಅಂತರಿಕ್ಷದಲ್ಲಿ ಕಾಮನಬಿಲ್ಲು ಮೂಡುವುದು.

ಅಂತೆಯೇ ಬ್ರಹ್ಮಾಂಡಗತ ಹದಿನಾಲ್ಕುಲೋಕಗಳಲ್ಲಿ ವಿದ್ಯಮಾನವಾದ ಸ್ವರ್ಗಲೋಕ ಭೂಲೋಕ ಅಧೋಲೋಕ ಎಂಬ ಲೋಕತ್ರಯಗಳನ್ನು ಜಗತ್ರಯ ಎಂದಿದ್ದಾರೆ. ಜಗತ್ ಶಬ್ದವು ಜೀವಪರವು. ಅಂದರೆ, ಜಗತ್ರಯ ಗತ ಸಕಲಜೀವರೂ ಶ್ರೀಹರಿಗೆ ಪ್ರತಿಬಿಂಬ ಭೂತರಾಗಿದ್ದಾರೆ.

ಶ್ರೀಹರಿಯು ಸಕಲಜೀವರ ಬಿಂಬನಾಗಿದ್ದಾನೆ. ಈ ಬಿಂಬಪ್ರತಿಬಿಂಬ ಸಂಬಂಧವು ನಿತ್ಯವಾದದ್ದು, ಅದಕ್ಕೆ ಎಂದೆಂದಿಗೂ ನಾಶವಿಲ್ಲ. ಆದರೆ ನಾವು ಕನ್ನಡಿಯ ಮುಂದೆ ನಿಂತಾಗ, ಕನ್ನಡಿಯಲ್ಲಿ ಬೆಳಕಿನ ಪ್ರತಿಫಲನದ ದೆಸೆಯಿಂದ ನಮ್ಮ ಪ್ರತಿಬಿಂಬ ಮೂಡುವುದು. ಇದಕ್ಕೆ ದರ್ಪಣದಂತಹ ಉಪಾಧಿ ಅಗತ್ಯ. ದರ್ಪಣವಿಲ್ಲದಿದ್ದರೆ ಪ್ರತಿಬಿಂಬ ಉಂಟಾಗುವುದಿಲ್ಲ. ದರ್ಪಣನಾಶವಾದರೆ ಪ್ರತಿಬಿಂಬವೂ ನಾಶವಾಗುವುದು. ಆದರೆ ಈಶ–ಜೀವರ ಅನ್ಯೋನ್ಯ ಸಂಬಂಧ ಹೀಗಲ್ಲ. ಇಬ್ಬರೂ ಅನಾದಿ ನಿತ್ಯರು. ಇಲ್ಲಿ ಜೀವರ ಸ್ವರೂಪಶರೀರವೇ ಉಪಾಧಿಯು. ಸ್ವರೂಪ ನಿತ್ಯವಾದ ಕಾರಣ, ಉಪಾಧಿಯೂ ನಿತ್ಯವೇ.

ಉಪಾಧಿಯಲ್ಲಿ (೧) ಬಾಹ್ಯೋಪಾಧಿ ಮತ್ತು (೨) ಅಂತರುಪಾಧಿ ಎಂದು ಎರಡು ಪ್ರಕಾರ. ಬಾಹ್ಯೋಪಾಧಿಗೆ ನಾಶವುಂಟು. ಆದರೆ ಅಂತರುಪಾಧಿಗೆ ನಾಶವಿಲ್ಲ.

ಮೇಲಿನ ಕಾಮನಬಿಲ್ಲಿನ ದೃಷ್ಟಾಂತದಲ್ಲಿ ಇಂದ್ರಚಾಪವು ಸೂರ್ಯನಿಗೆ ನಿರುಪಾಧಿಕ ಪ್ರತಿಬಿಂಬವಲ್ಲ. ಸೂರ್ಯನ ಸ್ವರೂಪವೇ ಉಪಾಧಿಯು.

ಪ್ರತಿಬಿಂಬಗಳಲ್ಲಿ (೧) ಸೋಪಾಧಿಕ ಪ್ರತಿಬಿಂಬ ಮತ್ತು (೨) ಅನುಪಾಧಿಕ ಪ್ರತಿಬಿಂಬ ಎಂದು ಎರಡು ವಿಧ.

ಇಂದ್ರಧನುಸ್ಸು ಸೂರ್ಯನಿಗೆ ಸೋಪಾಧಿಕಪ್ರತಿಬಿಂಬ (ಉಪಾಧಿದ್ವಾರಾ ಮೂಡುವ ಪ್ರತಿಬಿಂಬ) ಹಾಗೆ. ಜೀವರು ಬಿಂಬನಾದ ಶ್ರೀಪರಮಾತ್ಮನಿಗೆ ಅನುಪಾಧಿಕಪ್ರತಿಬಿಂಬರಾಗುತ್ತಾರೆ. (ಸ್ವರೂಪ ದೇಹವೇ ಉಪಾಧಿ) ಇಲ್ಲಿ ಬಿಂಬನಾದ ಈಶ, ಪ್ರತಿಬಿಂಬನಾದ ಜೀವ ಇಬ್ಬರೂ ಅನಾದಿನಿತ್ಯರು. ಇಬ್ಬರಿಗೂ ನಾಶವಿಲ್ಲ.

ಈ ರೀತಿಯಲ್ಲಿ ಈಶ–ಜೀವರ ಬಿಂಬ ಪ್ರತಿಬಿಂಬಭಾವವನ್ನು ಚೆನ್ನಾಗಿ ಅರಿಯಬೇಕು. (೧) ಶ್ವೇತದ್ವೀಪ (೨) ಅನಂತಾಸನ ಮತ್ತು (೩) ವೈಕುಂಠ ಗಳೆಂಬ ಮೂರು ಧಾಮಗಳು ಮುಕ್ತಮಂದಿರಗಳು ಇದರಲ್ಲಿ ಶ್ರೀಪರಮಾತ್ಮನ ವಾಸ. ಈ ಮುಕ್ತಧಾಮತ್ರಯಗಳಿಗೆ ತ್ರಿಕಕುದ್ಧಾಮಾ–ಎಂದಿದ್ದಾರೆ. ಕಕುತ್– ಎಂದರೆ ಗೂಳಿಯ ಬೆನ್ನಿನ ಮೇಲಿರುವ ಡುಬ್ಬವೆಂದರ್ಥ. ಅದು ಶ್ರೇಷ್ಠ ಸ್ಥಾನದ ಸಾಂಕೇತವು. ಮುಕ್ತಧಾಮಗಳು ಶ್ರೇಷ್ಠಸ್ಥಾನಗಳಾದ್ದರಿಂದ ತ್ರಿಕಕು ದ್ಧಾಮ ಎಂದಿರುವರು.

ಶ್ರೀಹರಿಯು ಜೀವ ಜಡಗಳಿಂದ ಪರಮ ವಿಲಕ್ಷಣನು ಪ್ರಕೃತಿ ಜೀವಾದಿ ಸಂಬಂಧರಹಿತನು. ಇದರಿಂದ ಜಗದ್ವಿಲಕ್ಷಣನಾದ ಶ್ರೀಹರಿಯ ಸ್ವರೂಪಕ್ಕೆ ಅತಿಮಂಗಳ ಸುರೂಪವೆಂದು ಹೇಳಿದ್ದಾರೆ.

ಶ್ರೀಹರಿಯು ದಿವ್ಯ ಭವ್ಯ ಶುಭಪ್ರದರೂಪವನ್ನು ಸರ್ವತಾವಿನಲಿ ಅಂದರೆ, ಸರ್ವಕಾಲದೇಶಾದಿಗಳಲ್ಲಿ ಧ್ಯಾನಿಸಿದವರಿಗೆ, ಅವರ ಹೃದಯಕಮಲ ದಲ್ಲಿ ಧ್ಯಾನಗೋಚರನಾಗಿ ಪ್ರತ್ಯಕ್ಷನಾಗುವನು.

ಇದನ್ನು ಪ್ರಹ್ಲಾದ ಪೋಷಕನೆಂದು ಸ್ಪಷ್ಟೀಕರಿಸುತ್ತಾರೆ. ಶ್ರೀಪ್ರಹ್ಲಾದ ರಾಜರು ಭಾಗವತೋತ್ತಮರು. ಸರ್ವತ್ರ ಶ್ರೀಹರಿಯು ಅಣುರೇಣುತೃಣಕಾಷ್ಠ ಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆಂದು ಉಪಾಸಿಸುತ್ತಿದ್ದರು. ಅವರ ಉಪಾಸನಾಫಲದಿಂದಲೇ ಸರ್ವತ್ರವ್ಯಾಪ್ತನಾದ ಶ್ರೀಹರಿಯು ನಿಜಭೃತ್ಯನ ಮಾತನ್ನು ನಿಜವಾಗಿಸಲು (ಸತ್ಯಂ ವಿಧಾತುಂ ನಿಜಭೃತ್ಯ ಭಾಷಿತಂ) ಕಂಭ ವನ್ನು ಸಿಗಿದು, ನರಸಿಂಹರೂಪದಿಂದ ಪ್ರತ್ಯಕ್ಷನಾಗಿ ದುರುಳನಾದ ಹಿರಣ್ಯ ಕಶಿಪುವನ್ನು ಸಂಹರಿಸಿದನು. ॥೨೭॥

## ಪದ್ಯ–೨೮

**ಮೂಲ :–**

**ರಸವಿಶೇಷದೊಳತಿವಿಮಲ ಸಿತ ।**
**ವಸನ ತೋಯಿಸಿ ಅಗ್ನಿಯೊಳಗಿಡೆ ।**
**ಪಸರಿಸುವುದು ಪ್ರಕಾಶ ನಸುಗುಂದದಲೆ ಸರ್ವತ್ರ ॥**
**ತ್ರಿಶಿರದೂಷಣವೈರಿ ಭಕ್ತಿಸು ।**
**ರಸದಿ ತೋಯ್ದ ಮಹಾತ್ಮರನು ಬಾ ।**
**ಧಿಸವು ಭವದೊಳಗಿದ್ದರೆಯು ಸರಿ ದುರಿತರಾಶಿಗಳು ॥೨೮॥**

**ಅವತರಣಿಕೆ :**

ಶ್ರೀಪರಮಾತ್ಮನ ಭಕ್ತಿ ಎಂಬ ರಸವಿಶೇಷದಲ್ಲಿ ತೋಯ್ದ ಮಹಾತ್ಮ ರನ್ನು, ಅವರು ಸಂಸಾರಕ್ಲೇಶಗಳಲ್ಲಿ ಸಿಲುಕಿದ್ದಾಗ್ಯೂ, ದುರಿತರಾಶಿಗಳು ಬಾಧಿಸುವುದಿಲ್ಲವೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಅತಿವಿಮಲ**–ಅತ್ಯಂತ ಶುದ್ಧವಾದ (ನಿರ್ದೋಷವಾದ), **ಸಿತವಸನ**–ಬಿಳಿಯ ಶುಭ್ರವಸ್ತ್ರವನ್ನು, **ರಸವಿಶೇಷದೊಳು**–ಅಗ್ನಿಸಂಪರ್ಕವಿದ್ದಾಗ್ಯೂ ಸುಡದೇ ಇರುವಂತೆ ಮಾಡುವ ರಸವಿಶಿಷ್ಟವಾದ ತೈಲದಲ್ಲಿ, **ತೋಯಿಸಿ**–ಚೆನ್ನಾಗಿ ಅದ್ದಿ, **ಅಗ್ನಿಯೊಳಗಿಡೆ**–ಉರಿಯುತ್ತಿರುವ ಬೆಂಕಿಯಲ್ಲಿ ಇಟ್ಟಾಗ, **ನೆಸುಗುಂದದಲೆ**–ತಾನು ಆ ಅಗ್ನಿಯಿಂದ ಸುಡದೇ (ಯಾವ ವಿಕಾರವನ್ನೂ ಹೊಂದದೆ), **ಸರ್ವತ್ರ**–ಎಲ್ಲಾ ಕಡೆಗಳಲ್ಲಿಯೂ, **ಪ್ರಕಾಶ ಪಸರಿಸುವುದು**–ಬೆಳಕನ್ನು ಹರಡುವುದು. ಅದರಂತೆ, **ತ್ರಿಶಿರದೂಷಣವೈರಿ**–ತ್ರಿಶಿರ ದೂಷಣ, ಇತ್ಯಾದಿ ದೈತ್ಯರ ಸಂಹಾರಕನಾದ ಶ್ರೀರಾಮಚಂದ್ರನ, **ಭಕ್ತಿಸುರಸದಿ**–ಭಕ್ತಿ ಎಂಬ ಸಮೀಚೀನವಾದ ರಸವಿಶೇಷದಲ್ಲಿ, **ತೋಯ್ದು**–ಆಸಕ್ತ ಮಾನಸ್ಕರಾದ (ಭಕ್ತಿರಸದಲ್ಲಿಯೇ ಮುಳುಗಿರುವ), **ಮಹಾತ್ಮರನು**–ಮಹಾನುಭಾವರಾದ ಭಕ್ತರನ್ನು, **ಭವದೊಳಗಿದ್ದರೆಯು ಸರಿ**–ದಾರಾಪುತ್ರಾದಿಗಳಿಂದ ಸಹಿತರಾಗಿ ಕ್ಲೇಶಾದಿ ದುಃಖಗಳಿಂದ ಕೂಡಿದ ಸಂಸಾರದಲ್ಲಿದ್ದರೂ ಕೂಡ, **ದುರಿತರಾಶಿಗಳು**–ಪಾಪಸಮೂಹಗಳು, **ಬಾಧಿಸವು**–ಅವರನ್ನು ಎಂದೆಂದಿಗೂ ಬಾಧಿಸುವುದಿಲ್ಲ. ॥೨೮॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಭಗವದ್ಭಕ್ತರಿಗೆ ದುರಿತರಾಶಿಗಳು ಪೀಡಿಸೋದಿಲ್ಲ ಎಂತ ಹೇಳತಾರೆ.

ಅತ್ಯಂತ ನಿರ್ದೋಷವಾದ ವಸ್ತ್ರವನ್ನು ಅಗ್ನಿಸ್ಪರ್ಶವಾದ ಕಾಲಕ್ಕೂ ಸುಡದೆ ಇರತಕ್ಕ ರಸವಿಶೇಷವಾದ ಒಂದು ತೈಲದಲ್ಲಿ, ಅತಿಶುಭ್ರವಾದ ವಸ್ತ್ರವನ್ನು ಚಂದಾಗಿ ಅದ್ದಿದವರಾಗಿ ಅಗ್ನಿಯಲ್ಲಿಟ್ಟರೆ, ಅಗ್ನಿಸಂಬಂಧದಿಂದ ಜ್ವಾಲವಾಗಿ, ಆ ಜ್ವಾಲದ ಯೋಗ್ಯತೆ ಎಷ್ಟೋ ಅಷ್ಟು ಪರಿಯಂತ ಸರ್ವತ್ರ ಪ್ರಕಾಶ

ವ್ಯಾಪಿಸೋದಾಗತದೆ. ಆ ವಸ್ತ್ರ ದಾವದದೆ ಅದು ಕಿಂಚಿತ್ತಾದರೂ ಅಗ್ನಿಯಿಂದ ಬಾಧಿತವಾಗಿ ಲೋಪಕಾಣದೆ ಇರೋದಾಗತದೆ. ಅಗ್ನಿ ಎಂಬುದು ವಸ್ತ್ರಕ್ಕೆ ಸಂಬಂಧವಾದ ರಸ ವಿಶೇಷವನ್ನ ದಹಿಸಿ, ವಸ್ತ್ರವನ್ನ ದಹಿಸದೆ ಬಿಡೋದಾಗ ತದೆ. ಇದರೋಪಾದಿಯಲ್ಲಿ ತ್ರಿಶಿರ, ದೂಷಣ ಎಂಬ ದೈತ್ಯರಿಗೆ ಶತ್ರುವಾದ ಶ್ರೀರಾಮನಲ್ಲಿ ಮಾಹಾತ್ಮ್ಯಪೂರ್ವಕಸುದೃಢಸ್ನೇಹರೂಪವಾದ ಭಕ್ತಿ ಎಂಬ ಸಮೀಚೀನವಾದ ರಸದಲ್ಲಿ ತೋಯ್ದ ಮಹಾತ್ಮರನ ಅಂದರೆ ಮಹಾಭಕ್ತರನ್ನ ಸುಖದುಃಖಾತ್ಮಕವಾದ ದಾರಾಪುತ್ರಾದಿಗಳ ಸಹಿತವಾದ ಸಂಸಾರದೊಳಗಿದ್ದರೂ, ಅದನ್ನನುಸರಿಸಿ ಈಶಸಂಕಲ್ಪಾನುಸಾರ ಪಾಪಗಳು ಘಟನವಾಗುತ್ತಾ ಇರುತ್ತವೆ. ಹೀಂಗೆ ಇದ್ದ ಕಾಲಕ್ಕೂ ಸಹ ಪಾಪರಾಶಿಗಳು ಬಾಧಿಸೋದಿಲ್ಲ. ಮುಖ್ಯ, ಜ್ಞಾನಭಕುತಿವೈರಾಗ್ಯ ಸಹಿತರಾದ ಭಕ್ತರಿಗೆ ಪಾಪಲೇಪವಾಗೋದಿಲ್ಲ ಎಂತ ದೃಷ್ಟಾಂತವೆಂದು ತಾತ್ಪರ್ಯ. ॥೨೮॥

## ಭಾವಪ್ರಕಾಶಿಕೆ

ಒಂದು ಮೂಲಿಕೆಯು ರಸದಲ್ಲಿ ಬಟ್ಟೆಯನ್ನು ತೋಯಿಸಿ ಬೆಂಕಿಯಲ್ಲಿ ಸುಟ್ಟರೆ ಬಟ್ಟೆಯು ಸುಡುವಂತೆ ಕಾಣಬಂದರೂ ಬಟ್ಟೆಯು ಮಾತ್ರ ಸುಡುವುದಿಲ್ಲ. ಇದು ಸಾಧಾರಣವಾಗಿ ಇಂದ್ರಜಾಲ ವಿದ್ಯೆ ಮಾಡುವವರು ತೋರಿಸುತ್ತಿರುವರು. ಅಂತಹ ಮೂಲಿಕೆಯು ರಸದಲ್ಲಿ ಶುಭ್ರವಾದ ಬಟ್ಟೆಯನ್ನು ತೋಯಿಸಿ ಅದನ್ನು ಬೆಂಕಿಯಲ್ಲಿ ಹಾಕಿದರೆ ನೋಡಿದವರಿಗೆ ಜಾಜ್ವಲ್ಯಮಾನವಾಗಿ ಬಟ್ಟೆಯು ಸುಡುವಂತೆ ಕಂಡು ಬಂದರೂ ಉರಿಯು ಆರಿದ ಮೇಲೆ ನೋಡಿದರೆ ಶುಭ್ರ ವಸ್ತ್ರವು ಮೊದಲಿನಂತೆ ಶುಭ್ರವಾಗಿ ಇರುವುದು. ಇದರಂತೆ ಜಗದೀಶ್ವರನಾದ ಪರಮಾತ್ಮನಲ್ಲಿ ದೃಢವಾದ ಭಕ್ತಿಯೆಂಬ ರಸದಿಂದ ತೋಯ್ದ ಮನಸ್ಸುಳ್ಳ ಭಗವದ್ಭಕ್ತರು ಸುಖದುಃಖ ಸಂಬಂಧವಾದ ಸಂಸಾರವೆಂಬ ಅಗ್ನಿಯ ಮಧ್ಯದಲ್ಲಿದ್ದರೂ ಸಂಸಾರಸಂಬಂಧವಾದ ದುರಿತ ರಾಶಿಗಳೆಂಬ ಅಗ್ನಿಜ್ವಾಲೆಯು ಅವರನ್ನು ಏನೂ ಬಾಧಿಸುವುದಿಲ್ಲ. ಭಗವಂತನ ಪಾದಾರವಿಂದದಲ್ಲಿ ದೃಢವಾದ ಭಕ್ತಿಯುಳ್ಳವರನ್ನು ಸಂಸಾರವು ಏನೂ ಬಾಧಿಸುವುದಿಲ್ಲವೆಂಬ ತಾತ್ಪರ್ಯ. ॥೨೮॥

**ಭಾವದರ್ಪಣ**

ಶ್ರೀಹರಿಯ ಭಕ್ತಿರಸದಲ್ಲಿ ಮನಸು ತೋಯ್ದವಗೆ ಯಾವ ಬಾಧಾನೂ ಇಲ್ಲೆಂದು ಹೇಳುತ್ತಾರೆ ರಸೇತಿ. ॥೨೮॥

**ಶ್ರೀವ್ಯಾಸದಾಸಸಿಧ್ಧಾಂತಕೌಮುದೀ**

ರಸ ಇತಿ ॥ ನಸುಗುಂದದಲೇ ನೊಂದದೆ, ವಸ್ತ್ರಮುವಶಿಷ್ಯತೇ ॥ ರಸಃ ದಹ್ಯತೇ॥ ಸ ಏವ ರಸಃ ರಕ್ಷಕಃ ಯಥಾ ಇತ್ಯಸ್ಯ ಪ್ರಕೃತೋಪಯೋಗಃ.॥೨೮॥

**ಕನ್ನಡಾರ್ಥ**

ಪ್ರಜ್ವಲಿಸುವ ಅಗ್ನಿಯಲ್ಲಿ ಅಗ್ನಿಬೇಧಕ ರಸದಲ್ಲಿ ಅದ್ದಿದ (ತೋಯಿಸಿದ) ವಸ್ತ್ರವನ್ನು ಹಾಕಲು, ವಸ್ತ್ರವು ಸುಡದೇ ಹಾಗೆಯೇ ಉಳಿಯುವುದು. ಆ ರಸವು ಸುಟ್ಟುಹೋಗುತ್ತದೆ. ಆ ರಸವೇ ವಸ್ತ್ರಕ್ಕೆ ಹೇಗೆ ರಕ್ಷವೋ ಹಾಗೆ ಹರಿ ಭಕ್ತಿರಸದಿಂದ ಆರ್ದ್ರವಾದ ಹೃದಯವುಳ್ಳವನಿಗೆ ಆ ಭಕ್ತಿರಸವೇ ರಕ್ಷಕವೆಂದು ತಿಳಿಯಬೇಕು. ॥೨೮॥

**ಶ್ರೀಗುರುಹೃದಯಪ್ರಕಾಶಿಕೆ**

ದೇವರ ಭಕ್ತರೇ ದುಃಖಾದಿ ಬಂಧರಹಿತರಾಗಿರುವಲ್ಲಿ ದೇವರು ನಿರುಪಾಧಿಕನೆಂದು ಹೇಳತಕ್ಕದ್ದೇನೆಂದು ಸದೃಷ್ಟಾಂತ ತಿಳಿಸುತ್ತಾರೆ. ರಸ ಎಂದು. ಅತಿ ಪರಿಶುದ್ಧ ಬಿಳೀಬಟ್ಟೆಯನ್ನು ರಸವಿಶೇಷವೆಂಬ ತೈಲಭೇದಸಾರದಲ್ಲಿ ಅದ್ದಿ ಬೆಂಕಿಯಲ್ಲಿ ಹಾಕಿದರೆ ನಸುಗೂಂದದಲೆ ಎಂದರೆ, ಬಟ್ಟೆ ಸ್ವಲ್ಪವೂ ಕುಂದಿ ಸುಡದ ಹಾಗೆ, ದೀಪಪ್ರಕಾಶ ಮಾತ್ರ ಸಾರವಿರುವವರೆಗೆ ವಿಸ್ತಾರವಾಗಿರುವಂತೆ ಸರ್ವತ್ರದಲ್ಲೂ ತ್ರಿಶಿರ. ದೂಷಣರೆಂಬ ರಾಕ್ಷಸರಿಗೆ ವೈರಿಯಾದ ಶ್ರೀರಾಮನ ಭಕ್ತಿ ಎಂಬ ಶ್ರವಣ ಕೀರ್ತನ ಮೊದಲಾದ ನವರಸದಲ್ಲಿ ನೆನೆದಿರುವ ಮಹಾತ್ಮರನ್ನು ಭವವೆಂಬ ಜನ್ಮಾದಿ ಸಂಸೃತಿಯಲ್ಲಿ ಅವರಿದ್ದಾಗ್ಯೂ ದುರಿತರಾಶಿಗಳೆಂಬ ಪಾಪ ದುಃಖಾದಿ ಬಂಧಗಳು ಬಾಧಿಸಲಾರವು. ॥೨೮॥

# ಸರ್ವವ್ಯಾಖ್ಯಾನಸಾರಸಂಗ್ರಹ

ಭಗವಂತನ ಭಕ್ತಿ ಎಂಬ ರಸದಲ್ಲಿ ನಿರಂತರವೂ ಆಸಕ್ತ ಮನಸ್ಸುಳ್ಳ ಭಗವದ್ಭಕ್ತರು, ಸಂಸಾರಾದಿಕ್ಲೇಶಗಳ ನಡುವೆ ಸಿಲುಕಿದ್ದರೂ, ಅದರಿಂದ ಬಾಧಿತರಾಗುವುದಿಲ್ಲವೆಂದು ಭಗವದ್ಭಕ್ತಿಯ ಮಹಾತ್ಮೆಯನ್ನು ತಿಳಿಸುತ್ತಾರೆ.

ಒಂದು ವಿಶೇಷವಾದ ಮೂಲಿಕೆಯನ್ನು ಚೆನ್ನಾಗಿ ಅರೆದು ತಯಾರಿಸಿದ ರಸವಿಶೇಷವಿದೆ. ಇದಕ್ಕೆ ಅಗ್ನಿಭೇದಕರಸ ಎಂದು ಹೆಸರು.

ಅಂತಹ ರಸವಿಶೇಷದಲ್ಲಿ ಶುಭ್ರವಾದ ಬಿಳೀಬಣ್ಣದ ವಸ್ತ್ರವನ್ನು ಅದ್ದಿ, ಚೆನ್ನಾಗಿ ತೋಯಿಸಿ, ಅದಕ್ಕೆ ಅಗ್ನಿಸ್ಪರ್ಶಮಾಡಿದಾಗ, ಆ ರಸವು ಮಾತ್ರ ಸುಡುವುದು. ಅದರಿಂದ ಲೇಪಿತವಾದ ವಸ್ತ್ರವು ಸ್ವಲ್ಪವೂ ಸುಡುವುದಿಲ್ಲ. ಇದು ಆ ಮೂಲಿಕೆಯ ರಸವಿಶೇಷದ ಮಹಿಮೆ.

ತ್ರಿಶರ ಮತ್ತು ದೂಷಣ ಎಂಬ ಕ್ರೂರ ದೈತ್ಯರನ್ನು ಶ್ರೀರಾಮಚಂದ್ರನು ಸಂಹರಿಸಿದನು. ತ್ರಿಶರನೆಂಬ ದಾನವನು ಪರಾಕ್ರಮಶಾಲಿಯಾದ ದೈತ್ಯ. ಅವನಿಗೆ ಮೂರು ವಿಕಾರವಾದ ಭಯಂಕರವಾದ ಮುಖಗಳಿದ್ದುವು. ಖರ ದೂಷಣರೊಡನೆ ಮಹಾಸೇನಾಪತಿಯಾಗಿದ್ದ. ಶ್ರೀರಾಮಚಂದ್ರನ ನಿಶಿತವಾದ ಬಾಣಕ್ಕೆ ಆಹುತಿಯಾದನು. ಖರನೆಂಬ ದೈತ್ಯನು ವಿಶ್ವವಸ ಎಂಬ ಋಷಿಯಿಂದ ರಾಕಾ ಎಂಬ ರಾಕ್ಷಸಿಯಲ್ಲಿ ಜನಿಸಿದವನು. ರಾವಣನ ಬಲ ತಾಯಿಯ ಪುತ್ರ. ರಾವಣನು ಖರ ಮತ್ತು ದೂಷಣರನ್ನು ದಂಡಕಾರಣ್ಯದ ರಾಜರನ್ನಾಗಿ ನೇಮಿಸಿ, ೧೪ ಸಾವಿರ ಸೇನಾಸಮೇತರಾಗಿರುವಂತೆ ಮಾಡಿ, ತಂಗಿಯಾದ ಶೂರ್ಪಣಖಿಯನ್ನು ಅವರ ರಕ್ಷಣೆಯಲ್ಲಿಟ್ಟಿದ್ದನು. ಲಕ್ಷ್ಮಣನಿಂದ ಕಿವಿ ಮೂಗುಗಳನ್ನು ಕತ್ತರಿಸಿಕೊಂಡ ಶೂರ್ಪಣಖಿಯು ಖರನನ್ನು ಮೊರೆ ಹೊಕ್ಕಳು. ಆಗ ಖರನು ೧೪ ಸಾವಿರ ಸೇನೆಯೊಂದಿಗೆ ಶ್ರೀರಾಮನನ್ನು ಇದುರಿಸಿ, ಸೇನಾಸಹಿತ ಹತನಾದನು.

ಇಂತಹ ಶ್ರೀರಾಮಚಂದ್ರನ ಅವತಾರನಾದ ಶ್ರೀಪರಮಾತ್ಮನ ಪಾದಾರವಿಂದಗಳಲ್ಲಿ ಮಹಾತ್ಮ್ಯಜ್ಞಾನಪೂರ್ವಕವಾದ ಸುದೃಢವಾದ ಸ್ನೇಹ ರೂಪವೆಂಬ ಭಕ್ತಿರಸದಲ್ಲಿ ಮುಳುಗಿದ ಭಗವದ್ಭಕ್ತರು ಮಹಾತ್ಮರು.

ಅವರು ಜನನಮರಣಾಖ್ಯವಾದ ಸಂಸಾರದಲ್ಲಿ ಪತ್ನೀ ಪುತ್ರ ಸಹಿತರಾಗಿದ್ದು, ಸಾಂಸಾರಿಕಕ್ಲೇಶಾದಿಗಳ ಮಧ್ಯದಲ್ಲಿದ್ದರೂ ಸಹ, ಪಾಪರಾಶಿಗಳು ಅವರನ್ನು ಎಂದೆಂದಿಗೂ ಬಾಧಿಸಲಾರವು. ॥೨೮॥

## ಪದ್ಯ—೨೯

**ಮೂಲ:-**

**ವಾರಿನಿಧಿಯೊಳಗಖಿಳನದಿಗಳು ।**
**ಬೇರೆಬೇರೆ ನಿರಂತರದಲಿ ವಿ ।**
**ಹಾರಗೈವುತ ಪರಮಮೋದದಲಿಪ್ಪ ತೆರನಂತೆ ॥**
**ಮೂರು ಗುಣಗಳ ಮಾನಿಯೆನಿಸುವ ।**
**ಶ್ರೀರಮಾರೂಪಗಳು ಹರಿಯಲಿ ।**
**ತೋರುತಿಪ್ಪವು ಸರ್ವಕಾಲದಿ ಸಮರಹಿತವೆನಿಸಿ ॥ ॥೨೯॥**

**ಅವತರಣಿಕೆ :–**

ಅಗಾಧವಾದ ಸಮುದ್ರದಲ್ಲಿ ಸಮಸ್ತನದಿಗಳು ಪ್ರತ್ಯೇಕಪ್ರತ್ಯೇಕವಾಗಿದ್ದು ನಿರಂತರದಲಿ ಸಂಚರಿಸುತ್ತಾ ಇರುವೋಪಾದಿಯಲ್ಲಿ ತ್ರಿಗುಣಾಭಿಮಾನಿಯಾದ, ಶ್ರೀಲಕ್ಷ್ಮೀದೇವಿಯರ ರೂಪಗಳು ಶ್ರೀಪರಮಾತ್ಮನಲ್ಲಿ ಸರ್ವಕಾಲದಲಿ ತೋರುತಿಪ್ಪವು ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ವಾರಿನಿಧಿಯೊಳಗೆ**–ಸಮುದ್ರದಲ್ಲಿ, **ಅಖಿಳ ನದಿಗಳು**–ಸಕಲನದಿಗಳು, **ಬೇರೆ ಬೇರೆ**–ಪ್ರತ್ಯೇಕ ಪ್ರತ್ಯೇಕವಾಗಿ (ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳದೆ), **ನಿರಂತರದಲಿ**–ಸರ್ವಕಾಲದಲ್ಲಿ, **ವಿಹಾರಗೈವುತ**–ಸಂಚಾರ ಮಾಡುತ್ತಾ, **ಪರಮಮೋದದಲಿ**–ನದ್ಯಭಿಮಾನಿದೇವತೆಗಳು ಅತ್ಯಂತ ಸಂತೋಷದಿಂದ, **ಇಪ್ಪ ತೆರನಂತೆ**–ಇರುವೋಪಾದಿಯಲ್ಲಿ, **ಮೂರುಗುಣಗಳ**–ಜಡಪ್ರಕೃತಿಗತ ಸತ್ತ್ವ, ರಜ, ತಮ ಎಂಬ ತ್ರಿಗುಣಗಳ, **ಅಭಿಮಾನಿಯೆನಿಸುವ**–ಅಭಿಮಾನಿ ಎಂತ ಕರೆಯಿಸುವ, **ಶ್ರೀರಮಾರೂಪಗಳು**–ಕಾಂತಿಸಂಪನ್ನರಾದ ಲಕ್ಷ್ಮೀ ದೇವಿಯ ಅನಂತರೂಪಗಳು, **ಸಮರಹಿತವೆನಿಸಿ**–ಸಮಾನ, ಅಸಮಾನವೆಂದೆನಿಸಿ, **ಸರ್ವಕಾಲದಿ**–ಅನಾದ್ಯನಂತ ಕಾಲದಿಂದಲೂ, **ಹರಿಯಲಿ**–ಶ್ರೀಪರಮಾತ್ಮನಲ್ಲಿ, **ತೋರುತಿಪ್ಪವು**–ತೋರುತ್ತಾ ಇರುವುವು. ॥೨೯॥

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ರಮಾದೇವಿಯರು ಪರಮಾತ್ಮಗೆ ಸಮರು ಅಸಮರು ಎಂತ ಹೇಳತಾರೆ.

ಸಮುದ್ರದೊಳಗೆ ಸಮಸ್ತವಾದ ನದಿಗಳು ಪ್ರತ್ಯೇಕ ಪ್ರತ್ಯೇಕವಾಗಿ ಸದಾ ಸರ್ವಕಾಲವೂ ಸಂಚಾರ ಮಾಡತಾ, ಅತ್ಯಂತ ಸಂತೋಷದಿಂದ ಇರುವೋಪಾದಿಯಲ್ಲಿ, ಸತ್ತ್ವಾದಿ ತ್ರಿಗುಣಗಳಾದ ಮೂಲಜಡಪ್ರಕೃತಿಗೆ ಅಭಿಮಾನಿ ಎಂತ ಕರಸತಕ್ಕಂಥ ಕಾಂತಿಸಂಪನ್ನರಾದ ರಮಾದೇವಿಯರ ರೂಪಗಳು ಶ್ರೀಪರಮಾತ್ಮನಲ್ಲಿ ಸಮಾನವೆಂತಲೂ, ಅಸಮಾನವೆಂತಲೂ ಅನಾದ್ಯನಂತ ಕಾಲಕ್ಕೂ ತೋರತಾ ಇರತವೆ. ಅಂದರೆ ಶ್ರೀಪರಮಾತ್ಮ ಸಮುದ್ರದೋಪಾದಿಯಲ್ಲಿ ಅಪರಿಚ್ಛಿನ್ನ ವ್ಯಾಪ್ತ. ನದಿಗಳೋಪಾದಿಯಲ್ಲಿ ರಮಾರೂಪಗಳು ಏಕೈಕದೇಶ ವ್ಯಾಪ್ತವು, ಸಮುದ್ರದಲ್ಲಿ ನದಿಗಳು ಏಕದೇಶವ್ಯಾಪ್ತಿಯೋ ಹೊರತು

ಸರ್ವದೇಶವ್ಯಾಪ್ತಿ ಇಲ್ಲ. ಸಮುದ್ರ ಅಪರಿಚ್ಛಿನ್ನವ್ಯಾಪ್ತಿ ಉಳ್ಳದ್ದು. ನದಿಗಳಿಗೆ ಸಮುದ್ರಕ್ಕೆ ಹ್ಯಾಂಗೆ ವಿಯೋಗವಿಲ್ಲವೋ ತದ್ವತ್ ಶ್ರೀಹರಿ ಹಾಗೂ ರಮಾ ಇವರು ಅವಿಯೋಗರು. ಈ ರೀತ್ಯಾ ಸಮಾನಾಸಮಾನರು ಎಂತ ತಾತ್ಪರ್ಯ. ॥೨೯॥

## ಭಾವಪ್ರಕಾಶಿಕೆ

ಗಂಭೀರವಾಗಿ ಅಪಾರವಾಗಿಯೂ, ಅಪರಿಚ್ಛಿನ್ನವಾಗಿಯೂ ಸರ್ವತ್ರ ವ್ಯಾಪಿಸಿಕೊಂಡಿರುವ ಸಮುದ್ರದಲ್ಲಿ ಗಂಗಾ, ಗೋದಾವರಿ ಮೊದಲಾದ ನದಿಗಳು ಪ್ರತ್ಯೇಕಪ್ರತ್ಯೇಕ ಸಂಗಮಸ್ಥಾನಗಳಲ್ಲಿ ಸೇರಿ ಅಲ್ಲಲ್ಲೇ ಲೀನವಾಗಿ ಸಮುದ್ರದೊಳಗೆ ಸಂತೋಷದಿಂದ ವಿಹಾರಮಾಡುವಂತೆ ಎಂದು ಉಪಮಾನವನ್ನು ಕೊಟ್ಟಿರುವರು. ಇಲ್ಲಿ ಗಂಗಾ ಸಮುದ್ರ ಸಂಗಮಸ್ಥಾನ ಬೇರೆ, ಯಮುನಾ ಸಮುದ್ರ ಸಂಗಮಸ್ಥಾನ ಕೃಷ್ಣಾ ತುಂಗಾ ಮೊದಲಾದ ನದಿಗಳು ಸೇರುವಾಗ ಬೇರೆ ಬೇರೆಯಾಗಿ ಸೇರುವುವು. ಇಷ್ಟು ನದಿಗಳು ಸಮುದ್ರದಲ್ಲಿ ಇವೆ ಎಂದು ಹೇಳಬಹುದೇ ಆಗಲಿ ಸಂತೋಷದಿಂದ ವಿಹಾರ ಮಾಡುತ್ತಿರುವವೆಂದು ಜಡವಾದ ಉದಕಗಳಿಗೆ ಈ ಗುಣಗಳು ಎಲ್ಲಿಯವು ಎಂದು ಶಂಕೆ ಪಡಬಾರದು. ನದಿಗಳಿಗಭಿಮಾನಿದೇವತೆಗಳು ತಮ್ಮ ಪತಿಯಾದ ಸಮುದ್ರರಾಜನಲ್ಲಿ ಸೇರಿ ಮೋದಪಡುವರೆಂಬ ಭಾವ. ಇದರಂತೆ ತ್ರಿಗುಣಾಭಿಮಾನಿಯಾದ ರಮಾದೇವಿಯರೂ ಸಮುದ್ರದಲ್ಲಿ ಉದಕ ಬಿಂದುಗಳಿರುವಂತೆ ಅನೇಕ ಸ್ಥಳಗಳಲ್ಲಿ ಅನೇಕ ರೂಪಗಳಿಂದ ವ್ಯಾಪ್ತರಾಗಿರುವರು. ಒಂದು ಶರೀರದಲ್ಲಿ ಸ್ವರೂಪದೇಹ, ಲಿಂಗದೇಹ, ಅನಿರುದ್ಧ ದೇಹ, ಸ್ಥೂಲದೇಹವೆಂಬ ನಾಲ್ಕು, ಈ ನಾಲ್ಕು ದೇಹಗಳಲ್ಲೂ ಅಲ್ಲಲ್ಲಿರುವ ತತ್ವಾಭಿಮಾನಿದೇವತೆಗಳಲ್ಲೂ, ಆ ದೇವತೆಗಳ ೨೪ ತತ್ತ್ವಗಳಲ್ಲೂ ಭಗವದ್ರೂಪಗಳು ಸಮುದ್ರದಲ್ಲಿ ಉದಕಬಿಂದುಗಳು ವ್ಯಾಪಿಸಿಕೊಂಡಿರುವಂತೆ ಅನಂತಾನಂತರೂಪಗಳಿಂದ ವ್ಯಾಪಿಸಿಕೊಂಡ್ಕು ಇರುವುವು. ಇಂತಹ ಭಗವಂತನ ಒಂದೊಂದು ರೂಪದಲ್ಲೂ ರಮಾರೂಪವು ಪರಮಾತ್ಮನ ವಕ್ಷಸ್ಥಳದಲ್ಲಿ ಶೋಭಿಸುತ್ತಿರುವುದು. ಅಪರಿಚ್ಛಿನ್ನವಾದ ಸಮುದ್ರದಲ್ಲಿ ಒಂದೊಂದು ನದಿಯೂ ಪ್ರತ್ಯೇಕವಾಗಿ ಏಕದೇಶದಲ್ಲಿ ಮಾತ್ರ ಸೇರುವಂತೆ

ಪರಮಾತ್ಮನ ಶರೀರದಲ್ಲಿ ಏಕದೇಶವಾದ ವಕ್ಷಸ್ಥಳದಲ್ಲಿ ಸೇರಿ ಆನಂದ ಪಡುತ್ತಿರುವರು. ಇಂತಹ ಗುಣವು ಇನ್ನು ಯಾರಲ್ಲೂ ಇಲ್ಲ. ಪರಮಾತ್ಮನು ಲಕ್ಷ್ಮೀದೇವೇರಕಿಂತಲೂ ಉತ್ತಮನು, ಬ್ರಹ್ಮಾದಿಗಳು ಅಧಮರು. ಇವರಿಗೆ ಸಮರಾರು ? ಆದ್ದರಿಂದ ಸಮರಹಿತವಾದ ಇಂತಹ ಅನೇಕ ರೂಪಗಳು ಪರಮಾತ್ಮನ ಏಕದೇಶಾಂಗಗಳಲ್ಲಿ ಅಡಗಿರುವವೆಂಬ ಭಾವ. ॥೨೯॥

## ಭಾವದರ್ಪಣ

ಶ್ರೀಪರಮಾತ್ಮನಲ್ಲಿ ರಮಾರೂಪ ತೋರತಕ್ಕ ವಿಧಾನ ಹೇಳತಾರೆ. ವಾರಿನಿಧೀತಿ. ಸಮರಹಿತ ಶ್ರೀಹರಿಗೆ ಸಮವಾದ ವಸ್ತುವಲ್ಲವೆಂತ ಅನಿಸುತ್ತಾಳೆಂಬ ತಾತ್ಪರ್ಯ. ॥೨೯॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ವಾರಿನಿಧಿ ಇತಿ ॥ ನದೀನಾಂ ಪೃಥಕ್ ರಮಣಂ ವಾಯುಸ್ತು ಇತಿ ಮಾನೇನ ತನ್ಮಾತ್ರವೇದ್ಯಮ್ ॥ ॥೨೯॥

## ಕನ್ನಡಾರ್ಥ

ಇಲ್ಲಿ ನದಿಗಳು ಸಮುದ್ರರಾಜನ ಸಂಗಡ ಪ್ರತ್ಯೇಕ ಪ್ರತ್ಯೇಕವಾಗಿ ವಿಹರಿಸುತ್ತವೆ ಎಂದು ಹೇಳಿರುತ್ತಾರೆ. ನದಿಗಳು ಪ್ರತ್ಯೇಕವಾಗಿ ವಿಹರಿಸುವವು ಎಂಬ ಈ ಸಂಗತಿಯು ವಾಯುಃಸ್ತು ಎಂಬ ಪುರಾಣಗಳಲ್ಲಿ ಹೇಳಲಾಗಿರುತ್ತದೆ. ಅದೃಶ್ಯವಾದ ಈ ಸಂಗತಿಯು ಅಭಿಮಾನಿದೇವತೆಗಳಿಗೆ ಅನ್ವಯಿಸಬಹುದು. ಇದನ್ನು ಶಾಸ್ತ್ರದಿಂದ ತಿಳಿಯಬೇಕು. ॥೨೯॥

## ಶ್ರೀಗುರುಹೃದಯಪ್ರಕಾಶಿಕೆ

ದೇವರ ರೂಪವೂ ಅನಂತ, ಲಕ್ಷ್ಮೀರೂಪವೂ ಅನಂತ. ಹೀಗೆ ಆನಂತ್ಯ ಸಾಮ್ಯವಿದ್ದಾಗ್ಯೂ, ಆಶ್ರಯ ಆಶ್ರಯೀಭಾವವಿರುವುದರಿಂದ ಸಮವಾಗಲಿಲ್ಲ

ವೆಂದು ಸದೃಷ್ಟಾಂತ ತಿಳಿಸುತ್ತಾರೆ. ವಾರಿ ಎಂದು. ಆಶ್ರಯಕ್ಕೆ ಆಧಾರವಾದ ಸಮುದ್ರದಲ್ಲಿ ಆಶ್ರಯಿಸಿರುವ ಅಪರಿಮಿತ ನದಿಗಳು ಬೇರೆ ಬೇರೆ ಸದಾ ವಿಹರಿಸುತ್ತಾ ತೃಪ್ತಿಯಾಗಿರುವಂತೆ, ತ್ರಿಗುಣಾಭಿಮಾನಿ ರಮಾದೇವೀರೂಪಗಳು ಅನಂತವಾದಗ್ಯೂ, ತನಗೆ ಆಧಾರವಾಗಿ ಸದಾ ಆಶ್ರಯುವೆನಿಸುವ ದೇವರ ಅನಂತರೂಪಗಳ ಸಂಗಡ ಆಶ್ರಯಿಸಿ ವಿಹರಿಸುತ್ತಾ ಸಂತೋಷಿಸುತ್ತಾ, ಅಧೀನ ಳಾದ್ದರಿಂದ ಸಮವಲ್ಲವೆನಿಸುವಳು. ॥೨೯॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀರಮಾದೇವಿಯರು ಶ್ರೀಹರಿಗೆ ಸಮಾಸಮರೆಂಬ ತತ್ತ್ವವನ್ನು ತಿಳಿಸು ತ್ತಾರೆ.

**ಗಂಗಾದಿ ಸಕಲನದಿಗಳೂ ಸಮುದ್ರದ ಕಡೆಗೆ ಹರಿದು, ಅಂತ್ಯದಲ್ಲಿ ಸಮುದ್ರವನ್ನು ಸೇರುವುವು.**

ವಾರಿನಿಧಿಯೊಳಗೆ ಅಖಿಳನದಿಗಳು ಒಂದೆಡೆ ಸೇರಿದ್ದಾಗ್ಯೂ, ಪ್ರತ್ಯೇಕ ಪ್ರತ್ಯೇಕವಾಗಿಯೇ ಇರುವುವು. ತಮ್ಮದೇ ಆದ ಅಸ್ತಿತ್ವವನ್ನು ಕಳೆದುಕೊಳ್ಳುವು ದಿಲ್ಲ. ಸಮುದ್ರವು ಅಪರಿಚ್ಛಿನ್ನವ್ಯಾಪ್ತವು. ನದಿಗಳು ಅಪಾರವಾದ ಸಮುದ್ರ ದಲ್ಲಿ ಸೇರುವುವು. ಇದರಿಂದ ನದಿಯ ನೀರು ಸಮುದ್ರದಲ್ಲಿ ಐಕ್ಯವಾದಂತಾಗ ಲಿಲ್ಲ. ಇದು ಪರಮತತ್ತ್ವಾರ್ಥವು.

ಹಾಗೆ ಸಮುದ್ರದಲ್ಲಿ ಮಿಳಿತವಾದರೂ ಪ್ರತ್ಯೇಕ ಪ್ರತ್ಯೇಕವಾಗಿರುವ ಗಂಗಾ, ಯಮುನಾ, ಗೋದಾ, ಕಾವೇರಿ ಇತ್ಯಾದಿ ನದ್ಯಭಿಮಾನಿದೇವತೆಗಳು ತಮ್ಮ ರಮಣನಾದ ಸಮುದ್ರರಾಜನನ್ನು ಸೇರಿ, ಸಂಚರಿಸುತ್ತಾ ವಿಹಾರ ಗೈಯುತ್ತ ಅತ್ಯಂತ ಸಂತೋಷದಿಂದಿರುವರು.

ಅದೇರೀತಿಯಲ್ಲಿ ಗುಣತ್ರಯಗಳಿಗೆ ಶ್ರೀರಮಾದೇವಿ ಶ್ರೀ ಭೂ ದುರ್ಗಾರೂಪಗಳಿಂದ ಅಭಿಮಾನಿಗಳೆನಿಸಿದ್ದಾರೆ. ಆ ರಮಾರೂಪಗಳೂ ಸಹ ಅನಂತ. ಅವು ಸಮುದ್ರವನ್ನು ಸೇರುವ ನದಿಗಳಿದ್ದಂತೆ.

ಅನಾದ್ಯನಂತಕಾಲದಿಂದ ಶ್ರೀಲಕ್ಷ್ಮೀ ಶ್ರೀಪರಮಾತ್ಮನಿಂದ ಅವಿಯೋಗಿನಿಯು. ಕಾಲತಃ ದೇಶತಃ ಸಹವ್ಯಾಪ್ತಳು. ಇದರಿಂದ ಸಮಳು. ಗುಣತಃ ಅನಂತಾನಂತ ಕೋಟಿಗುಣಗಳಿಂದ ಅವರಳು. ಇದರಿಂದ ಅಸಮಳು. ನಿರಂತರ ಸರ್ವದೇಶ, ಸರ್ವಕಾಲ, ಸರ್ವಾವಸ್ಥೆಗಳಲ್ಲಿ ಶ್ರೀಹರಿಯನ್ನು ನಾನಾ ರೂಪಗಳಿಂದ ಸೇವಿಸುತ್ತಿರುವಳು. ಶ್ರೀಹರಿಗೆ ಮಂಚವಾಗಿ, ಆಭರಣಗಳಾಗಿ, ಆಯುಧಗಳಾಗಿ ವಸ್ತ್ರಗಳಾಗಿ, ವ್ಯಜನವಾಗಿ. ಛತ್ರವಾಗಿ, ನಾನಾ ಪ್ರಕಾರಗಳಲ್ಲಿ ಸೇವಿಸುತ್ತಾ ಶ್ರೀಹರಿಗೆ ಅತ್ಯಂತ ಪ್ರೀತಿಯ ವಿಷಯಳಾಗಿದ್ದಾಳೆ.

ಈ ದೃಷ್ಟಾಂತದಲ್ಲಿ ಅಪಾರಗುಣನಿಧಿಯಾದ ಶ್ರೀಹರಿ ಸಮುದ್ರಸದೃಶ. ರಮಾದೇವಿಯರ ಅನಂತರೂಪಗಳು ನದಿಗಳ ಸದೃಶ. ನದಿಗಳು ಸಮುದ್ರದಲ್ಲಿ ಸೇರಿದರೂ, ಪೃಥಕ್ಕಾಗಿರುವಂತೆ ರಮಾರೂಪಗಳು ಶ್ರೀಹರಿಯಿಂದ ಅತ್ಯಂತ ಭಿನ್ನವಾಗಿವೆ. ಈ ಪದ್ಯದಿಂದ ಶ್ರೀರಮಾದೇವಿಯರ ನಿತ್ಯಾವಿಯೋಗಿತ್ವ ಶ್ರೀ–ಶ್ರೀಶರಭೇದ ಪ್ರತಿಪಾದಿತವಾಗಿವೆ. ॥೨೯॥

## ಪದ್ಯ–೩೦

**ಮೂಲ :–**

**ಕೋಕನದಸಖನುದಯ ಘೂಕಾ ।**
**ಲೋಕನಕೆ ಸೊಗಸದಿರೆ ಭಾಸ್ಕರ ।**
**ತಾ ಕಳಂಕನೆ ಈ ಕೃತೀಪತಿ ಜಗನ್ನಾಥನಿರೆ ॥**
**ಸ್ವೀಕರಿಸಿ ಸುಖಬಡಲರಿಯದವಿ ।**
**ವೇಕಿಗಳು ನಿಂದಿಸಿದರೇನಹು ।**
**ದೀ ಕವಿತ್ವವ ಕೇಳಿ ಸುಖಬಡದಿಹರೆ ಕೋವಿದರು ॥೩೦॥**

**ಅವತರಣಿಕೆ :–**

ಕಮಲಾಪ್ತನಾದ ಸೂರ್ಯನ ಉದಯವು ಗೂಗೆಗೆ ಸೊಗಸುವುದಿಲ್ಲ. ಅದರಿಂದ ಸೂರ್ಯನು ದೋಷಿಯಾಗುತ್ತಾನೆಯೇ ? ಇಹಪರಗಳಲ್ಲಿ ಸುಖ ಪಡಲು ಅರಿಯದ ಅಜ್ಞಾನಿಗಳಾದ ಮೂಢರು ಶ್ರೀಪರಮಾತ್ಮನ ಮಹಾತ್ಮ್ಯಪೂರ್ಣವಾದ ಈ ಗ್ರಂಥದ ವಿಷಯವನ್ನು ಕೇಳದೆ, ನಿಂದಿಸಿದರೇನು ? ಜ್ಞಾನಿಗಳು ಮೋದಬಡುವರೆಂದು ಹೇಳುತ್ತಾರೆ.

**ಪ್ರತಿಪದಾರ್ಥ**

**ಕೋಕನದ ಸಖ**–ಕಮಲಮಿತ್ರನಾದ ಸೂರ್ಯನ (ಕೋಕನದ–ಕೆಂದಾವರೆ), **ಉದಯ**–ಉದಯವು, **ಘೂಕ**–ಗೂಬೆಯ (ದಿವಾಂಧ), **ಆಲೋಕನಕೆ**–ನೋಟಕ್ಕೆ, **ಸೊಗಸದಿರೆ**–ಶೋಭಾಯಮಾನವಾಗದಿದ್ದರೆ, **ಭಾಸ್ಕರ**–ಸೂರ್ಯನು, **ತಾ ಕಳಂಕನೆ**–ತಾನು ದೋಷಿಯಾಗುತ್ತಾನೆಯೇ ?

**ಈ ಕೃತೀ**–ಈ ಗ್ರಂಥದ, **ಪತಿ**– ಗ್ರಂಥಪ್ರತಿಪಾದ್ಯನಾದ, **ಜಗನ್ನಾಥನಿರೆ**–ಜಗತ್ಪ್ರಭುವಾದ ಶ್ರೀಪರಮಾತ್ಮನು ಇರುತ್ತಿರಲಾಗಿ, **ಸ್ವೀಕರಿಸಿ**–ಈ ಗ್ರಂಥಗತ ತತ್ತ್ವಾಮೃತವನ್ನು ಅಂಗೀಕಾರಮಾಡಿ, **ಸುಖಪಡಲು**–ಸಂತೋಷಹೊಂದಲು, **ಅರಿಯದ**–ಯೋಗ್ಯತೆ ಇಲ್ಲದ, **ಅವಿವೇಕಿಗಳು**–ಗೂಬೆಗೆ ಸದೃಶರಾದ ಅಜ್ಞಾನಿಗಳು, **ನಿಂದಿಸಿದರೇನು**–ದೂಷಿಸಿದರೆ, ಈ ಕಾವ್ಯಕ್ಕೆ ಏನೂ ನಷ್ಟವಿಲ್ಲ. **ಈ ಕವಿತ್ವವ**–ಶ್ರೀಹರಿಯ ಮಹಾತ್ಮ್ಯೆಯನ್ನು ವಿವರಿಸುವ ಈ ಗ್ರಂಥಸ್ಥ ತತ್ತ್ವಾರ್ಥಪ್ರಮೇಯಗಳನ್ನು **ಕೇಳಿ**–ಶ್ರವಣಮಾಡಿ, **ಕೋವಿದರು**–ಜ್ಞಾನನೇತ್ರವುಳ್ಳ ಭಗವದ್ಭಕ್ತರು, **ಸುಖಬಡದಿಹರೆ**–ಆನಂದ ಪಡೆಯದೇ ಇರುತ್ತಾರೆಯೇ ? ॥೩೦॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಈ ಕಾವ್ಯ ವಿವೇಕಿಗಳಿಗೆ ಯೋಗ್ಯವಾದದ್ದೆಂದು ಹೇಳತಾರೆ.

ಕಮಲಾಪ್ತನಾದ ಸೂರ್ಯನ ಉದಯವು ಗೂಗಿ ನೋಡೋದಕ್ಕೆ ಸೊಗಸದ ಮಾತ್ರಕ್ಕೆ, ಸೂರ್ಯ ದೋಷಿ ಎಂತ ಕರಸೋನೆ ಅಂದರೆ, ದೋಷಿ ಆದಾನೆ ? ಆಗಲಾರ. ದೋಷ ಎಂಬೋದು ಗೂಗಿ ನೇತ್ರದ್ದೇ ಹೊರತು ಸೂರ್ಯಂದು ಅಲ್ಲ. ಸೂರ್ಯ ದಾವಗ್ಯೂ ನಿರ್ದೋಷವಾದ ತೇಜಃಪುಂಜನಾಗಿ ಇದ್ದಾನೆ. ತದ್ವತ್ ಈ ಕಾವ್ಯವೆಂಬ ಸೂರ್ಯನಲಿ ತೇಜಸ್ಸಿಗೆ ಸಮಾನನಾದ ಜಗತ್ಪತಿಯಾದ ಶ್ರೀಪರಮಾತ್ಮ ಇರೋವನಾಗಿದ್ದಾನೆ. ಎಂದರೆ, ಸೂರ್ಯನ ಕಾಂತಿಗೆ ಸಮಾನ ವಾದ ಪರಮಾತ್ಮನ ಮಾಹಾತ್ಮ್ಯ ಪ್ರಕಾಶಮಾನವಾಗಿ, ಅಜ್ಞಾನಾಂಧಕಾರ ಪರಿಹಾರ ಮಾಡಿ, ಜ್ಞಾನಪ್ರಕಾಶ ಮಾಡತಾ ಇರಲಾಗಿ, ಇದರನ್ನ ಅಂಗೀಕಾರ ಮಾಡಿ, ಜ್ಞಾನನೇತ್ರವುಳ್ಳ ಅಧಿಕಾರಿಗಳು ಆಗತಾರೆ. ಆದ್ದರಿಂದ ಸುಖ ಪಡೋದಕ್ಕೆ ಯೋಗ್ಯರಾಗುತ್ತಾರೆ. ಭಗವನ್ಮಹಿಮೆ ಅರಿಯದ ಗೂಗಿನೇತ್ರಕ್ಕೆ ಸಮವಾದ ಅಜ್ಞಾನನೇತ್ರವುಳ್ಳ ವಿವೇಕಶೂನ್ಯರಾದವರು ನಿಂದಾ ಮಾಡೋಣಥ

ರಿಂದ ಈ ಕಾವ್ಯಕ್ಕೆ ಆಗತಕ್ಕ ನಷ್ಟವೇನೂ ಇಲ್ಲ. ಗೂಗಿ ನಿಂದಾ ಮಾಡೋಣದ ರಿಂದ ಸೂರ್ಯಗೆ ಏನೂ ದೋಷ ಬರಲಿಲ್ಲ ಹ್ಯಾಂಗೋ ತದ್ವತ್ ಪರಮಾತ್ಮನ ಮಾಹಾತ್ಮ್ಯದಿಂದ ಪೂರ್ಣವಾದ, ಅಜ್ಞಾನಾಂಧಕಾರ ಪರಿಹಾರ ಮಾಡತಕ್ಕ ಈ ಗ್ರಂಥವನ್ನ ಜ್ಞಾನನೇತ್ರವುಳ್ಳ ಭಕ್ತರು ಶ್ರವಣ ಮಾಡಿ, ತದ್ಗತ ಸಾರಭೂತ ಭಗವನ್ಮಾಹಾತ್ಮ್ಯ ಎಂಬ ಅಮೃತವನ್ನು ಶ್ರವಣೇಂದ್ರಿಯದಿಂದ ಪಾನಮಾಡಿ ಸುಖಪಡದೆ ಇರೋರೆ ? ಸುಖಪಡತಾರೆ ಎಂತ ತಾತ್ಪರ್ಯ. ಈ ಗ್ರಂಥಸೂರ್ಯ ಕಮಲಸದೃಶರಾದ ಭಗವದ್ಭಕ್ತರಿಗೆ ಶ್ಲಾಘ್ಯ. ಗೂಗಿಗೆ ಸದೃಶರಾದ ಅಯೋಗ್ಯ ರಿಗೆ ಶ್ಲಾಘ್ಯವಾಗೋದಿಲ್ಲ ಎಂತ ಭಾವವು. ॥೩೦॥

## ಭಾವಪ್ರಕಾಶಿಕೆ

ದಿವಾಂಧವೆಂದು (ಹಗಲು ಕಣ್ಣು ಕಾಣದೆಂದು) ಪ್ರಸಿದ್ಧವಾದ ಗೂಗೆಯು ಸೂರ್ಯನುದಯವನ್ನು ಕಂಡು ಬೇಸರಗೊಂಡರೆ ಸೂರ್ಯನಿಗೆ ಕಳಂಕ ಬರುವದೆ ? ಹಾಗೆ ಕೆಲವು ಅವಿವೇಕಿಗಳು ಈ ಗ್ರಂಥದಲ್ಲಿರುವ ಭಗವನ್ಮಹಿಮೆಯ ಸಾರಾಂಶ ವನ್ನು ಗ್ರಹಣ ಮಾಡಲು ಯೋಗ್ಯತೆ ಇಲ್ಲದೆ ಪ್ರಾಕೃತ ಗ್ರಂಥವಿದು. ಇದನ್ನು ನೋಡಬಾರದೆಂದು ದೂಷಿಸಿದರೆ ಗ್ರಂಥಕ್ಕೆ ಕಳಂಕ ಬರುವುದೆ ? ಕೇವಲ ಭಗವಚ್ಚರಿತ್ರೆಯಿಂದ ತುಂಬಿ ತುಳುಕಾಡುತ್ತಿರುವ ಈ ಗ್ರಂಥದ ಸಾರವನ್ನು ಗ್ರಹಿಸಿ ಸುಖಪಡುವ ಯೋಗ್ಯತೆಯುಳ್ಳ ವಿವೇಕಿಗಳು ಈ ಗ್ರಂಥವನ್ನೋದಿ ಆನಂದ ಪಡದೆ ಇರುವರೆ ! ಅವಿವೇಕಿಗಳಿಗೆ ಈ ಗ್ರಂಥದ ಪ್ರಯೋಜನವು ಗೊತ್ತಾಗದಿದ್ದರೂ ವಿವೇಕಿಗಳು ಗ್ರಹಿಸುವುದರಿಂದ ಗ್ರಂಥವನ್ನು ರಚಿಸಿದುದು ಸಫಲವೆಂದು ಭಾವ. ॥೩೦॥

## ಭಾವದರ್ಪಣ

ಈ ಗ್ರಂಥದ ತಾತ್ಪರ್ಯ ಮನನಮಾಡದೆ ಶುದ್ಧಪ್ರಾಕೃತ ಗ್ರಂಥವೆಂದು ನಿಂದಿಸತಕ್ಕ ಜನರನ್ನು ದಿವಾದಲ್ಲಿ ನೇತ್ರ ದೂರವಾದ ದೊಡ್ಡ ಗೂಗಿಯೋ ಅಂತ ಎಣಿಸತಕ್ಕದ್ದು. ಇಂಥವರು ನಿಂದಿಸಿದರೆ ಏನಾದೀತು. ಜ್ಞಾನಿಗಳು ನೋಡಿ ಸುಖ ಪಟ್ಟೇ ಪಡುತ್ತಾರೆಂದು ಹೇಳುತ್ತಾರೆ ಕೋಕನದೇತಿ. ಕೋಕನದ–

ಕೆಂಪುಕಮಲ, ಘೂಕ–ಗೂಗಿ, ಆಲೋಕನ–ನೋಡೋಣ, ಭಾಸ್ಕರ–ಸೂರ್ಯ, ಕೃತಿ–ಗ್ರಂಥ, ಇರೆ–ಇರಬು, ಸೊಗಸದಿರೆ–ಛಂದಾಗಿ ಮನಸಿಗೆ ಹತ್ತದೆ ಹೋದರೆ ಎಂಬರ್ಥ. ॥೩೦॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಕೋಕನದ ಇತಿ ॥ ಕೋಕನದ ಸಖ ಸೂರ್ಯಃ ॥ ಪದ್ಮಮಿತ್ರತ್ವಾತ್॥ ಘೂಕ ಗೂಗೆ ॥ ಸೊಗಸದಿರೆ ತನ್ನೇತ್ರಯೋಃ ಅಭಾಸೇಪಿ ॥ಇತಿ ಇರಲು॥೩೦॥

## ಕನ್ನಡಾರ್ಥ :

ಕೋಕನದವೆಂದರೆ ಕಮಲ, ಅದಕ್ಕೆ ಸಖನೆಂದರೆ ಸೂರ್ಯನು. ಸೂರ್ಯನು ಕಮಲಮಿತ್ರನೆಂಬುದು ಪ್ರಸಿದ್ಧವಿರುತ್ತದೆ. ಘೂಕ–ಗೂಗೆ. ಸೊಗಸದಿರೆ ಗೂಗೆಯ ಕಣ್ಣುಗಳಿಗೆ ಸೂರ್ಯನ ಉದಯವು ಭಾಸವಾಗದಿದ್ದರೆ ಎಂದರ್ಥ.

ಸೂರ್ಯೋದಯವನ್ನು ತಾನು ನೋಡದೆ ನಿಂದಿಸುವ ಗೂಗೆಯಂತೆ ನಮ್ಮ ಉಪಾಸ್ಯ ಮೂರುತಿ (ದಾಸರ) ಜಗನ್ನಾಥನೇ ಇಲ್ಲಿ ನಿಂತು ಮಾಡಿಸಿದ ಈ ಹರಿಕಥಾಮೃತಸಾರಕವನಗಳನ್ನು ಮರುಳಮತಿಗಳು ಓದಿ ಸುಖಪಡದಿದ್ದರೆ ಈ ಗ್ರಂಥಕ್ಕೆ ಕಲಂಕವಿಲ್ಲ. ಕೋವಿದರು–ವೇದಾಂತ ಪರಿನಿಷ್ಠಿತರು ಇದನ್ನು ಕೇಳಿ ಓದಿ ಸಂತೋಷಪಡದೆ ಇರಲಾರರು ಎಂದು ತಾತ್ಪರ್ಯ ॥೩೦॥

## ಶ್ರೀಗುರುಹೃದಯಪ್ರಕಾಶಿಕೆ

ಈ ಗ್ರಂಥ ಇತರರಿಗೆ ಬೇಡದಿದ್ದರೂ ಸಜ್ಜನರಿಗೆ ಬೇಕಾಗಿರುವುದೆಂದು ಸದೃಷ್ಟಾಂತ ತಿಳಿಸುತ್ತಾರೆ, ಕೋಕನದ ಎಂದು. ಕೋಕನದ ಎಂಬ ಕೆಂದಾವರೆಗೆ ಇಷ್ಟನಾದ ಸೂರ್ಯನ ಉದಯವು ಗೂಬೆಯ ಕಣ್ಣಿಗೆ ಸೊಗಸದೆಹೋದರೆ ಸೂರ್ಯ ಹೇಗೆ ದೋಷಿಯಲ್ಲವೋ, ಹಾಗೆ ಈ ಗ್ರಂಥಪ್ರತಿಪಾದ್ಯ ಶ್ರೀಹರಿ ಉತ್ಕೃಷ್ಟನಾಗಿರುತಿರಲು ಸ್ವೀಕಾರ ಮಾಡಿ ವರ್ಣಿಸಿ ಸಂತೋಷಪಡದೆ, ಸಾರಾ

ಸಾರವಿವೇಕ ಅರಿಯದವರು ಇದನ್ನು ಬಾಯಿಮಾತಿನಿಂದ ನಿಂದಿಸಿದರೆ ಹಾನಿಯೇನೂ ಇಲ್ಲ. ಕೋವಿದರೆಂಬ ವೇದಾಂತಸಾರ ಬಲ್ಲ ಜ್ಞಾನಿಗಳು ಈ ಕವಿತ್ವವನ್ನು ಕೇಳಿ ಸುಖಪಡುವರು. ॥೩೦॥

## ಸರ್ವವ್ಯಾಖ್ಯಾನಸಾರಸಂಗ್ರಹ

ಈ ಕಾವ್ಯದ ವಿಷಯವು ಅವಿವೇಕಿಗಳಿಗೆ ಸೊಗಸದೆಂದು ಸುಂದರವಾದ ದೃಷ್ಟಾಂತಪೂರ್ವಕ ತಿಳಿಸುತ್ತಾರೆ.

ಕೋಕನದ ಎಂದರೆ, ಕಮಲ ಅಥವಾ ಕೆಂದಾವರೆ ಎಂದರ್ಥ. ಸೂರ್ಯನ ಉದಯವಾದ ತಕ್ಷಣ, ಅವನ ಕಿರಣಗಳು ಕೋಕನದ ಮೇಲೆ ಬಿದ್ದಾಗ, ಅದರ ದಳಗಳು ಅರಳಿ ವಿಕಾಸಹೊಂದುವುವು. ಇದರಿಂದ ಸೂರ್ಯನಿಗೆ ಕಮಲಾಪ್ತ ಅಥವಾ ಕಮಲಮಿತ್ರನೆಂದರ್ಥ.

ಗೂಗೆಯು ರಾತ್ರಿಕಾಲದಲ್ಲಿ ಸಂಚರಿಸುವ ಪಕ್ಷಿಯು. ಅದಕ್ಕೆ ಹಗಲಿನಲ್ಲಿ ಕಣ್ಣು ಕಾಣಿಸುವುದಿಲ್ಲ. ಸೂರ್ಯನ ಉದಯವಾದ ಕೂಡಲೇ, ಘೂಕಕ್ಕೆ ಕಣ್ಣು ಕಾಣಿಸದೆ, ಸೂರ್ಯನ ಪ್ರಕಾಶವನ್ನು ಕಂಡು ಬೇಸರಗೊಳ್ಳುವುದು.

ಆ ಘೂಕವು ಸೂರ್ಯನ ನಿಂದಿಸಿದರೆ, ಪ್ರಕಾಶಮಾನನಾದ ಸೂರ್ಯನಿಗೆ ಕುಂದೇನೂ ಇಲ್ಲ.

ಅಂತಯೇ ಶ್ರೀಮದ್ಧರಿಕಥಾಮೃತಸಾರವೆಂಬ ಕಾವ್ಯವು ಗಂಗಾಜನಕನಾದ ಆ ಮಂಗಳ ಮಹಿಮನ ಗುಣಗಳನ್ನು ವರ್ಣಿಸಲು ಉದ್ಯುಕ್ತವಾಗಿದೆ. ಆ ಅಪಾರಮಹಿಮನ ಗುಣ, ರೂಪ, ಕ್ರಿಯಾದಿಗಳನ್ನು ಪ್ರಮಾಣಪ್ರಮಿತವಾಗಿ ಪೊಗಳಲು ಹೊರಟಿರುವ ಪ್ರಸಕ್ತ ಕಾವ್ಯವು ಸೂರ್ಯನ ಪ್ರಕಾಶಕ್ಕೆ ಸದೃಶ. ಜಗದೊಡನೆಯಾದ ಜಗನ್ನಾಥನೇ ಈ ಗ್ರಂಥದ ಪ್ರತಿಪಾದ್ಯದೇವತಾ ಅವನೇ ಈ ಕೃತಿಯ ಪತಿಯು.

ಈ ಕೃತೀಪತಿಯಾದ ಜಗನ್ನಾಥನ ಮಹಾಮಹಿಮೆಗಳನ್ನು ಕವಿತ್ವ ಮೂಲಕ ಶ್ರವಣಮಾಡಿ, ರಸಿಕರಾದ ಸಜ್ಜನರು ಸುಖಪಡದಿಹರೇ ? ಗುಣ ಗ್ರಾಹಿಗಳು ಈ ತತ್ತ್ವಪ್ರಮೇಯಗಳನ್ನು ಕೇಳಿ, ತಿಳಿದು ಪರಮಾನಂದಭರಿತ ರಾಗುವರು. ಅವಿವೇಕಿಗಳೂ, ಅಜ್ಞಾನಿಗಳೂ ಆದ ಮೂಢರು ಇದು ಪ್ರಾಕೃತ ಗ್ರಂಥ. ಸಂಸ್ಕೃತವನ್ನರಿಯದ ಬಾಲಕರು, ಸ್ತ್ರೀಯರು ಮಾತ್ರ ಇದಕ್ಕೆ ಅಧಿಕಾರಿ ಗಳು. ಸಂಸ್ಕೃತಭಾಷಾವಿಶಾರದರಾದ, ಪಂಡಿತೋತ್ತಮರಾದ ನಾವು ಈ ಗ್ರಂಥಾವಲೋಕನ ಮಾಡಬಾರದು ಎಂದು ದುರಾಗ್ರಹದಿಂದ ಜರೆದರೆ, ಅವರಿಗೇ ಅದು ನಷ್ಟ ಹೊರತು, ಕಾವ್ಯಕ್ಕೆ ಕುಂದೇನೂ ತಟ್ಟುವುದಿಲ್ಲ ಎಂದು ತಮ್ಮ ಅಭಿಪ್ರಾಯವನ್ನು ಸ್ಪಷ್ಟೋಕ್ತಿಗಳಲ್ಲಿ ತಿಳಿಸಿದ್ದಾರೆ. ಈ ದೃಷ್ಟಾಂತ ದಲ್ಲಿ ಪ್ರಸಕ್ತ ಕಾವ್ಯದ ವಿಷಯವು ಸೂರ್ಯನ ಸದೃಶ. ವಿವೇಕಿಗಳಾದ ಕೋವಿದರು ಕೆಂದಾವರೆ ಸದೃಶ. ಅವಿವೇಕಿಗಳೂ ಪಿಶುಣರೂ, ಪಂಡಿತ ಮಾನಿಗಳೂ, ದುರಾಗ್ರಹಸ್ಥರು ಗೂಗೆಗೆ ಸದೃಶ. ॥೩೦॥

## ಪದ್ಯ–೩೧

**ಮೂಲ :–**

**ಚೇತನಾಚೇತನಗಳಲಿ ಗುರು ।**
**ಮಾತರಿಶ್ವಾಂತರ್ಗತ ಜಗ ।**
**ನ್ನಾಥವಿಠಲ ನಿರಂತರದಿ ವ್ಯಾಪಿಸಿ ತಿಳಿಸಿಕೊಳದೆ ॥**
**ಕಾತುರವ ಪುಟ್ಟಿಸಿ ವಿಷಯದಲಿ ।**
**ಯಾತುಧಾನರ ಮೋಹಿಸುವ ನಿ ।**
**ರ್ಭೀತ ನಿತ್ಯಾನಂದಮಯ ನಿರ್ದೋಷ ನಿರವದ್ಯ ॥೩೧॥**

**ಅವತರಣಿಕೆ**

ಜೀವ–ಜಡರಾಶಿಗಳಲ್ಲಿ ಮುಖ್ಯಪ್ರಾಣಾಂತರ್ಗತನಾದ ಜಗನ್ನಾಥ ವಿಠಲನು ಸರ್ವತ್ರ ವ್ಯಾಪಿಸಿದ್ದು, ತನ್ನ ಇರವನ್ನು ಅಭಿವ್ಯಕ್ತಿ ಮಾಡದೇ

ಅಸುರಸ್ವಭಾವದ ತಮೋಯೋಗ್ಯಜೀವರಿಗೆ ವಿಷಯೋಪಭೋಗಗಳಲ್ಲಿ ಕಾತುರವನ್ನು ಹುಟ್ಟಿಸಿ, ಮೋಹಯುಕ್ತರನ್ನಾಗಿ ಮಾಡುತ್ತಾನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಚೇತನ**–ಚೇತನಸ್ವರೂಪರಾದ ಮಾನುಷ, ಪಶು, ಪಕ್ಷಿ ಇತ್ಯಾದಿ ಜೀವರಲ್ಲಿ. **ಅಚೇತನ**–ಜಡವಸ್ತುಗಳಲ್ಲಿ. **ಗುರು**–ತ್ರೈಲೋಕ್ಯಾಚಾರ್ಯರಾದ, **ಮಾತರಿಶ್ವಾಂತರ್ಗತ**–ಶ್ರೀಮುಖ್ಯಪ್ರಾಣದೇವರ ಅಂತರ್ಯಾಮಿಯಾದ, **ಜಗನ್ನಾಥವಿಠಲ**–ಜಗತ್ಪತಿಯಾದ, ದಾಸರಾಯರ ಅಂಕಿತನಾಮಕನಾದ ಶ್ರೀಪರಮಾತ್ಮನು. **ನಿರಂತರದಿ**–ಅನಾದ್ಯನಂತಕಾಲದಿಂದಲೂ. **ವ್ಯಾಪಿಸಿ**–ಜೀವರಲ್ಲಿ ಅವಿಯೋಗನಾಗಿ ಬಿಂಬರೂಪದಿಂದಲೂ. ಜಡಗಳಲ್ಲಿ ಖಂಡಾಖಂಡರೂಪಗಳಿಂದ ಸರ್ವತ್ರವ್ಯಾಪ್ತನಾಗಿ. **ತಿಳಿಸಿಕೊಳದೆ**–ತನ್ನ ಇರವನ್ನು ಅಭಿವ್ಯಕ್ತಮಾಡದೇ. (ಗೋಚರನಾಗದೇ) **ವಿಷಯುದಲಿ**–ಪ್ರಾಪಂಚಿಕ ವನಿತಾದಿ ಭೋಗಗಗಳಲ್ಲಿ. **ಕಾತರವ**–ಆಸಕ್ತಿಯನ್ನು (ಹೊಂದಬೇಕೆಂಬ ತೀವ್ರಾಭಿಲಾಷೆಯನ್ನು) **ಪುಟ್ಟಿಸಿ**–ಉತ್ಪತ್ತಿಮಾಡಿ. **ಯಾತುಧಾನರ**–ಭಗವದ್ದ್ವೇಷಿಗಳೂ **ತಮೋಯೋಗ್ಯ**ರೂ ಆದ ದೈತ್ಯರನ್ನು, **ಮೋಹಿಸುವ**–ಮೋಹಯುಕ್ತರನ್ನಾಗಿ ಮಾಡುವನು. **ನಿರ್ಭೀತ**–ಶ್ರೀಪರಮಾತ್ಮನಾದರೋ ಭಯರಹಿತನು. ಯಾರಿಂದಲೂ ಯಾವಕಾಲಕ್ಕೂ ಆತನಿಗೆ ಭಯವಿಲ್ಲ. **ನಿತ್ಯಾನಂದಮಯ**–ಅನಾದ್ಯನಂತಕಾಲದಿಂದ ಸುಖಪೂರ್ಣನು, **ನಿರ್ದೋಷ**–ಸಮಸ್ತ ದೋಷವಿದೂರನು, **ನಿರವದ್ಯ**– ಸುಖದುಃಖಾದಿಗಳಿಂದ ಅತ್ಯಂತ ದೂರನಾದವನು (ಕ್ಲೇಶಾದಿರಹಿತನು). ॥೩೦॥

## ವ್ಯಾಖ್ಯಾನಗಳು

**ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ**

ಅಸುರಸ್ವಭಾವದವರನ್ನ ಮೋಹಯುಕ್ತರನ್ನಾಗಿ ಮಾಡತಾನೆ ಎಂತ ಹೇಳತಾರೆ.

ಚೇತನರಾದ ಮಾನುಷ ಪಶು ಪಕ್ಷಿ ಜೀವರುಗಳು, ವೃಕ್ಷಾದಿ ಜೀವರು, ಈ ರೀತ್ಯಾ ತ್ರಿವಿಧಜೀವರು, ಈ ಜೀವರುಗಳಲ್ಲಿ ವಾಯುದೇವರಿಗೆ ನೀತ ಗುರುವಾದ ಜಗತ್ತಿಗೆ ಸ್ವಾಮಿಯಾದ ಶ್ರೀಪರಮಾತ್ಮ, ಚರಾಚರ ಜಗತ್ತಿಗೆ ಅಂತರ್ಗತನಾಗಿ, ಅನಾದ್ಯನಂತಕಾಲಕ್ಕೂ ಅವಿಯೋಗನಾಗಿ, ಬಿಂಬನಾಗಿ ಈ ರೀತ್ಯಾ ವ್ಯಾಪಿಸಿದ್ದು, ಅಪಕ್ವದಶಾದಲ್ಲಿ ಭಗವದ್ಭಕ್ತರಿಗೆ ಅಪರೋಕ್ಷದಿಂದ ತಿಳಿಯಲಾರದೆ, ದ್ವೇಷಿಗಳಾದ ಅಸುರರಿಗೆ, ನಿತ್ಯಸಂಸಾರಿಗಳಿಗೆ ದಾವಾಗ್ಯೂ ತಿಳಿಸಿಕೊಳದೆ, ಅದರಲ್ಲಿ ಭಗವದ್ದ್ವೇಷಿಗಳಾದ ದೈತ್ಯರ ಭಯರಹಿತನಾದ್ಯ ಸದಾ ಸಂತೋಷದಿಂದ ಪೂರ್ಣನಾದ, ದೋಷದಿಂದ ರಹಿತನಾದ, ಜೀವಭುಕ್ತ ಸುಖದುಃಖಾದಿ ದೋಷಗಳಿಂದ ದೂರನಾದವ, ಪ್ರಾಕೃತ ವನಿತಾದಿ ಭೋಗಗಳ ವಿಷಯದಲ್ಲಿ ಅತ್ಯಂತವಾದ ಆಸಕ್ತಿಯನ್ನು ಅವರ ಸ್ವಭಾವವನ್ನನುಸರಿಸಿ ಉತ್ಪತ್ತಿ ಮಾಡಿ, ಮೋಹಯುಕ್ತರನ್ನಾಗಿ ಮಾಡಿ ಮತ್ತು ವಿಪರೀತಜ್ಞಾನದಲ್ಲಿ ಆಸಕ್ತರನ್ನಾಗಿ ಮಾಡಿ ದುಃಖವ ಕೊಡತಾನೆ. ತದನ್ಯರಾದ ಮುಕ್ತಿಯೋಗ್ಯರಿಗೆ ಪ್ರಾಕೃತ ವಿಷಯಾದಿಗಳಲ್ಲಿ ಹೇಯತಾ ಬುದ್ಧಿ ಕೊಟ್ಟು ಸುಖವನ್ನ ಕೊಡತಾನಂತ ತಾತ್ಪರ್ಯ.

**ವಿಶೇಷಾರ್ಥ**–ಪ್ರಮಾಣ–

ಪರಾ ಪೂರ್ವೇಷಾಂ ಸಖ್ಯಾ ವೃಣಕ್ತಿವಿತರ್ತುರಾಣೋ ಅಪರೇಭಿರೀತಿ |
ಅನಾನುಭೂತೀರವಧೂನ್ವಾನಃ ಪೂರ್ವೀ ಇಂದ್ರಃ ಶರದಸ್ತರ್ತರೀತಿ ||
(ಋ. ಮಂ ೬. ಸೂತ್ರ ೪೭ ಮಂ ೧೭)
ಎಂಬ ಶ್ರುತ್ಯರ್ಥವನ್ನು ಮೇಲಿನ ಶ್ಲೋಕದಲ್ಲಿ ಹೇಳಿದ್ದಾರೆ. ||೩೦||

**ಭಾವಪ್ರಕಾಶಿಕೆ**

ಬ್ರಹ್ಮಾದಿ ಚೇತನರಲ್ಲೂ, ವೃಕ್ಷಾದಿ ಜಡಜೀವರಲ್ಲೂ, ಸ್ಥಾವರವಾದ ಪರ್ವತಾದಿಗಳಲ್ಲೂ ಸಹ ಪರಮಾತ್ಮನು ವ್ಯಾಪ್ತನಾಗಿ ಸಾಮಾನ್ಯರಿಗೆ ಗೋಚರಿಸದೆ ಜ್ಞಾನಿಗೋಚರನಾಗಿರುವನು. ಯಾವಾಗಲೂ ಭಯರಹಿತನು. ನಿತ್ಯಾನಂದಸ್ವರೂಪನು. ಹುಟ್ಟುವಿಕೆ, ಸಾಯುವಿಕೆ ಮೊದಲಾದ ದೋಷವಾಗಲಿ,

ಸತ್ವರಜಸ್ತಮೋಗುಣಾತ್ಮಕವಾದ ಪ್ರಾಕೃತದೇಹ ಸಂಬಂಧವಾದ ಸುಖ ದುಃಖಾದಿಗಳೇ ಆಗಲಿ ಇಲ್ಲದವನು. ಇಂತಹ ಸ್ವಾಮಿಯು ಅನ್ಯಥೋಪಾಸಕ ರಾದ ದೈತ್ಯಾದಿಗಳಿಗೆ ಸಂಸಾರ ಸಂಬಂಧವಾದ ವಿಷಯಸುಖದಲ್ಲಿ ಚಾಪಲ್ಯ ವನ್ನೂ ಬಹಳವಾದ ಆಸಕ್ತಿಯನ್ನೂ ಹುಟ್ಟಿಸಿ, ತನ್ನಲ್ಲಿ ದ್ವೇಷಾದಿಗಳನ್ನು ಮಾಡಿಸಿ ಅಪಾರ ದುಃಖವನ್ನೇ ಕೊಡುವನು. ಸದುಪಾಸನೆ ಮಾಡುವವರಿಗೆ ಮಾತ್ರ ನಿತ್ಯಾನಂದಮಯವಾದ ಮುಕ್ತಿಯನ್ನು ಕೊಡುವನೆಂಬ ಭಾವ. ॥೩೧॥

## ಭಾವದರ್ಪಣ

ಅಸದುಪಾಸಕರಿಗೆ ವಿಷಯದಲ್ಲಿ ಕಾತರ ಪುಟ್ಟಿಸುವನೆಂದು ಹೇಳಿ ಈ ಸಂಧಿ ಉಪಸಂಹಾರ ಮಾಡುತ್ತಾರೆ, ಚೇತನಾಚೇತನೇತಿ. ಕಾತರ–ಚಂಚಲ, ಯಾತುಧಾನರು–ದೈತ್ಯರು. ॥೩೧॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಉಪಸಂಹರತಿ–ಚೇತನ ಇತಿ ॥ ಕಾತರ ಆತುರ । ನಿರನಿಷ್ಟಃ–ನಿರವದ್ಯಃ ಇತಿ ಶ್ರುತೇಃ, ॥೩೧॥

## ಕನ್ನಡಾರ್ಥ

ಮುಖ್ಯಪ್ರಾಣಾಂತರ್ಗತನಾಗಿ ಶ್ರೀಹರಿಯು ಚೇತನಾಚೇತನ ಸಕಲ ವಸ್ತುಗಳಲ್ಲಿ ವ್ಯಾಪಿಸಿ, ತನ್ನ ಇರವನ್ನು ಅರಿಯಗೊಡದೆ, ವಿಷಯಗಳಲ್ಲಿ ಆತುರತೆಯನ್ನು ಹುಟ್ಟಿಸಿ, ದೈತ್ಯರನ್ನು ತಾಮಸ ವ್ಯಾಪಾರಗಳಿಂದ ಮೋಹಿಸು ವನು. ನಿರ್ದೋಷ ನಿರವದ್ಯ ನಿರ್ಭೀತ ಈ ವಿಶೇಷಣಗಳಿಂದ ನಿರವಿಷ್ಟೋ ನಿರವದ್ಯಃ ಎಂಬ ಶ್ರುತಿಯ ಅರ್ಥವನ್ನೇ ನಿರೂಪಿಸಿರುತ್ತಾರೆ. ॥೩೧॥

## ಶ್ರೀಗುರುಹೃದಯಪ್ರಕಾಶಿಕೆ

ಹೀಗೆ ದೇವರು ಇಲ್ಲಿ ಪ್ರತಿಪಾದ್ಯನೆಂದು ತಿಳಿಸುತ್ತಾರೆ, ಚೇತನ ಎಂದು. ಜೀವಜಡಾತ್ಮಕ ಪ್ರಪಂಚದಲ್ಲಿ ಗುರುಶ್ರೀಪ್ರಾಣಾಂತರ್ಗತ ಜಗನ್ನಾಥವಿಠಲ

ಸ್ವಾಮಿ ಸದಾ ವ್ಯಾಪಿಸಿ ಜ್ಞಾನಿಜ್ಞೇಯನಾಗಿ, ಅಜ್ಞರಿಗೆ ತಿಳಿಸಿಕೊಳ್ಳದೆ. ಯಾತುಧಾನರೆಂಬ ಅಸಜ್ಜನರನ್ನು ದುರ್ಭೋಗದಲ್ಲಿ ಕಾತರವುಳ್ಳವರನ್ನಾಗಿ ಮಾಡಿ ಮೋಹಿಸುವ ಎಂದರೆ, ಅವರಿಗೆ ಭ್ರಾಂತಿಯನ್ನು ಹುಟ್ಟಿಸಿ ಶಾಸ್ತ್ರ ವಿರುದ್ಧ ದುಜ್ಞಾ೯ನವನ್ನು ಕೊಡುವನು. ಸ್ವತಂತ್ರನಾದ್ದರಿಂದ ಅಸುರರ ಭಯವಿಲ್ಲದವನು. ನಿತ್ಯಾನಂದಸ್ವರೂಪನಾದ್ದರಿಂದ ದುಃಖಾದಿದೋಷ ದೂರನು. ಅವರವರ ಸ್ವಭಾವ ವ್ಯಕ್ತಿ ಮಾಡುವುದರಿಂದ ನಿರವದ್ಯ ಎಂದರೆ ಪಾಪ ವೈಷಮ್ಯಾದಿ ದುರ್ಗುಣರಹಿತನೆಂದು ತಿಳಿ ಎಂತರ್ಥ.

> ಪರಾಪೂರ್ವೇಷಾಂ ಸಖ್ಯಾ ವೃಣಕ್ತಿ ವಿತರ್ತುರಾಣೋ ಅಪರೇಭಿರೇತಿ।
> ಅನಾನುಭೂತೀರವಧೂನ್ವಾನಃ ಪೂರ್ವಾ ಇಂದ್ರಃ ಶರದಸ್ತರ್ತರೀತಿ ॥
> ಎಂಬ ಶ್ರುತ್ಯರ್ಥ ವಿವರಿಸುತ್ತಾರೆ. ॥೩೧॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವತ್ರವ್ಯಾಪ್ತನಾದ ಆ ಸರ್ವೇಶನ ಅನಂತಾನಂತ ಗುಣಾವಳಿಗಳನ್ನು ಉದ್ಗದಿತ ಕಂಠರಾಗಿ ಸ್ತುತಿಸುತ್ತಾ ಉಪಸಂಹಾರಮಾಡುತ್ತಾರೆ.

ಶ್ರೀಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ವಸ್ತುಗಳಲ್ಲಿ ಎರಡು ಪ್ರಕಾರ— ಚೇತನ ಮತ್ತು ಅಚೇತನ.

ಇಂತಹ, ಚೇತನಾಚೇತನಗಳಲ್ಲಿ, ಶ್ರೀಹರಿಯು ವಿದ್ಯಮಾನನಾಗಿದ್ದಾನೆ. ಚೇತನರಲ್ಲಿ ಜೀವನಾಕಾರನಾಗಿ ಬಿಂಬರೂಪದಿಂದಲೂ, ಶುದ್ಧ ಜಡಗಳಲ್ಲಿ, ತದಾಕಾರ, ತದ್ರೂಪನಾಗಿ ಖಂಡಾಖಂಡರೂಪಗಳಿಂದ ವ್ಯಾಪ್ತರೂಪಗಳಿಂದಲೂ ಇದ್ದಾನೆ. ಬ್ರಹ್ಮಾಂಡಗತ ಸಕಲ ಜೀವಜಡಪದಾರ್ಥಗಳಲ್ಲಿ ಶ್ರೀಹರಿಯ ಪ್ರಥಮಾಂಗಭೂತರೂ ಭಗವತ್ಕಾರ್ಯ ಸಾಧಕರೂ ಆದ ಮುಖ್ಯ ಪ್ರಾಣದೇವರು ವಿದ್ಯಮಾನರಾಗಿದ್ದಾರೆ. ಇವರ ಅಂತರ್ಗತನಾಗಿ ಬಿಂಬನಾದ ಶ್ರೀಹರಿಯು ಸಕಲ ಚೇತನಾಚೇತನರಲ್ಲಿ ಇದ್ದಾನೆ.

ಆ ಜಗನ್ನಾಥವಿಠ್ಠಲಸ್ವಾಮಿಯು ಅನಾದ್ಯನಂತಕಾಲದಿಂದ, ಸಕಲ ವಸ್ತುಗಳಲ್ಲಿ, ದೇಶ ಕಾಲಾದಿಗಳಲ್ಲಿ ಸರ್ವತ್ರ ಎಡಬಿಡದೆ ವ್ಯಾಪಿಸಿ ಕೊಂಡಿದ್ದಾನೆ. ಶ್ರೀಹರಿಯ ಸನ್ನಿಧಾನವಿಲ್ಲದೇ ವಸ್ತುಗಳ ಗುಣ ಧರ್ಮಗಳ ಅಭಿವ್ಯಕ್ತಿ ಇಲ್ಲ. ಆ ನಿರಂಜನನು ತನ್ನ ಇರವನ್ನು ಮಾತ್ರ ತಿಳಿಯಗೊಡದೆ ಸಕಲವ್ಯಾಪಾರಗಳನ್ನು ಮಾಡಿ, ಮಾಡಿಸುತ್ತಿರುವನು. ಪಕ್ವದೆಶೆಯಲ್ಲಿರುವ ಸಾಧಕರಿಗೆ ಮಾತ್ರ ಅಪರೋಕ್ಷರೂಪವಾದ ತನ್ನ ಸಂದರ್ಶನ ಭಾಗ್ಯವನ್ನು ಅವನ ಇಚ್ಛೆಯಂತೆ ಕೊಡುವನು. ಇತರ ಸಾಮಾನ್ಯ ಜನರಿಗೆ ಅಗೋಚರನು.

ಭಗವದ್ದ್ವೇಷಿಗಳೂ. ತಮೋಯೋಗ್ಯರೂ ಆದ ದೈತ್ಯರಿಗೆ ಯಾತುಧಾನರೆಂದು ಹೆಸರು. ಭಗವದ್ಭಕ್ತರ ದ್ವೇಷಿಗಳೂ ಹೌದು. ಪಂಚಭೇದ ತಾರತಮ್ಯ ಜ್ಞಾನರಹಿತರು. ಜೀವೇಶರಿಗೆ ಐಕ್ಯ ಸಾಧಿಸುವ ಮಾಯಾವಾದಿಗಳು ಸರ್ವಕಾಲಗಳಲ್ಲಿ ಪ್ರಾಪಂಚಿಕ ವಿಷಯೋಪಭೋಗಗಳಲ್ಲಿ ತನ್ಮಯರಾಗಿರುವರು. ಭಗವತ್ಸಂಬಂಧವಾದ ವಿಷಯ ಪ್ರಸ್ತಾಪವೇ ಅವರಿಗೆ ಬೇಕಿಲ್ಲ. ಇದರಿಂದ ಭಗವಂತನನ್ನು ಅವರು ಪೂರ್ತಿ ಮರೆತು, ವಿಷಯಸುಖಗಳೇ ಶಾಶ್ವತವೆಂದು ತಿಳಿದು, ಅದರಲ್ಲಿಯೇ ಮಗ್ನರಾಗಿ ದುಸ್ಸಾಧನೆಯನ್ನು ವೃದ್ಧಿ ಮಾಡಿಕೊಳ್ಳುವರು. ಅಂತ್ಯದಲ್ಲಿ ಅವರಿಗೆ ನಿತ್ಯದುಃಖರೂಪವಾದ ಗತಿ ಪ್ರಾಪ್ತಿ.

ಈ ರೀತಿ ದೈತ್ಯರನ್ನು ವಿಷಯಾದಿಗಳಲ್ಲಿ ಮೋಹಯುಕ್ತರನ್ನಾಗಿ ಮಾಡುವ ಮಾಧವನಿಗೆ ಯಾರಿಂದಲೂ, ಯಾವಕಾಲಕ್ಕೂ ಭಯವಿಲ್ಲ, ಅನಾದ್ಯನಂತ ಕಾಲದಿಂದ ಸುಖಪರಿಪೂರ್ಣನು. ಅವನ ಆನಂದ ನಿತ್ಯ, ಅಪ್ರಾಕೃತ, ಅಪಾರ, ಅಪ್ರಮೇಯ. ಜೀವರಿಗಿರುವ ಯಾವ ದೋಷಗಳೂ ಅವನಲ್ಲಿ ಇಲ್ಲ. ಪಾಪರಹಿತನು. ॥೩೧॥

॥ ಶ್ರೀಲಕ್ಷ್ಮೀನರಸಿಂಹಾರ್ಪಣಮಸ್ತು ॥